ಹಳೆ ನೋಂದಣಿ ಸಂಖ್ಯೆ : ಡಿಪ್ಲೈಆರ್:358:1964–65
ಹೊಸ ನೋಂದಣಿ ಸಂಖ್ಯೆ : ಜೆ.ಆರ್.ಬಿ.ಎ.ಎಂ.ಡಿ:14:2009–2010

ದೂರವಾಣಿ :2351 1414
2341 1416

# ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್.

ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಅಂಚೆ ಕಾಲೋನಿ,
ಸಂಜಯನಗರ, ಬೆಂಗಳೂರು–560 094.

## 56ನೇ ವಾರ್ಷಿಕ ಸರ್ವಸದಸ್ಯರ ಸಭೆ

ದಿನಾಂಕ 19–12–2021 ಭಾನುವಾರ

**2020–2021 ಸಾಲಿನ ವಾರ್ಷಿಕ ವರದಿ**
**2020–2021ನೇ ಸಾಲಿನ ಲೆಕ್ಕಪರಿಶೋಧನಾ ವರದಿ**
**ಹಾಗೂ ಹಣಕಾಸಿನ ತಃಖ್ತೆಗಳು**
**2021–2022ನೇ ಸಾಲಿನ ಆಯ–ವ್ಯಯ ಮುಂಗಡ ಪತ್ರ**

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್.

ಹಳೆ ನೋಂದಣಿ ಸಂಖ್ಯೆ. ಡಿವೈಆರ್:358:1964-65 ಹೊಸ ನೊಂದಣಿ ಸಂಖ್ಯೆ. ಜೆ.ಆರ್.ಬಿ.ಎಎಂಡಿ:14:2009-2010

# ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.,

ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು- 560 094.

## ೫೬ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆ ಮತ್ತು ಆಹ್ವಾನ ಪತ್ರಿಕೆ

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯ 2020-2021ನೇ ಸಾಲಿನ 56ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯನ್ನು **ದಿನಾಂಕ 19-12-2021ರ ಭಾನುವಾರ ಬೆಳಿಗ್ಗೆ 11-00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ರವರ ಅಧ್ಯಕ್ಷತೆಯಲ್ಲಿ ವೀಡಿಯೊ ಕಾನ್‌ಫೆರೆನ್ಸ್ / ವರ್ಚುಯಲ್ ಮೀಟಿಂಗ್ ಮೂಲಕ,** ಸಂಘದ ಆವರಣದಲ್ಲಿ ಕೆಳಗೆ ನಮೂದಿಸಿರುವ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರುಗಳು ಸಕಾಲಕ್ಕೆ ವೀಡಿಯೊ ಸಂವಾದದಲ್ಲಿ ಭಾಗವಹಿಸಿ ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ. ಈ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಇಚ್ಛಿಸುವ ಸಂಘದ ಖಾಯಂ ಸದಸ್ಯರು (**REGULAR MEMBERS**) ತಮ್ಮ ಸದಸ್ಯತ್ವದ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಇ-ಮೈಲ್ ವಿಳಾಸವನ್ನು ಸಂಘದಲ್ಲಿ ನೋಂದಾಯಿಸುವ ಅಗತ್ಯವಿದ್ದು, ದಿನಾಂಕ 15-12-2021 ರೊಳಗಾಗಿ ಸಂಘವನ್ನು ಸಂಪರ್ಕಿಸಿ, ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕೆಂದು ಕೋರಿದೆ. ಖುದ್ದು ಸಂಘಕ್ಕೆ ಭೇಟಿ ನೀಡಲು ಸಾಧ್ಯವಾಗದಿದಲ್ಲಿ, ಸಂಘದ ಇ-ಮೈಲ್: ***info@postalhousingsociety.org*** ಈ ವಿಳಾಸಕ್ಕೆ ಮಾಹಿತಿ ಕಳುಹಿಸುವುದು.

### ಕಾರ್ಯಸೂಚಿ (Agenda)

1. ಪ್ರಾರ್ಥನೆ.
2. 2020-2021ನೇ ಸಾಲಿನ ಸರ್ವ ಸದಸ್ಯರ ಸಭೆಯ ಸೂಚನೆ ಮತ್ತು ಆಹ್ವಾನ ಪತ್ರಿಕೆಯನ್ನು ಮತ್ತು ಕಾರ್ಯಸೂಚಿಯನ್ನು ಓದಿ ಅಂಗೀಕಾರ ಪಡೆಯುವುದು.
3. 2020-2021ನೇ ಸಾಲಿನಲ್ಲಿ ನಿಧನ ಹೊಂದಿದ ಸದಸ್ಯರಿಗೆ / ಸಹ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.
4. ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು 2020-21ನೇ ಸಾಲಿನ ಆಡಳಿತ ಮಂಡಳಿ ವರದಿಯ ಮಂಡನೆ ಮತ್ತು ಅಂಗೀಕಾರ.
5. ಸಂದೇಶ್‌ನಗರ-1, 2 ಮತ್ತು ಸಂದೇಶ್ ನಗರ-3ನೇ ಹಂತದ ಬಡಾವಣೆಗಳ ಹಾಗೂ ಸಂದೇಶ್ ಲೇಕ್ ಸೈಡ್-1, 2, 3 ಹಾಗೂ 4ನೇ ಹಂತದ ಬಡಾವಣೆಗಳ ಪ್ರಗತಿಯ ಬಗ್ಗೆ.
6. ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ ಮತ್ತು ಸಂದೇಶ್ ಭಾಗ್ ಬಡಾವಣೆಯ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ.ತಿಲಕ್ ರವರಿಗೆ ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ ಸಂಘದಿಂದ ಅನೇಕ ಪತ್ರಗಳನ್ನು ಬರೆದರೂ ಸರಿಯಾಗಿ ಪ್ರತ್ಯುತ್ತರವನ್ನು ಸಂಘಕ್ಕೆ ನೀಡುತ್ತಿಲ್ಲ ಹಾಗೂ ಬಡಾವಣೆಯ ಕೆಲಸಗಳನ್ನು M.O.U ರೀತ್ಯಾ ನಿಗಧಿತ ಅವಧಿಯೊಳಗಾಗಿ ಸರಿಯಾಗಿ ಮಾಡದೇ ಇರುವುದರಿಂದ ಶ್ರೀ ಆರ್.ಜಿ. ತಿಲಕ್ ರವರ ವಿರುದ್ಧ ಸಹಕಾರ ಇಲಾಖಾಧಿಕಾರಿಗಳ ಕಛೇರಿಯಲ್ಲಿ ದಾವೆ ಹೂಡುವ ಬಗ್ಗೆ ಮತ್ತು ಕಾನೂನಿನಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಚರ್ಚೆ ಮತ್ತು ಅನುಮೋದನೆ.
7. ದಿನಾಂಕ 20-12-2020ರಂದು ನಡೆದ 55ನೇ ವಾರ್ಷಿಕ ಸರ್ವ ಸದಸ್ಯರ (2019-20ನೇ ಸಾಲಿನ) ಮಹಾ ಸಭೆಯ ನಡವಳಿಕೆಗಳನ್ನು (ಠರಾವುಗಳನ್ನು) ಓದಿ ದಾಖಲು ಮಾಡುವುದು.
8. 2020-2021ನೇ ಸಾಲಿನ ಪರಿಶೋಧಿತ: ಲೆಕ್ಕಪರಿಶೋಧನಾ ವರದಿ ಮತ್ತು ಹಣಕಾಸು ತಃಖ್ತೆಗಳ ಮಂಡನೆ ಮತ್ತು ಅನುಮೋದನೆ ಮತ್ತು ಸದರಿ ವರ್ಷದ ಆಡಿಟ್ ವರದಿಗೆ ತಯಾರಿಸಿರುವ ಅನುಪಾಲನಾ ವರದಿಯ ಮಂಡನೆ ಮತ್ತು ಅನುಮೋದನೆ.
9. 2021-2022ನೇ ಸಾಲಿನ ಅಂದಾಜು ಆಯ-ವ್ಯಯದ ಕರಡಿನ ಮಂಡನೆ ಮತ್ತು ಮಂಜೂರಾತಿ ನೀಡುವುದು ಹಾಗೂ 2020-21ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅಂಗೀಕರಿಸುವುದು.
10. ಸಂಘದ 2021-22ನೇ ಸಾಲಿನ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಿಸುವ ವಿಷಯದ ಬಗ್ಗೆ ಮಂಡನೆ ಮತ್ತು ಅನುಮೋದನೆ.
11. ಸಂಘಕ್ಕೆ ಸದಸ್ಯರನ್ನು / ಸಹ ಸದಸ್ಯರನ್ನು ಸೇರಿಸಿಕೊಂಡ ಬಗ್ಗೆ ಹಾಗೂ ಸದಸ್ಯರಿಗೆ / ಸಹ ಸದಸ್ಯರಿಗೆ ಷೇರು ಮೊಬಲಗನ್ನು ವಾಪಸ್ಸು ಮಾಡಿ ಸದಸ್ಯತ್ವವನ್ನು / ಸಹ ಸದಸ್ಯತ್ವವನ್ನು ಸಮಾಪನೆ (Close) ಮಾಡಿದ ಪಟ್ಟಿಯ ಬಗ್ಗೆ ಪರಿಶೀಲನೆ.
12. ಸಂಘದ ಕಲಂ 65 ರ ಪರಿವೀಕ್ಷಣಾ ವರದಿಯ ಮೇಲೆ ಕಲಂ 68 ರ ಆದೇಶವನ್ನು ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ದಿನಾಂಕ 23-9-2021 ರಂದು ಹೊರಡಿಸಿರುವ ಬಗ್ಗೆ ಮತ್ತು ಇದಕ್ಕೆ ಸಂಘದಿಂದ ಸಲ್ಲಿಸಿರುವ ಅನುಪಾಲನಾ ವರದಿಯ ಅನುಮೋದನೆ ಬಗ್ಗೆ.

13. ಶ್ರೀ ಧನಕುಮಾರ್. ಎಂ.ಎಸ್. ಸಂಘದ ಸಹ ಸದಸ್ಯತ್ವದ ಸಂಖ್ಯೆ 1424, ಇವರನ್ನು ಸಂಘದ ಸಹ ಸದಸ್ಯತ್ವದಿಂದ ತೆಗೆದು ಹಾಕುವ ಬಗ್ಗೆ ಚರ್ಚೆ ಮತ್ತು ಅನುಮೋದನೆ.

14. ಸದಸ್ಯರುಗಳಿಂದ ಬಂದ ಸೂಚನೆಗಳ, ಸಲಹೆಗಳ ಪರಿಶೀಲನೆ ಹಾಗೂ ಚರ್ಚೆ (ಸಭೆಗೆ ಐದು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಸಂಘಕ್ಕೆ ತಲುಪಿದ ಸೂಚನೆ ಪತ್ರಗಳ, ಸಲಹೆಗಳ ಬಗ್ಗೆ ಚರ್ಚೆ).

15. ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳು.

16. ವಂದನಾರ್ಪಣೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/–
**ಮಹೇಶ್. ಎಂ.ಎನ್**
ಕಾರ್ಯದರ್ಶಿ
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್
ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್. ಬೆಂಗಳೂರು– 560 094.

ಸ್ಥಳ:– ಬೆಂಗಳೂರು
ದಿನಾಂಕ:– 30–11–2021

**ಸೂಚನೆಗಳು :–**

1. ಸಂಘದಿಂದ ಗುರುತಿನ ಚೀಟಿ ಮತ್ತು ಷೇರು ಪ್ರಮಾಣ ಪತ್ರ ಪಡೆಯದೆ ಇರುವ ಸದಸ್ಯರು ಸಂಘದ ಕಛೇರಿಯಲ್ಲಿ ಪಡೆಯಬೇಕಾಗಿ ವಿನಂತಿ.
2. ತಮ್ಮ ವಿಳಾಸದಲ್ಲಿ ಬದಲಾವಣೆಯೇನಾದರೂ ಇದ್ದಲ್ಲಿ ಕೂಡಲೇ ಸಂಘದ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕೆಂದು ಕೋರಲಾಗಿದೆ.
3. ಮಾನ್ಯ ಸದಸ್ಯರು ಮಹಾ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಇದ್ದಲ್ಲಿ ಮಹಾ ಸಭೆ ನಡೆಯುವ 5 ದಿನಗಳ ಮುಂಚಿತವಾಗಿ ಸಂಘಕ್ಕೆ ಲಿಖಿತವಾಗಿ ತಲುಪಿಸತಕ್ಕದ್ದು.
4. ಸರ್ವ ಸದಸ್ಯರ ಸಭೆಯು ಆನ್‌ಲೈನ್ ಮುಖಾಂತರ / ವೀಡಿಯೊ ಕಾನ್‌ಫೆರೆನ್ಸ್ / ವರ್ಚುಯಲ್ ಮೀಟಿಂಗ್ ಮೂಲಕ ಸುಲಲಿತವಾಗಿ ನಡೆಯಲು ಎಲ್ಲಾ ಸದಸ್ಯರು ಸಹಕರಿಸಬೇಕೆಂದು ವಿನಂತಿ.
5. **56ನೇ ವಾರ್ಷಿಕ ವರದಿಯನ್ನು ಮತ್ತು 2020–21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ದಿನಾಂಕ 15–12–2021 ರಿಂದ ದಿನಾಂಕ 18–12–2021ರ ವರೆವಿಗೆ ಸಂಘದ ಕೆಲಸದ ವೇಳೆಯಲ್ಲಿ ಸದಸ್ಯರು, ಸಂಘದ ಕಛೇರಿಯಲ್ಲಿ ಪಡೆಯಬಹುದು.** (ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲ 7 ಗಂಟೆ ವರೆವಿಗೆ)
6. **ಸಂಘದ ಉಪನಿಯಮ ಸಂಖ್ಯೆ 7 (6)ರ ಪ್ರಕಾರ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಗೆ ವೀಡಿಯೊ ಕಾನ್‌ಫೆರೆನ್ಸ್ / ವರ್ಚುಯಲ್ ಮೀಟಿಂಗ್‌ಗೆ ಹಾಜರಾಗಲು ಅವಕಾಶ ವಿರುವುದಿಲ್ಲ.**
7. ಸಂಘಕ್ಕೆ ಪಾನ್‌ಕಾರ್ಡ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆಯನ್ನು ಮತ್ತು ಮೊಬೈಲ್ ಸಂಖ್ಯೆಯನ್ನು ನೀಡದೇ ಇರುವವರು ಎಲ್ಲಾ ಸದಸ್ಯರು ತಮ್ಮ ಪಾನ್‌ಕಾರ್ಡ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆಯನ್ನು ಮತ್ತು ಮೊಬೈಲ್ ಸಂಖ್ಯೆಯನ್ನು ಸಂಘಕ್ಕೆ ಸಲ್ಲಿಸಬೇಕಾಗಿ ವಿನಂತಿ. ಸಂಘದ ಸದಸ್ಯರು / ಸಹ ಸದಸ್ಯರುಗಳು ಯಾರಾದರು ನಿಧನ ಹೊಂದಿದ್ದರೇ ಅಂತಹವರ ಮಾಹಿತಿಯನ್ನು ಮಹಾ ಸಭೆ ನಡೆಯುವ 3 ದಿನಗಳ ಮುಂಚಿತವಾಗಿ ಸಂಘಕ್ಕೆ ಲಿಖಿತವಾಗಿ ಸಲ್ಲಿಸಬೇಕಾಗಿ ವಿನಂತಿ.

# ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟೀವ್ ಸೊಸೈಟಿ ಲಿ.,

ನೊಂ. ಜೆ.ಆರ್.ಬಿ.ಎಎಂಡಿ:14:2009–2010

ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560 094.

## ಇದರ 2020–21ನೇ ಸಾಲಿನ ವಾರ್ಷಿಕ ವರದಿ

**ಆತ್ಮೀಯ ಸಹಕಾರಿ ಬಂಧುಗಳೇ,**

ಆಡಳಿತ ಮಂಡಳಿಯು ಸಂಘದ 2020–21ನೇ ಸಾಲಿನ 56ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಗೆ ಆಗಮಿಸಿರುವ ಮಾನ್ಯ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸುತ್ತಾ, 2021ನೇ ಮಾರ್ಚ್ 31 ಕ್ಕೆ (ದಿನಾಂಕ 01–04–2020 ರಿಂದ 31–03–2021ರ ವರೆವಿಗೆ) ಆಖೈರಾದ ಕರ್ನಾಟಕ ಸಹಕಾರ ಸಂಘಗಳ ಕಾನೂನು 1959ರ ಸೆಕ್ಷನ್ 63(1)ರ ಪ್ರಕಾರ ಸನ್ನದು ಲೆಕ್ಕ ಪರಿಶೋಧಕರಾದ (CHARTERED ACCOUNTANT) ಶ್ರೀ ಸಿ.ಎ. ವರದರಾಜು, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ರವರು ಲೆಕ್ಕಪರಿಶೋಧನೆ ನಡೆಸಿ, ದಿನಾಂಕ 31–7–2021 ರಂದು ಸಂಘಕ್ಕೆ ನೀಡಲ್ಪಟ್ಟಿರುವ 2020–21ನೇ ಸಾಲಿನ ಜಮಾ–ಖರ್ಚು, ಲಾಭ–ನಷ್ಟ, ದಿನಾಂಕ 31–03–2021 ಕ್ಕೆ ಇದ್ದಂತೆ, ಆಸ್ತಿ ಜವಾಬ್ದಾರಿ ತಃಖ್ತೆಗಳು ಹಾಗೂ ಲೆಕ್ಕಪರಿಶೋಧನಾ ವರದಿ ಹಾಗೂ ಸಂಘದ ಕಾರ್ಯ ಚಟುವಟಿಕೆಗಳ ಜೊತೆಗೆ ಸಂಘದ ಪ್ರಗತಿಯನ್ನು, ಆಡಳಿತ ಮಂಡಳಿಯ ವರದಿ ಸಮೇತ ಈ ಮಹಾ ಸಭೆಯ ಮುಂದೆ ತಮ್ಮಗಳ ಒಪ್ಪಿಗೆಗಾಗಿ ಸಲ್ಲಿಸುತ್ತಿದ್ದೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳ :–** ದಿನಾಂಕ 31–03–2021 ಕ್ಕೆ ಪಾವತಿಯಾದ ಷೇರು ಬಂಡವಾಳವು 839 ಸದಸ್ಯರಿಂದ ರೂ. 8,54,000–00 ಮತ್ತು 4762 ಸಹ ಸದಸ್ಯರಿಂದ ಷೇರು ಬಂಡವಾಳವು ರೂ. 87,07,000–00 ಗಳಿರುತ್ತದೆ. ಸದಸ್ಯರ ಸಂಖ್ಯೆ 839 ಮತ್ತು ಸಹ ಸದಸ್ಯರ ಸಂಖ್ಯೆ 4762 ಇದ್ದು ಒಟ್ಟು 5601 ಸದಸ್ಯರು ಮತ್ತು ಸಹ ಸದಸ್ಯರುಗಳಿರುತ್ತಾರೆ. ದಿನಾಂಕ 31–3–2021ಕ್ಕೆ 6 ಜನ ನಾಮಿನಲ್ ಸದಸ್ಯರಿದ್ದು ಇವರಿಂದ ರೂ. 12,000–00 ಗಳನ್ನು ಸಂಗ್ರಹಣೆ ಮಾಡಲಾಗಿದೆ.

**ಆಪದ್ಧನ ಮತ್ತು ಇತರೆ ನಿಧಿಗಳು :–** ದಿನಾಂಕ 31–03–2021ಕ್ಕೆ ಆಪದ್ಧನ ನಿಧಿಯಲ್ಲಿ ರೂ. 26,99,619–32 ಮತ್ತು ಇತರೆ ನಿಧಿಗಳ ಬಾಬ್ತು ರೂ. 1,34,19,553–28 ಗಳು ಜಮಾ ಇರುತ್ತದೆ. ದಿನಾಂಕ 31–03–2021ಕ್ಕೆ ಕ.ರಾ. ಸಹಕಾರಿ ಅಪೆಕ್ಸ್ ಬ್ಯಾಂಕ್, ನಿ., ಬೆಂಗಳೂರು, ಗಂಗಾನಗರ ಶಾಖೆಯಲ್ಲಿ ರೂ. 26,96,825–00 ಗಳನ್ನು ಮತ್ತು ಕ.ರಾ.ವಸತಿ ಮಹಾ ಮಂಡಳದಲ್ಲಿ 600–00 ರೂ ಗಳನ್ನು ಆಪದ್ಧನ ನಿಧಿ ಖಾತೆಯಡಿಯಲ್ಲಿ ಠೇವಣಿಸಿದೆ. ಇತರೆ ನಿಧಿಗಳ ಬಾಬ್ತು ಇರುವ ಮೊಬಲಗು ರೂ. 1,34,19,553–28 ಗಳನ್ನು ಮತ್ತು ಬಾಕಿ ಇರುವ ಆಪದ್ಧನದ ಬಾಬ್ತು 2,194–32 ರೂಗಳನ್ನು ಬ್ಯಾಂಕ್‌ನಲ್ಲಿ ಪ್ರತ್ಯೇಕವಾಗಿ ಠೇವಣಿಸಲು ಕ್ರಮವಿಡಲಾಗುವುದು.

**ನಿವೇಶನ ಡಿಪಾಝಿಟ್ (ಠೇವಣಿ) :–** ದಿನಾಂಕ 31–03–2021 ಕ್ಕೆ 212 ಸಾಮಾನ್ಯ ಸದಸ್ಯರಿಂದ ನಿವೇಶನ ಡಿಪಾಝಿಟ್ (ಠೇವಣಿ) ರೂ. 17,85,78,397–00 ಗಳು ಮತ್ತು 3175 ಸಹ ಸದಸ್ಯರಿಂದ ನಿವೇಶನ ಡಿಪಾಝಿಟ್ (ಠೇವಣಿ) ರೂ. 297,26,15,397–01 ಗಳು ಜಮಾ ಇರುತ್ತದೆ.

**ಹೂಡಿಕೆಗಳು :–** ದಿನಾಂಕ 31–03–2021ಕ್ಕೆ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾ ಮಂಡಳಿಯಲ್ಲಿ ಷೇರು ರೂ. 45,000–00, ಮತ್ತು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಬೆಂಗಳೂರು ಗಂಗಾನಗರ ಶಾಖೆಯಲ್ಲಿ ಖಾಯಂ

ಠೇವಣಿ ಬಾಬ್ತು ರೂ. 66,13,239–00 ಗಳನ್ನು ಹಾಗೂ ವಿದ್ಯುತ್ ಠೇವಣಿ ರೂ. 28,600–00 ಹಾಗೂ ನೀರಿನ ಠೇವಣಿ 1,080–00 ಮತ್ತು ಶ್ರೀನಿಧಿ ಸೌಹಾರ್ದ ಸಹಕಾರ ಬ್ಯಾಂಕಿನಲ್ಲಿ ಷೇರು 3,000–00 ಗಳನ್ನು ಸಂಘವು ಹೂಡಿಕೆ ಮಾಡಿರುತ್ತದೆ.

**ಬಡಾವಣೆ ವೆಚ್ಚಗಳು:–** ದಿನಾಂಕ 31–03–2021ಕ್ಕೆ ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ರೂ. 315,11,93,794–01 [ರೂ. 17,85,78,397–00 + ರೂ. 297,26,15,397–01] ಗಳ ನಿವೇಶನ ಡಿಪಾಜಿಟನ್ನು ಪಡೆದು, ದಿನಾಂಕ 31–03–2021ರ ಬ್ಯಾಲನ್ ಷೀಟಿನ ಆಸ್ತಿಯ ಕ್ರಮ ಸಂಖ್ಯೆ 5 ರಲ್ಲಿ (ದಿನಾಂಕ 31–3–2021 ರ ಆಸ್ತಿ ಜವಾಬ್ದಾರಿ ತಃಖ್ತೆಯ ಪುಟ ಸಂಖ್ಯೆ 3 ರಿಂದ 17ನೇ ಪುಟದ ವರೆವಿಗೆ) ವಿವರಿಸಿರುವಂತೆ, ಬಡಾವಣೆಯ ಡೆವಲಪರ್ಸ್ ರವರುಗಳಿಗೆ; ಇತರೆ ಬಾಬ್ತುಗಳಿಗೆ; ಬಡಾವಣೆಯ ಕೆಲಸ ಕಾರ್ಯಗಳಿಗಾಗಿ ರೂ. 315,80,06,864–00 ಗಳನ್ನು (ರೂ. 75,82,69,165–00 + ರೂ. 43,93,79,937–00 + ರೂ. 14,10,87,647–00 + ರೂ. 144,92,65,565–00 + ರೂ. 36,95,20,550–00 + ರೂ. 4,84,000–00) ನೀಡಲಾಗಿದೆ ಎಂದು ತಿಳಿಯಬಯಸುತ್ತೇವೆ.

**ನಿವ್ವಳ ನಷ್ಟ :–** ಸಂಘವು ದಿನಾಂಕ 31–03–2021ಕ್ಕೆ, ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 9 ರಲ್ಲಿ ವಿವರಿಸಿರುವಂತೆ ರೂ. 48,45,106–82 ರೂಗಳ ನಷ್ಟವನ್ನು ಹೊಂದಿದೆ. ನಷ್ಟಕ್ಕೆ ಪ್ರಮುಖ ಕಾರಣವೇನೆಂದರೆ ಸಂಘವು ನೌಕರರ ಗೃಹ ನಿರ್ಮಾಣ ಸಹಕಾರ ಸಂಘವಾಗಿದ್ದು, ಮಾಡಬೇಕಾದ ಆಡಳಿತಾತ್ಮಕ ಖರ್ಚುಗಳನ್ನು; ಲಾಭ–ನಷ್ಟ ಪೂರ್ವದಲ್ಲಿ ಕಲ್ಪಿಸಬೇಕಾದ ಅವಕಾಶಗಳನ್ನು; ಸವಕಳಿ ಇತ್ಯಾದಿ ಖರ್ಚುಗಳನ್ನು ಮಾಡಲೇಬೇಕಾಗಿರುತ್ತದೆ. 2016–17ನೇ ಸಾಲಿನ, 2017–18ನೇ ಸಾಲಿನ, 2018–19ನೇ ಸಾಲಿನ, 2019–20ನೇ ಸಾಲಿನ ಮತ್ತು 2020–21ನೇ ಸಾಲಿನ ಲಾಭ–ನಷ್ಟದ ತಃಖ್ತೆಯಲ್ಲಿ ತೋರಿಸಿರುವಂತೆ ಆಡಳಿತಾತ್ಮಕ ಖರ್ಚು ಹಾಗೂ ಪ್ರಾವಿಜನ್‌ಗಳು; ಅವಕಾಶಗಳು; ಸಂಘವು ಗಳಿಸಿರುವ ಲಾಭಕ್ಕಿಂತ ಹೆಚ್ಚಿಗೆ ಖರ್ಚಾಗಿರುತ್ತದೆ. ಆದುದರಿಂದ ಸಂಘವು 2016–17ನೇ ಸಾಲಿನಲ್ಲಿ, 2017–18ನೇ ಸಾಲಿನಲ್ಲಿ ಹಾಗೂ 2018–19ನೇ ಸಾಲಿನಲ್ಲಿ, 2019–20ನೇ ಸಾಲಿನಲ್ಲಿ ಮತ್ತು 2020–21ನೇ ಸಾಲಿನಲ್ಲಿ ಸಂಘವು ನಷ್ಟವನ್ನು ಅನುಭವಿಸಿರುತ್ತದೆ. ಸಂಘದ ಬಡಾವಣೆಗಳ ಕೆಲಸಗಳೆಲ್ಲಾ ಮುಗಿದು ಕೌನ್ಸಿಲಿಂಗ್ ಸಭೆಯಲ್ಲಿ ನಿವೇಶನದ ಬೆಲೆಯನ್ನು ನಿಗದಿಪಡಿಸಿ, [ಇತ್ತೀಚಿನ ದಿನಗಳಲ್ಲಿ ಕಬ್ಬಿಣ, ಸಿಮೆಂಟ್, ಮರಳು, ನೌಕರರ ಕೂಲಿ, ಎಲೆಕ್ಟ್ರಿಕಲ್ ಮೆಟೀರಿಯಲ್ಸ್‌ಗಳ ಬೆಲೆಯು ಜಾಸ್ತಿಯಾಗಿದ್ದು, ಬಡಾವಣೆಯ ಕೆಲಸಕಾರ್ಯಗಳ ಕಚ್ಚಾ ವಸ್ತುಗಳ ಬೆಲೆ ಜಾಸ್ತಿಯಾಗಿರುವುದರಿಂದ] ನಿವೇಶನಗಳನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ಹಂಚಿ; ನೋಂದಣಿ ಮಾಡಿಕೊಟ್ಟ ಮೇಲೆ; ಬಡಾವಣೆ ಲೆಕ್ಕಗಳನ್ನು ಹೊಂದಾಣಿಕೆ ಲೆಕ್ಕಗಳ ಮೂಲಕ ಮುಕ್ತಾಯಗೊಳಿಸಿದಾಗ ಸಂಘವು ಲಾಭವನ್ನು ಗಳಿಸುವುದೆಂದು ತಿಳಿಯಬಯಸುತ್ತೇವೆ.

**ಆಡಿಟ್ (ಲೆಕ್ಕಪರಿಶೋಧನೆ) :–** 2021ನೇ ಮಾರ್ಚ್ 31 ಕ್ಕೆ ಅಖೈರಾದ (ದಿನಾಂಕ 1–4–2020 ರಿಂದ 31–3–2021 ರ ವರೆಗೆ) ಲೆಕ್ಕಪತ್ರಗಳನ್ನು ಹಾಗೂ ಇನ್ನಿತರ ಆರ್ಥಿಕ ತಃಖ್ತೆಗಳನ್ನು ಶ್ರೀ ಸಿಎ. ವರದರಾಜು ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯನ್ನು ಮಾಡಿದ್ದು, ಸಂಘಕ್ಕೆ ದಿನಾಂಕ 31–7–2021 ರಂದು ಪರಿಶೋಧಿಸಲ್ಪಟ್ಟ ಹಣಕಾಸಿನ ತಃಖ್ತೆಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಸನ್ನದು ಲೆಕ್ಕಪರಿಶೋಧಕರ ದೃಢೀಕರಣ ಪತ್ರವನ್ನು 2020–21ನೇ ಸಾಲಿಗೆ ನೀಡಿರುತ್ತಾರೆ.

ಸಂಘವು ಸಂದೇಶ್ ನಗರ–1, 2, 3 ನೇ ಹಂತದ ಬಡಾವಣೆಯನ್ನು ನೆಲಮಂಗಲ ತಾಲ್ಲೂಕಿನ ಹ್ಯಾಡಾಳು ಗ್ರಾಮ ಮತ್ತು ಕೆ.ಜಿ. ಶ್ರೀನಿವಾಸಪುರ ಗ್ರಾಮಗಳಲ್ಲಿ, ಬೆತ್ತನಗೆರೆ ಗ್ರಾಮ ಮತ್ತು ಮೈಲನಹಳ್ಳಿ ಗ್ರಾಮಗಳಲ್ಲಿ ಮತ್ತು ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಯನ್ನು ದೇವನಹಳ್ಳಿ ತಾಲ್ಲೂಕಿನ ಬೆಟ್ಟನಹಳ್ಳಿಯಲ್ಲಿ ಹಾಗೂ ಸಂದೇಶ್ ಭಾಗ್ ಬಡಾವಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಆನೇಕಲ್ ತಾಲ್ಲೂಕಿನ ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮ, ಕೂತಗಾನಹಳ್ಳಿ ಗ್ರಾಮದಲ್ಲಿ ಬರುವ ಸರ್ವೇ ನಂಬರ್‌ಗಳಲ್ಲಿ ಮಾಡಲು ಉದ್ದೇಶಿಸಿ, ಬಡಾವಣೆಗಳ ಕೆಲಸಗಳು

ಪ್ರಗತಿಯಲ್ಲಿದ್ದು, ಮಾನ್ಯ ಸದಸ್ಯರು / ಸಹ ಸದಸ್ಯರುಗಳಿಂದ ನಿವೇಶನ ಡಿಪಾಜಿಟನ್ನು (ಠೇವಣಿ) ಸಂಘವು ಪಡೆದಿರುತ್ತದೆ. ಆದರೆ ಸಂದೇಶ್ ಭಾಗ್ ಬಡಾವಣೆಯ ಕೆಲಸಕಾರ್ಯಗಳನ್ನು ಮಾಡುವ ಬಗ್ಗೆ ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರಿಗೆ, ಸಂದೇಶ್ ಭಾಗ್ ಬಡಾವಣೆಯ ಪ್ರಗತಿ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ, ಸಂಘದಿಂದ ಅನೇಕ ಪತ್ರಗಳನ್ನು ಬರೆದರು, ಸಂಘಕ್ಕೆ ಸರಿಯಾಗಿ / ಸಮಂಜಸವಾಗಿ ಪ್ರತ್ಯುತ್ತರವನ್ನು ನೀಡುತ್ತಿಲ್ಲ ಹಾಗು ಬಡಾವಣೆಯ ಕೆಲಸಗಳನ್ನು M.O.U ರೀತ್ಯಾ ನಿಗಧಿತ ಅವಧಿಯೊಳಗೆ, ಸರಿಯಾಗಿ ಮಾಡುತ್ತಿಲ್ಲ ಹಾಗೂ ಸಂಘದಿಂದ ಹೆಚ್ಚಿಗೆ ಮೊಬಲಗು ಪಾವತಿಸಿರುವ ಬಗ್ಗೆ ಸಂದೇಶ್ ಭಾಗ್ ಬಡಾವಣೆಯ (ವರ್ತೂರು ಪ್ರಾಜೆಕ್ಟ್) ಡೆವಲಪರ್ಸ್ ರವರಾದ, ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರ ಮೇಲೆ ಸಹಕಾರ ಇಲಾಖಾಧಿಕಾರಿಗಳ ಕಛೇರಿಯಲ್ಲಿ ದಾವೆ ಹೂಡಲು ಹಾಗೂ ಇವರ ಮೇಲೆ ಸಂದೇಶ್ ಭಾಗ್ ಬಡಾವಣೆಯ ಕೆಲಸಗಳನ್ನು ಮಾಡಿಕೊಡುತ್ತಿಲ್ಲವಾದ್ದರಿಂದ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಉದ್ದೇಸಿಸಲಾಗಿದೆ, ಎಂದು ತಿಳಿಯಬಯಸುತ್ತೇವೆ.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4 ಹಾಗೂ ಸಂದೇಶ್ ನಗರ–1, 2, 3 ಗಳ ಡೆವಲಪರ್ಸ್ ರವರುಗಳು ಕರೋನಾದಿಂದ ಹಾಗೂ ಅನಾವಶ್ಯಕವಾದ ಮಳೆಯಿಂದ ಬಡಾವಣೆ ಕೆಲಸಗಳು ಸ್ಥಗಿತಗೊಂಡಿದೆ, ಆದಷ್ಟು ಜಾಗ್ರತೆಯಾಗಿ ಬಡಾವಣೆ ಕೆಲಸಗಳನ್ನು ಮುಗಿಸುವುದಾಗಿ ತಿಳಿಸಿರುತ್ತಾರೆ.

ಸಂದೇಶ್ ನಗರ–1ನೇ ಹಂತದ ಬಡಾವಣೆಗೆ 46 ಎಕರೆ 14 ಗುಂಟೆ ವಿಸ್ತೀರ್ಣದ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಿವಿಧ ಅಳತೆಯ 617 ನಿವೇಶನಗಳನ್ನು ರಚಿಸಿದ್ದು, ಶೇ 60 ರಷ್ಟು ಅಂದರೆ 370 ವಿವಿಧ ಅಳತೆಯ ನಿವೇಶನಗಳು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿದ್ದು, ಈಗಾಗಲೇ ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ದಿನಾಂಕ 31–3–2020ರ ವರೆವಿಗೆ ವಿವಿಧ ಅಳತೆಯ 617 ನಿವೇಶನಗಳನ್ನು ಹಂಚಿದೆ ಮತ್ತು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ವಿವಿಧ ಅಳತೆಯ 370 ನಿವೇಶನಗಳಲ್ಲಿ 348 ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿದೆ, ಹಾಗೂ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ಉಳಿಕೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗುತ್ತದೆ. ಸಂದೇಶ್ ನಗರ–1ನೇ ಹಂತದ 40% ನಿವೇಶನಗಳು ಅತೀ ಶೀಘ್ರದಲ್ಲಿ ಬಿಡುಗಡೆಯಾಗಲಿದ್ದು, ಸದರಿ ನಿವೇಶನಗಳನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ನೋಂದಣಿ ಮಾಡಿಕೊಡಲಾಗುವುದೆಂದು ತಿಳಿಯಬಯಸುತ್ತೇವೆ.

ಸಂದೇಶ್ ನಗರ–2ನೇ ಹಂತದ ಬಡಾವಣೆಗೆ 25 ಎಕರೆ 31.5 ಗುಂಟೆ ಭೂಪರಿವರ್ತಿತ ಜಮೀನು ಸಂಘಕ್ಕೆ ನೋಂದಣಿಯಾಗಿದೆ. ಮತ್ತು ಸಂದೇಶ್ ನಗರ–2ನೇ ಹಂತದ ಬಡಾವಣೆಗೆ 22 ಎಕರೆ 09.5 ಗುಂಟೆ (8 ಎಕರೆ 0.30 ಗುಂಟೆ + 6 ಎಕರೆ 0.15 ಗುಂಟೆ + 4 ಎಕರೆ 04.5 ಗುಂಟೆ ಮತ್ತು 3 ಎಕರೆ) ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ವಿನ್ಯಾಸವನ್ನು ಗಡಿ ನಿರ್ಧಾರ ಮತ್ತು ಅಭಿವೃದ್ಧಿಗಳಿಗಾಗಿ ಮಾತ್ರ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆಯನ್ನು ಸದಸ್ಯ ಕಾರ್ಯದರ್ಶಿ ನೆಲಮಂಗಲ ಯೋಜನಾ ಪ್ರಾಧಿಕಾರದವರು ನೀಡಿರುತ್ತಾರೆ. ಬಡಾವಣೆ ಕೆಲಸವು ಪ್ರಗತಿಯಲ್ಲಿರುತ್ತದೆ. ಸಂದೇಶ್ ನಗರ–2ನೇ ಹಂತಕ್ಕೆ ಸಂಬಂಧಿಸಿದಂತೆ, ಉಳಿದ ಸುಮಾರು 10 ಎಕರೆ ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಮಾಡಿಸಲು ಪ್ರಯತ್ನಿಸುತ್ತಿರುವುದಾಗಿ ಈ ಮೂಲಕ ತಿಳಿಯಬಯಸುತ್ತೇವೆ.

ಸಂದೇಶ್ ನಗರ–3ನೇ ಹಂತದ ಬಡಾವಣೆಗೆ ಇಗಾಗಲೇ 13 ಎಕರೆ 0.5.6 ಗುಂಟೆ ಭೂಪರಿವರ್ತಿತ ಜಮೀನನ್ನು ಡೆವಲಪರ್ಸ್ ರವರು ಸಂಘಕ್ಕೆ ನೋಂದಣಿ ಮಾಡಿಕೊಟ್ಟಿದ್ದು, ಸುಮಾರು 11 ಎಕರೆ 26 ಗುಂಟೆ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್ ಮಾಡಿಕೊಳ್ಳಲಾಗಿದೆ. ಬಡಾವಣೆಯ ಕೆಲಸವು ಪ್ರಗತಿಯಲ್ಲಿದೆ ಎಂದು ತಿಳಿಯಬಯಸುತ್ತೇವೆ.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಗಳಿಗೆ 67 ಎಕರೆ 25 ಗುಂಟೆ ಭೂಪರಿವರ್ತಿತ ಜಮೀನು ಸಂಘದ ಹೆಸರಿಗೆ ನೋಂದಣಿಯಾಗಿದೆ ಮತ್ತು ಭೂಪರಿವರ್ತಿತ ಜಮೀನು, ಜಿ.ಪಿ.ಎ ಮತ್ತು ಸೇಲ್ ಅಗ್ರಿಮೆಂಟ್ ಜಮೀನು ಮತ್ತು ಅಗ್ರಿಕಲ್ಚರಲ್ ಸೆಲ್ ಡೀಡ್ ಆಗಿರುವ ಜಮೀನು 16 ಎಕರೆ 5 ಗುಂಟೆ ಆಗಿದೆ. ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಯ ಕೆಲಸವು ಪ್ರಗತಿಯಲ್ಲಿದ್ದು, ಕಾಂಪೌಂಡ್ ಕೆಲಸ ಹಾಗೂ ಇನ್ನಿತರ ಕೆಲಸಗಳು ನಡೆಯುತ್ತಿದೆ.

ಸಂದೇಶ್ ಭಾಗ್ ಬಡಾವಣೆಯ ನೀಲಿ ನಕ್ಷೆ ಆನೇಕಲ್ ಪ್ರಾಧಿಕಾರದಿಂದ ದಿನಾಂಕ 29–9–2018 ರಲ್ಲಿ 12 ಎಕರೆ 02 ಗುಂಟೆ ಖರಾಬು 24 ಗುಂಟೆ ಭೂಪರಿವರ್ತಿತ ಜಮೀನಿಗೆ ಕರಡು ನಕ್ಷೆಯನ್ನು ಅನುಮೋದಿಸಿರುತ್ತಾರೆ. ಡೆವಲಪರ್ಸ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಆದಷ್ಟು ಜಾಗ್ರತೆಯಾಗಿ ಬಡಾವಣೆಯನ್ನು ನಿರ್ಮಿಸಿಕೊಡುವುದಾಗಿ ಭರವಸೆಯನ್ನು ಹಿಂದೆ ನೀಡಿದ್ದು ಇವಾಗ, ಸಂಘದಿಂದ ಅನೇಕ ಪತ್ರಗಳನ್ನು ಬರೆದರು ಬಡಾವಣೆ ಪ್ರಗತಿ ಬಗ್ಗೆ ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಸಮಂಜಸವಾಗಿ ಸ್ಪಂಧಿಸುತ್ತಿಲ್ಲ. ಆದುದರಿಂದ ಸಹಕಾರ ಇಲಾಖಾಧಿಕಾರಿಗಳ ಕಛೇರಿಯಲ್ಲಿ ದಾವೆ ಹೂಡುವುದೆಂದು ಮತ್ತು ಸಂಘದಿಂದ ಹೆಚ್ಚಿಗೆ ಪಾವತಿಸಿರುವ ಮೊಬಲಗಿಗೆ ಸೂಕ್ತವಾದ ಕಾನೂನು ಕ್ರಮ ತೆಗೆದುಕೊಳ್ಳುವುದೆಂದು ಉದ್ದೇಶಿಸಲಾಗಿದೆ.

ಹಿಂದೆ ತಿಳಿಸಿದಂತೆ, ಕರ್ನಾಟಕ ಭೂ ಸುಧಾರಣೆ ಕಾಯ್ದೆ ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆ ಅನ್ವಯ ಸಂಘವು ರೈತರಿಂದ ಮತ್ತು ಮಾರುಕಟ್ಟೆಯಲ್ಲಿ ಜಮೀನು ಖರೀದಿ ಮತ್ತು ಸಂಘದ ಹೆಸರಿಗೆ ಭೂಪರಿವರ್ತನಾ ಜಮೀನು ನೋಂದಣಿ ಬಹಳ ಕಷ್ಟವಾಗಿ; ಬಡಾವಣೆಗಳ ಕೆಲಸಗಳು ನಿಧಾನವಾಗುತ್ತಿದೆ. ಆದ ಕಾರಣ ನಿಗದಿತ ಅವಧಿಯೊಳಗೆ ಬಡಾವಣೆಗೆ ಬೇಕಾಗುವ ಭೂಪರಿವರ್ತಿತಜಮೀನುಗಳನ್ನು ಪಡೆದು ಬಡಾವಣೆ ಕೆಲಸಗಳನ್ನು ಮಾಡಲು; ನಿವೇಶನ ಮಾಡಲು ವಿಳಂಬವಾಗುತ್ತಿದೆ. ಆದರು ಸಹಾ ನಮ್ಮ ಸಂಘದ ಬಡಾವಣೆಗಳನ್ನು ಮಾಡುತ್ತಿರುವ ಸಂದೇಶ್ ನಗರ–1, 2, 3 ಮತ್ತು ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಬಡಾವಣೆಗಳ ಡೆವಲಪರ್ಸ್‌ಗಳು ಶ್ರಮವಹಿಸಿ, ಬಡಾವಣೆಯ ಕೆಲಸಕಾರ್ಯಗಳನ್ನು ಮಾಡುತ್ತಿದ್ದು, ಆದಷ್ಟು ಜಾಗ್ರತೆಯಾಗಿ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಬಡಾವಣೆಯನ್ನು ರಚಿಸಿ, ಆದಷ್ಟು ಜಾಗ್ರತೆಯಾಗಿ ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ನೀಡಿ, ನೋಂದಣಿ ಮಾಡಿಕೊಡಲು ಆಡಳಿತ ಮಂಡಳಿಯು ಹಾಗೂ ಸಂಘದ ಸಿಬ್ಬಂದಿಯು ಶ್ರಮಿಸುತ್ತಿದ್ದೇವೆ, ಎಂದು ತಿಳಿಯಬಯಸುತ್ತೇವೆ.

ಸಂಘವು 2021–22 ನೇ ಸಾಲಿನಲ್ಲಿ ಬಡಾವಣೆಗಳ ಕೆಲಸಗಳನ್ನೆಲ್ಲ ಆದಷ್ಟು ಜಾಗ್ರತೆಯಾಗಿ ಮುಗಿಸಿ, ಸಂಘದ ಮಾನ್ಯ ಸದಸ್ಯರುಗಳಿಗೆ / ಸಹ ಸದಸ್ಯರುಗಳಿಗೆ ನಿವೇಶಗಳನ್ನು ಹಂಚಿ ನೋಂದಣಿ ಮಾಡಿಕೊಡಲು ಗುರಿ ಹೊಂದಿದ್ದು ಹಾಗೂ ಹೆಚ್ಚಿನ ಉತ್ತಮ ಹಾಗೂ ತ್ವರಿತ ಸೇವೆಯನ್ನು ಸದಸ್ಯರಿಗೆ / ಸಹ ಸದಸ್ಯರುಗಳಿಗೆ ನೀಡಲು ಗುರಿ ಹೊಂದಲಾಗಿದೆ.

**ವಂದನೆಗಳು :–** ಸಂಘದ ಅಭಿವೃದ್ಧಿಗಾಗಿ; ಉತ್ತಮ ಸಲಹೆ, ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಕರ್ನಾಟಕ ಸಹಕಾರ ಇಲಾಖೆಗೆ ಮತ್ತು ಆಡಿಟ್ ಇಲಾಖೆಗೆ; ಸಂಘದ ಲೆಕ್ಕಪರಿಶೋಧನೆಯನ್ನು ಮಾಡಿಕೊಟ್ಟಿರುವ ಸನ್ನದು ಲೆಕ್ಕಪರಿಶೋಧಕರಿಗೆ; ಹಾಗೂ ಸಂಘದ ಬಡಾವಣೆಯನ್ನು ಮಾಡಿಕೊಡುತ್ತಿರುವ ಡೆವಲಪರ್ಸ್ ರವರುಗಳಿಗೂ ಮತ್ತು ಸಂಘದ ಮಾನ್ಯ ಸದಸ್ಯರು / ಸಹ ಸದಸ್ಯರುಗಳಿಗೂ; ಆಡಳಿತ ಮಂಡಳಿ ಸದಸ್ಯರುಗಳಿಗೂ; ಸಂಘದ ವಹಿವಾಟು, ಕೆಲಸವನ್ನು ಚೊಕ್ಕವಾಗಿ ಮತ್ತು ನಿಷ್ಠೆಯಿಂದ ಮಾಡುತ್ತಿರುವ ಸಂಘದ ಸಿಬ್ಬಂದಿಯವರಿಗೂ, ಮತ್ತು ಸಂಘದ ಚಟುವಟಿಕೆಗಳನ್ನು, ಬಡಾವಣೆಯ ಕೆಲಸಕಾರ್ಯಗಳನ್ನು ಸುಗಮವಾಗಿ ನಡೆಸಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಸಹಾಯ ಮಾಡುತ್ತಿರುವ ಪ್ರತಿಯೊಬ್ಬರಿಗೂ, ಪೋಲೀಸ್ ಇಲಾಖೆಯವರಿಗೂ ಎಲ್ಲಾ ಸರ್ಕಾರಿ ಇಲಾಖೆಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಾ ಈ ವಾರ್ಷಿಕ ವರದಿಯನ್ನು ಮುಕ್ತಾಯಗೊಳಿಸುತ್ತೇವೆ.

ತಮ್ಮ ವಿಶ್ವಾಸಿ
ಆಡಳಿತ ಮಂಡಳಿಯ ಪರವಾಗಿ

**ಜಯರಾಮಯ್ಯ**

ಅಧ್ಯಕ್ಷರು

ನೊಂ. ಸಂಖ್ಯೆ: ಜಿ.ಆರ್.ಬಿ.ಎಎಂಡಿ:14:2009–2010 Ph: 2351 1414/ 2341 1416

**ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.,**

ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560 094.

## ದಿನಾಂಕ 20–12–2020 ರಂದು ನಡೆದ 55ನೇ ವಾರ್ಷಿಕ ಸರ್ವ ಸದಸ್ಯರ ವರ್ಚುಯಲ್ ಸಭೆಯ ನಡವಳಿಕೆಗಳು

## ಫೋನ್ ಮೂಲಕ, ಇಮ್ಮೈಲ್ ಮೂಲಕ ಮತ್ತು ಖುದ್ದು ಸಂಘಕ್ಕೆ ಹಾಜರಾಗಿ ವರ್ಚುಯಲ್ ಸಭೆಯಲ್ಲಿ ಮಾತನಾಡಲು ನೋಂದಾಯಿಸಿಕೊಂಡ ಅರ್ಹ ಸದಸ್ಯರುಗಳ ಸಂಖ್ಯೆ – 129

ಸಂಘದ 55ನೇ ವಾರ್ಷಿಕ ಸರ್ವ ಸದಸ್ಯರ ವರ್ಚುಯಲ್ ಸಭೆಯು ದಿನಾಂಕ 20–12–2020ರಂದು ಸಂಘದಲ್ಲಿ ಬೆಳಿಗ್ಗೆ 11–15 ಘಂಟೆಗೆ ಪ್ರಾರಂಭಿಸಲಾಯಿತು.

**1. ಪ್ರಾರ್ಥನೆ:–**

55ನೇ ವಾರ್ಷಿಕ ಸರ್ವ ಸದಸ್ಯರ ವರ್ಚುಯಲ್ ಸಭೆಯು ದಿನಾಂಕ 20–12–2020 ರಂದು ಸಂಘದಲ್ಲಿ ಬೆಳಿಗ್ಗೆ 11–15 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ರವರ ಉಪಸ್ಥಿತಿಯಲ್ಲಿ ಶ್ರೀಮತಿ ಶುಭಕರಿ ರವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಯಿತು.

**2. 2019–2020ನೇ ಸಾಲಿನ ಸರ್ವ ಸದಸ್ಯರ ಸಭೆಯ ಸೂಚನೆ ಮತ್ತು ಆಹ್ವಾನ ಪತ್ರಿಕೆಯನ್ನು ಮತ್ತು ಕಾರ್ಯಸೂಚಿ ಓದಿ ಅಂಗೀಕಾರ ಪಡೆಯುವುದು.**

ಸಂಘದ ಕಾರ್ಯದರ್ಶಿಯವರಾದ ಶ್ರೀಯುತ ಮಹೇಶ್. ಎಂ.ಎನ್ ರವರು 2019–20ನೇ ಸಾಲಿನ ಸರ್ವ ಸದಸ್ಯರ ಸಭೆಯ ಸೂಚನೆ ಮತ್ತು ಆಹ್ವಾನ ಪತ್ರಿಕೆಯನ್ನು ಮತ್ತು ಕಾರ್ಯಸೂಚಿಯನ್ನು ಸಭೆಯಲ್ಲಿ ಓದಿ ಅನುಮೋದನೆ ಕೋರಿದರು.

ಸಂಘದ 55ನೇ ಸರ್ವ ಸದಸ್ಯರ ಸಭೆಯ ಸೂಚನೆ ಮತ್ತು ಆಹ್ವಾನ ಪತ್ರಿಕೆಯನ್ನು ಮತ್ತು ಕಾರ್ಯಸೂಚಿಯನ್ನು ಸದಸ್ಯರ ಸಂಖ್ಯೆ 1024 ಸಿದ್ದರಾಮು. ಎನ್ ರವರು ಮತ್ತು ಸದಸ್ಯತ್ವ ಸಂಖ್ಯೆ 1274 ಪಟ್ಟಣಶೆಟ್ಟಿ. ಹೆಚ್.ವಿ ರವರು ಅನುಮೋದಿಸುವುದು ಎಂದು ಸಭೆಯಲ್ಲಿ ತಿಳಿಸಿದರು, ನಂತರ ವಾರ್ಷಿಕ ಮಹಾ ಸಭೆಗೆ ಹಾಜರಾಗಿದ್ದ ಎಲ್ಲರೂ ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿದರು.

**3. 2019–2020ನೇ ಸಾಲಿನಲ್ಲಿ ನಿಧನ ಹೊಂದಿದ ಸದಸ್ಯರಿಗೆ / ಸಹ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.**

ಸಂಘದ ಕಾರ್ಯದರ್ಶಿಯವರು ಮಾತನಾಡುತ್ತಾ, ಸಂಘದ ಹಿರಿಯ ಸದಸ್ಯರಾದ ಶ್ರೀ ರಾಮಚಂದ್ರ. ಎ (ಸದಸ್ಯತ್ವ ಸಂಖ್ಯೆ 73) ರವರು ದೈವಾಧೀನರಾಗಿರುತ್ತಾರೆ ಎಂದು ತಿಳಿಸಲು ವಿಷಾಧಿಸುತ್ತೇನೆ.

ಈ ದುಃಖವನ್ನು ಭರಿಸುವ / ಹೋಗಲಾಡಿಸುವ ಶಕ್ತಿಯನ್ನು ಆ ಭಗವಂತನು ಅವರ ಕುಟುಂಬದವರಿಗೆ ನೀಡಲು ಕೋರುತ್ತಾ, ಶ್ರೀ ರಾಮಚಂದ್ರ. ಎ ರವರ ಆತ್ಮಕ್ಕೆ ಚಿರ ಶಾಂತಿ ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸಿ, ಮೃತರ ಗೌರವಾರ್ತ, ಸಭೆಯು 1 ನಿಮಿಷ ಮೌನ ಆಚರಿಸಲು ಕೋರುತ್ತೇನೆ, ಎಂದು ತಿಳಿಸಿದರು, ನಂತರ ಸಭೆಯಲ್ಲಿ 1 ನಿಮಿಷ ಮೌನ ಆಚರಿಸಲಾಯಿತು.

**4. ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು 2019–20ನೇ ಸಾಲಿನ ಆಡಳಿತ ಮಂಡಳಿ ವರದಿಯ ಮಂಡನೆ ಮತ್ತು ಅಂಗೀಕಾರ.**

ಸಂಘದ ಅಧ್ಯಕ್ಷರಾದ ಶ್ರೀಯುತ ಜಯರಾಮಯ್ಯ ನವರು 55ನೇ ಸರ್ವ ಸದಸ್ಯರ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ, 2019–20ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

**ಆತ್ಮೀಯ ಸಹಕಾರಿ ಬಂಧುಗಳೇ,**

ಆಡಳಿತ ಮಂಡಳಿಯು ಸಂಘದ 2019–20ನೇ ಸಾಲಿನ 55ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಗೆ ಆಗಮಿಸಿರುವ ಮಾನ್ಯ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸುತ್ತಾ, 2020ನೇ ಮಾರ್ಚ್ 31 ಕ್ಕೆ (ದಿನಾಂಕ 01–04–2019 ರಿಂದ 31–03–2020ರ ವರೆವಿಗೆ) ಆಖೈರಾದ ಕರ್ನಾಟಕ ಸಹಕಾರ ಸಂಘಗಳ ಕಾನೂನು 1959ರ ಸೆಕ್ಷನ್ 63(1)ರ ಪ್ರಕಾರ ಸನ್ನದು ಲೆಕ್ಕ ಪರಿಶೋಧಕರಾದ (CHARTERED ACCOUNTANT) ಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ರವರಿಂದ ಲೆಕ್ಕಪರಿಶೋಧನೆ ನಡೆಸಿ ನೀಡಲ್ಪಟ್ಟಿರುವ 2019–20ನೇ ಸಾಲಿನ ಜಮಾ–ಖರ್ಚು, ಲಾಭ–ನಷ್ಟ, ದಿನಾಂಕ 31–03–2020 ಕ್ಕೆ ಇದ್ದಂತೆ, ಆಸ್ತಿ ಜವಾಬ್ದಾರಿ ತಃಖ್ತೆಗಳು ಹಾಗೂ ಲೆಕ್ಕಪರಿಶೋಧನಾ ವರದಿ ಹಾಗೂ ಸಂಘದ ಕಾರ್ಯ ಚಟುವಟಿಕೆಗಳ ಜೊತೆಗೆ ಸಂಘದ ಪ್ರಗತಿಯನ್ನು, ಆಡಳಿತ ಮಂಡಳಿಯ ವರದಿ ಸಮೇತ ಈ ಮಹಾ ಸಭೆಯ ಮುಂದೆ ತಮ್ಮಗಳ ಒಪ್ಪಿಗೆಗಾಗಿ ಸಲ್ಲಿಸುತ್ತಿದ್ದೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳ :–** ದಿನಾಂಕ 31–03–2020ಕ್ಕೆ ಪಾವತಿಯಾದ ಷೇರು ಬಂಡವಾಳವು 837 ಸದಸ್ಯರಿಂದ ರೂ. 8,52,000–00 ಮತ್ತು 4742 ಸಹ ಸದಸ್ಯರಿಂದ ಷೇರು ಬಂಡವಾಳವು ರೂ. 86,72,000–00 ಗಳಿರುತ್ತದೆ. ಸದಸ್ಯರ ಸಂಖ್ಯೆ 837 ಮತ್ತು ಸಹ ಸದಸ್ಯರ ಸಂಖ್ಯೆ 4742 ಇದ್ದು ಒಟ್ಟು 5579 ಸದಸ್ಯರು ಮತ್ತು ಸಹ ಸದಸ್ಯರುಗಳಿರುತ್ತಾರೆ. ದಿನಾಂಕ 31–3–2020ಕ್ಕೆ 6 ಜನ ನಾಮಿನಲ್ ಸದಸ್ಯರಿದ್ದು ಇವರಿಂದ ರೂ. 12,000–00 ಗಳನ್ನು ಸಂಗ್ರಹಣೆ ಮಾಡಲಾಗಿದೆ.

**ಆಪದ್ಧನ ಮತ್ತು ಇತರೆ ನಿಧಿಗಳು :–** ದಿನಾಂಕ 31–03–2020ಕ್ಕೆ ಆಪದ್ಧನ ನಿಧಿಯಲ್ಲಿ ರೂ. 26,99,619–32 ಮತ್ತು ಇತರೆ ನಿಧಿಗಳ ಬಾಬ್ತು ರೂ. 1,32,59,394–28 ಗಳು ಜಮಾ ಇರುತ್ತದೆ. ದಿನಾಂಕ 31–03–2020ಕ್ಕೆ ಕ.ರಾ. ಸಹಕಾರಿ ಅಪೆಕ್ಸ್ ಬ್ಯಾಂಕ್, ನಿ., ಬೆಂಗಳೂರು, ಗಂಗಾನಗರ ಶಾಖೆಯಲ್ಲಿ ರೂ. 26,96,825–00 ಗಳನ್ನು ಮತ್ತು ಕ.ರಾ.ವಸತಿ ಮಹಾ ಮಂಡಳದಲ್ಲಿ 600–00 ರೂ ಗಳನ್ನು ಆಪದ್ಧನ ನಿಧಿ ಖಾತೆಯಡಿಯಲ್ಲಿ ಠೇವಣಿಸಿದೆ. ಇತರೆ ನಿಧಿಗಳ ಬಾಬ್ತು ಇರುವ ಮೊಬಲಗು ರೂ. 1,32,59,394–28 ಗಳನ್ನು ಮತ್ತು ಬಾಕಿ ಇರುವ ಆಪದ್ಧನದ ಬಾಬ್ತು 2,194–32 ರೂಗಳನ್ನು ಬ್ಯಾಂಕ್‌ನಲ್ಲಿ ಪ್ರತ್ಯೇಕವಾಗಿ ಠೇವಣಿಸಲು ಕ್ರಮವಿಡಲಾಗುವುದು.

**ನಿವೇಶನ ಡಿಪಾಜಿಟ್ (ಠೇವಣಿ) :–** ದಿನಾಂಕ 31–03–2020ಕ್ಕೆ 212 ಸಾಮಾನ್ಯ ಸದಸ್ಯರಿಂದ ನಿವೇಶನ ಡಿಪಾಜಿಟ್ ರೂ. 17,76,71,897–00 ಗಳು ಮತ್ತು 3179 ಸಹ ಸದಸ್ಯರಿಂದ ನಿವೇಶನ ಡಿಪಾಜಿಟ್ ರೂ. 297,62,44,797–01 ಗಳು ಜಮಾ ಇರುತ್ತದೆ.

**ಹೂಡಿಕೆಗಳು :–** ದಿನಾಂಕ 31–03–2020ಕ್ಕೆ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾ ಮಂಡಳಿಯಲ್ಲಿ ಷೇರು ರೂ. 45,000–00, ಮತ್ತು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಬೆಂಗಳೂರು ಗಂಗಾನಗರ ಶಾಖೆಯಲ್ಲಿ ಖಾಯಂ ಠೇವಣಿ ಬಾಬ್ತು ರೂ. 1,16,13,239–00 ಗಳನ್ನು ಹಾಗೂ ವಿದ್ಯುತ್ ಠೇವಣಿ ರೂ. 28,600–00 ಹಾಗೂ ನೀರಿನ ಠೇವಣಿ 1,080–00 ಮತ್ತು ಶ್ರೀನಿಧಿ ಸೌಹಾರ್ಧ ಸಹಕಾರ ಬ್ಯಾಂಕಿನಲ್ಲಿ ಷೇರು 3,000–00 ಗಳನ್ನು ಸಂಘವು ಹೂಡಿಕೆ ಮಾಡಿರುತ್ತದೆ.

**ಬಡಾವಣೆ ವೆಚ್ಚಗಳು:–** ದಿನಾಂಕ 31–03–2020ಕ್ಕೆ ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ರೂ. 315,39,16,694–01 [ರೂ. 17,76,71,897–00 + ರೂ. 297,62,44,797–01] ಗಳ ನಿವೇಶನ ಡಿಪಾಜಿಟನ್ನು ಪಡೆದು, ದಿನಾಂಕ 31–03–2020ರ ಬ್ಯಾಲನ್ ಷೀಟಿನ ಆಸ್ತಿಯ ಕ್ರಮ ಸಂಖ್ಯೆ 5 ರಲ್ಲಿ (ಆಸ್ತಿ ಜವಾಬ್ದಾರಿ ತಃಖ್ತೆಯ ಪುಟ ಸಂಖ್ಯೆ 3 ರಿಂದ 14ನೇ ಪುಟದ ವರೆವಿಗೆ) ವಿವರಿಸಿರುವಂತೆ, ಬಡಾವಣೆಯ ಡೆವಲಪರ್ಸ್ ರವರುಗಳಿಗೆ; ಇತರೆ ಬಾಬ್ತುಗಳಿಗೆ; ಬಡಾವಣೆಯ ಕೆಲಸಕಾರ್ಯಗಳಿಗಾಗಿ ರೂ. 315,32,82,209–00 ಗಳನ್ನು (ರೂ. 75,71,98,297–00 + ರೂ. 43,79,60,037–00 + ರೂ. 14,08,53,760–00 + ರೂ. 144,72,65,565–00 + ರೂ. 36,95,20,550–00 + ರೂ. 4,84,000–00) ನೀಡಲಾಗಿದೆ ಎಂದು ತಿಳಿಯಬಯಸುತ್ತೇವೆ.

**ನಿವ್ವಳ ನಷ್ಟ :–** ಸಂಘವು ದಿನಾಂಕ 31–03–2020ಕ್ಕೆ, ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 8 ರಲ್ಲಿ ವಿವರಿಸಿರುವಂತೆ ರೂ. 31,93,632–82 ರೂಗಳ ನಷ್ಟವನ್ನು ಹೊಂದಿದೆ. ನಷ್ಟಕ್ಕೆ ಪ್ರಮುಖ ಕಾರಣವೇನೆಂದರೆ ಸಂಘವು ನೌಕರರ ಗೃಹ ನಿರ್ಮಾಣ ಸಹಕಾರ ಸಂಘವಾಗಿದ್ದು, ಮಾಡಬೇಕಾದ ಆಡಳಿತಾತ್ಮಕ ಖರ್ಚುಗಳನ್ನು; ಲಾಭ–ನಷ್ಟ ಪೂರ್ವದಲ್ಲಿ ಕಲ್ಪಿಸಬೇಕಾದ ಅವಕಾಶಗಳು; ಸವಕಳಿ ಇತ್ಯಾದಿ ಖರ್ಚುಗಳನ್ನು ಮಾಡಲೇಬೇಕಾಗಿರುತ್ತದೆ. 2016–17ನೇ ಸಾಲಿನ, 2017–18ನೇ ಸಾಲಿನ, 2018–19ನೇ ಸಾಲಿನ ಮತ್ತು 2019–20ನೇ ಸಾಲಿನ

ಲಾಭ-ನಷ್ಟದ ತಃಖ್ತೆಯಲ್ಲಿ ತೋರಿಸಿರುವಂತೆ ಆಡಳಿತಾತ್ಮಕ ಖರ್ಚು ಹಾಗೂ ಪ್ರಾವಿಜನ್‌ಗಳು; ಅವಕಾಶಗಳು; ಸಂಘವು ಗಳಿಸಿರುವ ಲಾಭಕ್ಕಿಂತ ಹೆಚ್ಚಿಗೆ ಖರ್ಚಾಗಿರುತ್ತದೆ. ಆದುದರಿಂದ ಸಂಘವು 2016-17ನೇ ಸಾಲಿನಲ್ಲಿ, 2017-18ನೇ ಸಾಲಿನಲ್ಲಿ ಹಾಗೂ 2018-19ನೇ ಸಾಲಿನಲ್ಲಿ ಮತ್ತು 2019-20ನೇ ಸಾಲಿನಲ್ಲಿ ಸಂಘವು ನಷ್ಟವನ್ನು ಅನುಭವಿಸಿರುತ್ತದೆ. ಸಂಘದ ಬಡಾವಣೆಗಳ ಕೆಲಸಗಳೆಲ್ಲಾ ಮುಗಿದು ನಿವೇಶನಗಳನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ಹಂಚಿ; ನೋಂದಣಿ ಮಾಡಿಕೊಟ್ಟ ಮೇಲೆ; ಬಡಾವಣೆ ಲೆಕ್ಕಗಳನ್ನು ಹೊಂದಾಣಿಕೆ ಲೆಕ್ಕಗಳ ಮೂಲಕ ಮುಕ್ತಾಯಗೊಳಿಸಿದಾಗ ಸಂಘವು ಲಾಭವನ್ನು ಗಳಿಸುವುದೆಂದು ತಿಳಿಯಬಯಸುತ್ತೇವೆ.

**ಆಡಿಟ್ (ಲೆಕ್ಕಪರಿಶೋಧನೆ) :-** 2020ನೇ ಮಾರ್ಚ್ 31 ಕ್ಕೆ ಅಖೈರಾದ (ದಿನಾಂಕ 1-4-2019 ರಿಂದ 31-3-2020 ರ ವರೆಗೆ) ಲೆಕ್ಕಪತ್ರಗಳನ್ನು ಹಾಗೂ ಇನ್ನಿತರ ಆರ್ಥಿಕ ತಃಖ್ತೆಗಳನ್ನು ಶ್ರೀ ಮಲ್ಲಪ್ಪ. ಕೆ, ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯನ್ನು ಮಾಡಿದ್ದು, ಸಂಘಕ್ಕೆ ದಿನಾಂಕ 03-10-2020 ರಂದು ಪರಿಶೋಧಿಸಲ್ಪಟ್ಟ ಹಣಕಾಸಿನ ತಃಖ್ತೆಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಸನ್ನದು ಲೆಕ್ಕಪರಿಶೋಧಕರ ದೃಢೀಕರಣ ಪತ್ರವನ್ನು 2019-20ನೇ ಸಾಲಿಗೆ ನೀಡಿರುತ್ತಾರೆ.

ಸಂಘವು ಸಂದೇಶ್ ನಗರ-1, 2, 3 ನೇ ಹಂತದ ಬಡಾವಣೆಯನ್ನು ನೆಲಮಂಗಲದಲ್ಲಿ ಮತ್ತು ಸಂದೇಶ್ ಲೇಕ್ ಸೈಡ್-1, 2, 3 ಮತ್ತು 4ನೇ ಹಂತದ ಬಡಾವಣೆಯನ್ನು ದೇವನಹಳ್ಳಿ ತಾಲ್ಲೂಕಿನ ಬೆಟ್ಟನಹಳ್ಳಿಯಲ್ಲಿ ಹಾಗೂ ಸಂದೇಶ್ ಭಾಗ್ ಬಡಾವಣೆಯನ್ನು ವರ್ತೂರಿನಲ್ಲಿ ಮಾಡಲು ಉದ್ದೇಶಿಸಿ, ಬಡಾವಣೆಗಳ ಕೆಲಸಗಳು ಪ್ರಗತಿಯಲ್ಲಿದ್ದು, ಮಾನ್ಯ ಸದಸ್ಯರು / ಸಹ ಸದಸ್ಯರುಗಳಿಂದ ನಿವೇಶನ ಡಿಪಾಜಿಟನ್ನು ಸಂಘವು ಪಡೆದಿರುತ್ತದೆ. ಆದರೆ ಸಂದೇಶ್ ಭಾಗ್ ಬಡಾವಣೆಯ ಕೆಲಸಕಾರ್ಯಗಳನ್ನು ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರಿಗೆ, ಸಂದೇಶ್ ಭಾಗ್ ಬಡಾವಣೆಯ ಪ್ರಗತಿ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ, ಸಂಘದಿಂದ ಅನೇಕ ಪತ್ರಗಳನ್ನು ಬರೆದರು, ಪ್ರತ್ಯುತ್ತರವನ್ನು ಸಂಘಕ್ಕೆ ಸಮಂಜಸವಾಗಿ ನೀಡುತ್ತಿಲ್ಲ ಹಾಗು ಬಡಾವಣೆಯ ಕೆಲಸಗಳನ್ನು M.O.U ರೀತ್ಯಾ ನಿಗಧಿತ ಅವಧಿಯೊಳಗೆ, ಸರಿಯಾಗಿ ಮಾಡುತ್ತಿಲ್ಲ ಎಂದು ಸಭೆಗೆ ಅಧ್ಯಕ್ಷರು ತಿಳಿಸಿ, ಇದರ ಬಗ್ಗೆ ಸಂದೇಶ್ ಭಾಗ್ ಬಡಾವಣೆಯ (ವರ್ತೂರು ಪ್ರಾಜೆಕ್ಟ್) ಡೆವಲಪರ್ಸ್ ರವರಾದ, ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರ ಬಗ್ಗೆ ಸಹಕಾರ ಇಲಾಖಾಧಿಕಾರಿಗಳಿಗೆ ಪತ್ರ ಬರೆಯಲೇಬೇಕೆಂದು ಹಾಗೂ ಇವರ ಮೇಲೆ ಸಂದೇಶ್ ಭಾಗ್ ಬಡಾವಣೆಯ ಕೆಲಸಗಳನ್ನು ಮಾಡಿಕೊಡುತ್ತಿಲ್ಲವಾದ್ದರಿಂದ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಉದ್ದೇಸಿಸಲಾಗಿದೆ, ಎಂದು ತಿಳಿಯಬಯಸುತ್ತೇವೆ.

ಸಂದೇಶ್ ನಗರ-1ನೇ ಹಂತದ ಬಡಾವಣೆಗೆ 46 ಎಕರೆ 14 ಗುಂಟೆ ವಿಸ್ತೀರ್ಣದ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಿವಿಧ ಅಳತೆಯ 617 ನಿವೇಶನಗಳನ್ನು ರಚಿಸಿದ್ದು, ಶೇ 60 ರಷ್ಟು ಅಂದರೆ 370 ವಿವಿಧ ಅಳತೆಯ ನಿವೇಶನಗಳು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿದ್ದು, ಈಗಾಗಲೇ ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ದಿನಾಂಕ 31-3-2020ರ ವರೆವಿಗೆ ವಿವಿಧ ಅಳತೆಯ 617 ನಿವೇಶನಗಳನ್ನು ಹಂಚಿದೆ ಮತ್ತು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ವಿವಿಧ ಅಳತೆಯ 370 ನಿವೇಶನಗಳಲ್ಲಿ 343 ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿದೆ, ಹಾಗೂ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ಉಳಿಕೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗುತ್ತಿದೆ. ಸಂದೇಶ್ ನಗರ-1ನೇ ಹಂತದ ಬಡಾವಣೆಗೆ ಸಂಬಂಧಪಟ್ಟಂತೆ ಆರ್ಚ್‌ನ್ನು ನಿರ್ಮಾಣ ಮಾಡುತ್ತಿದ್ದು, ಕೆಲಸವು ಪ್ರಗತಿಯಲ್ಲಿದೆ. ಸಂದೇಶ್ ನಗರ-1ನೇ ಹಂತದ ಬಡಾವಣೆಗೆ ಸಂಬಂಧಪಟ್ಟಂತೆ 40% ನಿವೇಶನ ಬಿಡುಗಡೆಗೆ ಬೇಕಾದ N.O.C (ನೀರಾಕ್ಷೇಪಣಾ ಪತ್ರ) ಗಳನ್ನೆಲ್ಲಾ ತೆಗೆದುಕೊಂಡು ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇವೆ. ಸದ್ಯದಲ್ಲೇ 40% ನಿವೇಶನಗಳು ಬಿಡುಗಡೆಯಾಗಲಿದ್ದು, ನಿವೇಶನಗಳನ್ನು ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನೋಂದಣಿ ಮಾಡಿಕೊಡಲಾಗುವುದೆಂದು ತಿಳಿಯಬಯಸುತ್ತೇವೆ.

ಸಂದೇಶ್ ನಗರ-2ನೇ ಹಂತದ ಬಡಾವಣೆಗೆ 22 ಎಕರೆ 09.5 ಗುಂಟೆ (8 ಎಕರೆ 0.30 ಗುಂಟೆ + 6 ಎಕರೆ 0.15 ಗುಂಟೆ + 4 ಎಕರೆ 04.5 ಗುಂಟೆ ಮತ್ತು 3 ಎಕರೆ) ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ವಿನ್ಯಾಸವನ್ನು ಗಡಿ ನಿರ್ಧಾರ ಮತ್ತು ಅಭಿವೃದ್ಧಿಗಳಿಗಾಗಿ ಮಾತ್ರ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆಯನ್ನು ಸದಸ್ಯ ಕಾರ್ಯದರ್ಶಿ ನೆಲಮಂಗಲ ಯೋಜನಾ ಪ್ರಾಧಿಕಾರದವರು ನೀಡಿರುತ್ತಾರೆ. ಬಡಾವಣೆ ಕೆಲಸವು ಪ್ರಗತಿಯಲ್ಲಿರುತ್ತದೆ. ಸಂದೇಶ್ ನಗರ-2ನೇ ಹಂತಕ್ಕೆ ಸಂಬಂಧಿಸಿದಂತೆ, ಉಳಿದ ಸುಮಾರು 10 ಎಕರೆ ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಮಾಡಿಸಲು ಪ್ರಯತ್ನಿಸುತ್ತಿರುವುದಾಗಿ ಈ ಮೂಲಕ ತಿಳಿಯಬಯಸುತ್ತೇವೆ.

ಸಂದೇಶ್ ನಗರ-3ನೇ ಹಂತದ ಬಡಾವಣೆಗೆ ಇಗಾಗಲೇ 13 ಎಕರೆ 0.5.6 ಗುಂಟೆ ಭೂಪರಿವರ್ತಿತ ಜಮೀನನ್ನು ಡೆವಲಪರ್ಸ್ ರವರು ಸಂಘಕ್ಕೆ ನೋಂದಣಿ ಮಾಡಿಕೊಟ್ಟಿದ್ದು, ಸುಮಾರು 17 ಎಕರೆ 0.04 ಗುಂಟೆ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್ ಮಾಡಿಕೊಳ್ಳಲಾಗಿದೆ. ಬಡಾವಣೆಯ ಕೆಲಸವು ಪ್ರಗತಿಯಲ್ಲಿದೆ ಎಂದು ತಿಳಿಯಬಯಸುತ್ತೇವೆ.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಯ ಕೆಲಸವು ಪ್ರಗತಿಯಲ್ಲಿದ್ದು, ಕಾಂಪೌಂಡ್ ಕೆಲಸ ಹಾಗೂ ಇನ್ನಿತರ ಕೆಲಸಗಳು ನಡೆಯುತ್ತಿದೆ.

ಸಂದೇಶ್ ಭಾಗ್ ಬಡಾವಣೆಯ ನೀಲಿ ನಕ್ಷೆ ಆನೇಕಲ್ ಪ್ರಾಧಿಕಾರದಿಂದ ದಿನಾಂಕ 29–9–2018 ರಲ್ಲಿ 12 ಎಕರೆ 02 ಗುಂಟೆ ಖರಾಬು 24 ಗುಂಟೆ ಭೂಪರಿವರ್ತಿತ ಜಮೀನಿಗೆ ಕರಡು ನಕ್ಷೆಯನ್ನು ಅನುಮೋದಿಸಿರುತ್ತಾರೆ. ಡೆವಲಪರ್ಸ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಆದಷ್ಟು ಜಾಗ್ರತೆಯಾಗಿ ಬಡಾವಣೆಯನ್ನು ನಿರ್ಮಿಸಿಕೊಡುವುದಾಗಿ ಭರವಸೆಯನ್ನು ಹಿಂದೆ ನೀಡಿದ್ದು ಇವಾಗ, ಸಂಘದಿಂದ ಅನೇಕ ಪತ್ರಗಳನ್ನು ಬರೆದರು ಬಡಾವಣೆ ಪ್ರಗತಿ ಬಗ್ಗೆ ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಸಮಂಜಸವಾಗಿ ಸ್ಪಂಧಿಸುತ್ತಿಲ್ಲ. ಆದುದರಿಂದ ಸಹಕಾರ ಇಲಾಖಾಧಿಕಾರಿಗಳಿಗೆ ಪತ್ರ ಬರೆಯುವುದೆಂದು ಹಾಗೂ ಸೂಕ್ತವಾದ ಕಾನೂನು ಕ್ರಮ ತೆಗೆದುಕೊಳ್ಳುವುದೆಂದು ಉದ್ದೇಶಿಸಲಾಗಿದೆ.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4 ಹಾಗೂ ಸಂದೇಶ್ ನಗರ–1, 2, 3 ಗಳ ಡೆವಲಪರ್ಸ್ ರವರುಗಳು ಆದಷ್ಟು ಜಾಗ್ರತೆಯಾಗಿ ಬಡಾವಣೆ ಕೆಲಸಗಳನ್ನು ಮುಗಿಸುವುದಾಗಿ ತಿಳಿಸಿರುತ್ತಾರೆ.

ಹಿಂದೆ ತಿಳಿಸಿದಂತೆ, ಕರ್ನಾಟಕ ಭೂ ಸುಧಾರಣೆ ಕಾಯ್ದೆ ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆ ಅನ್ವಯ ಸಂಘವು ರೈತರಿಂದ ಮತ್ತು ಮಾರುಕಟ್ಟೆಯಲ್ಲಿ ಜಮೀನು ಖರೀದಿ ಮತ್ತು ಸಂಘದ ಹೆಸರಿಗೆ ಭೂಪರಿವರ್ತನಾ ಜಮೀನು ನೋಂದಣಿ ಬಹಳ ಕಷ್ಟವಾಗಿ; ಬಡಾವಣೆಗಳ ಕೆಲಸಗಳು ನಿಧಾನವಾಗುತ್ತಿದೆ. ಆದ ಕಾರಣ ನಿಗದಿತ ಅವಧಿಯೊಳಗೆ ಬಡಾವಣೆಗೆ ಬೇಕಾಗುವ ಭೂಪರಿವರ್ತಿತಜಮೀನುಗಳನ್ನು ಪಡೆದು ಬಡಾವಣೆ ಕೆಲಸಗಳನ್ನು ಮಾಡಲು; ನಿವೇಶನ ಮಾಡಲು ವಿಳಂಬವಾಗುತ್ತಿದೆ. ಆದರು ಸಹಾ ನಮ್ಮ ಸಂಘದ ಬಡಾವಣೆಗಳನ್ನು ಮಾಡುತ್ತಿರುವ ಸಂದೇಶ್ ನಗರ–1, 2, 3 ಮತ್ತು ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಬಡಾವಣೆಗಳ ಡೆವಲಪರ್ಸ್‌ಗಳು ಶ್ರಮವಹಿಸಿ,

ಬಡಾವಣೆಯ ಕೆಲಸಕಾರ್ಯಗಳನ್ನು ಮಾಡುತ್ತಿದ್ದು, ಆದಷ್ಟು ಜಾಗ್ರತೆಯಾಗಿ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಬಡಾವಣೆಯನ್ನು ರಚಿಸಿ, ಆದಷ್ಟು ಜಾಗ್ರತೆಯಾಗಿ ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ನೀಡಿ, ನೋಂದಣಿ ಮಾಡಿಕೊಡಲು ಆಡಳಿತ ಮಂಡಳಿಯು ಹಾಗೂ ಸಂಘದ ಸಿಬ್ಬಂದಿಯು ಶ್ರಮಿಸುತ್ತಿದ್ದೇವೆ, ಎಂದು ತಿಳಿಯಬಯಸುತ್ತೇವೆ.

ಸಂಘವು 2020–21 ನೇ ಸಾಲಿನಲ್ಲಿ ಬಡಾವಣೆಗಳ ಕೆಲಸಗಳನ್ನೆಲ್ಲ ಆದಷ್ಟು ಜಾಗ್ರತೆಯಾಗಿ ಮುಗಿಸಿ, ಸಂಘದ ಮಾನ್ಯ ಅರ್ಹ ಸದಸ್ಯರುಗಳಿಗೆ / ಸಹ ಸದಸ್ಯರುಗಳಿಗೆ ನಿವೇಶಗಳನ್ನು ಹಂಚಿ ನೋಂದಣಿ ಮಾಡಿಕೊಡಲು ಗುರಿ ಹೊಂದಿದ್ದು ಹಾಗೂ ಹೆಚ್ಚಿನ ಉತ್ತಮ ಹಾಗೂ ತ್ವರಿತ ಸೇವೆಯನ್ನು ಸದಸ್ಯರಿಗೆ / ಸಹ ಸದಸ್ಯರುಗಳಿಗೆ ನೀಡಲು ಗುರಿ ಹೊಂದಲಾಗಿದೆ.

ಉತ್ತಮ ಸಲಹೆ, ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಕರ್ನಾಟಕ ಸಹಕಾರ ಇಲಾಖೆಗೆ ಮತ್ತು ಆಡಿಟ್ ಇಲಾಖೆಗೆ; ಸಂಘದ ಲೆಕ್ಕಪರಿಶೋಧನೆಯನ್ನು ಮಾಡಿಕೊಟ್ಟಿರುವ ಸನ್ನದು ಲೆಕ್ಕಪರಿಶೋಧಕರಿಗೆ; ಹಾಗೂ ಸಂಘದ ಬಡಾವಣೆಯನ್ನು ಮಾಡಿಕೊಡುತ್ತಿರುವ ಡೆವಲಪರ್ಸ್ ರವರುಗಳಿಗೂ ಮತ್ತು ಸಂಘದ ಮಾನ್ಯ ಸದಸ್ಯರು / ಸಹ ಸದಸ್ಯರುಗಳಿಗೂ; ಆಡಳಿತ ಮಂಡಳಿ ಸದಸ್ಯರುಗಳಿಗೂ; ಸಂಘದ ವಹಿವಾಟು, ಕೆಲಸವನ್ನು ಚೊಕ್ಕವಾಗಿ ಮತ್ತು ನಿಷ್ಠೆಯಿಂದ ಮಾಡುತ್ತಿರುವ ಸಂಘದ ಸಿಬ್ಬಂದಿಯವರಿಗೂ, ಮತ್ತು ಸಂಘದ ಚಟುವಟಿಕೆಗಳನ್ನು, ಬಡಾವಣೆಯ ಕೆಲಸಕಾರ್ಯಗಳನ್ನು ಸುಗಮವಾಗಿ ನಡೆಸಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಸಹಾಯ ಮಾಡುತ್ತಿರುವ ಪ್ರತಿಯೊಬ್ಬರಿಗೂ, ಪೋಲೀಸ್ ಇಲಾಖೆಯವರಿಗೂ ಎಲ್ಲಾ ಸರ್ಕಾರಿ ಇಲಾಖೆಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಾ ಈ ವಾರ್ಷಿಕ ವರದಿಯನ್ನು ಮುಕ್ತಾಯಗೊಳಿಸುತ್ತೇನೆ.

ತಮ್ಮ ವಿಶ್ವಾಸಿ
ಆಡಳಿತ ಮಂಡಳಿಯ ಪರವಾಗಿ
**ಜಯರಾಮಯ್ಯ**
ಅಧ್ಯಕ್ಷರು

ಸಂಘದ 2019–20ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ವಿಡೀಯೊ ಸಂವಾದದ ಮೂಲಕ ಹಾಜರಿದ್ದ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಲಾಯಿತು.

**5. ಸಂದೇಶ್‌ನಗರ–1, 2 ಮತ್ತು ಸಂದೇಶ್ ನಗರ–3ನೇ ಹಂತದ ಬಡಾವಣೆಗಳ ಹಾಗೂ ಸಂದೇಶ್ ಲೇಕ್ ಸೈಡ್–1, 2, 3 ಹಾಗೂ 4ನೇ ಹಂತ ಬಡಾವಣೆಗಳ ಪ್ರಗತಿಯ ಬಗ್ಗೆ.**

ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ, ನಮ್ಮ ಸಂಘದ 2019–20ನೇ ಸಾಲಿನ 55ನೇ ವರ್ಚುಯಲ್ ಮಹಾ ಸಭೆಗೆ ವಿಡಿಯೋ ಸಂವಾದದ ಮೂಲಕ ಹಾಜರಾಗಿರುವ ಎಲ್ಲಾ ಸದಸ್ಯರಿಗೂ ನಮ್ಮ ಆಡಳಿತ ಮಂಡಳಿ ಪರವಾಗಿ ಸ್ವಾಗತವನ್ನು ಕೋರಿದರು,

ಮುಂದುವರಿದು ನೆಲಮಂಗಲದಲ್ಲಿ ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, ನೆಲಮಂಗಲ ಯೋಜನಾ ಪ್ರಾಧಿಕಾರದಿಂದ 46 ಎಕರೆ 14 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನೀಲಿ ನಕ್ಷೆಯನ್ನು ಬಿಡುಗಡೆ ಮಾಡಿಸಿ, 617 ವಿವಿಧ ಅಳತೆಯ ನಿವೇಶನಗಳನ್ನು ರಚಿಸಿ, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ಹಂಚಿರುತ್ತೇವೆ. ಶೇ 60% ರಂತೆ 370 ವಿವಿಧ ಅಳತೆಯ ನಿವೇಶನಗಳು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿದ್ದು, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ಹಂಚಿಕೆ ಮಾಡಿ, ದಿನಾಂಕ 31–03–2020ರ ವರೆವಿಗೆ ವಿವಿಧ ಅಳತೆಯ 343 ನಿವೇಶನಗಳನ್ನು ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನೋಂದಣಿ ಮಾಡಿಕೊಡಲಾಗಿದೆ ಹಾಗೂ ಸಂಘದಿಂದಲೇ ಸದಸ್ಯರಿಗೆಲ್ಲಾ ಖಾತೆಯನ್ನು ಸಹಾ ಮಾಡಿಕೊಟ್ಟಿರುತ್ತೇವೆ. ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗಿ ನೋಂದಣಿಗೆ ಬಾಕಿ ಇರುವ ನಿವೇಶನಗಳನ್ನು ಸಹಾ ನೋಂದಣಿ ಮಾಡಿಕೊಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು. ಉಳಿದ 40% ರಂತೆ 247 ನಿವೇಶನಗಳು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆ ಆಗಬೇಕಾಗಿದೆ. ಸಂಘವು ಬಡಾವಣೆಯಲ್ಲಿ ಎಲ್ಲ 100% ಕೆಲಸಗಳನ್ನು ಪೂರ್ತಿ ಮಾಡಿದೆ ಅಂದರೆ ರಸ್ತೆ, ಪಾರ್ಕ್, ಡ್ರೈನೇಜ್, ಓವರ್ ಹೆಡ್ ಟ್ಯಾಂಕ್, ಸಂಪ್, ವಿದ್ಯುತ್‌ಚ್ಛಕ್ತಿ ಕೆಲಸ ಮತ್ತು ಎಸ್.ಟಿ.ಪಿ ಕೆಲಸಗಳನ್ನು ಪೂರ್ತಿ ಮುಗಿಸಿದ್ದು, ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಬಂಧಪಟ್ಟಂತೆ 40% ನಿವೇಶನಗಳ ಬಿಡುಗಡೆಗೆ ಬೇಕಾದ N.O.C (ನಿರಾಕ್ಷೇಪಣಾ ಪತ್ರ) ಗಳನ್ನೆಲ್ಲಾ ತೆಗೆದುಕೊಂಡು ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತದೆ. ಸದ್ಯದಲ್ಲೇ 40% ನಿವೇಶನಗಳು ಬಿಡುಗಡೆಯಾಗಲಿದ್ದು, ನಂತರ ಸಂಬಂಧಪಟ್ಟ ಎಲ್ಲಾ ಸದಸ್ಯರಿಗೂ / ಸಹ ಸದಸ್ಯರಿಗೂ ಪತ್ರವನ್ನು ಬರೆದು, ನಿವೇಶನಗಳನ್ನು ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸಂದೇಶ್ ನಗರ–1ನೇ ಹಂತಕ್ಕೆ ಸಂಬಂಧಿಸಿದಂತೆ, ಉಳಿದ 70 ಜನ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಲು ಬಾಕಿ ಇದ್ದು, ಇದಕ್ಕೆ ಸಂಬಂಧಿಸಿದಂತೆ, ಎಲ್ಲಾ ಕೆಲಸಗಳೂ ಆಗಿದ್ದು, ಠಾರ್ ಕೆಲಸ ಮಾತ್ರ ಬಾಕಿ ಇದ್ದು, ಠಾರ್ ಹಾಕಿ, ಸೈಟ್ ನಂಬರ್‌ಗಳನ್ನು ನೀಡಿ ಉಳಿದ 70 ಜನ ಸದಸ್ಯರಿಗೆ; ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸಂಘದ ಅಧ್ಯಕ್ಷರು ಸಂದೇಶ್ ನಗರ–2ನೇ ಹಂತದ ಬಡಾವಣೆ ಬಗ್ಗೆ ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದ ಬಡಾವಣೆಯಲ್ಲಿ ನಿವೇಶನ ಪಡೆಯಲು ಅರ್ಜಿ ಸಲ್ಲಿಸಿರುವ ಸದಸ್ಯರು / ಸಹ ಸದಸ್ಯರುಗಳೆಲ್ಲರಿಗೂ ಜಮೀನುಗಳನ್ನು ಖರೀದಿ ಮಾಡಲಾಗಿದೆ ಮತ್ತು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ 4 ನೀಲಿ ನಕ್ಷೆ ಅನುಮೋದನೆ ಆಗಿರುವುದಾಗಿ ಇನ್ನೊಂದು ನೀಲಿ ನಕ್ಷೆ ಅನುಮೋದನೆಗೆ ಬಾಕಿ ಇರುತ್ತದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. ಈಗಾಗಲೇ ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ ಕೆಲಸಕಾರ್ಯಗಳು ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಆದಷ್ಟು ಜಾಗ್ರತೆಯಾಗಿ, ಬಡಾವಣೆಯನ್ನು ರಚಿಸಿ, ಮುಂದಿನ ಮಾರ್ಚ್ 2021 ನಂತರ ಹಂತ ಹಂತವಾಗಿ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚುವ ಗುರಿ ಹೊಂದಿದ್ದೇವೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. ಸದಸ್ಯರುಗಳು ಯಾರೂ ಸಹಾ ಭಯ ಪಡುವ ಅವಶ್ಯಕತೆ ಇಲ್ಲ, ನಮ್ಮ ಸಂಘದ ವಿರುದ್ಧ ಯಾರೋ ಅಪ ಪ್ರಚಾರ ಮಾಡುತ್ತಿದ್ದಾರೆ, ಅದಕ್ಕೂ ಸಹಾ ಕಿವಿಕೊಡಬೇಡಿ, ನಿವೇಶನ ಪಡೆಯಲು ಪೂರ್ತಿ ಮೊಬಲಗನ್ನು ಪಾವತಿಸಿರುವ ಸದಸ್ಯರುಗಳಿಗೆ / ಸಹ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುವುದು ಆಡಳಿತ ಮಂಡಳಿ ಜವಾಬ್ದಾರಿ ಆಗಿರುತ್ತದೆ. ಆದ್ದರಿಂದ ಯಾವುದೇ ರೀತಿಯ ಅನುಮಾನ ಪಡಬೇಡಿ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ನಂತರ ಸಂದೇಶ್ ನಗರ–3ನೇ ಹಂತದ ಬಡಾವಣೆಯ ಬಗ್ಗೆ ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–3ನೇ ಹಂತದ ಬಡಾವಣೆಗೆ ಇಗಾಗಲೇ ಸಾಕಷ್ಟು ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಕೊಂಡಿದ್ದು, ಇನ್ನು ಕೆಲ ಜಮೀನುಗಳ ಭೂಪರಿವರ್ತನಾ ಕಾರ್ಯ ಪ್ರಗತಿಯಲ್ಲಿರುತ್ತದೆ, ಭೂಪರಿವರ್ತನೆ ಆದ ನಂತದ ಅದನ್ನು ಸಹಾ ಸಂಘಕ್ಕೆ ನೋಂದಣಿ ಮಾಡಿಕೊಳ್ಳಲಾಗುತ್ತದೆಂದು ಸಭೆಯಲ್ಲಿ ತಿಳಿಸಿ, ಸಂದೇಶ್ ನಗರ–2ನೇ ಹಂತದ ಬಡಾವಣೆಯ ಕೆಲಸಕಾರ್ಯಗಳು ಮುಗಿದ ನಂತರ, ಸಂದೇಶ್ ನಗರ–3ನೇ ಹಂತದ ಬಡಾವಣೆಯ ನೀಲಿ ನಕ್ಷೆ ಅನುಮೋದನೆಗೆ ಸಂಬಂಧಿಸಿದ ಪ್ರಾಧಿಕಾರಕ್ಕೆ ಸಲ್ಲಿಸಿ, ನಕ್ಷೆ ಅನುಮೋದನೆ ಪಡೆದು, ಬಡಾವಣೆಯಲ್ಲಿ ನಿವೇಶನಗಳನ್ನು ರಚಿಸಿ, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ, ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಬಡಾವಣೆಯನ್ನು ದೇವನಹಳ್ಳಿ ತಾಲ್ಲೂಕು, ಬೆಟ್ಟನಹಳ್ಳಿ ಗ್ರಾಮದ ಸರಹದ್ದಿನಲ್ಲಿ ಸುಮಾರು 100 ಎಕರೆ ಜಮೀನಿನಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ, ಸಂಘದ ಡೆವಲಪರ್ಸ್ ರವರು ಸಾಕಷ್ಟು ಭೂಪರಿವರ್ತಿತ ಜಮೀನುಗಳನ್ನು ಸಂಘದ ಹೆಸರಿಗೆ ನೋಂದಣಿ ಮಾಡಿರುತ್ತಾರೆ.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಬಡಾವಣೆಗೆ ಸಂಬಂಧಿಸಿದಂತೆ, ತಾತ್ಕಾಲಿಕ ನಕ್ಷೆಯನ್ನು ಸಹಾ ತಯಾರಿಸಿದ್ದು, ಅದರಂತೆ 80 ಅಡಿ ರಸ್ತೆ ಮಾಡುತ್ತಿರುವುದಾಗಿ ಸಭೆಯಲ್ಲಿ ಅಧ್ಯಕ್ಷರು ತಿಳಿಸುತ್ತಾ, ಬಡಾವಣೆಯಲ್ಲಿ ಈಗಾಗಲೇ ಕೆಲಸಗಳನ್ನು ಸಹಾ ಪ್ರಾರಂಭಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿ, ಕಾಂಪೌಂಡ್ ಕಾಮಗಾರಿಯು ಸಹಾ ಆದಷ್ಟು ಮುಕ್ತಾಯವಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು. ಹಾಗೂ ಮೊದಲನೆಯದಾಗಿ ಸಂದೇಶ್ ಲೇಕ್ ಸೈಡ್–1ನೇ ಹಂತದ ಬಡಾವಣೆಯನ್ನು ಮುಗಿಸಿ, ಹಂತ ಹಂತವಾಗಿ ಉಳಿದ ಬಡಾವಣೆಗಳನ್ನು ರಚಿಸಿ, ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಮುಂದುವರಿದು ಅಧ್ಯಕ್ಷರು ಮಾತನಾಡುತ್ತಾ, ಸಂಘದ ಡೆವಲಪರ್ಸ್ ರವರನ್ನು ಸಂಘಕ್ಕೆ ಕರೆಸಿ ಮಾತನಾಡಿರುವುದಾಗಿ, ಸಭೆಯಲ್ಲಿ ತಿಳಿಸುತ್ತಾ, ಸಂದೇಶ್ ಲೇಕ್ ಸೈಡ್ ಬಡಾವಣೆಗಳ ಪ್ರಗತಿಯ ಬಗ್ಗೆ ಹಾಗೂ ಎಲ್ಲಾ ಕೆಲಸಗಳನ್ನು ಯಾವಾಗ ಮುಕ್ತಾಯಗೊಳಿಸುತ್ತೀರಾ ಎಂಬ ಬಗ್ಗೆ ಕೇಳಲಾಗಿ, ಸದರಿ ರವರು ಈಗಾಗಲೇ ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಿರುವುದರಿಂದ ಆದಷ್ಟು ಜಾಗ್ರತೆಯಾಗಿ ಮತ್ತು ಆದಷ್ಟು ಬೇಗ ಎಲ್ಲಾ ಕೆಲಸಗಳನ್ನು ಮುಗಿಸಿ, ಮುಂದಿನ ಏಪ್ರಿಲ್ 2021 ರೊಳಗೆ ಸಂದೇಶ್ ಲೇಕ್ ಸೈಡ್–1ನೇ ಹಂತದ ಬಡಾವಣೆಯ ಸದಸ್ಯರುಗಳಿಗೆ / ಸಹ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚ ಬಹುದೆಂದು ಹಾಗೂ ಉಳಿದ ಸಂದೇಶ್ ಲೇಕ್ ಸೈಡ್–2, 3 ಮತ್ತು 4ನೇ ಹಂತದ ಬಡಾವಣೆಗಳನ್ನು ಹಂತ ಹಂತವಾಗಿ ರಚಿಸಿ, ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಬಹುದೆಂದು ಸಂಘದ ಡೆವಲಪರ್ಸ್ ರವರು ಭರವಸೆಯನ್ನು ಸಂಘಕ್ಕೆ ನೀಡಿರುತ್ತಾರೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸಂದೇಶ್ ನಗರ–1 ಮತ್ತು 2ನೇ ಹಂತದ ಬಡಾವಣೆಗೆ ಹಾಗೂ ಸಂದೇಶ್ ಲೇಕ್ ಸೈಡ್, 1, 2, 3 ಮತ್ತು 4ನೇ ಹಂತಕ್ಕೆ ಸಂಬಂಧಿಸಿದಂತೆ, ಪ್ರಶ್ನೆಗಳೇನಾದರೂ ಇದ್ದಲ್ಲಿ ಸದಸ್ಯರು ಕೇಳಬಹುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 834 ಶ್ರೀ ಸಿದ್ದರಂಗಯ್ಯ ರವರು ಮಾತನಾಡುತ್ತಾ, ಎಲ್ಲರಿಗೂ ಬೆಳಗಿನ ವಂದನೆಗಳನ್ನು ಸಲ್ಲಿಸುತ್ತಾ, ಸಂದೇಶ್ ನಗರ–1ನೇ ಹಂತದಲ್ಲಿ ನಿವೇಶನಕ್ಕೆ ಹಣವನ್ನು ಪಾವತಿಸಿದ್ದು, ಯಾವಾಗ ನಿವೇಶನವನ್ನು ಹಂಚಿಕೆ ಮಾಡುತ್ತಿರಿ ಎಂದು ಸಭೆಯಲ್ಲಿ ಕೇಳಿದರು. ನಿವೇಶನ ದರದಲ್ಲಿ ವ್ಯತ್ಯಾಸವೇನು ಇರುವುದಿಲ್ಲವೇ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತಕ್ಕೆ ಸಂಬಂಧಿಸಿದಂತೆ, ಉಳಿಕೆ 70 ಜನ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲು ಬಾಕಿ ಇರುತ್ತದೆ, ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಇದ್ದುದರಿಂದ ಬಡಾವಣೆಯಲ್ಲಿ ಯಾವುದೇ ರೀತಿಯ ಕೆಲಸಗಳು ಮಾಡಲು ಸಾಧ್ಯವಾಗದೇ ಇರುವುದರಿಂದ ಮುಂದಿನ ಮಾರ್ಚ್ 2021 ರೊಳಗೆ ಉಳಿಕೆ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿ, ನೋಂದಣಿ ಮಾಡಿಕೊಡುವುದಾಗಿ ಸಭೆಯಲ್ಲಿ ತಿಳಿಸಿ, ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ರೂ. 575/– ದರ ನಿಗಧಿ ಪಡಿಸಿರುವಂತೆ, ಅದೇ ದರ ಮುಂದುವರಿಯುತ್ತದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 716 ಮಂಜುನಾಥ. ಕೆ.ಎನ್. ರವರು ಮಾತನಾಡುತ್ತಾ, ಎಲ್ಲರಿಗೂ ಶುಭಾಷಯ ಕೋರಿದರು, ನನ್ನ ಕಡೆಯಿಂದ ಸಹ ಸದಸ್ಯರೊಬ್ಬರು ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ನಿವೇಶನಕ್ಕೆ ಅರ್ಜಿ ಹಾಕಿ ರೂ. 11,50,000/– ಗಳನ್ನು ಪಾವತಿಸಿರುತ್ತಾರೆ ಅವರಿಗೆ ನಿವೇಶನ ಯಾವಾಗ ಸಿಗುತ್ತದೆಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದಲ್ಲಿ ಈಗಾಗಲೇ ಬಡಾವಣೆಯ ಕೆಲಸಗಳು ಪ್ರಾರಂಭವಾಗಿದ್ದು, ಮಾರ್ಚ್ 2021 ರೊಳಗೆ ನಿವೇಶನವನ್ನು ಹಂಚಿಕೆ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 1146 ಶ್ರೀಮತಿ ತಾರಾಮಣಿ ರವರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಸೈಟ್ ನಂ. 381 ಇನ್ನು ನೋಂದಣಿ ಆಗಿರುವುದಿಲ್ಲ ಯಾವಾಗ ನೋಂದಣಿ ಆಗುತ್ತದೆ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ಉಳಿದ 247 ನಿವೇಶನಗಳು ಜನವರಿ 15 ರೊಳಗೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆ ಆಗುವುದು ಇದ್ದು, ಬಿಡುಗಡೆ ಆದ ನಂತರ ಎಲ್ಲ ಸದಸ್ಯರಿಗೂ ನೋಂದಾಯಿತ ಅಂಚೆ ಮುಖಾಂತರ ಪತ್ರವನ್ನು ಕಳುಹಿಸಲಾಗುವುದೆಂದು ನಂತರ ಎಲ್ಲಾ ಸದಸ್ಯರಿಗೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1079 ಶ್ರೀಮತಿ ಟಿ.ಎಲ್. ಹೇಮ ರವರು ಮಾತನಾಡುತ್ತಾ, ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಯಲ್ಲಿ ನಿವೇಶನಕ್ಕೆ ಹಣ ಪಾವತಿಸಿದ್ದು, ಸದರಿ ಬಡಾವಣೆಯಲ್ಲಿ ಏನು ಕೆಲಸಕಾರ್ಯಗಳು ನಡೆದಿಲ್ಲ, ಬೋರ್ಡ್ ಸಹಾ ಹಾಕಿಲ್ಲ, ಯಾವಾಗ ಬೋರ್ಡ್ ಹಾಕುತ್ತೀರಿ, ಯಾವಾಗ ನಿವೇಶನವನ್ನು ಹಂಚಿಕೆ ಮಾಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, ಈಗಾಗಲೇ ಎಲ್ಲಾ ಜಮೀನುಗಳನ್ನು ಡೆವಲಪರ್ಸ್ ರವರು ಸಂಘದ ಹೆಸರಿಗೆ ನೋಂದಣಿ ಮಾಡಿರುತ್ತಾರೆ, ಬೋರ್ಡ್‌ನ್ನು ಜನವರಿ 15 2021 ರ ನಂತರ ಹಾಕುವುದಾಗಿ ಡೆವಲಪರ್ಸ್ ರವರು ತಿಳಿಸಿರುತ್ತಾರೆ, ಮುಂದಿನ ಮಾಹೆಯಲ್ಲಿ ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಿ, ಹಂತ ಹಂತವಾಗಿ ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಲಾಗುವುದೆಂದು ಸಹಾ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 617 ಶ್ರೀಮತಿ ಸರಸ್ವತಮ್ಮ ಕೋಂ ಶ್ರೀ ಗೋಪಾಲ್ ರಾವ್ ರವರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದಲ್ಲಿ ನಿವೇಶನ ಸಂಖ್ಯೆ 517 ಹಂಚಿಕೆ ಮಾಡಿದ್ದು, ಇನ್ನು ನೋಂದಣಿ ಆಗಿರುವುದಿಲ್ಲ ಯಾವಾಗ ನೋಂದಣಿ ಆಗುತ್ತದೆಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಉಳಿಕೆ 40% ನಿವೇಶನಗಳು ಜನವರಿ 15 ರ ನಂತರ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗುತ್ತದೆ, ಬಿಡುಗಡೆ ಆದ ನಂತರ ಎಲ್ಲ ಸದಸ್ಯರಿಗೂ ಪತ್ರ ಬರೆಯಲಾಗುತ್ತದೆ ನಂತರ ನೋಂದಣಿ ಮಾಡಿಕೊಡಲಾಗುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 893 ಶ್ರೀ ಪ್ರಕಾಶ್. ಹೆಚ್.ಸಿ ರವರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದ ಬಡಾವಣೆಯಲ್ಲಿ ಯಾವಾಗ ನಿವೇಶನ ಹಂಚಿಕೆ ಮಾಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದಲ್ಲಿ ಈಗಾಗಲೇ ಬಡಾವಣೆಯ ಕೆಲಸಗಳು ಪ್ರಾರಂಭವಾಗಿದ್ದು, ಮಾರ್ಚ್ 2021 ರೊಳಗೆ ನಿವೇಶನವನ್ನು ಹಂಚಿಕೆ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 1174 ಶ್ರೀ ಪುಟ್ಟಗಂಗಯ್ಯ ರವರು ಮಾತನಾಡುತ್ತಾ, ಅಧ್ಯಕ್ಷರಿಗೂ, ಉಪಾಧ್ಯಕ್ಷರಿಗೂ ಹಾಗೂ ಎಲ್ಲ ನಿರ್ದೇಶಕರುಗಳಿಗೂ ನಮಸ್ಕಾರಗಳನ್ನು ತಿಳಿಸುತ್ತಾ, ನೀವು ಕೆಲಸ ಮಾಡೋದು ನೋಡಿದರೇ, ಒಂದು ಕಡೆ ಖುಷಿ ಆಗುತ್ತದೆ ಇನ್ನೊಂದು ಕಡೆ ನಿವೇಶನಗಳು ಕೊಟ್ಟಿಲ್ಲ ಎಂದು ಬೇಸರವಾಗುತ್ತದೆ. ನಾನು ಸುಮಾರು ಸದಸ್ಯರನ್ನು ಸಂಘಕ್ಕೆ ಪರಿಚಯಿಸಿದ್ದೇನೆ, ನಿಮ್ಮ ಡೆವಲಪರ್ಸ್ ರವರುಗಳು ನಿಮ್ಮ ಮಾತುಗಳನ್ನು ಕೇಳುತ್ತಾರೋ, ಇಲ್ಲವೇನೋ ಅಂತ ನನಗೆ ಅನಿಸುತ್ತಿದೆ, ಯಾರು ಡೆವಲಪರ್ಸ್ ರವರುಗಳು ಕೆಲಸಗಳನ್ನು ಮಾಡುತ್ತಿಲ್ಲವೋ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಿ, ಆದಷ್ಟು ಬೇಗ ಕೆಲಸಗಳನ್ನು ಮಾಡಿಸಿ, ಅರ್ಹ ಸದಸ್ಯರುಗಳಿಗೆ / ಸಹ ಸದಸ್ಯರುಗಳಿಗೆ ನಿವೇಶನಗಳನ್ನು ಕೊಡಿ, ಹಾಗೇನಾದರು ತೊಂದರೆ ಇದ್ದರೇ ಹೇಳಿ, ಸದಸ್ಯರೆಲ್ಲರೂ ಬಂದು ನಿಮಗೆ ಸಹಕರಿಸುತ್ತೇವೆ, ಡೆವಲಪರ್ಸ್ ರವರುಗಳ ಜೊತೆ ಎಂ.ಒ.ಯು. ಮಾಡಿಕೊಂಡಿರುತ್ತೀರಿ, ಅದರಂತೆ ನೀವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ, ನೆಲಮಂಗಲ ಬಡಾವಣೆಯನ್ನು ನೋಡಿದರೇ, ಸಂತೋಷವಾಗುತ್ತದೆ, ಬೇರೆ ಕಡೆ ಇನ್ನು ಸೈಟ್‌ಗಳನ್ನು ಕೊಟ್ಟಿಲ್ಲ, ನಾನು ಪರಿಚಯಿಸಿದ ಸದಸ್ಯರೆಲ್ಲರೂ ನನ್ನನ್ನು ಕೇಳುತ್ತಿದ್ದಾರೆ, ಅವರಿಗೆ ನಾನು ಏನು ಉತ್ತರ ಕೊಡಬೇಕು ಎಂದು ಹೇಳಿ ಎಂದು ಸಭೆಯಲ್ಲಿ ಅಧ್ಯಕ್ಷರನ್ನು ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಇದುವರೆವಿಗೂ ನಾನು ಮಾತನಾಡಿದ್ದು, ಸಂದೇಶ್ ನಗರ–1ನೇ ಹಂತದ 40% ನಿವೇಶನಗಳನ್ನು ಮುಂದಿನ ಜನವರಿ 15 2021 ರೊಳಗೆ ಬಿಡುಗಡೆ ಮಾಡಿಸಲು ಪ್ರಯತ್ನಿಸಿ, ಬಿಡುಗಡೆ ಮಾಡಿಸಿ, ಸದಸ್ಯರಿಗೆ ನೋಂದಣಿ ಮಾಡಲಾಗುತ್ತದೆ, ಸಂದೇಶ್ ನಗರ–2ನೆ ಹಂತದ ಬಡಾವಣೆಯು ಮಾರ್ಚ್ 2021 ರೊಳಗೆ ನಿವೇಶನಗಳನ್ನು ಹಂಚಿಕೆ ಮಾಡುತ್ತೇವೆ ಎಂದು ಹೇಳಿದ್ದೀವಿ, ಎಲ್ಲ ಸದಸ್ಯರಿಗೂ ನಿವೇಶನಗಳನ್ನು ಹಂಚಿಕೆ ಮಾಡುತ್ತೇವೆ, ಅದರ ಬಗ್ಗೆ ಅನುಮಾನ ಬೇಡ, ನೀವು ನಿವೇಶನಕ್ಕೆ ಅರ್ಜಿ ಹಾಕಿಸಿರುವ ಸದಸ್ಯರುಗಳು / ಸಹ ಸದಸ್ಯರುಗಳು ನಿವೇಶನದ ಪೂರ್ತಿ ಮೊಬಲಗು ಪಾವತಿಸಿ ನಂತರ, ಅಂತಹ ಪ್ರತಿಯೊಬ್ಬರಿಗೂ ನಿವೇಶನಗಳನು ಕೊಡುತ್ತೇವೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1220 ಶ್ರೀಮತಿ ಜಿ ಸುಧ ರವರು ಮಾತನಾಡುತ್ತಾ, ಸಂದೇಶ್ ನಗರ–3ನೇ ಹಂತದಲ್ಲಿ 40X60 ನಿವೇಶನಕ್ಕೆ ಅರ್ಜಿ ಸಲ್ಲಿಸಿ, ಮೊಬಲಗನ್ನು ಪಾವತಿಸಿರುತ್ತೇನೆ. ನಿವೇಶನ ಯಾವಾಗ ಸಿಗುತ್ತದೆ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದ ಬಡಾವಣೆಯಲ್ಲಿ ಮಾರ್ಚ್ 2021ರಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುತ್ತೇವೆ, ನಂತರ ಸಂದೇಶ್ ನಗರ–3ನೇ ಹಂತದ ಕೆಲಸಕಾರ್ಯಗಳನ್ನು ಪ್ರಾರಂಭಿಸುತ್ತೇವೆ, ಇದಕ್ಕೆ ಸಂಬಂಧಿಸಿದಂತೆ, ಸಂದೇಶ್ ನಗರ–3ನೇ ಹಂತದಲ್ಲಿ ಜಮೀನುಗಳನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಕೊಳ್ಳಲಾಗಿದೆ, ಮಾಡಿಕೊಳ್ಳಲಾಗುತ್ತಿದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1183 ಶ್ರೀ ಕೃಷ್ಣಮೂರ್ತಿ. ಟಿ.ಎಸ್ ರವರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ನಿವೇಶನವನ್ನು ಪಡೆದು ಪ್ರಾವಿಜನ್ ಅಲಾಟ್‌ಮೆಂಟ್ ಲೆಟರನ್ನು ಸಹಾ ಕೊಟ್ಟಿದ್ದೀರಿ, ಇನ್ನು ನೋಂದಣಿ ಆಗಿರುವುದಿಲ್ಲ ಯಾವಾಗ ನೋಂದಣಿ ಆಗುತ್ತದೆ ಎಂದು ಸಭೆಯಲ್ಲಿ ಕೇಳಿದರು. ನಂತರ ಏನಾದರೂ ತೊಂದರೆ ಇದ್ದಲ್ಲಿ ನಮಗೂ ಹೇಳಿ ನಾವು ಸಹಾ ನಿಮಗೆ ಸಹಕಾರ ಕೊಡುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ 40% ನಿವೇಶನಗಳನ್ನು ಬಿಡುಗಡೆ ಮಾಡಲು ಏನು ತೊಂದರೆ ಇಲ್ಲ, ನಾವು ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ, ಎಲ್ಲಾ ದಾಖಲಾತಿಗಳನ್ನು ಸಹಾ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಲ್ಲಿಸಿದೆ. ಪ್ರಾಧಿಕಾರದಿಂದ ಬಿಡುಗಡೆಗೆ ಮಾತ್ರ ಬಾಕಿ ಇದ್ದು, ನವೆಂಬರ್ ತಿಂಗಳಿನಲ್ಲೇ ರಿಲೀಸ್ ಆಗಬೇಕಿತ್ತು, ಜಂಟಿ ನಿರ್ದೇಶಕರಿಗೆ ಕೋವಿಡ್ ಬಂದು ಒಂದು ತಿಂಗಳು ಬಂದಿರುವುದಿಲ್ಲ, ಈಗ ಹೊಸದಾಗಿ ಜಂಟಿ ನಿರ್ದೇಶಕರು ಬಂದಿರುವುದರಿಂದ ಜನವರಿ 15 2021ರೊಳಗೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗುವ ಸಂಬವ ಇದ್ದು, ನಂತರ ಎಲ್ಲ ಅರ್ಹ ಸದಸ್ಯರಿಗೂ ಪತ್ರ ಬರೆಯಲಾಗುತ್ತದೆ ನಂತರ ನೋಂದಣಿ ಮಾಡಿಕೊಡಲಾಗುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 937 ಶ್ರೀಮತಿ ಪೋಕಾಲ ಕನಕ ದುರ್ಗ ರವರು ಮಾತನಾಡುತ್ತಾ, ಸಂದೇಶ್ ಭಾಗ್ (ವರ್ತೂರು) ಬಡಾವಣೆಗೆ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿ, ಸೈಟ್ ಯಾವಾಗ ಕೊಡುತ್ತೀರಿ ಎಂದು ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ಭಾಗ್ (ವರ್ತೂರು) ಬಡಾವಣೆಗೆ ಸಂಬಂಧಿಸಿದಂತೆ, ಬಡಾವಣೆಯ ನೀಲಿ ನಕ್ಷೆ ಅನುಮೋದನೆ ಆಗಿದೆ, ಕಾಂಪೌಂಡ್ ಕೆಲಸವು ಪೂರ್ತಿ ಆಗಿದೆ, ಈಗ ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಲು ಹೆಚ್ಚಿನ ಬೆಲೆಯನ್ನು ನೀಡಲು ಡೆವಲಪರ್ಸ್ ರವರು ಕೇಳುತ್ತಿದ್ದಾರೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿ, ಇದಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ಬೆಲೆ ಕೊಡುವ ಬಗ್ಗೆ ಪತ್ರವನ್ನು ಸಂಘಕ್ಕೆ ನೀಡಿ ಎಂದು ಕೇಳಿದರೂ ಸಹಾ ಡೆವಲಪರ್ಸ್ ರವರು ವಿವರವಾದ ಪತ್ರವನ್ನು ನೀಡುತ್ತಿಲ್ಲ, ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸುತ್ತಿಲ್ಲ, ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿ, ಈ ವಾರ್ಷಿಕ ಸಾಮಾನ್ಯ ಸಭೆಯ ನಂತರ ಸಂದೇಶ್ ಭಾಗ್ ಬಡಾವಣೆಯ ಸದಸ್ಯರನ್ನು; ಸಹ ಸದಸ್ಯರನ್ನು ಕರೆದು ಸಭೆಯನ್ನು ಏರ್ಪಡಿಸಿ, ಸಭೆಯ ತೀರ್ಮಾನದಂತೆ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

ಮುಂದುವರಿದು ಮಾರ್ಚ್ 2020 ರಿಂದ ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಇರುವುದರಿಂದ ಸಭೆಯನ್ನು ಕರೆಯಲು ಸಾಧ್ಯವಾಗಲಿಲ್ಲ, ಆದುದರಿಂದ ಈ ವಾರ್ಷಿಕ ಸಭೆಯು ಮುಗಿದ ನಂತರ ಸಂದೇಶ್ ಭಾಗ್ ಬಡಾವಣೆಯ

ಸದಸ್ಯರುಗಳ / ಸಹ ಸದಸ್ಯರುಗಳಿಗೆ ಸಭೆಯನ್ನು ಕರೆದು, ಚರ್ಚಿಸಿ, ಸಭೆಯ ತೀರ್ಮಾನದಂತೆ, ತೀರ್ಮಾನ ತೆಗೆದುಕೊಳ್ಳಲಾಗುತ್ತದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1024 ಸಿದ್ದರಾಮ. ಎನ್ ರವರು ಮಾತನಾಡುತ್ತಾ, ಆಡಳಿತ ಮಂಡಳಿ ಸದಸ್ಯರೆಲ್ಲರಿಗೂ ಹೊಸ ವರ್ಷಕ್ಕೆ ಸ್ವಾಗತವನ್ನು ಕೋರುತ್ತಾ, ನಿಮ್ಮ ಕಾರ್ಯಕ್ರಮಗೆಳ್ಳೆಲ್ಲಾ ಚೆನ್ನಾಗಿ ಮೂಡಿ ಬರುತ್ತಿದೆ, ನನ್ನ ಸೈಟ್ ನಂ 612, ಸಂದೇಶ್ ನಗರ–1ನೇ ಹಂತ, ಇನ್ನು ಪ್ರಾಧಿಕಾರದಿಂದ ಬಿಡುಗಡೆ ಆಗಿಲ್ಲ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಮೇಲೆ ತಾವು ತಿಳಿಸಿರುವಂತೆ, ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ 40% ನಿವೇಶನಗಳು ಯಾಕೆ ಬಡುಗಡೆ ಆಗಿಲ್ಲ ಎಂಬ ಬಗ್ಗೆ ನನಗೆ ಮಾಹಿತಿ ಸಿಕ್ಕಿದೆ, ನನ್ನ ಕೊನೆಯ ಪ್ರಶ್ನೆ ಏನು ಎಂದರೆ, ನೀವು ಮಾಡಿರುವ ಬಡಾವಣೆಗಳ ಡೆವಲಪರ್ಸ್ ರವರುಗಳನ್ನು ನಿಮ್ಮಗಳ ಜೊತೆಯಲ್ಲಿ ಈ ದಿನದ ಸಭೆಯಲ್ಲಿ ಕೂರಿಸಿಕೊಳ್ಳಬೇಕಾಗಿತ್ತು ಎಂದು ಸಭೆಯಲ್ಲಿ ಅವರ ಅಭಿಪ್ರಾಯ ತಿಳಿಸಿದರು.

ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ, ಈ ಹಿಂದೆ ನಡೆದ ಸರ್ವ ಸದಸ್ಯರ ಸಭೆಗಳಲ್ಲಿ ಡೆವಲಪರ್ಸ್ ರವರನ್ನು ಕರೆಸಿದರೇ, ಕೆಲ ಸದಸ್ಯರು ಡೆಲಪರ್ಸ್ ರವರನ್ನು ಯಾಕೆ ಕರೆಸುತ್ತೀರಿ, ನೀವುಗಳು ಉತ್ತರವನ್ನು ನೀಡಬೇಕು ಎಂದು ತಿಳಿಸಿ, ಮುಂದೆ ಡೆವಲಪರ್ಸ್ ರವರನ್ನು ಕರೆಸಬೇಡಿ ಎಂದು ಸಭೆಯಲ್ಲಿ ತಿಳಿಸಿದ ಮೇರೆಗೆ ನಾವು ಈ ದಿನದ ಸಭೆಯಲ್ಲಿ ಡೆವಲಪರ್ಸ್ ರವರನ್ನು ಕರೆಸಿಲ್ಲ ಎಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 1197 ಹೆಚ್.ಎಂ. ಬಸವರಾಜು ರವರು ಮಾತನಾಡುತ್ತಾ, ಸಂದೇಶ ನಗರ–1ನೇ ಹಂತದ ಬಡಾವಣೆಯಲ್ಲಿ ಅಲಾಟ್‌ಮೆಂಟ್ ಆಗಿದೆ ಇನ್ನು ನೋಂದಣಿ ಆಗಿರುವುದಿಲ್ಲ, ಯಾವಾಗ ನೋಂದಣಿ ಮಾಡಿಕೊಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಉಳಿಕೆ 40% ನಿವೇಶನಗಳು ಜನವರಿ 15 ರ ನಂತರ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗುತ್ತದೆ, 40% ನಿವೇಶನಗಳು ಬಿಡುಗಡೆಯಾದ ನಂತರ ಎಲ್ಲ ಸದಸ್ಯರಿಗೂ ಪತ್ರ ಬರೆಯಲಾಗುತ್ತದೆ ನಂತರ ನೋಂದಣಿ ಮಾಡಿಕೊಡಲಾಗುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 837 ಶ್ರೀ ಮಂಜುನಾಥ ಸ್ವಾಮಿ ಹೆಚ್.ಪಿ ರವರು ಮಾತನಾಡುತ್ತಾ, ನೆಲಮಂಗಲದಲ್ಲಿ ಡೆವಲಪರ್ಸ್ ರವರ ಕಡೆಯಿಂದ ಕೆಲಸಗಳು ಏನಾದರೂ ಬಾಕಿ ಇದಿಯೇ ಎಂದು ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದಲ್ಲಿ ಎಲ್ಲಾ ಕೆಲಸಗಳು 100% ಪೂರ್ತಿ ಆಗಿದೆ, 40% ನಿವೇಶನಗಳನ್ನು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಗೊಳಿಸಲು ಬಾಕಿ ಇದೆ, ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 844 ಶ್ರೀಮತಿ ನಿರ್ಮಲ. ಕೆ.ಎಸ್ ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ನಿವೇಶನ ಸಂಖ್ಯೆ 202 ಅಲಾಟ್‌ಮೆಂಟ್ ಆಗಿದೆ, ಇನ್ನು ನೋಂದಣಿ ಆಗಿಲ್ಲ, ಯಾವಾಗ ನೋಂದಣಿ ಮಾಡಿಕೊಡುತ್ತಿರೆಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ 40% ನಿವೇಶನಗಳನ್ನು ಬಿಡುಗಡೆ ಮಾಡಲು ಏನು ತೊಂದರೆ ಇಲ್ಲ, ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ, ಎಲ್ಲಾ ದಾಖಲಾತಿಗಳನ್ನು ಸಹಾ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಲ್ಲಿಸಿದ್ದೇವೆ, ಜನವರಿ 15ರ ನಂತರ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗುತ್ತದೆ, ನಂತರ ಸಂಬಂಧಪಟ್ಟ ಎಲ್ಲ ಸದಸ್ಯರಿಗೂ ಪತ್ರ ಬರೆಯಲಾಗುತ್ತದೆ ನಂತರ ನೋಂದಣಿ ಮಾಡಿಕೊಡಲಾಗುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 733 ಶ್ರೀ ಲಕ್ಷ್ಮೀನಾರಾಯಣ ರವರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ಅಲಾಟ್‌ಮೆಂಟ್ ಆಗಿದೆ, ಇನ್ನು ನೋಂದಣಿ ಆಗಿಲ್ಲ, ಯಾವಾಗ ನೋಂದಣಿ ಮಾಡಿಕೊಡುತ್ತಿರೆಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ 40% ನಿವೇಶನಗಳನ್ನು ಜನವರಿ 15 2021ರೊಳಗೆ ಅಥವಾ ನಂತರ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆ ಮಾಡಿಸಿ ನಂತರ ನೋಂದಣಿ ಮಾಡಿಕೊಡಲಾಗುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1135 ಶ್ರೀ ಗೋವಿಂದ ರಾಜ್ ರವರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದಲ್ಲಿ ನಿವೇಶನ ಸಂಖ್ಯೆ 617 ಅನ್ನು ಪಡೆದಿದ್ದು, ಪೂರ್ತಿ ಹಣ ವನ್ನು ಪಾವತಿಸಿರುತ್ತೇನೆ, ಇನ್ನು ನೋಂದಣಿ ಆಗಿರುವುದಿಲ್ಲ, ಸಂಘದಿಂದ ಪತ್ರ ವ್ಯವಹಾರ ಮಾಡಿಲ್ಲ ಯಾವಾಗ ನೋಂದಣಿ ಮಾಡಿಕೊಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ 40% ನಿವೇಶನಗಳನ್ನು ಜನವರಿ 15 2021ರೊಳಗೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಬಿಡುಗಡೆ ಮಾಡಿಸಿ ನಂತರ ಎಲ್ಲ ಸದಸ್ಯರಿಗೂ ಪತ್ರ ಬರೆಯಲಾಗುತ್ತದೆ ನಂತರ ನೋಂದಣಿ ಮಾಡಿಕೊಡಲಾಗುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 778 ಶ್ರೀ ರಾಜಶೇಖರ್ ರವರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದಲ್ಲಿ ನಿವೇಶನವನ್ನು ಪಡೆದು ನೋಂದಣಿ ಸಹಾ ಮಾಡಿಕೊಂಡಿರುತ್ತೇನೆ, ಸದರಿ ಬಡಾವಣೆಯಲ್ಲಿ ಮನೆ ನಿರ್ಮಾಣ ಮಾಡಬಹುದಾ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ಎಲ್ಲ ಕೆಲಸಕಾರ್ಯಗಳು ಪೂರ್ತಿ ಆಗಿದ್ದು, ಈ ಹಿಂದೆಯೇ ತಿಳಿಸಿದಂತೆ, ಯಾರೂ ಬೇಕಾದರೂ ಮನೆ ಕಟ್ಟಲು ಪ್ರಾರಂಭಿಸಿ, ಸಂಘದಿಂದ ಸಹಾಯ ಮಾಡುವುದಾಗಿ ಹೇಳಿದ್ದೇವೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1040 ಶ್ರೀ ನಾರಾಯಣ ಕಂಪ್ಲಿ ರವರು ಮಾತನಾಡುತ್ತಾ, ನಾನು ಸಂದೇಶ್ ನಗರ–3ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ ನಿವೇಶನಕ್ಕೆ ಅರ್ಜಿ ಸಲ್ಲಿಸಿರುವುದಾಗಿ ಹಾಗೂ ಮೊಬಲಗನ್ನು ಪಾವತಿಸಿರುವುದಾಗಿ, ನಿವೇಶನ ಯಾವಾಗ ನೋಂದಣಿ ಮಾಡಿಕೊಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದ ಬಡಾವಣೆಯಲ್ಲಿ ಕೆಲಸಕಾರ್ಯಗಳು ಪ್ರಾರಂಭಿಸಿರುವುದಾಗಿ, ನಿವೇಶನಗಳನ್ನು ಹಂಚಿಕೆ ಮಾಡಿದ ನಂತರ, ಸಂದೇಶ್ ನಗರ–3ನೇ ಹಂತದ ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಿ, ನಂತರ ನಿವೇಶನ ಹಂಚಿಕೆ ಮಾಡಲಾಗುತ್ತದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1251 ಶ್ರೀ ಫಕೀರ್ ಗೌಡ ಪಾಟೀಲ್ ರವರು ಮಾತನಾಡುತ್ತಾ, ನಾನು ಸಂಘದಲ್ಲಿ ಸದಸ್ಯನಾಗಿದ್ದು, ನಿವೇಶನವನ್ನು ಪಡೆಯಲು ಸಿದ್ದನಿದ್ದೇನೆ, ಇದಕ್ಕೆ ಸಂಬಂಧಿಸಿದಂತೆ, ಮಾಹಿತಿಯನ್ನು ನೀಡಬೇಕಾಗಿ ಸಭೆಯಲ್ಲಿ ಕೋರಿದರು.

ಉಪಾಧ್ಯಕ್ಷರು ಮಾತನಾಡುತ್ತಾ, ತಾವು ಸಂಘಕ್ಕೆ ಭೇಟಿ ನೀಡಿ, ಮಾಹಿತಿಯನ್ನು ಪಡೆಯಬಹುದೆಂದು ಸಭೆಯಲ್ಲಿ ತಿಳಿಸಿದರು.

**6. ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ ಮತ್ತು ಸಂದೇಶ್ ಭಾಗ್ ಬಡಾವಣೆಯ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ.ತಿಲಕ್ ರವರಿಗೆ ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ ಸಂಘದಿಂದ ಅನೇಕ ಪತ್ರಗಳನ್ನು ಬರೆದರೂ ಪ್ರತ್ಯುತ್ತರವನ್ನು ಸಂಘಕ್ಕೆ ನೀಡುತ್ತಿಲ್ಲ ಹಾಗೂ ಬಡಾವಣೆಯ ಕೆಲಸಗಳನ್ನು M.O.U ರೀತ್ಯಾ ನಿಗಧಿತ ಅವಧಿಯೊಳಗಾಗಿ ಸರಿಯಾಗಿ ಮಾಡದೇ ಇರುವುದರಿಂದ ಶ್ರೀ ಆರ್.ಜಿ. ತಿಲಕ್ ರವರ ಬಗ್ಗೆ ಸಹಕಾರ ಇಲಾಖಾಧಿಕಾರಿಗಳಿಗೆ ಪತ್ರ ಬರೆಯುವ ಬಗ್ಗೆ ಮತ್ತು ಕಾನೂನಿನಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಚರ್ಚೆ ಮತ್ತು ಅನುಮೋದನೆ.**

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ಭಾಗ್ (ವರ್ತೂರು) ಬಡಾವಣೆಗೆ ಸಂಬಂಧಿಸಿದಂತೆ, ಆನೇಕಲ್ ಯೋಜನಾ ಪ್ರಾಧಿಕಾರದಿಂದ ನೀಲಿ ನಕ್ಷೆ ಅನುಮೋದನೆಯನ್ನು ದಿನಾಂಕ 29–9–2018 ರಂದು ಪಡೆದಿರುತ್ತೇವೆ, ಎಲ್ಲಾ ಜಮೀನುಗಳಿಗೆ ಸಂಬಂಧಿಸಿದಂತೆ ಕಾಂಪೌಂಡ್ ಸಹಾ ಹಾಕಲಾಗಿದೆ, ಮಧ್ಯದಲ್ಲಿ ಬಂಡೆ ಇದ್ದು ಅದನ್ನು ಸಹ ತೆಗೆದು ಲೆವೆಲ್ ಮಾಡಿರುವುದಾಗಿ ಅಧ್ಯಕ್ಷರು ಸಭೆಯಲ್ಲಿ ತಿಳಿಸಿ, ಈಗ ಬಡಾವಣೆಯಲ್ಲಿ ಕೆಲಸ ಪ್ರಾರಂಭಿಸಬೇಕಾದರೇ, ಹೆಚ್ಚಿನ ದರ ನಿಗಧಿ ಪಡಿಸಿ, ಪತ್ರವನ್ನು ನೀಡಿದರೇ ಮಾತ್ರ ಕೆಲಸಗಳನ್ನು ಪ್ರಾರಂಭಿಸುತ್ತೇವೆ ಎಂದು ಡೆವಲಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿ, ನಂತರ ನೀವು ಹೆಚ್ಚಿನ ದರ ನಿಗಧಿ ಪಡಿಸುವ ಬಗ್ಗೆ ಸಂಘಕ್ಕೆ ವಿವರವಾಗಿ ಪತ್ರವನ್ನು ನೀಡಿದರೇ ಸಂದೇಶ್ ಭಾಗ್ ಬಡಾವಣೆಯ ಸದಸ್ಯರನ್ನು ಸಭೆಗೆ ಕರೆದು ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಬಹುದೆಂದು ಹೇಳಿದರೂ ಸಹಾ ಪತ್ರವನ್ನು ಸಂಘಕ್ಕೆ ನೀಡಿಲ್ಲ, ಎಂದು ಸಭೆಗೆ ಅಧ್ಯಕ್ಷರು ತಿಳಿಸಿದರು. ಈ 55ನೇ ವಾರ್ಷಿಕ ಸಭೆ ಮುಗಿದ ನಂತರ ಸಂದೇಶ್ ಭಾಗ್ ಬಡಾವಣೆಗೆ ಸಂಬಂಧಿಸಿದ ಎಲ್ಲ ಸದಸ್ಯರ / ಸಹ ಸದಸ್ಯರ ಸಭೆಯನ್ನು ಕರೆದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. ಏಕೆಂದರೆ ಅವರು ಕೇಳುವ ಹೆಚ್ಚಿನ ದರವನ್ನು ನಾವು ಕೊಡುವುದಕ್ಕೂ ಆಗುವುದಿಲ್ಲ ಮತ್ತು ಸದಸ್ಯರನ್ನು ಕೇಳುವುದಕ್ಕೂ ಆಗುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿ, ಸದರಿ ಡೆವಲಪರ್ಸ್ ರವರಿಗೆ ಸಂಘದಿಂದ ಅನೇಕ ಪತ್ರಗಳನ್ನು ಬರೆದು ಸಂದೇಶ್ ಭಾಗ್ (ವರ್ತೂರು) ಬಡಾವಣೆಯ ಕೆಲಸಕಾರ್ಯಗಳ ಬಗ್ಗೆ, ಪ್ರಗತಿಯ ಬಗ್ಗೆ ಹಾಗು ಇನ್ನಿತರ ವಿಷಯಗಳ ಬಗ್ಗೆ ಕೇಳಿದರೂ ಸಹಾ ಅವರಿಂದ ಸೂಕ್ತವಾದ / ಸಮಂಜಸವಾದ ಉತ್ತರ / ವಿವರಣೆಯನ್ನು ಡೆವಲಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ನೀಡುತ್ತಿಲ್ಲಾ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಆದ್ದರಿಂದ ಸಂದೇಶ್ ಭಾಗ್ (ವರ್ತೂರು) ಬಡಾವಣೆಯ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಸಂದೇಶ್ ಭಾಗ್ ಬಡಾವಣೆಯಲ್ಲಿ M.O.U ರೀತ್ಯಾ ನಿಗಧಿತ ಅವಧಿಯೊಳಗಾಗಿ ಸರಿಯಾಗಿ ಕೆಲಸಕಾರ್ಯಗಳನ್ನು ಮಾಡದೇ ಇರುವುದರಿಂದ ಮತ್ತು ಸಂಘದಿಂದ ಅನೇಕ ಪತ್ರಗಳನ್ನು ಬರೆದರೂ ಪ್ರತ್ಯುತ್ತರವನ್ನು ಸಂಘಕ್ಕೆ ನೀಡದೇ ಇರುವುದರಿಂದ ಶ್ರೀ ಆರ್.ಜಿ. ತಿಲಕ್ ರವರ ವಿರುದ್ದ ಸಹಕಾರ ಇಲಾಖಾಧಿಕಾರಿಗಳಿಗೆ ಪತ್ರ ಬರೆಯುವ ಬಗ್ಗೆ ಮತ್ತು ಕಾನೂನಿನಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಈ 55ನೇ ವಾರ್ಷಿಕ ವರ್ಚುಯಲ್ ಸಭೆಯಲ್ಲಿ ಹಾಜರಿರುವ ಎಲ್ಲ ಸದಸ್ಯರು ಅನುಮತಿ ನೀಡಬೇಕೆಂದು ಅಧ್ಯಕ್ಷರು ಕೋರಿದರು.

ಮೇಲೆ ತಿಳಿಸಿರುವ ಸಂದೇಶ್ ಭಾಗ್ ಬಡಾವಣೆಯ ಬಗ್ಗೆ ಸದಸ್ಯರೇನಾದರೂ ಪ್ರಶ್ನೆಗಳನ್ನು ಕೇಳುವುದಾದರೇ ಮತ್ತು ತಮ್ಮ ಅನಿಸಿಕೆಗಳನ್ನು ನೀಡುವುದಾದರೇ ನೀಡಬಹುದೆಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 1174 ಶ್ರೀ ಪುಟ್ಟಗಂಗಯ್ಯ ರವರು ಮಾತನಾಡುತ್ತಾ, ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಎಲ್ಲ ಕೆಲಸಗಳು ನಿಂತುಹೋಗಿದೆ, ನೀವು ನಿವೇಶನಗಳನ್ನು ಹಂಚಿಕೆ ಮಾಡಲು ಸಾದ್ಯ ವಾಗುತ್ತಿಲ್ಲ, ಇದರ ಬಗ್ಗೆ ಬಲವಾದ ನಿರ್ಧಾರವನ್ನು ಹಾಗೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ತಿಳಿಸಿದರು. ಈಗಾಗಲೇ ಬಡಾವಣೆಯನ್ನು ರಚಿಸಲು ಬಹಳ ನಿಧಾನವಾಗುತ್ತಿರುವುದರಿಂದ ಅವರನ್ನು ತೆಗೆದುಹಾಕಿ ಬೇರೆಯವರನ್ನು ನೇಮಿಸಿ ಬಡಾವಣೆಯನ್ನು ರಚಿಸಿ ಹಾಗೂ ಇದಕ್ಕೆ ಸಂಬಂಧಿಸಿದಂತೆ ಸದಸ್ಯರಿಂದ ಸಹಕಾರ ಸಹಾಯ ಪಡೆಯಬಹುದೆಂದು ಸಹಾ ಅವರ ಅಭಿಪ್ರಾಯ ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ಭಾಗ್ (ವರ್ತೂರು) ಬಡಾವಣೆಗೆ ಸಂಬಂಧಿಸಿದಂತೆ, ಆನೇಕಲ್ ಯೋಜನಾ ಪ್ರಾಧಿಕಾರದಿಂದ ನೀಲಿ ನಕ್ಷೆ ಅನುಮೋದನೆಯನ್ನು ಪಡೆದಿರುತ್ತೇವೆ, ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಬೇಕಾದರೇ, ಪ್ರತಿ ಚದರ ಅಡಿಗೆ 1000 ರೂಗಳನ್ನು ನಿಗಧಿ ಪಡಿಸಿ, ಪತ್ರವನ್ನು ನೀಡಿದರೇ ಮಾತ್ರ ಕೆಲಸಗಳನ್ನು ಪ್ರಾರಂಭಿಸುತ್ತೇವೆ ಎಂದು ಮೌಖಿಕವಾಗಿ ತಿಳಿಸಿರುವುದರಿಂದ, ಈ ಸಾಮಾನ್ಯ ವರ್ಚುಯಲ್ ಸಭೆಯಲ್ಲಿ ಅವರ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ತಾವುಗಳು ಅನುಮತಿ ನಿಡಬೇಕೆಂದು ಸಭೆಯಲ್ಲಿ ಅಧ್ಯಕ್ಷರು ಕೋರಿದರು.

ಸದಸ್ಯತ್ವ ಸಂಖ್ಯೆ 1174 ಶ್ರೀ ಪುಟ್ಟಗಂಗಯ್ಯ ರವರು ಮಾತನಾಡುತ್ತಾ, ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರು ಸರಿಯಾಗಿ ಕೆಲಸ ಮಾಡುತ್ತಿಲ್ಲವಾದ್ದರಿಂದ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರ ಮೇಲೆ ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳಬೇಕೆಂದು ಸಭೆಯಲ್ಲಿ ಅನುಮೋದಿಸಿದರು.

ಸದಸ್ಯತ್ವ ಸಂಖ್ಯೆ 874 ಶ್ರೀಮತಿ ರಾಜಲಕ್ಷ್ಮಿ ಆರ್ ದೇಸಿಕನ್ ರವರು ಮಾತನಾಡುತ್ತಾ, ನಾವು ಸಂದೇಶ್ ನಗರ–2ನೇ ಹಂತದಲ್ಲಿ ನಿವೇಶನಕ್ಕೆ ಮೊಬಲಗನ್ನು ಪಾವತಿಸಿದ್ದು, ಯಾವಾಗ ನಿವೇಶನವನ್ನು ಹಂಚಿಕೆ ಮಾಡಿ ನೋಂದಣಿ ಮಾಡಿಕೊಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದಲ್ಲಿ ಈಗಾಗಲೇ ಬಡಾವಣೆಯ ಕೆಲಸಗಳು ಪ್ರಾರಂಭವಾಗಿದ್ದು, ಮಾರ್ಚ್ 2021 ರೊಳಗೆ ನಿವೇಶನವನ್ನು ಹಂಚಿಕೆ ಮಾಡಲಾಗುವುದೆಂದು ಹಾಗೂ ಎಲ್ಲ ಕೆಲಸಗಳು ಪೂರ್ತಿ ಆದ ಮೇಲೆ ಸಂಬಂಧಿಸಿದ ಗ್ರಾಮ ಪಂಚಾಯಿತಿ ಇಂದ ಇ–ಖಾತೆ ಬಂದ ಮೇಲೆ ನಿವೇಶನವನ್ನು ನೋಂದಣಿ ಮಾಡಿಕೊಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 937 ಶ್ರೀಮತಿ ಪೋಕಾಲ ಕನಕ ದುರ್ಗ ರವರು ಮಾತನಾಡುತ್ತಾ, ಸಂದೇಶ್ ಭಾಗ್ ಬಡಾವಣೆಗೆ ಸಂಬಂಧಿಸಿದಂತೆ, ಡೆವಲಪರ್ಸ್ ರವರ ಎಂ.ಓ.ಯು ರೀತ್ಯಾ ಸಂಘದವರು ಅವರ ವಿರುದ್ದ ವಿಳಂಬ ಮಾಡದೇ ಏಕೆ ನೀವು ಕ್ರಮ ತೆಗೆದುಕೊಳ್ಳಬಾರದು ಎಂದು ಅವರ ಅಭಿಪ್ರಾಯ ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ಭಾಗ್ (ವರ್ತೂರು) ಬಡಾವಣೆಗೆ ಸಂಬಂಧಿಸಿದಂತೆ, ಆನೇಕಲ್ ಯೋಜನಾ ಪ್ರಾಧಿಕಾರದಿಂದ ನೀಲಿ ನಕ್ಷೆ ಅನುಮೋದನೆಯನ್ನು ಪಡೆದಿರುತ್ತೇವೆ, ಬಡಾವಣೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಬೇಕಾದರೇ, ಪ್ರತಿ ಚದರ ಅಡಿಗೆ 1000 ರೂಗಳನ್ನು ನಿಗಧಿ ಪಡಿಸಿ, ಪತ್ರವನ್ನು ನೀಡಿದರೇ ಮಾತ್ರ ಕೆಲಸಗಳನ್ನು ಪ್ರಾರಂಭಿಸುತ್ತೇವೆ ಎಂದು ತಿಳಿಸಿರುವುದರಿಂದ ವಿಳಂಬ ಆಗಿರುತ್ತದೆ ಹಾಗೂ ಅವರಿಗೆ ಅನೇಕ ಪತ್ರಗಳನ್ನು ಬರೆದರೂ ಸಹಾ ಸೂಕ್ತವಾದ ಉತ್ತರ ನೀಡಿಲ್ಲವಾದ್ದರಿಂದ ಈ ಸಾಮಾನ್ಯ ಸಭೆ ಮುಗಿದ ನಂತರ ಅವರ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. ಇದಕ್ಕೆ ನಿಮ್ಮ ಒಪ್ಪಿಗೆ ಮತ್ತು ಸಲಹೆ ಯನ್ನು ನೀಡಬೇಕೆಂದು ಅಧ್ಯಕ್ಷರು ಕೋರಿದರು.

ಸದಸ್ಯತ್ವ ಸಂಖ್ಯೆ 937 ಶ್ರೀಮತಿ ಪೋಕಾಲ ಕನಕ ದುರ್ಗ ರವರು ಮಾತನಾಡುತ್ತಾ, ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ಮೇಲೆ ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಮೋದಿಸಿದರು. ಹಾಗೂ ಸಂಘವು ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಣಯ ತೆಗೆದುಕೊಂಡರೂ ಅದಕ್ಕೆ ನಮ್ಮ ಒಪ್ಪಿಗೆ ಇದೆ ಎಂದು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 922 ಶ್ರೀಮತಿ ಗೀತಾ. ಜಿ ರವರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದಲ್ಲಿ ನಿವೇಶನಕ್ಕೆ ಅರ್ಜಿ ಸಲ್ಲಿಸಿರುವುದಾಗಿ ಇನ್ನು ಅಲಾಟ್‌ಮೆಂಟ್ ಆಗಿರುವುದಿಲ್ಲ ಮತ್ತು ನೋಂದಣಿ ಆಗಿರುವುದಿಲ್ಲ, ಯಾವಾಗ ನಿವೇಶನ ಅಲಾಟ್‌ಮೆಂಟ್ ಮಾಡುತ್ತೀರಿ ಹಾಗೂ ನೋಂದಣಿ ಮಾಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಉಪಾಧ್ಯಕ್ಷರು ಮಾತನಾಡುತ್ತಾ, ಸಂದೇಶ್ ನಗರ–2ನೇ ಹಂತದಲ್ಲಿ ಈಗಾಗಲೇ ಬಡಾವಣೆಯ ಕೆಲಸಗಳು ಪ್ರಾರಂಭವಾಗಿದ್ದು, ಮಾರ್ಚ್ 2021 ರೊಳಗೆ ನಿವೇಶನವನ್ನು ಹಂಚಿಕೆ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಸದಸ್ಯತ್ವ ಸಂಖ್ಯೆ 948 ಶ್ರೀ ಲಕ್ಷ್ಮೀನಾರಾಯಣ ರವರು ಮಾತನಾಡುತ್ತಾ, ಸಂದೇಶ್ ಲೇಕ್ ಸೈಡ್–1ನೇ ಹಂತದಲ್ಲಿ ಯಾವಾಗ ನಿವೇಶನ ಅಲಾಟ್‌ಮೆಂಟ್ ಮಾಡುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಸಂದೇಶ್ ಲೇಕ್ ಸೈಡ್–1ನೇ ಹಂತಕ್ಕೆ ಸಂಬಂಧಿಸಿದಂತೆ, ಏಪ್ರಿಲ್ 2021 ರೊಳಗೆ ನಿವೇಶನವನ್ನು ಹಂಚಿಕೆ ಮಾಡಲಾಗುತ್ತದೆಂದು ಸಭೆಯಲ್ಲಿ ತಿಳಿಸಿದರು.

ಕಾರ್ಯದರ್ಶಿಯವರು ಮಾತನಾಡುತ್ತಾ, ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ ಮತ್ತು ಸಂದೇಶ್ ಭಾಗ್ ಬಡಾವಣೆಯ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರಿಗೆ ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ ಸಂಘದಿಂದ ಅನೇಕ ಪತ್ರಗಳನ್ನು ಬರೆದರೂ ಸರಿಯಾದ ಪ್ರತ್ಯುತ್ತರವನ್ನು ಸಂಘಕ್ಕೆ ನೀಡುತ್ತಿಲ್ಲ ಹಾಗೂ ಬಡಾವಣೆಯ ಕೆಲಸಗಳನ್ನು M.O.U ರೀತ್ಯಾ ನಿಗಧಿತ ಅವಧಿಯೊಳಗಾಗಿ ಸರಿಯಾಗಿ ಮಾಡದೇ ಇರುವುದರಿಂದ ಶ್ರೀ ಆರ್.ಜಿ. ತಿಲಕ್ ರವರ ಬಗ್ಗೆ ಸಹಕಾರ ಇಲಾಖಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡುವ ಬಗ್ಗೆ ಮತ್ತು ಕಾನೂನಿನಂತೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಕೈ ಎತ್ತುವ ಮೂಲಕ ಈ ಸಾಮಾನ್ಯ ವರ್ಚುಯಲ್ ಸಭೆಯಲ್ಲಿ ಅನುಮತಿಯನ್ನು ನೀಡಬೇಕಾಗಿ ಸದಸ್ಯರನ್ನು ಕೋರಿದರು.

ಸದಸ್ಯತ್ವ ಸಂಖ್ಯೆ 922 ಶ್ರೀಮತಿ ಗೀತ. ಜಿ ರವರು ಸದಸ್ಯತ್ವ ಸಂಖ್ಯೆ 1138 ಶ್ರೀ ಶ್ರೀಧರ. ಹೆಚ್, ರವರು, ಸದಸ್ಯತ್ವ ಸಂಖ್ಯೆ 1007 ಶ್ರೀ ವೆಂಕಟೇಶುಲು. ಡಿ ರವರು, ಸದಸ್ಯತ್ವ ಸಂಖ್ಯೆ 1174 ಶ್ರೀ ಪುಟ್ಟಗಂಗಯ್ಯ ರವರು ಮತ್ತು ಸದಸ್ಯತ್ವದ ಸಂಖ್ಯೆ 937 ಪೋಕಾಲ ಕನಕ ದುರ್ಗ ರವರು ಸಂದೇಶ್ ಭಾಗ್ ಬಡಾವಣೆಯ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರ ಬಗ್ಗೆ ಸಹಕಾರ ಇಲಾಖಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡುವ ಬಗ್ಗೆ ಮತ್ತು ಕಾನೂನಿನಂತೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಿದರು.

**7. ದಿನಾಂಕ 08–09–2019 ರಂದು ನಡೆದ 54ನೇ ವಾರ್ಷಿಕ ಸರ್ವ ಸದಸ್ಯರ (2018–19ನೇ ಸಾಲಿನ) ಮಹಾ ಸಭೆಯ ನಡವಳಿಕೆಗಳನ್ನು (ಠರಾವುಗಳನ್ನು) ಓದಿ ದಾಖಲು ಮಾಡುವುದು.**

ದಿನಾಂಕ 08–09–2019 ರಂದು ನಡೆದ 2018–19ನೇ ಸಾಲಿನ 54ನೇ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು 55ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಪುಸ್ತಕದ ಪುಟ ಸಂಖ್ಯೆ 06 ರಿಂದ 21 ರ ವರೆಗೆ ಮುದ್ರಿತವಾಗಿರುವುದನ್ನು ಸರ್ವ ಸದಸ್ಯರ ಸಭೆಯಲ್ಲಿ ಸಂಘದ ಕಾರ್ಯದರ್ಶಿಯವರಾದ ಶ್ರೀ ಮಹೇಶ್ ರವರು ಓದಿ ಅನುಮೋದನೆ ಕೋರಿದರು.

ಸದಸ್ಯತ್ವ ಸಂಖ್ಯೆ 922 ಶ್ರೀಮತಿ ಗೀತ. ಜಿ ಈ ರವರು ಮತ್ತು ಸದಸ್ಯತ್ವ ಸಂಖ್ಯೆ 1092 ಶ್ರೀಮತಿ ಜಲಜ. ಬಿ.ಎಲ್ ರವರು ಅನುಮೋದಿಸಿದರು ಮತ್ತು ಸದಸ್ಯತ್ವ ಸಂಖ್ಯೆ 1007 ಶ್ರೀ ವೆಂಕಟೇಶುಲು. ಡಿ ರವರು ಹಾಗೂ ಇತರೆ ಎಲ್ಲ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

**8. 2019–2020ನೇ ಸಾಲಿನ ಪರಿಶೋಧಿತ: ಲೆಕ್ಕಪರಿಶೋಧನಾ ವರದಿ ಮತ್ತು ಹಣಕಾಸು ತಃಖ್ತೆಗಳ ಮಂಡನೆ ಮತ್ತು ಅನುಮೋದನೆ ಮತ್ತು ಸದರಿ ವರ್ಷದ ಆಡಿಟ್ ವರದಿಗೆ ತಯಾರಿಸಿರುವ ಅನುಪಾಲನಾ ವರದಿಯ ಮಂಡನೆ ಮತ್ತು ಅನುಮೋದನೆ.**

ಸಂಘದ 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಹಣಕಾಸು ತಃಖ್ತೆಗಳನ್ನು 55ನೇ ವಾರ್ಷಿಕ ವರದಿಯ ಪುಸ್ತಕದ ಪುಟ ಸಂಖ್ಯೆ 22 ರಿಂದ 139 ರ ವರೆಗೆ ಸಭೆಯಲ್ಲಿ ಸಂಘದ ಕಾರ್ಯದರ್ಶಿಯವರಾದ

ಶ್ರೀ ಎಂ.ಎನ್. ಮಹೇಶ್ ರವರು ವಾರ್ಷಿಕ ಮಹಾ ಸಭೆಯಲ್ಲಿ ಓದಿ ಮಂಡಿಸಿದರು. ಹಾಗೂ ಸದರಿ 2019–20ನೇ ಸಾಲಿನ ಆಡಿಟ್ ವರದಿಗೆ ತಯಾರಿಸಿದ್ದ ಅನುಪಾಲನಾ ವರದಿಯನ್ನು ವಾರ್ಷಿಕ ವರದಿಯ ಪಸ್ತಕದ ಪುಟ ಸಂಖ್ಯೆ 140 ರಿಂದ 142ರ ವರೆಗೆ ಸಭೆಯಲ್ಲಿ ಕಾರ್ಯದರ್ಶಿಯವರು ವಾರ್ಷಿಕ ಮಹಾ ಸಭೆಯಲ್ಲಿ ಓದಿ ಮಂಡಿಸಿ, ಅನುಮೋದನೆಯನ್ನು ಕೋರಿದರು.

ಸದಸ್ಯತ್ವ ಸಂಖ್ಯೆ 1007 ಶ್ರೀ ವೆಂಕಟೇಶುಲು. ಡಿ ರವರು ಮತ್ತು ಸದಸ್ಯತ್ವ ಸಂಖ್ಯೆ 922 ಶ್ರೀಮತಿ ಜಿ. ಗೀತ ಮತ್ತು 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಹಣಕಾಸಿನ ತಃಖ್ತೆಗಳನ್ನು ಮತ್ತು ಸದರಿ ವರ್ಷಗಳ ಆಡಿಟ್ ವರದಿಗೆ ತಯಾರಿಸಿರುವ ಅನುಪಾಲನಾ ವರದಿಯನ್ನು ಅನುಮೋದಿಸಿದರು ಮತ್ತು ಸದಸ್ಯತ್ವ ಸಂಖ್ಯೆ 1092 ಶ್ರೀಮತಿ ಜಲಜ. ಬಿ.ಎಲ್ ರವರು ಹಾಗೂ ವಾರ್ಷಿಕ ವರ್ಚುಯಲ್ ಸಭೆಯಲ್ಲಿದ್ದ ಇತರೆ ಎಲ್ಲ ಸದಸ್ಯರುಗಳು ಸಹಾ ಸರ್ವಾನುಮತದಿಂದ ಅನುಮೋದಿಸಿದರು.

**9. 2020–2021ನೇ ಸಾಲಿನ ಅಂದಾಜು ಆಯ–ವ್ಯಯದ ಕರಡಿನ ಮಂಡನೆ ಮತ್ತು ಮಂಜೂರಾತಿ ನೀಡುವುದು ಹಾಗೂ 2019–20ನೇ ಸಾಲಿನಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳನ್ನು ಅಂಗೀಕರಿಸುವುದು.**

ಸಂಘದ ಕಾರ್ಯದರ್ಶಿಯವರಾದ ಶ್ರೀ ಎಂ.ಎನ್. ಮಹೇಶ್ ರವರು 2020–21ನೇ ಸಾಲಿನ ವಾರ್ಷಿಕ ಮುಂಗಡ ಪತ್ರವನ್ನು 55ನೇ ವಾರ್ಷಿಕ ವರದಿಯ ಪುಟ ಸಂಖ್ಯೆ 143 ಮತ್ತು 144 ರಲ್ಲಿ ಮುದ್ರಿಸಿರುವುದನ್ನು ಸಭೆಯಲ್ಲಿ ಓದಿ, ನಂತರ ಸಭೆಯಲ್ಲಿ ಮಂಡಿಸಿ, ಅನುಮೋದನೆಯನ್ನು ಕೋರಿದರು.

## ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟೀವ್ ಸೊಸೈಟಿ ಲಿ.,

ನೊಂ. ಜೆ.ಆರ್.ಬಿ.ಎಎಂಡಿ:14:2009–2010

ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560 094.

**2020–2021 ನೇ ಸಾಲಿನ ವಾರ್ಷಿಕ ಮುಂಗಡ ಪತ್ರ ಮಂಡನೆ ಮತ್ತು ಅಂಗೀಕಾರ ಪಡೆಯುವುದು.**

| ಕ್ರ ಸ | ವಿವರ | 2019–20 ಅಂದಾಜು | 2019–20 ನಿಜ | 2020–21 ಅಂದಾಜು |
|---|---|---|---|---|
| 1 | ಸಿಬ್ಬಂದಿ ವೇತನ / ಭತ್ಯ | 750000–00 | 603000–00 | 750000–00 |
| 2 | ಪ್ರಯಾಣ ವೆಚ್ಚ | 400000–00 | 325604–00 | 400000–00 |
| 3 | ಪ್ರಿಂಟಿಂಗ್ ಮತ್ತು ಸ್ಟೇಷನರಿ | 300000–00 | 77826–00 | 300000–00 |
| 4 | ವಾರ್ಷಿಕ ಮಹಾ ಸಭೆ ಮತ್ತು ಆಡಳಿತ ಮಂಡಳಿ ಸಭೆ ಖರ್ಚು | 800000–00 | 705294–00 | 800000–00 |
| 5 | ಬ್ಯಾಂಕ್ ಚಾರ್ಜಸ್ / ಡಿ.ಡಿ / ಪೇ ಆರ್ಡರ್ ಚಾರ್ಜಸ್ | 25000–00 | 4891–00 | 25000–00 |
| 6 | ಸಂಘದ ನೌಕರರಿಗೆ ಬೋನಸ್ಸ್ | – | – | – |
| 7 | ಸಂಘದ ಕಟ್ಟಡ ಕಂದಾಯ | 15000–00 | 8587–00 | 15000–00 |
| 8 | ಆಂತರಿಕ ಲೆಕ್ಕಪರಿಶೋಧನಾ ಫೀ | 120000–00 | – | 120000–00 |
| 9 | ಸಾದಿಲ್ವಾರು / ಕಛೇರಿ ವೆಚ್ಚ (ಸಿಬ್ಬಂದಿ ಕ್ಷೇಮಾಭಿವೃದ್ಧಿ) | 150000–00 | 124105–00 | 150000–00 |
| 10 | ಅಂಚೆ ಮತ್ತು ದೂರವಾಣಿ | 200000–00 | 88286–00 | 200000–00 |
| 11 | ನೀರು ಮತ್ತು ವಿದ್ಯುತ್ | 75000–00 | 52031–00 | 75000–00 |
| 12 | ಕಟ್ಟಡ ನಿರ್ವಹಣೆ ಮತ್ತು ಕಂಪ್ಯೂಟರ್ ರಿಪೇರಿ ಮತ್ತು ಖರೀದಿ ಇತ್ಯಾದಿ | 100000–00 | 43810–00 | 100000–00 |
| 13 | ಇತರೆ ಖರ್ಚು | 50000–00 | 98820–00 | 100000–00 |
| 14 | ಚಾರ್ಟರ್ಡ್ ಅಕೌಂಟೆಂಟ್ ರವರಿಗೆ ಫ್ರೋಫೆಷನಲ್ ಫೀ, ಪ್ಯಾನ್ ಫೈಲಿಂಗ್ ಚಾರ್ಜಸ್; ರಿಟರ್ನ್ ಫೈಲಿಂಗ್; ಮತ್ತು ಜಿ.ಎಸ್.ಟಿ ರಿಟರ್ನ್ ಫೈಲಿಂಗ್; ಇತರೆ | 150000–00 | 118930–00 | 150000–00 |
| 15 | ಆಯುಧ ಪೂಜೆ ಖರ್ಚು | 75000–00 | 41894–00 | 75000–00 |
| 16 | ಲೆಕ್ಕಪರಿಶೋಧನಾ ಸಂಭಾವನೆ ಫೀ ಮತ್ತು ಚಾಟರ್ಡ್ ಅಕೌಂಟೆಂಟ್ ಫೀ ಜಿ.ಎಸ್.ಟಿ ಫೀ ಮತ್ತು ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ | 900000–00<br>150000–00 | 685882–00<br>– | 900000–00<br>150000–00 |
| 17 | ಲೀಗಲ್ ಅಡ್ವೈಸರ್ ಫೀ | 500000–00 | 376250–00 | 500000–00 |
| 18 | ಪೀಠೋಪಕರಣಗಳು ಮತ್ತು ಇತರೆ | 50000–00 | – | 50000–00 |
| 19 | BSNL ಎಂಪ್ಲಾಯೀಸ್ ಯೂನಿಯನ್ ಕರ್ನಾಟಕ ಸರ್ಕಲ್ ರವರಿಗೆ ಡೊನೇಷನ್ / ದೇಣಿಗೆ | 15000–00 | – | 15000–00 |
| 20 | ಪೋಸ್ಟಲ್ ವೆಲ್‌ಫೇರ್ ಅಸೋಸಿಯೇಷನ್‌ಗೆ ಡೊನೇಷನ್ / ದೇಣಿಗೆ | 30000–00 | – | 30000–00 |
| 21 | ಸದಸ್ಯರಿಗೆ / ಸಹ ಸದಸ್ಯರಿಗೆ ಬಡಾವಣೆಯ ಬಗ್ಗೆ ಎಸ್.ಎಂ.ಎಸ್. ಕಳುಹಿಸಲು | 15000–00 | – | 15000–00 |
| 22 | ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ ದೇಣಿಗೆ ಮತ್ತು ಸಹಕಾರ ಸೌಧ ಕಟ್ಟಡ ನಿರ್ಮಾಣಕ್ಕೆ ದೇಣಿಗೆ | 200000–00 | – | 200000–00 |

| | | | | |
|---|---|---|---|---|
| 23 | ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿ | 50000–00 | – | 50000–00 |
| 24 | ವೆಬ್‌ಸೈಟ್ ರಿನೀವಲ್ ಮತ್ತು ವೆಬ್‌ಸೈಟ್ ನಿರ್ವಹಣಾ ವೆಚ್ಚ | 50000–00 | 8024–00 | 50000–00 |
| 25 | ನ್ಯೂಸ್ ಪೇಪರ್ ವೆಚ್ಚ | 5000–00 | 3336–00 | 5000–00 |
| | | **5175000–00** | **3366570–00** | **5225000–00** |

2019–20ನೇ ಸಾಲಿನಲ್ಲಿ ಇತರೆ ವೆಚ್ಚದ ಬಾಬ್ತು ರೂ. 50,000–00 ಗಳನ್ನು ಬಡ್ಜೆಟ್ ಪ್ರಾವಿಜ಼ನ್ ಮಾಡಿಕೊಂಡಿದ್ದು, ಖರ್ಚಾಗಿರುವುದು ರೂ. 98,820–00 ಗಳು ಹೆಚ್ಚಿಗೆ ಖರ್ಚು ರೂ. 48,820–00 ಗಳು ಈ ರೀತಿ ಹೆಚ್ಚಿಗೆ ಖರ್ಚಾಗಲು ಕಾರಣವೇನೆಂದರೆ ಬಡಾವಣೆಗಳಿಗೆ ಸಂಬಂಧಿಸಿದಂತೆ, ಕೆಲಸಕಾರ್ಯಗಳನ್ನು ಮಾಡಲು ಹಾಗೂ ಸಂಘಕ್ಕೆ ಸಂಬಂಧಿಸಿದಂತೆ ದೃಢೀಕೃತ ದಾಖಲಾತಿಗಳನ್ನು ತರಲು ಮತ್ತು ಇನ್ನಿತರ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ, ಇತರೆ ವೆಚ್ಚ 2019–20ನೇ ಸಾಲಿನ ಬಡ್ಜೆಟ್‌ಗಿಂತ ಜಾಸ್ತಿ ಖರ್ಚು ಆಗಿರುವುದನ್ನು ಈ ಮೂಲಕ ತಮಗೆ ತಿಳಿಯಬಯಸುತ್ತೇನೆ.

2019–20ನೇ ಸಾಲಿನ ಮುಂಗಡ ಪತ್ರದಲ್ಲಿ ಈ ಕೆಳಕಂಡ ಖರ್ಚುಗಳು ಸೇರಿಲ್ಲ ಆದರೇ 2019–20ನೇ ಸಾಲಿನಲ್ಲಿ ಖರ್ಚಾಗಿರುವುದು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಯೋಗಿನಾರಾಯಣ ಕ್ರೆಡಿಟ್ ಸಹಕಾರ ಸಂಘಕ್ಕೆ ಜಾಹಿರಾತು. | ರೂ. | 10,000–00 |
| ಸಂಘದ ಆಡಳಿತ ಮಂಡಳಿ ಚುನಾವಣೆಗೆ ಹಾಲ್ ಬುಕ್ ಮಾಡಿದ್ದು. | ರೂ. | 5,000–00 |
| ಚುನಾವಣೆ ಬಗ್ಗೆ ನ್ಯೂಸ್ ಪೇಪರ್‌ನಲ್ಲಿ ಪ್ರಕಟಣೆ ಮಾಡಿದ್ದು. | ರೂ. | 27,720–00 |
| ಇ–ಸ್ಟಾಂಪ್ ಖರೀದಿ | ರೂ. | 6,000–00 |

ಮೇಲೆ ತಿಳಿಸಿರುವಂತೆ 2019–20ನೇ ಸಾಲಿನ ಮುಂಗಡ ಪತ್ರದಲ್ಲಿ ಪ್ರಾವಿಜ಼ನ್ ಮಾಡಿಕೊಂಡಿದ್ದ ಮೊಬಲಗಿಗಿಂತ ಹೆಚ್ಚಿಗೆ ಖರ್ಚಾಗಿರುವ ಮೊಬಲಗಿಗೆ ಮತ್ತು ಮುಂಗಡ ಪತ್ರದಲ್ಲಿ ಪ್ರಾವಿಜ಼ನ್ ಮಾಡಿಕೊಳ್ಳದೇ ಖರ್ಚುಮಾಡಿರುವ ಮೊಬಲಗಿಗೆ ಮಂಜೂರಾತಿ ನೀಡಬೇಕೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳಲಾಗಿದೆ, ಎಂದು ಸಭೆಯಲ್ಲಿ ಸಂಘದ ಕಾರ್ಯದರ್ಶಿಯವರು ತಿಳಿಸಿದರು.

ಮೇಲಿನ ವಿಷಯದ ಬಗ್ಗೆ ಸದಸ್ಯತ್ವ ಸಂಖ್ಯೆ 1197 ಶ್ರೀ ಬಸವರಾಜು. ಹೆಚ್.ಎಂ ರವರು ಅನುಮೋದಿಸಿದರು ಮತ್ತು ಸದಸ್ಯತ್ವ ಸಂಖ್ಯೆ 1007 ಶ್ರೀ ವೆಂಕಟೇಶುಲು. ಡಿ ರವರು ದೃಢೀಕರಿಸಿದರು. ಹಾಗೂ 2020–21ನೇ ಸಾಲಿನ ಮುಂಗಡ ಪತ್ರವನ್ನು ಹಾಗೂ 2019–20ನೇ ಸಾಲಿನ ಮುಂಗಡ ಪತ್ರದಲ್ಲಿ ಪ್ರಾವಿಜ಼ನ್ ಮಾಡಿಕೊಂಡಿದ್ದ ಮೊಬಲಗಿಗಿಂತ ಹೆಚ್ಚಿಗೆ ಖರ್ಚಾಗಿರುವ ಮೊಬಲಗುಗಳನ್ನು ಮತ್ತು 2019–20ನೇ ಸಾಲಿನ ಮುಂಗಡ ಪತ್ರದಲ್ಲಿ ಪ್ರಾವಿಜ಼ನ್ ಮಾಡಿಕೊಳ್ಳದೇ ಖರ್ಚು ಮಾಡಿರುವ ಮೊಬಲಗುಗಳನ್ನು ಸಭೆಯಲ್ಲಿ ಸಭೆಯಲ್ಲಿದ್ದ ಎಲ್ಲ ಸದಸ್ಯರು ಒಪ್ಪಿ ಮಂಜೂರಾತಿ ನೀಡಿ, ಸರ್ವಾನುಮತದಿಂದ ಅನುಮೋದಿಸಿದರು.

**10. ಸಂಘದ 2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಿಸುವ ವಿಷಯದ ಬಗ್ಗೆ ಮಂಡನೆ ಮತ್ತು ಅನುಮೋದನೆ.**

ಇತ್ತೀಚಿನ ಸಹಕಾರ ಸಂಘಗಳ ಕಾಯಿದೆ ಮತ್ತು ಕಾನೂನಿನ ರೀತ್ಯಾ, 2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರನ್ನು (Chartered Accountants) ವಾರ್ಷಿಕ ಮಹಾ ಸಭೆಯಲ್ಲಿ ನೇಮಕ ಮಾಡಿಕೊಂಡು ಸನ್ನದು ಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಯ ಸಂಭಾವನೆ / ಆಡಿಟ್ ಫೀಯನ್ನು ನಿಗಧಿ ಪಡಿಸಬೇಕಾಗಿರುತ್ತದೆ, ಎಂದು ಸಭೆಗೆ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ. ಹಾಗೂ ಈ ದಿನ ಅಂದರೆ ದಿನಾಂಕ 20–12–2020 ರಂದು 55ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ನಡೆಯುತ್ತಿದ್ದು, ಈ 55ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಪುಸ್ತಕದ ಅಂತಿಮ ಪುಟದಲ್ಲಿ 4 ಜನ ಸನ್ನದು ಲೆಕ್ಕಪರಿಶೋಧಕರ (Chartered Accountants) ರವರ ಹೆಸರುಗಳನ್ನು ಮುದ್ರಿಸಿದೆ. ಇವರಲ್ಲಿ ಒಬ್ಬರನ್ನು 2020–21ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಗೆ ನೇಮಿಸಿಕೊಳ್ಳಲು ಮಾನ್ಯ ಸದಸ್ಯರು ಸೂಚಿಸಬೇಕೆಂದು ಹಾಗೂ ಇವರಿಗೆ ಸರ್ಕಾರದ ಆದೇಶದ ಪ್ರಕಾರ ಅಂದರೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕರ್ನಾಟಕ ರಾಜ್ಯ ಬೆಂಗಳೂರು ಇವರು ನೀಡುವ / ನೀಡಿರುವ ಮಾರ್ಗಸೂಚಿಗಳ ಪ್ರಕಾರ ಸನ್ನದು ಲೆಕ್ಕಪರಿಶೋಧಕರಿಗೆ 2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಸಂಭಾವನೆ / ಆಡಿಟ್ ಫೀ ಶುಲ್ಕವನ್ನು ನೀಡಲು ಮಾನ್ಯ ಸದಸ್ಯರು ಒಪ್ಪಿಗೆ ನೀಡಬೇಕೆಂದು ಸಭೆಯಲ್ಲಿ ವಿಷಯವನ್ನು ಸಂಘದ ಅಧ್ಯಕ್ಷರು ಮಂಡಿಸಿದರು.

ಮೇಲ್ಕಂಡ ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ನಂತರ 2020–21ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಗೆ ಸಿಎ ವರದರಾಜು, ಸನ್ನದು ಲೆಕ್ಕಪರಿಶೋಧಕರು ವರದರಾಜು ಮತ್ತು ಅಸೋಸಿಯೇಟ್ಸ್, (ಸದಸ್ಯತ್ವದ ಸಂಖ್ಯೆ 200/29660) ನಂ. 92/1, ಕೋಕನಟ್ ಅವಿನ್ಯೂ ರಸ್ತೆ, 11ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು– 560003. ರವರನ್ನು ನೇಮಿಸಿಕೊಳ್ಳಲು ಹಾಗೂ ಸರ್ಕಾರದ ಆದೇಶದ ಪ್ರಕಾರ ಅಂದರೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕರ್ನಾಟಕ ರಾಜ್ಯ ಬೆಂಗಳೂರು ಇವರು ನೀಡುವ / ನೀಡಿರುವ ಮಾರ್ಗ ಸೂಚಿಗಳ ಪ್ರಕಾರ ಶ್ರೀ ಸಿಎ ವರದರಾಜು, ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು–560003 ರವರಿಗೆ 2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಸಂಭಾವನೆ / ಆಡಿಟ್ ಫೀ ಶುಲ್ಕವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಅನುಮೋದಿಸಲಾಯಿತು. ಮತ್ತು 2020–21ನೇ ಸಾಲಿನ ಲೆಕ್ಕಪರಿಶೋಧನೆಯ ಬಗ್ಗೆ ಮೇಲಿನ ವಿಷಯದ ಬಗ್ಗೆ ಸಹಕಾರ ಸಂಘಗಳ ಉಪ ನಿರ್ದೇಶಕರು ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ರವರಿಗೆ ಮತ್ತು ಶ್ರೀ ಸಿಎ ವರದರಾಜು, ಸನ್ನದು ಲೆಕ್ಕಪರಿಶೋಧಕರಿಗೆ ಪತ್ರ ಬರೆಯಲು ಸಂಘದ ಅಧ್ಯಕ್ಷರಿಗೆ / ಕಾರ್ಯದರ್ಶಿಯವರಿಗೆ ಅಧಿಕಾರ ನೀಡಲಾಯಿತು.

**11. ಸಂಘದಲ್ಲಿ ಸಹ ಸದಸ್ಯತ್ವವನ್ನು ಹೊಂದಿದ್ದು, ನಿವೇಶನಕ್ಕೆ ಅರ್ಜಿಯನ್ನು ಸಲ್ಲಿಸದೇ ಇರುವ ಸಹ ಸದಸ್ಯರ ಸದಸ್ಯತ್ವವನ್ನು, ರದ್ದು / ವಜಾಮಾಡಿ, ಸದರಿ ಸಹ ಸದಸ್ಯರ ಷೇರು ಮೊಬಲಗನ್ನು ವಾಪಸ್ಸಾತಿ ಮಾಡುವ ಬಗ್ಗೆ ಚರ್ಚೆ ಮತ್ತು ಅನುಮೋದನೆ.**

ಅಧ್ಯಕ್ಷರು ಮಾತನಾಡುತ್ತಾ, ಸಂಘದಲ್ಲಿ ಕೆಲ ಸಹ ಸದಸ್ಯರು ಇದ್ದು, ಇವರುಗಳು ನಿವೇಶನಕ್ಕೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಅಂತಹ ಸಹ ಸದಸ್ಯರು ಸಂಘಕ್ಕೆ ಬಂದು ಡಿವಿಡೆಂಡ್‌ನ್ನು ಕೇಳುತ್ತಿದ್ದಾರೆ, ಪ್ರಸ್ತುತ ಸಂಘವು ಲಾಭ ಗಳಿಸದೇ ಇರುವುದರಿಂದ ಡಿವಿಡೆಂಡನ್ನು ಕೊಡಲು ಬರುವುದಿಲ್ಲ, ಆದ್ದರಿಂದ ಡಿವಿಡೆಂಡ್‌ನ್ನು ಕೇಳುವ ಸಹ ಸದಸ್ಯರುಗಳು ಸಂಘಕ್ಕೆ ಬಂದು ಷೇರು ಮೊಬಲಗನ್ನು ವಾಪಸ್ಸು ಪಡೆಯಬಹುದೆಂದು ಹಾಗೂ ಸಂಘದಿಂದ ಷೇರು ವಾಪಸ್ಸು ಮಾಡಲಾಗುವುದೆಂದು ಈ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸದಸ್ಯತ್ವ ಸಂಖ್ಯೆ 1007 ಶ್ರೀ ವೆಂಕಟೇಶುಲು. ಡಿ ರವರು ಮಾತನಾಡುತ್ತಾ, ಸಂಘದ ಸಹ ಸದಸ್ಯತ್ವದ ಬಗ್ಗೆ ಮಾತನಾಡುತ್ತಾ, ಸಹ ಸದಸ್ಯರ ಸದಸ್ಯತ್ವವನ್ನು ಡಿವಿಡೆಂಡ್ ಕೇಳುತ್ತಿರುವುದರಿಂದ ವಜಾ ಮಾಡಲಾಗುತ್ತಿದೆಯೇ ಅಥವಾ ಜೆನರಲ್ ಆಗಿ ವಜಾ ಮಾಡಲಾಗುತ್ತಿದೆಯೇ ಎಂದು ಸಭೆಯಲ್ಲಿ ಕೇಳಿದರು.

ಅಧ್ಯಕ್ಷರು ಮಾತನಾಡುತ್ತಾ, ಕೆಲ ಸಹ ಸದಸ್ಯರು ಸಂಘದಲ್ಲಿ ನಮ್ಮ ಸದಸ್ಯತ್ವ ಇದೆ ಡಿವಿಡೆಂಡ್‌ನ್ನು ಕೊಡಿ ಎಂದು ಕೇಳುತ್ತಿದ್ದಾರೆ, ಸಂಘವು ಲಾಭವನ್ನು ಹೊಂದಿದ್ದರೇ ಮಾತ್ರ ಡಿವಿಡೆಂಡನ್ನು ಕೊಡಲು ಸಾಧ್ಯ, ಸಂಘವು ಲಾಭವನ್ನು ಹೊಂದಿಲ್ಲದೇ ಇದ್ದರೇ ಡಿವಿಡೆಂಡನ್ನು ಕೊಡಲು ಸಾಧ್ಯವಿಲ್ಲ ಎಂದು ತಿಳಿಸಿ, ನಿವೇಶನಕ್ಕೆ ಮೊಬಲಗನ್ನು ಸಂಘಕ್ಕೆ ಪಾವತಿಸದೇ ಇರುವಂತಹ ಸಹ ಸದಸ್ಯರು ತಮ್ಮ ಸಹ ಸದಸ್ಯತ್ವವನ್ನು ರದ್ದು / ವಜಾ ಮಾಡಿಕೊಳ್ಳಬಹುದು ಅಂತಹ ಸಹ ಸದಸ್ಯರಿಗೆ ಸಂಘವು ಷೇರು ಮೊಬಲಗನ್ನು ವಾಪಸ್ಸು ಮಾಡಲಾಗುವುದೆಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. ಮತ್ತು ಸಂಘಕ್ಕೆ ಸಹ ಸದಸ್ಯತ್ವಕ್ಕೆ ಮಾತ್ರ ಮೊಬಲಗನ್ನು ಪಾವತಿಸಿರುವವರನ್ನು, ನಿವೇಶನ ಪಡೆಯಲು ಡಿಪಾಜಿಟ್ ಪಾವತಿಸಿಲ್ಲದೇ ಇರುವ ಸಹ ಸದಸ್ಯರನ್ನು ಇವರುಗಳ ಮೊಬಲಗನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸದಸ್ಯತ್ವ ಸಂಖ್ಯೆ 1007 ಶ್ರೀ ವೆಂಕಟೇಶುಲು. ಡಿ ರವರು ಮಾತನಾಡುತ್ತಾ, ಈ ವಿಷಯದ ಬಗ್ಗೆ ನನ್ನ ಸಲಹೆಯನ್ನು ಇ–ಮೈಲ್ ಮಾಡಿರುತ್ತೇನೆ. ಅದರಂತೆ ನೀವು ಯಾವ ತರಹ ತೀರ್ಮಾನವನ್ನು ತೆಗೆದುಕೊಳ್ಳಬಹುದೆಂದು ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಇ–ಮೈಲ್ ಮುಖಾಂತರ ಬಂದಿರುವ ನಿಮ್ಮ ಸಲಹೆಯನ್ನು ಸ್ವೀಕರಿಸುವುದಾಗಿ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

**12. ಸದಸ್ಯರುಗಳಿಂದ ಬಂದ ಸೂಚನೆಗಳ, ಸಲಹೆಗಳ ಪರಿಶೀಲನೆ ಹಾಗೂ ಚರ್ಚೆ (ಸಭೆಗೆ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಸಂಘಕ್ಕೆ ತಲುಪಿದ ಸೂಚನೆ ಪತ್ರಗಳ, ಸಲಹೆಗಳ ಬಗ್ಗೆ ಚರ್ಚೆ).**

ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ, ಸದಸ್ಯರುಗಳಿಂದ ಯಾವುದೇ ರೀತಿಯ ಸೂಚನೆಪತ್ರಗಳು, ಸಲಹೆಗಳು ಬಂದಿರುವುದಿಲ್ಲ, ಎಂದು ಸಭೆಗೆ ತಿಳಿಸಿ, ಸದಸ್ಯರುಗಳೇನಾದರೂ ಪ್ರಶ್ನೆಗಳನ್ನು ಕೇಳುವುದಿದ್ದರೇ ಕೇಳಬಹುದು ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಸಭೆಯಲ್ಲಿದ್ದ ಸದಸ್ಯರುಗಳು ಯಾವುದೇ ರೀತಿಯ ಪ್ರಶ್ನೆಗಳನ್ನು ಕೇಳಿರುವುದಿಲ್ಲ.

**13. ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳು.**

ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ, ಸದಸ್ಯರೆಲ್ಲರೂ ಏನಾದರೂ ಸಲಹೆ ಸೂಚನೆಗಳು ನೀಡುವುದಿದ್ದರೇ ತಿಳಿಸಿ ಎಂದು ಸಭೆಯಲ್ಲಿ ತಿಳಿಸಿದರು. ನಂತರ ಅಧ್ಯಕ್ಷರು ಮಾತನಾಡುತ್ತಾ, ಸದಸ್ಯರುಗಳು ತಮ್ಮ ವಿಳಾಸದ ಬದಲಾವಣೆ ಏನಾದರೂ ಮಾಡಿದಲ್ಲಿ ದಯವಿಟ್ಟು ಸಂಘಕ್ಕೆ ತಮ್ಮ ಹೊಸ ವಿಳಾಸವನ್ನು ದಾಖಲಾತಿಯೊಂದಿಗೆ ನೀಡಬೇಕಾಗಿ ಮತ್ತು ನಿಮ್ಮ ಇ–ಮೈಲ್ ಐಡಿ ಇದ್ದರೇ ಅದನ್ನು ಸಹಾ ಸಂಘಕ್ಕೆ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು. ಏಕೆಂದರೇ, ಸರ್ವ ಸದಸ್ಯರ ಸಭೆಯ ಸೂಚನೆ ಮತ್ತು ಆಹ್ವಾನ ಪತ್ರಿಕೆ ಕೆಲ ಸದಸ್ಯರು ಸೇರಿಲ್ಲ ಎಂದು ತಿಳಿಸಿರುತ್ತಾರೆ, ಆದುದರಿಂದ ವಿಳಾಸ ಬದಲಾವಣೆ ಇದ್ದಲ್ಲಿ ಕೂಡಲೇ ಸಂಘಕ್ಕೆ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು. ಸಂಘದ 55ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆಯನ್ನು ದಿನಾಂಕ 10–12–2020 ರಂದು, ಸದಸ್ಯರಿಗೆ 2019–20ನೇ ಸಾಲಿನ ವಾರ್ಷಿಕ ಮಹಾ ಸಭೆ ಬಗ್ಗೆ ತಿಳಿಸಲು 2 ದಿನ ಪತ್ರಿಕೆಗಳಾದ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲೂ ಸಹಾ ಜಾಹಿರಾತು ನೀಡಲಾಗಿದೆ ಮತ್ತು 2019–20ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ನೋಟೀಸನ್ನು ಅಂಚೆ ಮುಖಾಂತರವು ಸಹಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಸದಸ್ಯರುಗಳೇನಾದರೂ ಪ್ರಶ್ನೆಗಳನ್ನು ಕೇಳುವುದಿದ್ದರೇ ಕೇಳಬಹುದು ಮತ್ತು ಬಡಾವಣೆಗಳ ಬಗ್ಗೆ ಸಲಹೆಗಳೇನಾದರೂ ಇದ್ದರೇ ನಿಡಬಹುದೆಂದು ಮತ್ತೊಮ್ಮೆ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. ಸದಸ್ಯರುಗಳಿಂದ ಪುನಃ ಸಲಹೆಗಳು ಬರಲಿಲ್ಲ ಹಾಗೂ ಸದಸ್ಯರುಗಳಿಂದ ಪ್ರಶ್ನೆಗಳು ಸಹಾ ಸಭೆಯಲ್ಲಿ ಬರಲಿಲ್ಲ.

**14. ವಂದನಾರ್ಪಣೆ.**

ಸಂಘದ ನಿರ್ದೇಶಕರಾದ ಶ್ರೀ ನಾಗೇಂದ್ರ ರವರು ಮಾತನಾಡುತ್ತಾ, ಈ ದಿನದ 55ನೇ ವಾರ್ಷಿಕ ಸರ್ವ ಸದಸ್ಯರ ವರ್ಚುಯಲ್ ಸಭೆಗೆ ತಾವೆಲ್ಲರು ಆಗಮಿಸಿ, ಈ ದಿನದ ವಾರ್ಷಿಕ ಸರ್ವ ಸದಸ್ಯರ ವರ್ಚುಯಲ್ ಸಭೆಯನ್ನು ಯಶಸ್ವಿಗೊಳಿಸಿಕೊಟ್ಟ ತಮಗೆಲ್ಲರಿಗೂ ಮತ್ತು ಸಂಘದ ಅಧ್ಯಕ್ಷರಾದ ಶ್ರೀಯುತ ಜಯರಾಮಯ್ಯ ರವರಿಗೂ, ಸಂಘದ ಉಪಾಧ್ಯಕ್ಷರಿಗೂ ಹಾಗೂ ಆಡಳಿತ ಮಂಡಳಿ ಸದಸ್ಯರೆಲ್ಲರಿಗೂ ಹಾಗೂ ಸಂಘದ ಸದಸ್ಯರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ, ಈ ದಿನದ ವರ್ಚುಯಲ್ ಸಭೆಗೆ ಧ್ವನಿ ವರ್ಧಕ, ದೀಪಾಲಂಕಾರ ಒದಗಿಸಿಕೊಟ್ಟ ಐಕಾನ್ ಕಮ್ಯೂನಿಕೇಶನ್‌ನ ಮಾಲೀಕರಾದ ರವಿ, ರವರಿಗೂ ಹಾಗೂ ಪ್ಲಾನೋಟೆಕ್ ಈವೆಂಟ್ಸ್‌ನ ಮಾಲೀಕರಾದ ದರ್ಶನ್ ರವರಿಗೂ ಹಾಗೂ ನಿರಂಜನ್ ರವರ ತಂಡದವರಿಗೂ ಇಂದಿನ ಸಭೆಯು ಸುವ್ಯವಸ್ಥಿತವಾಗಿ ನಡೆಯಲು ಉಸ್ತುವಾರಿ ನೋಡಿಕೊಂಡ ಸಂಘದ ಸಿಬ್ಬಂದಿ ವರ್ಗದವರಿಗೂ ಹಾಗೂ ಕಾರ್ಯಕರ್ತರೆಲ್ಲರಿಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಂಘದ ಅಭಿವೃದ್ಧಿಗೆ ಸಹಕಾರ, ಸಹಾಯ ಮಾಡಿದ ಪ್ರತಿಯೊಬ್ಬರಿಗೂ ಮತ್ತು ಸಹಕಾರ ಇಲಾಖೆಯವರಿಗೆ ಮತ್ತು ಸಹಕಾರ ಆಡಿಟ್ ಇಲಾಖೆಯವರಿಗೂ, ಸಂಘದ ಲೆಕ್ಕಪರಿಶೋಧನೆ ಮಾಡಿಕೊಟ್ಟ ಸನ್ನದು ಲೆಕ್ಕಪರಿಶೋಧಕರಿಗೂ ಸಂಘದ ಆಡಳಿತ ಮಂಡಳಿ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ತಿಳಿಸಿದರು.

**ರಾಷ್ಟ್ರಗೀತೆ ಯೊಂದಿಗೆ ಸಭೆಯು ಮುಕ್ತಾಯವಾಯಿತು.**

**" ಜೈಹಿಂದ್ "**

| | |
|---|---|
| **ಸಹಿ/–** | **ಸಹಿ/–** |
| **(ಜಯರಾಮಯ್ಯ)** | **(ಮಹೇಶ್. ಎಂ.ಎನ್)** |

ದಿನಾಂಕ:– 20–12–2020

ಸ್ಥಳ:– ಬೆಂಗಳೂರು

**ಕರ್ನಾಟಕ ಸರ್ಕಾರ**

**ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ**

**ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು–560094 ಇದರ ಸನ್ 2020–21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.**

***(ಹಣ ದುರುಪಯೋಗ ಹಾಗೂ ಗುರುತರವಾದ ನ್ಯೂನ್ಯತೆಗಳ ಬಗ್ಗೆ –– ಕಂಡಿಕೆಗಳನ್ನು ಓದುವುದು)***

**ಭಾಗ–1**

**ಸಂಘದ ಪರಿಚಯಾತ್ಮಕ ವಿವರಗಳು**

**1) ಸಂಘದ ವಿವರಗಳು**

| |
|---|
| **1) ಸಂಘದ ಹೆಸರು :**<br><br>ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು– 560094 |
| **2) ಸಂಘದ ವಿಳಾಸ :**<br><br>ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು–560094. |
| **3) ಸಂಘದ ನೋಂದಣಿ ಸಂಖ್ಯೆ/ದಿನಾಂಕ :**<br><br>ಹಳೆ ನೋಂದಣಿ ಸಂಖ್ಯೆ. ಡಿವೈಆರ್:358:1964–65. ದಿನಾಂಕ 15–06–1964.<br>ಉಪನಿಬಂಧಕರು, ಬೆಂಗಳೂರು, ಬೆಂಗಳೂರು ಡಿವಿಜನ್.<br>ಹೊಸ ನೋಂದಣಿ ಸಂಖ್ಯೆ. ಜೆ.ಆರ್.ಬಿ. ಎ.ಎಂ.ಡಿ:14:2009–2010 ದಿನಾಂಕ 8–7–2010 ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು. |
| **4) ಸಂಘದ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) :**<br><br>ಸಂಘದ ಉಪನಿಯಮದ ಸಂಖ್ಯೆ 3 ರ ರೀತ್ಯಾ ಸಂಘದ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು. |

**2) ಸಂಘದ ಮುಖ್ಯ ಉದ್ದೇಶಗಳು/ಚಟುವಟಿಕೆಗಳು (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)**
**ಸಂಘದ ಉಪನಿಯಮದ ಸಂಖ್ಯೆ 4 ರ ರೀತ್ಯಾ ಈ ಕೆಳಕಂಡ ಉದ್ದೇಶಗಳನ್ನು ಸಂಘವು ಹೊಂದಿರುತ್ತದೆ.**

| |
|---|
| 1) ಸಂಘದ ಸದಸ್ಯರ ಆರ್ಥಿಕ ಹಿತಾಸಕ್ತಿಗೆ ಉತ್ತೇಜನ ನೀಡುವುದು ಮತ್ತು ಅವರಲ್ಲಿ ಮಿತವ್ಯಯದ ಉಳಿತಾಯ ಮತ್ತು ಸ್ವ-ಸಹಾಯದ ಮನೋಭಾವವನ್ನು ಪ್ರೋತ್ಸಾಹಿಸುವುದು. |
| 2) ಸಂಘದ ಉದ್ದೇಶಗಳನ್ನು ಈಡೇರಿಸಲು ಅಗತ್ಯವಾದ ನಿಧಿಗಳನ್ನು ಸಂಗ್ರಹಿಸುವುದು. |
| 3) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು / ಖರೀದಿಸುವುದು ಮತ್ತು ಹಾಗೆ ಸ್ವಾಧೀನ ಪಡಿಸಿಕೊಂಡ / ಖರೀದಿಸಿದ ಭೂಮಿಯನ್ನು ಬಡಾವಣೆಗಳನ್ನು ರಚಿಸುವುದು ಮತ್ತು ಅಂತಹ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರವು ವಿಧಿಸಿದ ನಿಬಂಧನೆಗಳಿಗೆ ಅನುಸಾರವಾಗಿ ಸಂಘದ ಸದಸ್ಯರಿಗೆ ಗೃಹ ನಿವೇಶನಗಳನ್ನು ಹಂಚಿಕೆ ಮಾಡುವುದು. |

| |
|---|
| 4) ಸಂಘದ ಸದಸ್ಯರ ಪ್ರಯೋಜನಕ್ಕಾಗಿ ಸಂಘವು ಸ್ವಾಧೀನಪಡಿಸಿಕೊಂಡ / ಖರೀದಿಸಿದ ಭೂಮಿಯಲ್ಲಿ ಮನೆಗಳು / ಪ್ಲಾಟುಗಳು / ಅಪಾರ್ಟ್‌ಮೆಂಟುಗಳ ನಿರ್ಮಾಣವನ್ನು ಸಕ್ಷಮ ಪ್ರಾಧಿಕಾರಿಯ ಅನುಮೋದನೆಗೆ ಒಳಪಟ್ಟು ಕೈಗೊಳ್ಳುವುದು. |
| 5) ಭೂ ಅಭಿವೃದ್ಧಿದಾರ (Developer) ರೊಂದಿಗೆ ಸಂಘ ಜಂಟಿಯಾಗಿ ನಿವೇಶನಗಳು ಹಾಗೂ ವಸತಿಸ್ತೋಮ (Apartment)ಗಳನ್ನು ನಿರ್ಮಿಸಿ ಹಂಚುವುದು. |
| 6) ಸಂಘದ ಸದಸ್ಯರಿಗೆ ಹೊಸದಾಗಿ ವಾಸದ ಮನೆಗಳನ್ನು ನಿರ್ಮಿಸಲು, ಹಾಲಿ ಇರುವ ಅವರ ಮನೆಗಳನ್ನು ವಿಸ್ತರಿಸಲು / ದುರಸ್ತಿ ಮಾಡಲು ಮತ್ತು ಕಟ್ಟಿದ ಮನೆಗಳನ್ನು ಖರೀದಿಸಲು ಸಾಲಗಳನ್ನು ನೀಡುವುದು. |
| 7) ಸಂಘದ ಸದಸ್ಯರ ಉಪಯೋಗಕ್ಕಾಗಿ ಕಟ್ಟಡವನ್ನು ನಿರ್ಮಿಸುವುದು ಅಥವಾ ಕಾಮಗಾರಿಗಳನ್ನು ಕೈಗೊಳ್ಳುವುದು. |
| 8) ಸಂಘದ ಸ್ವತ್ತಿನ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದು, ಅದನ್ನು ಸಂರಕ್ಷಿಸುವುದು ಮತ್ತು ನಿರ್ವಹಿಸುವುದು. |
| 9) ಸರ್ಕಾರ / ಅಭಿವೃದ್ಧಿ ಪ್ರಾಧಿಕಾರ / ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ / ಗೃಹಮಂಡಳಿ ಇನ್ನಿತರ ಅನುಮೋದಿತ ಪ್ರಾಧಿಕಾರಗಳಿಂದ ಸದಸ್ಯರಿಗೆ ನಿವೇಶನಗಳ ಅಥವಾ ಮನೆಗಳ ಹಂಚಿಕೆಗೆ ವ್ಯವಸ್ಥೆ ಮಾಡುವುದು. |
| 10) ಸಂಘದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಸಂಘದ ಉದ್ದೇಶಗಳ ಈಡೇರಿಕೆಗೆ ಸಂಘವು ಬಡಾವಣೆಗಳಲ್ಲಿ ಸಾರ್ವಜನಿಕ ನಿವೇಶನ; ಉದ್ಯಾನವನ, ಆಟದ ಮೈದಾನ ಇತ್ಯಾದಿಗಳನ್ನು ಅಭಿವೃದ್ಧಿ ಪಡಿಸಿ ಕಟ್ಟಡಗಳನ್ನು ನಿರ್ಮಿಸಿ, ಬ್ಯಾಂಕ್, ಅಂಚೆ ಕಛೇರಿ, ವಿದ್ಯಾ ಸಂಸ್ಥೆ, ದೇವಸ್ಥಾನ, ಸಮುದಾಯ ಭವನ ಇತ್ಯಾದಿಗಳಿಗೆ ಅವಕಾಶ ಮಾಡುವುದು ಮತ್ತು ಅವಶ್ಯವಾದ ಅಥವಾ ಯುಕ್ತವಾದಂತಹ ಚಟುವಟಿಕೆಗಳನ್ನು ಕೈಗೊಳ್ಳುವುದು. |
| 11) ಸಂಘದ ಸದಸ್ಯರ ಪ್ರಯೋಜನಕ್ಕಾಗಿ ಸಂಘವು ಭೂ ಅಭಿವೃದ್ಧಿದಾರರೊಂದಿಗೆ ಕರಾರು ಮಾಡಿಕೊಂಡು, ನೇರವಾಗಿ ಭೂ ಅಭಿವೃದ್ಧಿದಾರರಿಂದಲೇ ರಚಿಸಲ್ಪಟ್ಟ ಶುದ್ಧ ನಿವೇಶನಗಳನ್ನು ಪಡೆದು ಸದಸ್ಯರಿಗೆ ಹಂಚುವುದು. |
| 12) ಸಂಘವು ನೇರವಾಗಿ ಭೂಮಾಲೀಕರಿಂದ ಜಮೀನು ಖರೀದಿಸಿ ಬಡಾವಣೆ ನಿರ್ಮಿಸುವುದು. |
| 13) ಸಂಘದ ಹೆಚ್ಚುವರಿ ಸಂಪನ್ಮೂಲಗಳನ್ನು ಕಾಯಿದೆ ಕಲಂ 58 ರಲ್ಲಿ ವಿವರಿಸಲಾಗಿರುವಂತೆ ತೊಡಗಿಸುವುದು. |
| 14) ಸಂಘದ ಉಪಯೋಗಕ್ಕಾಗಿ ನಿವೇಶನ ಪಡೆದು ಸಂಘದ ಕಛೇರಿಗೆ ಕಟ್ಟಡ / ಭವನಕಟ್ಟುವುದು / ಸಂಘದ ಸದಸ್ಯರ ಅನುಕೂಲಕ್ಕಾಗಿ ಬಡಾವಣೆಗಳಲ್ಲಿ ಸಾಮೂಹಿಕ ಭವನಕಟ್ಟುವುದು. |

**3) ಸಂಘದ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31-03-2021 ರಲ್ಲಿದ್ದಂತೆ)**

| | |
|---|---|
| 1) ಅಧ್ಯಕ್ಷರು | ಶ್ರೀ. ಜಯರಾಮಯ್ಯ.<br>ದಿನಾಂಕ 9-1-2020 ರಿಂದ ಮುಂದಿನ 5 ವರ್ಷಗಳಿಗೆ |
| 2) ಉಪಾಧ್ಯಕ್ಷರು | ಶ್ರೀ. ಗಂಗಾಧರಯ್ಯ. ಕೆ.ಹೆಚ್<br>ದಿನಾಂಕ 9-1-2020 ರಿಂದ ಮುಂದಿನ 5 ವರ್ಷಗಳಿಗೆ. |
| 3) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು | ಶ್ರೀ. ಮಹೇಶ್. ಎಂ.ಎನ್ |

**4) ಶಾಖೆಗಳು ಮತ್ತು ಅವುಗಳ ವಿಳಾಸ**

| ಶಾಖೆಯ ಹೆಸರು | ಶಾಖೆಯ ವಿಳಾಸ | ಶಾಖಾ ವ್ಯವಸ್ಥಾಪಕರು |
|---|---|---|
| ಸಂಘವು ಯಾವುದೇ ಶಾಖೆಯನ್ನು ಹೊಂದಿರುವುದಿಲ್ಲ. | | |

## ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು

**5) ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ**

| ಹೆಸರು | ಹುದ್ದೆ | ಕಛೇರಿ |
|---|---|---|
| 1) ಶ್ರೀ. ಜಯರಾಮಯ್ಯ | ಅಧ್ಯಕ್ಷರು | ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು–94. |
| 2) ಶ್ರೀ. ಮಹೇಶ್. ಎಂ.ಎನ್ | ಕಾರ್ಯದರ್ಶಿ / ಮುಖ್ಯಕಾರ್ಯನಿರ್ವಹಣಾಧಿಕಾರಿ | |

**6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಶ್ರೀ. ಮಲ್ಲಪ್ಪ. ಕೆ |
| ಹುದ್ದೆ ಹಾಗೂ ವಿಳಾಸ | ಸನ್ನದು ಲೆಕ್ಕಪರಿಶೋಧಕರು.<br>ನಂ. 136/1, ಮೊದಲನೆ ಹಂತಸ್ತು, ಕೋಕನೆಟ್ ಅವಿನ್ಯೂ ರಸ್ತೆ, 8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003 |
| ಎಂಪಾನಲ್‌ಮೆಂಟ್ ನಂಬರ್ | 03/03/2013 ಕ್ರಮ ಸಂಖ್ಯೆ– 305 |
| ಲೆಕ್ಕಪರಿಶೋಧನಾ ಅವಧಿ | 2019–20ನೇ ಸಾಲು |

**7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಶ್ರೀ. ಸಿಎ. ವರದರಾಜು<br>ವರದರಾಜು & ಅಸೋಸಿಯೇಟ್ಸ್ |
| ಹುದ್ದೆ ಹಾಗೂ ವಿಳಾಸ | ಸನ್ನದು ಲೆಕ್ಕಪರಿಶೋಧಕರು.<br>ನಂ. 92/1, ಮೊದಲನೆ ಹಂತಸ್ತು, ಕೋಕನೆಟ್ ಅವಿನ್ಯೂ ರಸ್ತೆ, 11ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003 |
| ಎಂಪಾನಲ್‌ಮೆಂಟ್ ನಂಬರ್ | ಸಿ–04/03/2013 |
| ನೇಮಕಾತಿ ಉಲ್ಲೇಖ/ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ | 1) ಸಂಘದ ಪತ್ರದ ಸಂಖ್ಯೆ :KPTEHCSL/28/2020-21 ದಿನಾಂಕ: 24–12–2020.<br>2) ಸಂಘದ ಪತ್ರದ ಸಂಖ್ಯೆ : KPTEHCSL/07/2021-22 ದಿನಾಂಕ: 22–04–2021. |
| ಲೆಕ್ಕಪರಿಶೋಧನೆಯ ಆರಂಭದ ದಿನಾಂಕ | 25–06–2021 |
| ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ | 29–07–2021 |
| ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು | 20 ದಿನಗಳು |

**1) ಲೆಕ್ಕಪರಿಶೋಧನಾ ವರ್ಗೀಕರಣ :**

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | " ಸಿ " (ಲೆಕ್ಕಪರಿಶೋಧನಾ ವರ್ಗೀಕರಣ ತಃಖ್ತೆ ಲಗತ್ತಿಸಿದೆ) |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | " ಸಿ " |

**2) ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಷೆ :**

| | |
|---|---|
| 1) ಸಂಘದ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ? | ಇಲ್ಲಾ. ಸೂಕ್ತ ಕ್ರಮ ಅಗತ್ಯ. |
| 2) ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ? | ಇಲ್ಲಾ |
| 3) ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು | ಅನ್ವಯಿಸುವುದಿಲ್ಲ |
| 4) ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ | ಅನ್ವಯಿಸುವುದಿಲ್ಲ |
| 5) ಅಂತಹ ನ್ಯೂನತೆಗಳು ಮುಂದುವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು? | ಅನ್ವಯಿಸುವುದಿಲ್ಲ |

**ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ**

**3) ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | | |
|---|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಇಲ್ಲ | |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಳಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಹೌದು | |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು | |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು | |
| ಇ | ಆಡಳಿತ ಮಂಡಳಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು | |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಇಲ್ಲ | |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಇಲ್ಲ | |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | ಇಲ್ಲ | |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಇಲ್ಲ | |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | | ಇಲ್ಲ |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು | |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಇಲ್ಲ | |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಇಲ್ಲ | |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು | |
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಇಲ್ಲ | |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | | ಇಲ್ಲ |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | | ಇಲ್ಲ |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | | ಇಲ್ಲ |

| | | | |
|---|---|---|---|
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಅನ್ವಯಿಸುವುದಿಲ್ಲ | |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | | ಇಲ್ಲ |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | | ಹೌದು |
| ವ್ಹಿ | ಠೇವಣಿದಾರರ ಷೆಡ್ಯೂಲು; | ಹೌದು | |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | | ಇಲ್ಲ |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು; | | ಇಲ್ಲ |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | | ಇಲ್ಲ |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಸದಸ್ಯರಿಗೆ ಸಾಲ ನೀಡಿರುವುದಿಲ್ಲದ ಕಾರಣ ಅನ್ವಯಿಸುವುದಿಲ್ಲ | |

**11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ**

**ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ**

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ?
   ದಿನಾಂಕ 18–01–2021 ರಂದು ಸಲ್ಲಿಸಲಾಗಿದೆ.

2) ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ:– ಪತ್ರದ ಸಂಖ್ಯೆ KPTEHCSL/32/2020-21 ದಿನಾಂಕ: 16–01–2021.

3) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು:– ಗಂಭೀರ ಸ್ವರೂಪದ ಆಕ್ಷೇಪಣೆಗಳು ಇರುವುದಿಲ್ಲ.

| **ಕ್ರ.ಸ.** | **ಪುಟ ಸಂಖ್ಯೆ** | **ಕಂಡಿಕೆ ಸಂಖ್ಯೆ 2018–19ನೇ ಸಾಲು** | **ನ್ಯೂನತೆಯ ವಿವರ** | **ನೀಡಿದ ಸಮಜಾಯಿಷಿ** | **ಪ್ರಸ್ತುತ ಸ್ಥಿತಿ** |
|---|---|---|---|---|---|
| 1 | 5 | 11 (3) ಮತ್ತು (1) | ಷೇರು ಲೆಡ್ಜರ್‌ನಲ್ಲಿರುವ ಎಲ್ಲಾ ಕಾಲಂಗಳನ್ನು ಬಹುತೇಕ ಲೆಡ್ಜರ್‌ನಲ್ಲಿ ಭರ್ತಿ ಮಾಡಿಲ್ಲ, ಮಾಡಲು ಕ್ರಮವಿಡುವುದು. ಷೇರು ಸರ್ಟಿಫಿಕೇಟನ್ನು ಮತ್ತು ಗುರುತಿನ ಚೀಟಿಯನ್ನು ನೀಡದೇ ಇರುವವರಿಗೆ ನೀಡಲು ಕ್ರಮವಿಡುವುದು. | ಕೆಲವು ಸದಸ್ಯರ / ಸಹ ಸದಸ್ಯರ ಷೇರು ಲೆಡ್ಜರ್‌ನಲ್ಲಿ ಖಾಲಿ ಬಿಟ್ಟಿರುವ (ಬಹಳ ಹಿಂದಿನ ಸಾಲಿಗೆ, ವರ್ಷಕ್ಕೆ ಸಂಬಂದಪಟ್ಟಿದ್ದು) ನಾಮಿನಿದಾರರ ಹೆಸರು ಇನ್ನಿತರ ಖಾಲಿ ಬಿಟ್ಟಿರುವ ಎಲ್ಲಾ ಕಾಲಂಗಳನ್ನು ಭರ್ತಿಮಾಡಲು ಹಾಗೂ ವಿವರಗಳನ್ನು ಬರೆಯಲು ಕ್ರಮವಿಡಲಾಗುತ್ತಿದೆ. ಹಾಗೂ ಸಂಘದಿಂದ ಸದಸ್ಯರಿಗೆ / ಸಹ ಸದಸ್ಯರಿಗೆ ಷೇರು ಸರ್ಟಿಫಿಕೇಟನ್ನು ನೀಡಲಾಗಿದೆ. ಗುರುತಿನ ಚೀಟಿ ಮತ್ತು ಷೇರು ಸರ್ಟಿಫಿಕೇಟನ್ನು ತೆಗೆದುಕೊಳ್ಳದೇ ಇರುವ ಕೆಲವು ಸದಸ್ಯರು / ಸಹ | ಮುಂದುವರೆದಿದೆ |

| | | | | | |
|---|---|---|---|---|---|
| | | | | ಸದಸ್ಯರುಗಳಿಗೆ ವಾರ್ಷಿಕ ಮಹಾ ಸಭೆಯ ನೋಟಿಸ್ ನಲ್ಲಿ ಹಾಗೂ ಫೋನ್ ಮೂಲಕ ತೆಗೆದುಕೊಳ್ಳಲು ತಿಳಿಸಲಾಗಿದೆ. | |
| 2 | 6 | 11 (3) ಮತ್ತು (2) | ಇತರೆ ನಿಧಿ ರೂ. 13419553–28 (ದಿ: 31–03–2021ಕ್ಕೆ ಇದ್ದ ಮೊಬಲಗು) ಮೊಬಲಗನ್ನು ಸಹಕಾರ ಸಂಘಗಳ ನಿಯಮ 58 ರಂತೆ ಮತ್ತು ಉಪನಿಯಮದಂತೆ ಪ್ರತ್ಯೇಕವಾಗಿ ಆಯಾಯ ಖಾತೆಯಡಿಯಲ್ಲಿ ಇಡಲು ಕ್ರಮವಿಡುವುದು. | ದಿನಾಂಕ 31–03–2021ಕ್ಕೆ ಇರುವ ರೂ. 13419553–28 ಗಳನ್ನು ಪ್ರತ್ಯೇಕವಾಗಿ ಬ್ಯಾಂಕಿನಲ್ಲಿ ಠೇವಣಿಸಲು ಬಾಕಿ ಇದ್ದು, ಇದರ ಬಗ್ಗೆ ಕ್ರಮವಿಡಲಾಗುವುದು. | ಮುಂದುವರೆದಿದೆ |
| 3 | 6 ಮತ್ತು 20 | 11 (3) (4) ಮತ್ತು 21 | ನಗದು ಶಿಲ್ಕಿಗೆ ವಿಮೆ ಮಾಡಿಸಿಲ್ಲ. | ಕ್ರಮವಿಡಲಾಗುವುದು. | ಮುಂದುವರೆದಿದೆ |
| 4 | 6 ಮತ್ತು 26 &27 | 11 (3) (5) ಮತ್ತು 26ಎ (4) 26ಬಿ (4) | ಸಂಘದ ಚರ ಮತ್ತು ಚಿರಾಸ್ಥಿಗಳ ಬಗ್ಗೆ ವಿಮೆ ಮಾಡಿಸಲು ಮತ್ತು ಭೌತಿಕ ಅಸ್ತಿತ್ವವನ್ನು ದೃಢೀಕರಿಸಲು ಕ್ರಮ ಅಗತ್ಯ. | ಕ್ರಮವಿಡಲಾಗುವುದು. | ಮುಂದುವರೆದಿದೆ |
| 5 | 7 ಮತ್ತು 46 ರಿಂದ 86 | 11 (3) (6) | ಬಡಾವಣೆ ವೆಚ್ಚಗಳ ಲೆಕ್ಕಗಳ ಖಾತೆ ಅಡಿ ಗುರುತಿಸಿದ ನ್ಯೂನತೆಗಳ ಬಗ್ಗೆ ಸರಿಪಡಿಸಿಕೊಂಡಿಲ್ಲ. ಇದರ ಬಗ್ಗೆ ಕ್ರಮ ಅಗತ್ಯ. | ಬಡಾವಣೆಯ ಖಾತೆಗಳಡಿ ಮತ್ತು ಬಡಾವಣೆಯ ವೆಚ್ಚಗಳ ಖಾತೆಗಳಡಿಯಲ್ಲಿ ತಿಳಿಸಿರುವ ನ್ಯೂನತೆಗಳ ಬಗ್ಗೆ ಕ್ರಮವಿಡಲಾಗುತ್ತಿದೆ. | ಮುಂದುವರೆದಿದೆ |
| 6 | 7 ಮತ್ತು 33 | 11 (3) (7) ಹಾಗೂ 32 (2) & 32 (5) | "ಸಿಬ್ಬಂದಿ" ಎಂಬ ಶಿರೋನಾಮೆಯಡಿಯಲ್ಲಿ ತಿಳಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡಿಲ್ಲ. | ಕ್ರಮವಿಡಲಾಗುವುದು. | ಮುಂದುವರೆದಿದೆ |
| 7 | 7 | 11 (3) | ಸಂಘದಿಂದ ನೀಡುತ್ತಿರುವ ಬ್ಯಾಂಕಿನ ಚೆಕ್ಕುಗಳಲ್ಲಿ ಸಂಘದ ಕಾರ್ಯದರ್ಶಿಯವರು ಸಹಿ ಹಾಕುತ್ತಿಲ್ಲ. | ಸಂಘದ ಆರ್ಥಿಕ ಭದ್ರತೆಯ ದೃಷ್ಠಿಯಿಂದ ಚೆಕ್ಕುಗಳಿಗೆ ಸಹಿ ಮಾಡುವ ಅಧಿಕಾರವನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಲ್ಲದೇ ಇರುವ ಸಂಧರ್ಭದಲ್ಲಿ ಒಬ್ಬರು ನಿರ್ದೇಶಕರು ಸಹಿ ಮಾಡಬಹುದೆಂದು ಆಡಳಿತ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿದೆ. | ಮುಂದುವರೆದಿದೆ |

ಮೇಲಿನ ನ್ಯೂನತೆಗಳನ್ನು ಸರಿಪಡಿಸಲು ಕಾರ್ಯದರ್ಶಿಯವರು ಮತ್ತು ಆಡಳಿತ ಮಂಡಳಿ ಸದಸ್ಯರು ಕ್ರಮವಿಡುವುದು.

**12) ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು**

**(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)**

| | | |
|---|---|---|
| 1 | ಸಹಕಾರಿ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ | ಸಹಕಾರಿ ಕಾಯ್ದೆ ನಿಯಮಗಳನ್ನುಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟುಸಂಘವುಪಾಲನೆ ಮಾಡುತ್ತಿದೆ. |
| 2 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ? | ಲೆಕ್ಕರಪರಿಶೋಧನಾ ವರದಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟು ಅನುಸರಿಲಾಗುತ್ತಿದೆ. |
| 3 | ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ | ಇಲ್ಲ |
| 4 | ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ | ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆಬಗ್ಗೆ ಲೆಕ್ಕಪರಿಶೋಧನಾ ವರದಿಯ ಆಯಾಯ ಕಂಡಿಕೆಯಡಿಯಲ್ಲಿ ವಿವರಿಸಿದೆ |
| 5 | **ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ:–**<br><br>ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 65ರಡಿಯಲ್ಲಿ ಶ್ರೀ ಪುಂಡಲೀಕ ಎಲ್ ಸಾಧುರೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಲೇವಾದೇವಿ ತನಿಖಾದಳ) ಕೇಂದ್ರ ಕಛೇರಿ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು–52 ರವರು ಸಂಘದ ಪರಿವೀಕ್ಷಣೆ ನಡೆಸಲು ದಿನಾಂಕ 28–9–2020 ರಂದು ಸಂಘಕ್ಕೆ ಬೇಟಿ ನೀಡುವುದಾಗಿ ತಿಳಿಸಿ, ದಿನಾಂಕ 19–9–2020 ರಂದು ಸಂಘಕ್ಕೆ ಪತ್ರ ಬರೆದಿರುತ್ತಾರೆ, ಪರಿವೀಕ್ಷಣೆ ಮಾಡಲು ಸಂಘಕ್ಕೆ ಬೇಟಿ ನೀಡಿರುತ್ತಾರೆ. ದಿನಾಂಕ 31–3–2021 ರೊಳಗಾಗಿ ಪರಿವೀಕ್ಷಣಾ ವರದಿಯು ಸಂಘಕ್ಕೆ ಬಂದಿರುವುದಿಲ್ಲ ಎಂದು ಸಂಘದ ಕಾರ್ಯದರ್ಶಿಯವರು ಮತ್ತು ಅಧ್ಯಕ್ಷರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. | |

## ಭಾಗ – 2

### ಸಂಘದ ವ್ಯಾವಹಾರಿಕ ವಿವರಗಳು

**13) ದಿನಾಂಕ 31–03–2021 ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.**

| **ಸದಸ್ಯತ್ವ** | **ಸಾಮಾನ್ಯ ಸದಸ್ಯತ್ವ** | | **ನಾಮಮಾತ್ರ ಸದಸ್ಯತ್ವ** | | **ಸಹ ಸದಸ್ಯತ್ವ** | |
|---|---|---|---|---|---|---|
| | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 837 | 837 | 6 | 6 | 4742 | 4729 |
| ಹೊಸದಾಗಿ ಸದಸ್ಯತ್ವ ಪಡೆದವರು | 7 | 1 | – | – | 28+5 | 19 |
| ಸದಸ್ಯತ್ವದಿಂದ ಕಡಿಮೆ ಆದವರು | 5 | 1 | – | – | 13 | 06 |
| ಸಾಲಾಖೈರಿಗೆ ಇರುವ ಸದಸ್ಯರು | **839** | **837** | **6** | **6** | **4762** | **4742** |
| ಸದಸ್ಯತ್ವದ ಬಗ್ಗೆ ವಿಮರ್ಷೆ | ವರದಿ ಸಾಲಿನಲ್ಲಿ ಸಹ ಸದಸ್ಯರ ಸದಸ್ಯತ್ವ ಮತ್ತು ಷೇರು ಧನ ಹೆಚ್ಚಳವಾಗಿದೆ. | | | | | |

| | |
|---|---|
| ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟನ್ನು ಮೀರತಕ್ಕಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವದ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕನಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ಧ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಂಘದಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು. | ಸಹ ಸದಸ್ಯರನ್ನು ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ಕಲಂ 18 (1) (ಡಿ) ರನ್ವಯ ಸಂಘದಲ್ಲಿರುವ ಸಹ ಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟನ್ನು ಮೀರತಕ್ಕಲ್ಲ ಎಂಬುದು ಸಂಘಕ್ಕೆ ಅನ್ವಯಿಸುವುದಿಲ್ಲ; ಕಾರಣ ಸಂಘವು ನೌಕರರ ಗೃಹ ನಿರ್ಮಾಣ ಸಹಕಾರ ಸಂಘವಾಗಿದೆ.<br>[ನೌಕರರ ಸಹಕಾರಿ ಸಂಘಗಳಿಗೆ ಅನ್ವಯವಾಗುವುದಿಲ್ಲ.] |
| ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ | ಕೆಲವು ಸದಸ್ಯರಿಂದ ಪಡೆದಿದ್ದು, ಕೆಲವರಿಂದ ಪಡೆದಿಲ್ಲ.<br>ಎಲ್ಲಾ ಸದಸ್ಯರಿಂದ / ಸಹ ಸದಸ್ಯರಿಂದ ಕೆ.ವೈ.ಸಿ ದಾಖಲಾತಿಗಳನ್ನು ಪಡೆಯಲು ಕ್ರಮ ಅಗತ್ಯ. |

**ಸಂಘದ ಸದಸ್ಯರೊಡನೆ ಕೈಕೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ:**

| | | |
|---|---|---|
| 1 | ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಯಾವುದೇ ನ್ಯೂನತೆಗಳಿರುವುದಿಲ್ಲ. |
| 2 | ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಸದಸ್ಯರೇತರರೊಂದಿಗೆ ವರದಿ ಸಾಲಿನಲ್ಲಿ ಬೇರಾವುದೇ ವ್ಯವಹಾರ ನಡೆಸಿರುವುದಿಲ್ಲ. |
| 3 | ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು | ವ್ಯಾಪ್ತಿ ಮೀರಿದ ಯಾವುದೇ ವ್ಯವಹಾರಗಳನ್ನು ನಡೆಸಿರುವುದಿಲ್ಲ. |
| 4 | **ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ:**<br><br>ಸಾಲು ಪ್ರಾರಂಭಕ್ಕೆ 837 ಸಾಮಾನ್ಯ ಸದಸ್ಯರಿಂದ ರೂ. 852000–00 ಗಳಿದ್ದು ವರದಿ ಸಾಲಿನಲ್ಲಿ 7 ಸದಸ್ಯರಿಂದ ರೂ. 7000–00 ಜಮಾ ಬಂದಿದ್ದು ಹಾಗೂ 5 ಸದಸ್ಯರಿಗೆ 5000–00 ರೂಗಳನ್ನು ಮರು ಪಾವತಿಸಿ ದಿನಾಂಕ 31–3–2021ಕ್ಕೆ 839 ಸದಸ್ಯರಿಂದ ರೂ. 854000–00 ಪಾವತಿಯಾದ ಷೇರು ಧನವಿರುತ್ತದೆ. ಸಂಘದಲ್ಲಿ ಸದಸ್ಯರ ಷೇರು ಕುಳುವಾರು ತಃಖ್ತೆಯನ್ನು ತಯಾರಿಸಿದ್ದು, ಪರಿಶೀಲನೆಗೆ ಹಾಜರು ಪಡಿಸಿದ್ದು, ಆಸ್ತಿ–ಜವಾಬ್ದಾರಿ ತಃಖ್ತೆಯ ಮೊಬಲಗಿಗೆ ತಾಳೆ ಇರುತ್ತದೆ. ಸದಸ್ಯರ ಷೇರು ಕುಳುವಾರು ಸಂಕ್ಷಿಪ್ತ ತಃಖ್ತೆಯನ್ನು ಲೆಕ್ಕಪರಿಶೋಧನಾ ವರದಿಗೆ ಲಗತ್ತಿಸಿದೆ. **ಅನುಬಂಧ–1.**<br><br>ಸಾಲು ಪ್ರಾರಂಭಕ್ಕೆ 4742 ಸಹ ಸದಸ್ಯರಿಂದ ರೂ. 8672000–00 ಗಳಿದ್ದು, ವರದಿ ಸಾಲಿನಲ್ಲಿ 28 ಸಹ ಸದಸ್ಯರಿಂದ ರೂ. 56000–00 ಮತ್ತು 5 ಜನರ ಷೇರು ಮೊಬಲಗು ರೂ. 5000–00 ಗಳನ್ನು ಹಿಂದಿನ ಸಾಲುಗಳಲ್ಲಿ ಚೆಕ್ ಮುಖಾಂತರ ವಾಪಸ್ಸು ಮಾಡಿದ್ದು, ಸದರಿ 5 ಜನರು ಬ್ಯಾಂಕಿಗೆ ಚೆಕ್ಕನ್ನು ಹಾಜರು ಪಡಿಸಿ, ಬ್ಯಾಂಕಿನಿಂದ ಷೇರು ಮೊಬಲಗನ್ನು ದಿನಾಂಕ 31–3–2021ರ ವರೆವಿಗೂ ಪಡೆದಿರುವುದಿಲ್ಲ. ಇಂತಹ ಐದು ಸಹ ಸದಸ್ಯರ ಷೇರು ಮೊಬಲಗು ರೂ. 5000–00 ಗಳು ವರದಿ ಸಾಲಿನಲ್ಲಿ ಜಮಾ ಬಂದಿದ್ದು ಸೇರಿ, ವರದಿ ಸಾಲಿನಲ್ಲಿ ಒಟ್ಟು 33 ಸಹ ಸದಸ್ಯರಿಂದ (28+5) ರೂ. 61000–00 ಜಮಾ ಬಂದಿದ್ದು ಹಾಗೂ 13 ಸಹ ಸದಸ್ಯರಿಗೆ ರೂ. 26000–00 ಮರು ಪಾವತಿಸಿದ್ದು ದಿನಾಂಕ 31–03–2021 ಕ್ಕೆ 4762 ಸಹ ಸದಸ್ಯರಿಂದ ರೂ. 8707000–00 ಷೇರು ಧನ ಇರುತ್ತದೆ. ಸಂಘದಲ್ಲಿ ಸಹ ಸದಸ್ಯರ ಷೇರು ಕುಳುವಾರು ಪಟ್ಟಿಯನ್ನು ತಯಾರಿಸಿದ್ದು, ತಾಳೆ ಇರುತ್ತದೆ. ಸಹ ಸದಸ್ಯರ ಷೇರು ಕುಳುವಾರು ಪಟ್ಟಿಯ ಸಂಕ್ಷಿಪ್ತವನ್ನು ವರದಿಗೆ ಲಗತ್ತಿಸಿದೆ. **ಅನುಬಂಧ– 2.** | |

| | |
|---|---|
| | ಕಲವು ಷೇರು ಲೆಡ್ಜರ್‌ಗಳಲ್ಲಿ ಕೆಲವು ಕಲಂಗಳನ್ನು ಭರ್ತಿ ಮಾಡಿದ್ದು, ಕೆಲವು ಕಾಲಂಗಳನ್ನು ಭರ್ತಿ ಮಾಡಿಲ್ಲ ಅಂತಹ ಷೇರು ಲೆಡ್ಜರ್‌ಗಳಲ್ಲಿರುವ ಎಲ್ಲಾ ಕಾಲಂಗಳನ್ನು ಭರ್ತಿಮಾಡುವುದು ಅತ್ಯಾಗತ್ಯ.<br><br>ದಿನಾಂಕ 31-03-2021ಕ್ಕೆ 6 ಜನ ನಾಮಮಾತ್ರ ಸದಸ್ಯರಿಂದ ರೂ. 12000-00 ನಾಮ ಮಾತ್ರ ಸದಸ್ಯತ್ವ ಶುಲ್ಕ ಇರುತ್ತದೆ. ಕುಳುವಾರು ಪಟ್ಟಿ ತಯಾರಿಸಿದ್ದು, ವರದಿಯೊಂದಿಗೆ ಲಗತ್ತಿಸಿದೆ. **ಅನುಬಂಧ- 3.** |

**14) ಷೇರು ಬಂಡವಾಳ ಬಗ್ಗೆ ವಿಮರ್ಷೆ:**

| | |
|---|---|
| **1) ಅಧಿಕೃತ ಷೇರು ಬಂಡವಾಳ :**<br><br>ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಭಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು. | 2013-14ನೇ ಸಾಲಿನ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯ ದಿನಾಂಕ 14-9-2014 ರಲ್ಲಿ ಸಂಘದ ಅಧಿಕೃತ ಷೇರು ಬಂಡವಾಳವನ್ನು 1 ಕೋಟಿ ರೂಗಳಿಗೆ ನಿಗಧಿ ಪಡಿಸಿರುತ್ತಾರೆ.<br>ಸಂಘದ ಉಪನಿಯಮದ ಕ್ರಮ ಸಂಖ್ಯೆ 25ರ ಪಕ್ರಾರ ಸದಸ್ಯರ ಪ್ರತೀ ಷೇರಿನ ಮುಖಬೆಲೆ ರೂ. 1000-00 ಗಳು.<br>ಸಂಘದ ಉಪನಿಯಮದ ಕ್ರಮ ಸಂಖ್ಯೆ 7 (2)ರ ಪ್ರಕಾರ ಸಂಘಕ್ಕೆ ಸಹ ಸದಸ್ಯರಾಗಬಯಸುವವರು ನಿಗಧಿ ಪಡಿಸಿದ ಕನಿಷ್ಟ 2 ಷೇರು ಮುಖಬೆಲೆಯನ್ನು ಹೊಂದಿರಬೇಕು. ಅಂದರೆ ಸಹ ಸದಸ್ಯರ ಪ್ರತೀ ಷೇರಿನ ಮುಖ ಬೆಲೆ ರೂ. 2000-00 ಗಳು.<br>ನಾಮಮಾತ್ರ ಸದಸ್ಯರು ಸಂಘದ ಉಪನಿಯಮ 8 (1) ಪ್ರಕಾರ ರೂ. 2000-00 ಗಳ ನಾಮಮಾತ್ರ ಶುಲ್ಕವನ್ನು ನೀಡಿ ನಾಮಮಾತ್ರ ಸದಸ್ಯರಾಗಬಹುದು. |

**ದಿನಾಂಕ 31-03-2021 ಕ್ಕೆ ಇರುವಂತೆ ಸಂಘದ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಷೇರು ಬಂಡವಾಳ | ಸರಕಾರದ ಶೇರು | | ಸಾಮಾನ್ಯ ಶೇರು | | ನಾಮಮಾತ್ರ ಸದಸ್ಯರ ಶೇರು | | ಸಹ ಸದಸ್ಯರ ಶೇರು | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | - | - | 852000 | 852000 | 12000 | 12000 | 8672000 | 8644000 |
| ಪ್ರಸಕ್ತ ಸಾಲಿನಲ್ಲಿನ ಜಮಾ | - | - | 7000 | 1000 | - | - | 61000 | 39000 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | - | - | 5000 | 1000 | - | - | 26000 | 11000 |
| ಸಾಲಾಖೈರಿಗೆ ಇದ್ದಂತೆ | - | - | 854000 | 852000 | 12000 | 12000 | 8707000 | 8672000 |

| | |
|---|---|
| **ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಷೆ :**<br><br>ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು. | ಸರ್ಕಾರದಿಂದ ಯಾವುದೇ ಷೇರು ಬಂಡವಾಳ ಪಡೆದಿರುವುದಿಲ್ಲ. |
| **ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ** | ದಿನಾಂಕ 31-03-2021ಕ್ಕೆ ಸಂದಾಯವಾದ ಷೇರು |

| | |
|---|---|
| (ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಷಿಸುವುದು.) | ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿರುತ್ತದೆ.<br>ಸಾಮಾನ್ಯ ಸದಸ್ಯರಿಂದ ಷೇರಿನ ಮುಖಬೆಲೆಯಂತೆ ಪೂರ್ಣ ಷೇರು ಮೊಬಲಗನ್ನು ತೆಗೆದುಕೊಳ್ಳಲಾಗಿದೆ. ಸಹ ಸದಸ್ಯರ ಷೇರು ಮೊಬಲಗು ರೂ. 2000–00 ಇರಬೇಕಾಗಿದ್ದು, ಕೆಲವು ಸಹ ಸದಸ್ಯರಿಂದ ರೂ. 1000–00 ಗಳನ್ನು ತೆಗೆದುಕೊಳ್ಳಲಾಗಿದೆ. ಕಡಿಮೆ ಷೇರು ತೆಗೆದುಕೊಂಡಿರುವ ಸಹ ಸದಸ್ಯರಿಂದ ಸಂಘದ ಉಪನಿಯಮ 7(2) ರ ರೀತ್ಯಾ ಷೇರು ಮೊಬಲಗನ್ನು ಪಡೆಯುವುದು ಅತ್ಯಗತ್ಯ.<br>ಕೆಲವು ಸದಸ್ಯರಿಗೆ, ಸಹ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿದ್ದು, ಇನ್ನು ಕೆಲವು ಸದಸ್ಯರಿಗೆ / ಸಹ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಲು ಬಾಕಿ ಇರುತ್ತದೆ. ಷೇರು ಪ್ರಮಾಣ ಪತ್ರ ನೀಡದೇ ಇರುವವರಿಗೆ ಷೇರು ಪ್ರಮಾಣ ಪತ್ರ ನೀಡಲು ಕ್ರಮವಿಡುವುದು.<br>ಸಂಘದಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರ್‌ನಲ್ಲಿ ಪೂರ್ಣ ವಿವರಗಳಿದ್ದು ಕೆಲವು ಪ್ರಕರಣಗಳಲ್ಲಿ ಪೂರ್ಣ ವಿವರಗಳಿರುವುದಿಲ್ಲ. ಇಂತಹ ಪ್ರಕರಣಗಳ ಬಗ್ಗೆ ಕ್ರಮವಿಡುವುದು. |
| ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ?<br>ತಾಳೆಯಾಗಿದೆಯೇ?<br>(ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು) | <br>ಹೌದು<br>ಹೌದು |

**15) ಮೀಸಲು ನಿಧಿ ಮತ್ತು ಇತರೆ ನಿಧಿಗಳು: 'ಶೆಡ್ಯೂಲ್ ಯು' ನಲ್ಲಿರುವ ಪ್ರಕಾರ**

| | | |
|---|---|---|
| 1 | ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ. | ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಲಾಗಿದೆ. ದಿನಾಂಕ 31–03–2021ಕ್ಕೆ ಜವಾಬ್ದಾರಿಯ ಕಡೆರೂ. 2699619–32 ಆಪದ್ಧನ ನಿಧಿ (ಮೀಸಲು ನಿಧಿ) ಇರುತ್ತದೆ. ಇದರ ಬಾಬ್ತು ರೂ. 2696825–00 ಗಳನ್ನು ಕ.ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಗಂಗಾನಗರ ಶಾಖೆಯಲ್ಲಿ ಮತ್ತು ರೂ. 600–00 ಗಳನ್ನು ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾ ಮಂಡಳಿ ಬೆಂಗಳೂರುನಲ್ಲಿ ಆಪದ್ಧನ ಠೇವಣಿ ಇಟ್ಟಿದ್ದು ಒಟ್ಟು ರೂ. 2697425–00 ಗಳನ್ನು ಆಪದ್ಧನ ಠೇವಣಿ ಇಡಲಾಗಿದೆ. ಇದಕ್ಕೆ ದಿನಾಂಕ 31–3–2021ಕ್ಕೆ ಬ್ಯಾಂಕಿನ ದೃಡೀಕರಣ ಪತ್ರ ಹಾಜರಿದ್ದು ತಾಳೆ ಇದೆ. ಮತ್ತು ಕ.ರಾ. ಸಹಕಾರಿ ವಸತಿ ಮಹಾ ಮಂಡಳದ ದೃಢೀಕರಣ ಪತ್ರ ಹಾಜರಿದ್ದು ತಾಳೆ ಇರುತ್ತದೆ. ಅನುಬಂಧ–10 ಎಂದು ವರದಿಗೆ ಲಗತ್ತಿಸಿದೆ. ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆಯ ಬ್ಯಾಂಕಿನ ದೃಢೀಕರಣ ಪತ್ರವನ್ನು ವರದಿಯೊಂದಿಗೆ ಲಗತ್ತಿಸಿದೆ. **ಅನುಬಂಧ– 12** |

| | | |
|---|---|---|
| | | 2020–21ನೇ ಸಾಲಿನಲ್ಲಿ ಆಪದ್ಧನ ಮೇಲೆ ರೂ. 158484–00 ಗಳ ಬಡ್ಡಿ ಕ.ರಾ.ಸ. ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆ, ಬೆಂಗಳೂರು ನಿಂದ ಸಂಘಕ್ಕೆ ಜಮಾ ಆಗಿರುತ್ತದೆ. ದಿನಾಂಕ 31–3–2021ಕ್ಕೆ ಆಪದ್ಧನ ನಿಧಿಯ ಬಾಬ್ತು ರೂ. 2194–32 ಗಳನ್ನು ಬ್ಯಾಂಕ್‌ನಲ್ಲಿ ಪ್ರತ್ಯೇಕವಾಗಿ ಗುಂತಾಯಿಸಲು ಬಾಕಿ ಇದೆ. ದಿನಾಂಕ 9–6–2021 ರಂದು ಕ.ರಾ.ಸ. ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆ, ಬೆಂಗಳೂರಿನ ಚೆಕ್ ನಂ. 002973ರ ಮೂಲಕ ರೂ. 2195–00 ಗಳನ್ನು ಆಪದ್ಧನ ಖಾತೆಗೆ ವರ್ಗಾವಣೆ ಮಾಡಿರುತ್ತದೆ. |
| 2 | ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ?<br>ಆಪದ್ಧನ ನಿಧಿಯನ್ನು ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆ. | |

**ಇತರೆ ನಿಧಿಗಳು:–**

| ಕ್ರ.ಸ | ವಿವರಗಳು | ಒಟ್ಟು ಮೊತ್ತ ದಿ.31–3–2021ಕ್ಕೆ | ವಿನಿಯೋಗವಾದ (ಹೂಡಿಕೆ) ಮೊತ್ತ | ಬಾಕಿ ಮೊತ್ತ ದಿ.31–3–2021ಕ್ಕೆ |
|---|---|---|---|---|
| 1 | ಕಟ್ಟಡ ನಿಧಿ (ಲಾಭ ವಿಲೇವಾರಿಯಿಂದ) | 3801403–53 | – | 3801403–53 |
| 2 | ಕಟ್ಟಡ ನಿಧಿ ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ಮತ್ತು ಡಿವಿಡೆಂಡ್ ಹೊಂದಾಣಿಕೆಯಿಂದ | 6675946–00 | – | 6675946–00 |
| 3 | ಪೀಠೋಪಕರಣ ಮತ್ತು ಕೌಂಟರ್ ಸವಕಳಿ | 718134–00 | – | 718134–00 |
| 4 | ಕಟ್ಟಡ ಸವಕಳಿ | 1326922–00 | – | 1326922–00 |
| 5 | ಕಂಪ್ಯೂಟರ್ ಸವಕಳಿ | 136681–00 | – | 136681–00 |
| 6 | ಯು.ಪಿ.ಎಸ್. ಮತ್ತು ಬ್ಯಾಟರಿ, ಮದರ್ ಬೋರ್ಡ್ ಸವಕಳಿ | 165169–00 | – | 165169–00 |
| 7 | ಸಿಸಿ ಕ್ಯಾಮೆರಾ ಮತ್ತು ಎಲ್.ಇ.ಡಿ ಟಿವಿ ಸವಕಳಿ | 39660–00 | – | 39660–00 |
| 8 | ಝೆರಾಕ್ಸ್ ಮಿಷನ್ ಸವಕಳಿ | 194820–00 | – | 194820–00 |
| 9 | ಪ್ರಚಾರ ನಿಧಿ | 130571–00 | – | 130571–00 |
| 10 | ಬಡಾವಣೆ ಅಭಿವೃದ್ಧಿ ನಿಧಿ | 230246–75 | – | 230246–75 |
| | **ಒಟ್ಟು** | **13419553–28** | – | **13419553–28** |

ಮೇಲ್ಕಂಡ ವಿವರದ ರೀತ್ಯಾ ದಿನಾಂಕ 31–03–2021 ಕ್ಕೆ ಇತರೆ ನಿಧಿಗಳ ಬಾಬ್ತು ರೂ. 13419553–28 ಗಳಿರುತ್ತದೆ. ಈ ಮೊಬಲಗನ್ನು ಬ್ಯಾಂಕಿನಲ್ಲಿ ಸಹಕಾರ ಸಂಘಗಳ ನಿಯಮ 58 ರಂತೆ ಪ್ರತ್ಯೇಕವಾಗಿ ಹೂಡಿಕೆ ಮಾಡಿರುವುದಿಲ್ಲ. ಇದರ ಬಗ್ಗೆ ಆಡಳಿತ ಮಂಡಳಿ ಸದಸ್ಯರು ಮತ್ತು ಕಾರ್ಯದರ್ಶಿಯವರು ಗಮನ ಹರಿಸಿ, ಹೂಡಿಕೆ ಮಾಡಲು ಕ್ರಮವಿಡುವುದು.

| | | |
|---|---|---|
| 3 | ಸಂಘವು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ | ಕಾಯ್ದಿಟ್ಟ ನಿಧಿಯನ್ನು ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣಕ್ಕಾಗಿ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಿಲ್ಲ. |

| | | |
|---|---|---|
| | ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು. | |
| 4 | ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು. | ಅನ್ವಯಿಸುವುದಿಲ್ಲ |
| 5 | ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4)(ಬಿ)ಯ ಉಲ್ಲಂಘನೆಯಾಗಿದೆಯೇ? | ಯಾವುದೇ ಶಿಕ್ಷಣ ನಿಧಿ ಪಾವತಿಸಲು ಬಾಕಿ ಇಲ್ಲದೇ ಇರುವುದರಿಂದ<br>ಸಹಕಾರ ಸಂಘಗಳ ಕಾಯ್ದೆ ಕಾಲಂ 57(4)(ಬಿ)ಯ ಉಲ್ಲಂಘನೆಯಾಗಿರುವುದಿಲ್ಲ. |

**(17) ಠೇವಣಿಗಳು ಹಾಗೂ ಮುಂಗಡಗಳು :**

| | | |
|---|---|---|
| 1 | ಸಂಘವು ಠೇವಣಿ ಹಾಗೂ ಮುಂಗಡಗಳು ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಹಾಗೂ ಮುಂಗಡಗಳು ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ | ಸಂಘದ ಉಪನಿಯಮದ ಸಂಖ್ಯೆ 26 ಮತ್ತು 28 ರ ಪ್ರಕಾರ ಸದಸ್ಯರಿಂದ ಡಿಪಾಜ಼ಿಟ್ಸ್ (ಠೇವಣಿಗಳು) / ಮುಂಗಡಗಳನ್ನು ಪಡೆಯಲು ಅವಕಾಶವಿರುತ್ತದೆ. |
| 2 | ಸಂಘವು ಸಂಗ್ರಹಣೆ ಮಾಡಿರುವ ವಿವಿದ ಠೇವಣಿಗಳ ವಿವರಗಳು (ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು/ಕಡಿಮೆ ಶೇ. ಮಾಹಿತಿಯೊಂದಿಗೆ ವಿಮರ್ಷಿಸಿ)<br><br>**ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ನಿವೇಶನ ಡಿಪಾಜಿಟ್ (ಠೇವಣಿ) ಬಡಾವಣೆವಾರು:** | |

| | ನಿವೇಶನ ಶೇವಣಿ ವಿವರಗಳು | ಆರಂಭ ಬಾಕಿ ಮೊಬಲಗು | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ |
|---|---|---|---|---|---|---|---|
| | **ಸಾಮಾನ್ಯ ಸದಸ್ಯರಿಂದ** | | | | | | |
| 1 | ಸಂದೇಶ್ ನಗರ–1ನೇ ಹಂತ | 61104897 | 700000 | 550000 | 61254897 | 61254897 | ಇಲ್ಲ |
| 2 | ಸಂದೇಶ್ ನಗರ–2ನೇ ಹಂತ | 22975000 | – | – | 22975000 | 22975000 | ಇಲ್ಲ |
| 3 | ಸಂದೇಶ್ ನಗರ–3ನೇ ಹಂತ | 34590000 | 1530000 | 1720000 | 34400000 | 34400000 | ಇಲ್ಲ |
| 4 | ಸಂದೇಶ್ ಭಾಗ್ | 6805000 | – | – | 6805000 | 6805000 | ಇಲ್ಲ |
| 5 | ಸಂದೇಶ್ ಲೇಕ್ ಸೈಡ್–1ನೇ ಹಂತ | 14241000 | 756000 | 600000 | 14397000 | 14397000 | ಇಲ್ಲ |
| 6 | ಸಂದೇಶ್ ಲೇಕ್ ಸೈಡ್–2ನೇ ಹಂತ | 11049000 | – | – | 11049000 | 11049000 | ಇಲ್ಲ |
| 7 | ಸಂದೇಶ್ ಲೇಕ್ ಸೈಡ್–3ನೇ ಹಂತ | 24531000 | 1462500 | 672000 | 25321500 | 25321500 | ಇಲ್ಲ |
| 8 | ಸಂದೇಶ್ ಲೇಕ್ ಸೈಡ್–4ನೇ ಹಂತ | 2376000 | – | – | 2376000 | 2376000 | ಇಲ್ಲ |
| | **ಒಟ್ಟು ಮೊತ್ತ** | 177671897 | 4448500 | 3542000 | 178578397 | 178578397 | ಇಲ್ಲ |
| | | | | | | | |

| | ಸಹ ಸದಸ್ಯರಿಂದ | ಆರಂಭ ಬಾಕಿ ಮೊಬಲಗು | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ |
|---|---|---|---|---|---|---|---|
| 1 | ಸಂದೇಶ್ ನಗರ–1ನೇ ಹಂತ | 56552495 | 1920600 | – | 567445575 | 567445575 | ಇಲ್ಲ |
| 2 | ಸಂದೇಶ್ ನಗರ–2ನೇ ಹಂತ | 383750000 | – | 720000 | 383030000 | 383030000 | ಇಲ್ಲ |
| 3 | ಸಂದೇಶ್ ನಗರ–3ನೇ ಹಂತ | 406894000 | 3750000 | 9099000 | 401545000 | 401545000 | ಇಲ್ಲ |
| 4 | ಸಂದೇಶ್ ಭಾಗ್ | 206070003 | – | 4055000 | 202015003 | 202015003 | ಇಲ್ಲ |
| 5 | ಸಂದೇಶ್ ಲೇಕ್ ಸೈಡ್–1ನೇ ಹಂತ | 394380486 | 1843000 | 2952000 | 393271486 | 393271486 | ಇಲ್ಲ |
| 6 | ಸಂದೇಶ್ ಲೇಕ್ ಸೈಡ್–2ನೇ ಹಂತ | 465487110.01 | 740000 | 1035000 | 465192110.01 | 465192110.01 | ಇಲ್ಲ |
| 7 | ಸಂದೇಶ್ ಲೇಕ್ ಸೈಡ್–3ನೇ ಹಂತ | 470113223 | 12262000 | 8268000 | 474107223 | 474107223 | ಇಲ್ಲ |

| | | | | | | | |
|---|---|---|---|---|---|---|---|
| 8 | ಸಂದೇಶ್ ಲೇಕ್ ಸೈಡ್–4ನೇ ಹಂತ | 84025000 | 1984000 | – | 86009000 | 86009000 | ಇಲ್ಲ |
| | **ಒಟ್ಟು ಮೊತ್ತ** | **2976244797 .01** | **22499600** | **26129000** | **2972615397.01** | **2972615397.01** | ಇಲ್ಲ |
| | | | | | | | |
| | **ಒಟ್ಟು ಮೊತ್ತ ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ನಿವೇಶನ ಡಿಪಾಜಿಟ್ (ಠೇವಣಿ)** | **3153916694.01** | **26948100** | **29671000** | **3151193794.01** | **3151193794.01** | ಇಲ್ಲ |
| | | | | | | | |

ದಿನಾಂಕ 31–03–2021 ಕ್ಕೆ 212 ಸದಸ್ಯರಿಂದ ರೂ. 17,85,78,397–00 ಗಳ ನಿವೇಶನ ಠೇವಣಿ ಇರುತ್ತದೆ. ಇದಕ್ಕೆ ಕುಳುವಾರು ಬಾಕಿ ಪಟ್ಟಿ ತಯಾರಿಸಿದ್ದು ತಾಳೆ ಇರುತ್ತದೆ. ಕುಳುವಾರು ಬಾಕಿ ಪಟ್ಟಿಯ ಅಬ್‌ಸ್ಟ್ರಾಕ್ಟ್ ವರದಿಯೊಂದಿಗೆ ಲಗತ್ತಿಸಿದೆ. **ಅನುಬಂಧ–4.**

ದಿನಾಂಕ 31–03–2021 ಕ್ಕೆ 3175 ಸಹ ಸದಸ್ಯರಿಂದ ರೂ. 297,26,15,397–01 ಗಳ ನಿವೇಶನ ಠೇವಣಿ ಇರುತ್ತದೆ. ಇದಕ್ಕೆ ಕುಳುವಾರು ಬಾಕಿ ಪಟ್ಟಿಯನ್ನು ತಯಾರಿಸಿದ್ದು ತಾಳೆ ಇರುತ್ತದೆ. ಕುಳುವಾರು ಬಾಕಿ ಪಟ್ಟಿ ಅಬ್‌ಸ್ಟ್ರಾಕ್ಟ್‌ನ್ನು ವರದಿಯೊಂದಿಗೆ ಲಗತ್ತಿಸಿದೆ. **ಅನುಬಂಧ– 5.**

**ಒಟ್ಟು ಠೇವುಗಳ ಕಳೆದ 02 ವರ್ಷಗಳ ಅಂಕಿ ಗಳೊಂದಿಗೆ ತುಲನಾತ್ಮಕ ವಿವರ:**

| **ದಿನಾಂಕ 31–3–2019ಕ್ಕೆ ನಿವೇಶನ ಠೇವಣಿ** | **ದಿನಾಂಕ 31–3–2020ಕ್ಕೆ ನಿವೇಶನ ಠೇವಣಿ** | **ದಿನಾಂಕ 31–3–2021ಕ್ಕೆ ನಿವೇಶನ ಠೇವಣಿ** |
|---|---|---|
| ಸದಸ್ಯರ ಬಾಬ್ತು ರೂ. 179513397–00 ಸಹ ಸದಸ್ಯರ ಬಾಬ್ತು ರೂ. 2931249457–01 | ಸದಸ್ಯರ ಬಾಬ್ತು ರೂ. 177671897–00 ಸಹ ಸದಸ್ಯರ ಬಾಬ್ತು ರೂ. 2976244797–01 | ಸದಸ್ಯರ ಬಾಬ್ತು ರೂ. 178578397–00 ಸಹ ಸದಸ್ಯರ ಬಾಬ್ತು ರೂ. 2972615397–01 |
| **ಒಟ್ಟು ರೂ. 3110762854–01** | **ಒಟ್ಟು ರೂ. 3153916694–01** | **ಒಟ್ಟು ರೂ. 3151193794–01** |

**ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಶೆ:**

ಮೇಲಿನ ಅಂಕಿ ಅಂಶಗಳ ಪ್ರಕಾರ ನಿವೇಶನದ ಠೇವಣಿಯು ಕಳೆದ 2 ವರ್ಷಗಳ ಅಂಕಿಗಳೊಂದಿಗೆ ಹೋಲಿಸಿದರೆ, 2018–19ನೇ ಸಾಲಿಗಿಂತ, 2019–20ನೇ ಸಾಲಿನಲ್ಲಿ ಒಟ್ಟು ನಿವೇಶನ ಠೇವಣಿಯು ಹೆಚ್ಚಳವಾಗಿದ್ದು, 2019–20ನೇ ಸಾಲಿಗಿಂತ 2020–21ನೇ ಸಾಲಿನಲ್ಲಿ ಒಟ್ಟು ನಿವೇಶನ ಠೇವಣಿಯು ಕಡಿಮೆಯಾಗಿರುತ್ತದೆ.

| | | |
|---|---|---|
| 3 | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿರುವುದಿಲ್ಲ. |
| 4 | ಠೇವಣಿಯ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ನಿವೇಶನ ಠೇವಣಿ [ಡಿಪಾಜಿಟ್] ಸಂಗ್ರಹಿಸುತ್ತಿದ್ದು, ನಿವೇಶನ ಠೇವಣಿ [ಡಿಪಾಜಿಟ್] ಮೇಲೆ ಯಾವುದೇ ವಿಧವಾದ ಬಡ್ಡಿಯನ್ನು ಪಾವತಿಸಿರುವುದಿಲ್ಲ. |
| 5 | ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ? | ನಿವೇಶನ ಠೇವಣಿ [ಡಿಪಾಜಿಟ್] ದಾರರಿಗೆ ಪಾಸ್ ಪುಸ್ತಕ / ಸರ್ಟಿಫಿಕೇಟ್ ನೀಡಲಾಗಿರುವುದಿಲ್ಲ, ರಶೀತಿಯನ್ನು ನೀಡಿರುತ್ತಾರೆ. |
| 6 | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ | ಸಂಘವು ಸದಸ್ಯರಿಂದ / ಸಹ ಸದಸ್ಯರಿಂದನಿವೇಶನ ಠೇವಣಿ [ಡಿಪಾಜಿಟ್] ಮಾತ್ರ ಪಡೆಯುತ್ತಿದ್ದು, ಬೇರೆ ರೀತಿಯ ಠೇವಣಿ [ಡಿಪಾಜಿಟ್] ಗಳನ್ನು ಸಂಘವು ಪಡೆಯುತ್ತಿಲ್ಲ. ನಿವೇಶನ ಠೇವಣಿ [ಡಿಪಾಜಿಟ್] ಮೇಲೆ ಸದಸ್ಯರಿಗೆ / ಸಹ ಸದಸ್ಯರಿಗೆ ಬಡ್ಡಿ ಪಾವತಿಸುತ್ತಿಲ್ಲ. |
| 7 | ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ? | ಇಲ್ಲ. |
| 8 | ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್. | ಅನ್ವಯಿಸುವುದಿಲ್ಲ. |
| 9 | ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ? | ಅನ್ವಯಿಸುವುದಿಲ್ಲ. |
| 10 | ನಗದು ಮೀಸಲು ಮತ್ತು ಪ್ರವಾಹಿ ಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ? | ಇಲ್ಲ. |
| 11 | **ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–** [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು] | ಇಲ್ಲ. |

**18) ಸಹಾಯಧನಗಳು:**

| **ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ :** | |
|---|---|
| ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ. [ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು] | ಸರ್ಕಾರದಿಂದ ಯಾವುದೇ ಸಹಾಯಧನ ಮಂಜೂರಾಗಿರುವುದಿಲ್ಲ. |

| | |
|---|---|
| ಸಂಘವು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ) | ಸಂಘವು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರದಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುವುದಿಲ್ಲ. |
| **19) ಇತರೆ ಜವಾಬ್ದಾರಿಗಳು :** | [ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು] |

| ಕ್ರ | ವಿವರ | ಮೊತ್ತ | |
|---|---|---|---|
| 1 | ಬಾಡಿಗೆ ಮುಂಗಡ<br>ಶ್ರೀ. ಸಿದ್ದರಾಜು. ಎನ್.<br>ಶ್ರೀ. ಗಿರೀಶ್. ಟಿ | <br>ರೂ. 25000–00<br>ರೂ. 150000–00 | ದಿನಾಂಕ 31–3–2021ಕ್ಕೆ ಬಾಡಿಗೆ ಮುಂಗಡದ ಬಾಬ್ತು ಶ್ರೀ ಸಿದ್ದರಾಜು ಎನ್ ರವರಿಗೆ ರೂ. 25000–00 ಗಳನ್ನು ಮತ್ತು ಶ್ರೀ ಗಿರೀಶ್. ಟಿ. ರವರಿಗೆ ರೂ. 150000–00 ಗಳನ್ನು ನೀಡಲು ಬಾಕಿ ಇರುತ್ತದೆ. |
| 2 | 2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರಿಗೆ ಸಂಬಾವನೆ / ಫೀ ಅವಕಾಶ | ರೂ. 685377–00 | 2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಸಂಭಾವನೆ / ಫೀ ರೂ. 685377–00 ರೂಗಳನ್ನು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸಿಎ. ವರದರಾಜು ರವರಿಗೆ ದಿನಾಂಕ 31–03–2021 ಕ್ಕೆ ಪಾವತಿಸಲು ಅವಕಾಶ ಮಾಡಿದ್ದು, ಇದನ್ನು ಅಕೌಂಟ್ ಪೇಯಿ ಚೆಕ್ ಮುಖಾಂತರ ಪಾವತಿಸಲು ಕ್ರಮ ವಿಡುವುದು. |
| 3<br><br><br>4 | ಮಾರ್ಚ್ 2021ರ ಟೆಲಿಫೋನ್ ಚಾರ್ಜಸ್ ಪ್ರಾವಿಜ಼ನ್<br>ಮಾರ್ಚ್ 2021ರ ವಿದ್ಯುತ್ ಬಿಲ್ ಮತ್ತು ನೀರಿನ ಬಿಲ್ ಬಾಬ್ತು ಅವಕಾಶ<br>(ರೂ. 1983 + ರೂ. 1707) | ರೂ. 1675–00<br><br>ರೂ. 3690–00 | ದಿನಾಂಕ 31–3–2021 ಕ್ಕೆ ಮಾರ್ಚ್ 2021ರ ಮಾಹೆಯ ಟೆಲಿಫೋನ್ ಬಿಲ್ ಬಾಬ್ತು ರೂ. 1675–00 ರೂಗಳು ಮತ್ತು ವಿದ್ಯುತ್ ಬಿಲ್ ಮತ್ತು ನೀರಿನ ಬಿಲ್ ಬಾಬ್ತು ರೂ. 3690–00 ಗಳನ್ನು ಪಾವತಿಸಲು ಬಾಕಿ ಇದ್ದು, ಸದರಿ ಮೊಬಲಗನ್ನು ದಿನಾಂಕ 31–3–2021ಕ್ಕೆ ಅವಕಾಶ ಮಾಡಲಾಗಿದೆ. |
| 5 | ಸಿಬ್ಬಂದಿ ಮಾರ್ಚ್ 2021ರ ವೇತನ ಅವಕಾಶ | ರೂ. 51000–00 | ದಿನಾಂಕ 31–3–2021ಕ್ಕೆ ಮಾರ್ಚ್ 2021ರ ಮಾಹೆಯ ಸಿಬ್ಬಂದಿ ವೇತನ ರೂ. 51000–00 ಗಳನ್ನು ಪಾವತಿಸಲು ಬಾಕಿ ಇದ್ದು, ಸದರಿ ಮೊಬಲಗನ್ನು ದಿನಾಂಕ 31–3–2021ಕ್ಕೆ ಅವಕಾಶ ಮಾಡಲಾಗಿದೆ. ದಿನಾಂಕ 5–4–2021 ಮತ್ತು ದಿನಾಂಕ 6–4–2021 ರಂದು ಸಿಬ್ಬಂದಿಗಳ ಮಾರ್ಚ್ 2021ರ ವೇತನವನ್ನು ಸಂಘದಿಂದ ಪಾವತಿಸಿರುತ್ತಾರೆ. |
| 6 | ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ ರಡಿ ಕೇಸ್‌ಗೆ ವಕೀಲರುಗಳಿಗೆ ನೀಡಿರುವ ಮೊಬಲಗನ್ನು ವಸೂಲಾತಿಗೆ ಇಟ್ಟಿರುವ ಮೊಬಲಗಿನ ಬಾಬ್ತು ಅವಕಾಶ | ರೂ. 153650–00 | 2020–21ನೇ ಸಾಲಿನಲ್ಲಿ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ ಕೇಸ್‌ಗೆ ನೀಡಿರುವ ಮೊಬಲಗು ರೂ. 1,53,650–00 ಗಳು ದಿನಾಂಕ 31–3–2021 ಕ್ಕೆ ವಸೂಲಾಗಬೇಕಾಗಿದ್ದು, ಸದರಿ ಮೊಬಲಗನ್ನು ಸಂಬಂದಿಸಿದವರಿಂದ ದಿನಾಂಕ 31–3–2021ಕ್ಕೆ ಆಸ್ತಿಯ ಕಡೆ ವಸೂಲಾತಿಗೆ ಸೂಚಿಸಲಾಗಿದೆ. ಸದರಿ ಮೊಬಲಗಿಗೆ ಸಂಬಂಧಿಸಿದಂತೆ, ರೂ. 1,53,650–00 ಗಳನ್ನು 2020–21ನೇ ಸಾಲಿನಲ್ಲಿ ಅವಕಾಶ ಕಲ್ಪಿಸಲಾಗಿದೆ. |

| | |
|---|---|
| | ವಸೂಲಾತಿಯ ಬಗ್ಗೆ ವಿವರವನ್ನು ದಿನಾಂಕ 31-3-2021ರ ಬ್ಯಾಲನ್‌ಷೀಟಿನ ಆಸ್ತಿಯ ಕ್ರಮ ಸಂಖ್ಯೆ (8) ರಲ್ಲಿ ವಿವರಿಸಲಾಗಿದೆ. ಆಸ್ತಿಯ ಕ್ರಮ ಸಂಖ್ಯೆ (8) ರಲ್ಲಿ ವಸೂಲಾತಿಗೆ ಸೂಚಿಸಿರುವ ಮೊಬಲಗು ರೂ. 1,53,650-00 ಗಳು ಸಂಬಂಧಿಸಿದವರಿಂದ ವಸೂಲಾದ ನಂತರ ಈ ಮೊಬಲಗನ್ನು ಸಂಘದ ಲಾಭಕ್ಕೆ ವರ್ಗಾಯಿಸಲು ಕ್ರಮ ಅಗತ್ಯ. |

**ಸಂದೇಶ್ ಲೇಕ್ ಸೈಡ್ ಬಡಾವಣೆಗಳ ಅಮಾನತ್ತು ಬಾಬ್ತು ರೂ. 525000-00**

2018-19ನೇ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆ ಉಳಿತಾಯ ಖಾತೆ ಅಕೌಂಟ್ ನಂ. 10 ಕ್ಕೆ ದಿನಾಂಕ 10-12-2018 ರಂದು ಸಲಹಾ ಬೇಗಂ ಎ ಕನಕಗೆರೆ ರವರಿಂದ ಆರ್.ಟಿ.ಜಿ.ಎಸ್. ಮುಖಾಂತರ ರೂ. 3,00,000-00 ಗಳು ಜಮಾ ಆಗಿದೆ ಮತ್ತು ದಿನಾಂಕ 12-12-2018 ರಂದು ಚಂದ್ರಶೇಖರ್. ಎನ್ ರವರಿಂದ ಆರ್.ಟಿ.ಜಿ.ಎಸ್. ಮುಖಾಂತರ ರೂ. 2,25,000-00 ಗಳು ಜಮಾ ಆಗಿದೆ. ಈ ಹೆಸರಿನವರು ಸಂಘದಲ್ಲಿ ಸದಸ್ಯರು / ಸಹ ಸದಸ್ಯರು ಇರುವುದಿಲ್ಲದೇ ಇರುವುದರಿಂದ, 2018-19ನೇ ಸಾಲಿನಲ್ಲಿ ಆರ್.ಟಿ.ಜಿ.ಎಸ್. ಮುಖಾಂತರ ಜಮಾ ಆದ ಒಟ್ಟು ರೂ. 5,25,000-00 (ರೂ. 3,00,000-00 + ರೂ. 2,25,000-00)ಗಳನ್ನು ಸಂದೇಶ್ ಲೇಕ್ ಸೈಡ್ ಬಡಾವಣೆಗಳ ಬಾಬ್ತು ಅಮಾನತ್ತು ಎಂದು ನಗದು ಪುಸ್ತಕಕ್ಕೆ ಜಮಾ ತೆಗೆದುಕೊಂಡಿರುತ್ತದೆ ಎಂದು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. 2018-19ನೇ ಸಾಲಿನ ಅಮಾನತ್ತು ಬಾಬ್ತು ರೂ. 5,25,000-00 ಗಳು; ದಿನಾಂಕ 31-03-2021ಕ್ಕೆ ಸಂದೇಶ್ ಲೇಕ್ ಸೈಡ್ ಬಡಾವಣೆಗಳ ಬಾಬ್ತು ಅಮಾನತ್ತು ಲೆಕ್ಕದಲ್ಲಿರುತ್ತದೆ. ಇದನ್ನುಜವಾಬ್ದಾರಿಯ ಕಡೆ ತೋರಿಸಿದೆ, ಇದರ ಬಗ್ಗೆ ಕಾರ್ಯದರ್ಶಿಯವರು ಗಮನಹರಿಸಿ, ನಿಯಮಾನುಸಾರ ಸರಿಪಡಿಸುವುದು ಅಗತ್ಯ.

2020-21ನೇ ಸಾಲಿನಲ್ಲಿ ಸೀಮಾ ಸಂತೋಶ್ ರವರಿಂದ ಎನ್.ಇ.ಎಫ್.ಟಿ ಮುಖಾಂತರ ದಿನಾಂಕ 26-11-2020 ರಲ್ಲಿ ಸಂಘದ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆ, ಬೆಂಗಳೂರು ಎಸ್.ಬಿ ನಂ.39 ಖಾತೆಗೆ ರೂ. 2,000-00 ಜಮಾ ಆಗಿದೆ. ಯಾವ ಉದ್ದೇಶಕ್ಕೆ ಜಮಾ ಆಗಿದೆ ಎಂಬ ಬಗ್ಗೆ ಸಂಘದಲ್ಲಿ ಮಾಹಿತಿ ದೊರಕದ ಕಾರಣ ಸದರಿ ರೂ. 2,000-00 ಗಳನ್ನು ಅಮಾನತ್ತು ಖಾತೆಯಲ್ಲಿ ತೋರಿಸಿದೆ. ಈ ಬಗ್ಗೆ ಸೂಕ್ತ ಕ್ರಮ ಅತ್ಯಾಗತ್ಯ.

**ಆದಾಯ ತೆರಿಗೆ ಇಲಾಖೆಗೆ ಟಿ.ಡಿ.ಎಸ್. ಪಾವತಿಸಲು ದಿನಾಂಕ 31-03-2021ಕ್ಕೆ ಬಾಕಿ:-**

ದಿನಾಂಕ 31-03-2021ಕ್ಕೆ ಆಸ್ತಿ ಜವಾಬ್ದಾರಿ ತಃಖ್ತೆಯ ಜವಾಬ್ದಾರಿ ಕ್ರಮ ಸಂಖ್ಯೆ 7 ರ ರೀತ್ಯಾ ಈ ಕೆಳಕಂಡ ವಿವರದ ರೀತ್ಯಾ ಆದಾಯ ತೆರಿಗೆ ಇಲಾಖೆಗೆ ದಿನಾಂಕ 31-03-2021 ಕ್ಕೆ ಪಾವತಿಸಲು ಬಾಕಿ ಇರುತ್ತದೆ.

| ಕ್ರಮ ಸಂಖ್ಯೆ | ವಿವರ | ದಿನಾಂಕ 31-3-2021ಕ್ಕೆ ಪಾವತಿಸಲು ಬಾಕಿ | ದಿನಾಂಕ 31-3-2021ರ ನಂತರ ಮೊಬಲಗನ್ನು ಆದಾಯ ತೆರಿಗೆ ಇಲಾಖೆಗೆ ಪಾವತಿಸಿದ ದಿನಾಂಕ |
|---|---|---|---|

| | | | |
|---|---|---|---|
| 1 | ಆರ್.ಜಿ.ಸಿ ಕನ್ಸ್ಟ್ರಕ್ಷನ್ & ಇಂಜಿನೀಯರ್ಸ್ ರವರ ಬಾಬ್ತು | 130–00 | 7–6–2021 |
| 2 | ಶ್ರೀ ಕೃಷ್ಣಾರೆಡ್ಡಿ ರವರ ಬಾಬ್ತು | 500–00 | 7–6–2021 |
| 3 | ಶ್ರೀ ಲಕ್ಷ್ಮಣ ರವರ ಬಾಬ್ತು | 7000–00 | 9–6–2021 |
| 4 | ಶ್ರೀ ಎಂ.ಎಸ್. ರುದ್ರಯ್ಯ ರವರ ಬಾಬ್ತು | 1650–00 | 7–6–2021 |
| 5 | ಶ್ರೀ ಮೂಕಾಂಭಿಕ ಡೆವಲಪರ್ಸ್ ರವರ ಸಂದೇಶ್ ನಗರ–2ನೇ ಹಂತದ ಬಡಾವಣೆಯ ಬಾಬ್ತು | 500–00 | 7–6–2021 |
| | **ಒಟ್ಟು ಮೊತ್ತ** | **9780–00** | |

**20) ಲಾಭ ವಿಂಗಡಣೆ**

| | |
|---|---|
| ಹಿಂದಿನ ಸಾಲಿನ ಕ್ರೋಢೀಕೃತ ಲಾಭ | ಇರುವುದಿಲ್ಲ |
| ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮ 63ರನ್ವಯ ಮಾಡಿಕೊಳ್ಳಲಾಗಿದೆಯೇ? | 2019–20ನೇ ಸಾಲಿನಲ್ಲಿ ಸಂಘವು ಲಾಭಗಳಿಸದೇ ಇರುವುದರಿಂದ ಅನ್ವಯಿಸುವುದಿಲ್ಲ. |
| ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ? | 2016–17, 2017–18, 2018–19 ಮತ್ತು 2019–20ನೇ ಸಾಲಿನಲ್ಲಿ ಸಂಘವು ಲಾಭ ಗಳಿಸಿಲ್ಲ. |
| ವಿತರಣೆಯಾಗದ ಲಾಭಾಂಶದ ಮೊತ್ತ | –ಇಲ್ಲ– |
| ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದು. | ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶ ಇರುವುದಿಲ್ಲ |

**21) ನಗದು ಶಿಲ್ಕು ಪರಿಶೀಲನೆ:**

| | | | |
|---|---|---|---|
| ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು | | ದಿನಾಂಕ 31–3–2021 ಕ್ಕೆ ನಗದು ಶುಲ್ಕು ರೂ. 11737–00 ಇರುತ್ತದೆ. | |
| ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು | | | |
| **ಪರಿಶೀಲನೆಯ ಕಛೇರಿ** | **ದಿನಾಂಕ** | **ನಗದು(ರೂ)** | **ಹಾಜರ ಪಡಿಸಿದ ಸಿಬ್ಬಂದಿ ಹೆಸರು/ಹುದ್ದೆ** |
| ಮುಖ್ಯ ಕಚೇರಿ ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– | 25–6–2021 | ರೂ. 29895–00 | ಮಹೇಶ್. ಎಂ.ಎನ್. ಮುಖ್ಯಕಾರ್ಯನಿರ್ವಹಣಾಧಿಕಾರಿ / ಕಾರ್ಯದರ್ಶಿ |

| | | | |
|---|---|---|---|
| 560094. | | | |
| ಶಾಖೆಗಳು | ಸಂಘವು ಶಾಖೆಗಳನ್ನು ಹೊಂದಿರುವುದಿಲ್ಲ. | | |

| | |
|---|---|
| ಪರಿಶೀಲಿಸಿದ ನಗದು ನಗದು ಪುಸ್ತಕನೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ? | ತಾಳೆ ಇರುತ್ತದೆ. |
| ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು. ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರಪಡಿಸಿದ ಕೈಶಿಲ್ಕದ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು. | ಲೆಕ್ಕಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣ ವಿರುವುದಿಲ್ಲ. |
| ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ? | ಸಂಘದ ಉಪನಿಯಮದ ಪ್ರಕಾರ ನಗದು ಶಿಲ್ಕಿಗೆ ಮುಖ್ಯಕಾರ್ಯನಿರ್ವಹಣಾಧಿಕಾರಿ ಯವರಾದ / ಕಾರ್ಯದರ್ಶಿಯವರಾದ ಶ್ರೀ ಮಹೇಶ್. ಎಂ.ಎನ್. ರವರು ಜವಾಬ್ದಾರರು. ಹಾಗೂ ದಿನಾಂಕ 8-1-2015 ರ ಆಡಳಿತ ಮಂಡಳಿ ಸಭೆಯಲ್ಲಿ ದಿನದ ಅಖೈರು ನಗದು ಶಿಲ್ಕಿನ ಮಿತಿ ರೂ. 250000-00 ನಿಗಧಿ ಪಡಿಸಿರುತ್ತಾರೆ. ನಗದು ಶಿಲ್ಕು ಮುಖ್ಯಕಾರ್ಯನಿರ್ವಹಣಾಧಿಕಾರಿಯವರ / ಕಾರ್ಯದರ್ಶಿಯವರ ಅಭಿರಕ್ಷೆಯಲ್ಲಿ ಇರುತ್ತದೆ. |
| ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ. | ಇಲ್ಲಾ |
| ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ. | ನಗದು ಶಿಲ್ಕಿಗೆ ಸೂಕ್ತ ವಿಮೆ ಮಾಡಿಸಿರುವುದಿಲ್ಲ. ವಿಮೆ ಮಾಡಿಸಲು ಕ್ರಮವಿಡುವುದು. |
| ನಗದು ಶಿಲ್ಕನ್ನು ಕಾಲಕಾಲಕ್ಕೆ ಅದಿಕೃತರು ಪರೀಕ್ಷಿಸಿದ್ದಾರೆಯೆ? | ಇಂತಹ ಪದ್ದತಿ ಸಂಘದಲ್ಲಿರುವುದಿಲ್ಲ. ಆದರೆ ದಿನಾಂಕ 31-3-2021 ಕ್ಕೆ ಸಂಘದ ಅಧ್ಯಕ್ಷರು ಪರಿಶೀಲಿಸಿ, ನಗದು ಶಿಲ್ಕು ರೂ. 11737-00 ಇರುವುದನ್ನು ದೃಢೀಕರಿಸಿರುತ್ತಾರೆ. |

**(22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು**

| ಬ್ಯಾಂಕಿನ ಹೆಸರು | ಖಾತೆ ಸಂಖ್ಯೆ | ಬ್ಯಾಂಕಿನ ದೃಢೀಕರಣ ಪತ್ರದ ಪ್ರಕಾರ ಉಳಿಕೆ ಶಿಲ್ಕು ದಿ. 31-3-2021ಕ್ಕೆ | ಸಂಘದ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು ದಿ. 31-3-2021ಕ್ಕೆ | ಅಂತರ |
|---|---|---|---|---|

| | | | | |
|---|---|---|---|---|
| **ದಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ ಬೆಂಗಳೂರು-560 032.** | ಉಳಿತಾಯ ಖಾತೆ ನಂಬರ್ | | | |
| 1) ಗಂಗಾನಗರ ಶಾಖೆ | 1025102040000010 | 1389027-12 | 1149027.12 | 240000-00 |
| 2) ಗಂಗಾನಗರ ಶಾಖೆ | 1025102040000039 | 287620-00 | 287620-00 | ಇಲ್ಲಾ |
| 3) ಶಿವಾಜಿನಗರ ಶಾಖೆ | 1005102040000022 | 1115829-91 | 1115829-91 | ಇಲ್ಲಾ |
| 4) ಸಿಂಡಿಕೇಟ್ ಬ್ಯಾಂಕ್ ನೆಲಮಂಗಲ ಶಾಖೆ | 04902200036791 | ದೃಢೀಕರಣ ಪತ್ರ ಇಲ್ಲ | 11457-90 | ದೃಢೀಕರಣ ಪತ್ರ ಇಲ್ಲ |

| | |
|---|---|
| ಸಂಘವು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯಾತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ<br><br>ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.) | ವ್ಯತ್ಯಾಸ ವಿರುವ ಬ್ಯಾಂಕ್ ಖಾತೆಗೆ ಸಮನ್ವಯ ಪಟ್ಟಿ ತಯಾರಿಸಿದ್ದು ತಾಳೆ ಇರುತ್ತದೆ.<br>ಸಮನ್ವಯ ಪಟ್ಟಿಗೆ ಒಳಪಟ್ಟು ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ದೃಢೀಕರಣ ಪತ್ರಗಳಿಗೆ ತಾಳೆ ಇರುತ್ತದೆ.<br><br>ಗಂಗಾನಗರ ಶಾಖೆ ಎಸ್.ಬಿ.- 10 ರಲ್ಲಿ ರೂ. 240000-00 ವ್ಯತ್ಯಾಸ ವಿದ್ದು, ಇದಕ್ಕೆ ಸಮನ್ವಯ ಪಟ್ಟಿ ತಯಾರಿಸಿದ್ದು ಸಮನ್ವಯ ಪಟ್ಟಿ ಪ್ರಕಾರ ತಾಳೆ ಇರುತ್ತದೆ. ಸಮನ್ವಯ ಪಟ್ಟಿಯನ್ನು **ಅನುಬಂಧ- 6** ಎಂದು ವರದಿಯೊಂದಿಗೆ ಲಗತ್ತಿಸಿದೆ.<br><br>ದಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ., ಗಂಗಾನಗರ ಶಾಖೆ ಎಸ್.ಬಿ. 10 ಕ್ಕೆ ಮತ್ತು ಗಂಗಾನಗರ ಶಾಖೆ ಎಸ್.ಬಿ. 39ಕ್ಕೆ ಹಾಗೂ ಶಿವಾಜಿನಗರ ಶಾಖೆ ಎಸ್.ಬಿ. 22 ಕ್ಕೆ ಬ್ಯಾಂಕಿನ ದೃಢೀಕರಣ ಪತ್ರಗಳನ್ನು **ಅನುಬಂಧ-7, 8 ಮತ್ತು 9** ಎಂದು ವರದಿಯೊಂದಿಗೆ ಲಗತ್ತಿಸಿದೆ. ನೆಲಮಂಗಲ ಶಾಖೆಯ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆಗೆ ಬ್ಯಾಂಕಿನ ದೃಢೀಕರಣ ಪತ್ರ ಲೆಕ್ಕಪರಿಶೋಧನಾ ವೇಳೆಯಲ್ಲಿ ಇರುವುದಿಲ್ಲ. ದೃಢೀಕರಣ ಪತ್ರ ಪಡೆದು ತಾಳೆ ನೋಡುವುದು ಅತ್ಯಾಗತ್ಯ. |
| ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58(ಇ)ಪ್ರಕಾರ ಮಂಜೂರಾತಿ ಪಡೆದಿದೆಯೇ? | ಸಂಘವು ಸಹಕಾರೇತರ ಬ್ಯಾಂಕಿನಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 58 (ಇ) ರೀತ್ಯಾ ಇರುವ ಅವಕಾಶದಂತೆ ನೆಲಮಂಗಲ ಶಾಖೆಯ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದಿರುತ್ತದೆ. |
| ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ | ಸಂಘವು ಸಿಂಡಿಕೇಟ್ ಬ್ಯಾಂಕ್ ನೆಲಮಂಗಲ ಶಾಖೆಯಲ್ಲಿ ಎಸ್.ಬಿ. ಖಾತೆ ತೆರೆದಿದ್ದು, ಎಸ್.ಬಿ. ಖಾತೆಯಲ್ಲಿ ಸಂಘವು ವ್ಯವಹಾರ ನಡೆಸುತ್ತಿಲ್ಲ. |
| ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ | 2020-21ನೇ ಸಾಲಿನಲ್ಲಿ ಜಮಾ-ಖರ್ಚಿನ ತಃಖ್ತೆಯ ಜಮಾದ ಕ್ರಮ ಸಂಖ್ಯೆ 11 (ಎ) ವಿವರಿಸಿರುವಂತೆ ಬ್ಯಾಂಕಿನ ಉಳಿತಾಯ ಖಾತೆಗಳಿಂದ ಬಡ್ಡಿ ರೂ. 142484-00 ಗಳು ಸಂಘಕ್ಕೆ ಆದಾಯ ರೂಪದಲ್ಲಿ ಬಂದಿರುತ್ತದೆ. |

## (23) ಹೂಡಿಕೆಗಳು

ಷಡ್ಯೂಲ್ ಕೆ ಪ್ರಕಾರ ದಿನಾಂಕ 31–03–2021 ಕ್ಕೆ ಬ್ಯಾಲನ್ಸ್‌ಷೀಟಿನ ಆಸ್ತಿ–ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 3 ರಲ್ಲಿ ವಿವರಿಸಿರುವಂತೆ ಸಂಘವು ಹೊಂದಿರುವ ಹೂಡಿಕೆಗಳು ರೂ. 9388344–00.

ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ?

ದಿನಾಂಕ 31–03–2021ಕ್ಕೆ ಸಂಘವು ಈ ಕೆಳಕಂಡ ಮಾಹಿತಿಗಳಂತೆ ರೂ. 9388344–00 ಗಳ ಠೇವಣಿ ಹೊಂದಿರುತ್ತದೆ.

| ಕ್ರ.ಸ | ಠೇವಣಿ (ಹೂಡಿಕೆಗಳ) ಗಳ ವಿವರ | ಬ್ಯಾಲನ್ಸ್‌ಷೀಟಿನಂತೆ ಮೊಬಲಗು ದಿ.31–3–2021ಕ್ಕೆ | ದೃಢೀಕರಣ ಪತ್ರದ ರೀತ್ಯಾ ಮೊಬಲಗು ದಿ.31.3.2021ಕ್ಕೆ | ದೃಢೀಕರಣ ಪತ್ರಗಳ ಜೆರಾಕ್ಸ್ ಪ್ರತಿ |
|---|---|---|---|---|
| 1 | ಕ.ರಾಜ್ಯ ಸಹಕಾರಿ ವಸತಿ ಮಹಾಮಂಡಳ ಷೇರು | 45000–00 | 45000–00 | ಅನುಬಂಧ– 10 |
| 2 | ಶ್ರೀನಿಧಿ ಸೌಹಾರ್ದ ಸಹಕಾರ ಬ್ಯಾಂಕ್ ಷೇರು ಧನ | 3000–00 | ದೃಢೀಕರಣ ಪತ್ರ | ಇಲ್ಲಾ |
| 3 | ಕ.ರಾ. ಸಹಕಾರಿ ವಸತಿ ಮಹಾ ಮಂಡಳದಲ್ಲಿ ಆಪದ್ಧನ ಠೇವಣಿ | 600–00 | ದೃಢೀಕರಣ ಪತ್ರ | ಅನುಬಂಧ– 10 |
| 4 | ಕ.ರಾ. ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು– 32 ಗಂಗಾನಗರಶಾಖೆ, ಖಾಯಂ ಠೇವಣಿ<br>ಆಪದ್ಧನ ಠೇವಣಿ | 6613239–00<br>2696825–00 | 6613239–00<br>2696825–00 | ಅನುಬಂಧ– 11<br>ಅನುಬಂಧ– 12 |
| 5 | ವಿದ್ಯುತ್ ಠೇವಣಿ | 28600–00 | ದೃಢೀಕರಣ ಪತ್ರ | ಇಲ್ಲಾ |
| 6 | ನೀರಿನ ಠೇವಣಿ | 1080–00 | ದೃಢೀಕರಣ ಪತ್ರ | ಇಲ್ಲಾ |

ದೃಢೀಕರಣ ಪತ್ರಗಳ ಜೆರಾಕ್ಸ್ ಪ್ರತಿಯನ್ನು ಅನುಬಂಧ–10, 11 ಮತ್ತು 12 ಎಂದು ವರದಿಯೊಂದಿಗೆ ಲಗತ್ತಿಸಿದೆ.

| | |
|---|---|
| ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ? | ಇಲ್ಲಾ |
| ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ? | ಹೌದು |
| ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ? | ವರದಿ ಸಾಲಿನಲ್ಲಿ ಕ.ರಾ.ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಗಂಗಾನಗರ ಶಾಖೆ ಬೆಂಗಳೂರುನಿಂದ ಖಾಯಂ ಠೇವಣಿ ಮೇಲೆ ರೂ. 616792–00 ಬಡ್ಡಿ ಮತ್ತು ಆಪದ್ಧನ ಠೇವಣಿ ಮೇಲೆ ರೂ. 158484–00 ಬಡ್ಡಿ ಜಮಾ ಬಂದಿದೆ. |

**ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ:–** ಹೂಡಿಕೆಗಳ ಬಗ್ಗೆ ಸಂಘದಲ್ಲಿ ಒಂದು ಪುಸ್ತಕದಲ್ಲಿ ಬರೆಯಲಾಗಿದೆ. ವರದಿ ಸಾಲಿನಲ್ಲಿ ಕ.ರಾ.ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು, ಗಂಗಾನಗರ ಶಾಖೆಯಿಂದ ಖಾಯಂ ಠೇವಣಿ ಬಡ್ಡಿ ರೂ. 616792–00 ಮತ್ತು ಆಪದ್ಧನ ಠೇವಣಿ ಬಡ್ಡಿ ರೂ. 158484–00 [ರೂ. 116358–00 (+) ರೂ. 42126–00]ಗಳು ವರದಿ ಸಾಲಿನಲ್ಲಿ ಸಂಘಕ್ಕೆ ಜಮಾ ಆಗಿರುತ್ತದೆ.

| |
|---|
| 1) ಶ್ರೀನಿಧಿ ಸೌಹಾರ್ಧ ಸಹಕಾರ ಬ್ಯಾಂಕ್ ಷೇರು ಧನ 3000–00 ಗಳಿಗೆ, ವಿದ್ಯುತ್ ಠೇವಣಿ ಬಾಬ್ತು 28600–00 ರೂಗಳಿಗೆ ಹಾಗೂ ನೀರಿನ ಠೇವಣಿ ಬಾಬ್ತು 1080–00 ರೂಗಳಿಗೆ ವರದಿ ಸಾಲಿಗೆ ದೃಢೀಕರಣ ಪತ್ರ ಆಡಿಟ್ ವೇಳೆಯಲ್ಲಿ ಇರುವುದಿಲ್ಲ. ಸಂಬಂದಿಸಿದವರಿಂದ ತಕ್ಷಣವೇ ಪಡೆದು ತಾಳೆ ನೋಡುವುದು ಅತ್ಯಾವಶ್ಯಕ. ಇದರ ಬಗ್ಗೆ ಸಂಘದ ಕಾರ್ಯದರ್ಶಿ / ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು ಗಮನ ಹರಿಸಿ ಸೂಕ್ತ ಕ್ರಮವಿಡುವುದು ಅತ್ಯಾಗತ್ಯ. ದೃಢೀಕರಣ ಪತ್ರಗಳಲ್ಲಿದ ಠೇವಣಿ (ಹೂಡಿಕೆಗಳ) ಲೆಕ್ಕಗಳ ನಿಖರತೆಯನ್ನು ದೃಢೀಕರಿಸಿಲ್ಲ. |

**(24) <u>ಸದಸ್ಯರ ಸಾಲ ಮತ್ತು ಮುಂಗಡಗಳು:</u>**

| | | |
|---|---|---|
| 1 | ಉಪ ನಿಯಮಗಳ ಹಾಗೂ ಸಾಲದ ನಿಯಮಾವಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲ ರೀತಿಯ ಪಡೆಯ ಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ ಸಂಘದಲ್ಲಿ ಬರೆದಿಟ್ಟಿರುವುದ ಬಗ್ಗೆ ವಿಮರ್ಶೆ. | ಸಂಘದಿಂದ ಯಾವುದೇ ರೀತಿಯ ಸಾಲವನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ನೀಡಿರುವುದಿಲ್ಲ. ಆದುದರಿಂದ ಕ್ರಮ ಸಂಖ್ಯೆ 24 (1) ಸಂಘಕ್ಕೆ ಅನ್ವಯಿಸುವುದಿಲ್ಲ. |
| 2 | ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು. | ಅನ್ವಯಿಸುವುದಿಲ್ಲ |

| ಸಾಲಗಳ ಸ್ವರೂಪ: | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ | ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ | **<u>ಯಾದಿಯ ಮೊತ್ತ</u>** | **<u>ಅಂತರ</u>** |
|---|---|---|---|---|---|---|
| ಜಾಮೀನು ಸಾಲ | **ಸಂಘದಿಂದ ಯಾವುದೇ ವಿಧವಾದ ಸಾಲಗಳನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ನೀಡಿರುವುದಿಲ್ಲ. ಆದುದರಿಂದ ಕ್ರಮ ಸಂಖ್ಯೆ 24(2) ಸಂಘಕ್ಕೆ ಅನ್ವಯಿಸುವುದಿಲ್ಲ.** | | | | | |
| ಹೈಪೋಥಿಕೇಶನ ಸಾಲ | | | | | | |
| ಮಾರ್ಟಗೇಜ್ ಸಾಲ | | | | | | |
| ಠೇವಣಿ ಆಧಾರ ಸಾಲ | | | | | | |
| ನಗದು ಪತ್ತಿನ ಸಾಲ | | | | | | |
| ಚಿನ್ನಾಭರಣ ಆಧಾರ ಸಾಲ | | | | | | |
| **ಒಟ್ಟು ರೂ** | | | | | | |

| | | |
|---|---|---|
| 3 | ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ: | ಅನ್ವಯಿಸುವುದಿಲ್ಲ |
| 4 | ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ. | ಅನ್ವಯಿಸುವುದಿಲ್ಲ |
| 5 | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ? | ಅನ್ವಯಿಸುವುದಿಲ್ಲ |
| 6 | ಸಾಲದ ಕುಳುವಾರು ತ:ಖ್ತೆಗಳು ಆಸ್ತಿ ಜವಾಬ್ದಾರಿ ತ:ಖ್ತೆಗೆ ತಾಳೆ ಇರುವ ಬಗ್ಗೆ. | ಅನ್ವಯಿಸುವುದಿಲ್ಲ |
| 7 | ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು. | ಅನ್ವಯಿಸುವುದಿಲ್ಲ |
| 8 | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ | ಅನ್ವಯಿಸುವುದಿಲ್ಲ |

| | | |
|---|---|---|
| | ಕುರಿತು ಪಡೆದಿರುವ ದಾಖಾತಿಗಳಲ್ಲಿರುವ ನ್ಯೂನ್ಯತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು. | |
| 9 | ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ / ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು. | ಅನ್ವಯಿಸುವುದಿಲ್ಲ |
| 10 | ಒಟ್ಟು ಸದಸ್ಯರ ಸಂಖ್ಯೆಗೆ ಸಂಘದ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇ.ವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ |
| 11 | ರೂ.20,000 ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು. | ಅನ್ವಯಿಸುವುದಿಲ್ಲ |
| 12 | ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್ಆರ್–1/ಎ.1,81–82 ದಿನಾಂಕ 04–07–1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು. | ಅನ್ವಯಿಸುವುದಿಲ್ಲ |
| 13 | ಸಂಘದಲ್ಲಿ ಸಾಲಕ್ಕೆ ಅರ್ಜಿ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು. | ಅನ್ವಯಿಸುವುದಿಲ್ಲ |

**ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:**

[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನ್ಯತೆ, ಉಪನಿಯಮಕ್ಕೆ ವಿರುದ್ದವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ, ಬಡ್ಡಿ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು.]

ಸಂಘದಿಂದ ಸಾಲ ನೀಡಿರುವುದಿಲ್ಲ.

**(25) ಸುಸ್ತಿ ಸಾಲಗಳ ವಿವರ :**

| | | |
|---|---|---|
| 1 | ಸುಸ್ತಿ ಸಾಲದ ಮೊತ್ತ | ಅನ್ವಯಿಸುವುದಿಲ್ಲ |
| 2 | ಒಟ್ಟು ಸಾಲಕ್ಕೆ ಸುಸ್ಥಿ ಸಾಲದ ಪ್ರತಿಶತ ಪ್ರಮಾಣ | ಅನ್ವಯಿಸುವುದಿಲ್ಲ |
| 3 | ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ | ಅನ್ವಯಿಸುವುದಿಲ್ಲ |
| 4 | ವರ್ಷಾಂತ್ಯಕ್ಕೆ ಇರುವ ಸುಸ್ತಿ ಸಾಲದ ವರ್ಷಾವಾರು ವಿವರ ನೀಡುವುದು. | |

| ಕ್ರ.ಸಂ | ಸಾಲದ ವಿವರಗಳು | 1–3 ವರ್ಷ | | 3–4 ವರ್ಷ | | 4–6 ವರ್ಷ | | 6ವರ್ಷ ಮೇಲ್ಪಟ್ಟ | | ಒಟ್ಟು ಸಾಲ | |
|---|---|---|---|---|---|---|---|---|---|---|---|
| | | ಕ್ರ | ರಕ್ಕಮು | ಕ್ರ | ರಕ್ಕಮು | ಕ್ರ | ರಕ್ಕಮು | ಕ್ರ | ರಕ್ಕಮು | ಕ್ರ | ರಕ್ಕಮು |
| 1 | ಕಿಸಾನ್ ಕ್ರೆಡಿಟ್ ಸಾಲ | ಸಂಘದಿಂದ ಯಾವುದೇ ರೀತಿಯ ಸಾಲವನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ನೀಡಿರುವುದಿಲ್ಲ. ಆದುದರಿಂದ ಕ್ರಮ ಸಂಖ್ಯೆ 25 (1 ರಿಂದ 9) ರ ವರೆವಿಗೆ ಸಂಘಕ್ಕೆ ಅನ್ವಯಿಸುವುದಿಲ್ಲ. | | | | | | | | | |
| 2 | ಎಸ್ ಹೆಚ್ ಜಿ ಸಾಲ | | | | | | | | | | |
| 3 | ಠೇವಣಿ ಆಧಾರ ಸಾಲ | | | | | | | | | | |
| 4 | ಮೀರೆಳೆತ ಸಾಲ | | | | | | | | | | |
| 5 | ಎನ್ ಎಫ್ ಎಸ್ ಸಾಲ | | | | | | | | | | |
| 6 | ಚಿನ್ನಾಭರಣ | | | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| | | ಆಧಾರ ಸಾಲ | | | | | | | | | | |
| | 7 | ವಾಹನ ಸಾಲ | | | | | | | | | | |
| | | **ಒಟ್ಟು ರೂ** | | | | | | | | | | |

| | | |
|---|---|---|
| 5 | ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ. | ಅನ್ವಯಿಸುವುದಿಲ್ಲ |
| 6 | ಸುಸ್ತಿ ಪ್ರಕರಣಗಳ ಪೈಕಿ ಡಿಕ್ರಿ ಯಾದ ಪ್ರಕರಣ ಸಂಖ್ಯೆ ಮತ್ತು ಮೊತ್ತ. | ಅನ್ವಯಿಸುವುದಿಲ್ಲ |
| 7 | ಡಿಕ್ರಿಯಾದ ಪೈಕಿ ಅಮಲ್ಜಾರಿಗೆ ಕಳುಹಿಸಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ. | ಅನ್ವಯಿಸುವುದಿಲ್ಲ |
| 8 | ಸುಸ್ತಿಸಾಲ ವಸೂಲಿಗೆ ಕಾನೂನು ರೀತ್ಯಾ ಕ್ರಮ ಜರುಗಿಸದೇ ಇರುವ ಪ್ರಕರಣಗಳು ಮತ್ತು ಮೊತ್ತ | ಅನ್ವಯಿಸುವುದಿಲ್ಲ |
| 9 | ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ |

**(26) ಸಂಘದ ಸ್ಥಿರಾಸ್ತಿ–ಚರಾಸ್ತಿಗಳ ಪರಿಶೀಲನೆ**

| ಎ | | ಸ್ಥಿರಾಸ್ತಿ | ನಿವೇಶನ | ವಿವರ | ವಿಸ್ತೀರ್ಣ | ಮೊತ್ತ ರೂ. |
|---|---|---|---|---|---|---|
| | | <u>ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು</u> | ನಿವೇಶನ ಸಂಖ್ಯೆ–7 | ನಿವೇಶನ ಮತ್ತು ಕಟ್ಟಡ | 15ಅಡಿ x 40 ಅಡಿ | 1663848–00 |
| | 1 | ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಹಾಗೂ 'ಕ''ಡ' ಉತಾರೆ ಪರಿಶೀಲಿಸಿದ ಬಗ್ಗೆ ವಿಮರ್ಷೆ | ಲೆಕ್ಕಪರಿಶೋಧನಾ ವೇಳೆಯಲ್ಲಿ ನಿವೇಶನ ಮತ್ತು ಕಟ್ಟಡಕ್ಕೆ ಕಂದಾಯ ಪಾವತಿಸಿದ ರಸೀತಿಯನ್ನು ಪರಿಶೀಲಿಸಲಾಗಿದೆ. | | | |
| | 2 | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಇಲ್ಲಾ | | | |
| | 3 | ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ನಿವೇಶನ ಮತ್ತು ಕಟ್ಟಡ ಸಂಘದ ಹೆಸರಿನಲ್ಲಿದೆ. | | | |
| | 4 | ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಇಲ್ಲಾ | | | |
| | 5 | ಸ್ಥಿರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ಸ್ಥಿರಾಸ್ತಿಯ ಮೇಲೆ ಮಾನ್ಯ ನಿಬಂಧಕರ ಸುತ್ತೋಲೆಯಂತೆ ಸವಕಳಿಯನ್ನು ತೆಗೆದಿರುತ್ತದೆ. ದಿನಾಂಕ 31–3–2021ಕ್ಕೆ ಕಟ್ಟಡದ ಸವಕಳಿ ರೂ. 1326922–00 ಇರುತ್ತದೆ. | | | |
| | 6 | ಗೋಡಾನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ | ಸಂಘದಲ್ಲಿ ಗೋಡಾನುಗಳು ಇರುವುದಿಲ್ಲ | | | |
| | 7 | ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿ ಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ? | ಹೌದು | | | |
| | 8 | ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು. | ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ. | | | |
| | 9 | ವರದಿ ಸಾಲಿನಲ್ಲಿ ವಿಲೇಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಷೆ. | ವರದಿ ಸಾಲಿನಲ್ಲಿ ಸ್ತಿರಾಸ್ಥಿ ವಿಲೇ ಮಾಡಿರದ ಕಾರಣ ಅನ್ವಯಿಸುವುದಿಲ್ಲ. | | | |
| | 10 | ಸ್ಥಿರಾಸ್ತಿಯ ತೆರಿಗೆಯನ್ನು ತಹಲ್ ದಿನಾಂಕದವರೆಗೂ ಪಾವತಿಸಲಾಗಿದೆಯೇ? | ಹೌದು. ಬಿ.ಬಿ.ಎಂ.ಪಿ ರಸೀದಿ ದಿನಾಂಕ 15–5–2020ರ ಮೂಲಕ ಸಂಘದ ಕಟ್ಟಡದ 2020–21ನೇ ಸಾಲಿನ ತೆರಿಗೆ ರೂ. 8587–00 ಗಳನ್ನು ಬಿ.ಬಿ.ಎಂ.ಪಿ.ಗೆ ಪಾವತಿಸಲಾಗಿದೆ. | | | |

| | | | |
|---|---|---|---|
| ಬಿ | | **ಚರಾಸ್ತಿ** | |
| | **1** | ಸಂಘವು ಹೊಂದಿರುವ ಚರಾಸ್ತಿವಿವರಗಳು<br>ದಿನಾಂಕ 31–03–2021ಕ್ಕೆ ಸಂಘವು ಹೊಂದಿರುವ ಚರಾಸ್ತಿ ವಿವರಗಳು:– | |

| ಕ್ರಮ ಸಂಖ್ಯೆ | ವಿವರ | ಮೊಬಲಗು |
|---|---|---|
| 1 | ಪೀಠೋಪಕರಣ ಮತ್ತು ಕೌಂಟರ್, ಇತ್ಯಾದಿ | 718133–86 |
| 2 | ಕಂಪ್ಯೂಟರ್ | 136681–00 |
| 3 | ಯು.ಪಿ.ಎಸ್. ಮತ್ತು ಬ್ಯಾಟರಿ, ಮದರ್ ಬೋರ್ಡ್ | 165169–00 |
| 4 | ಸಿ.ಸಿ. ಕ್ಯಾಮೆರ | 27660–00 |
| 5 | ಎಲ್.ಇ.ಡಿ. ಟಿ.ವಿ | 12000–00 |
| 6 | ಜೆರಾಕ್ಸ್ ಮಿಷನ್ ಮತ್ತು ಟ್ರಾಲಿ | 194820–00 |
| | **ಒಟ್ಟು ರೂ.** | **1254463–86** |

| | | | |
|---|---|---|---|
| | **2** | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | 2020–21ನೇ ಸಾಲಿನ ಆಡಿಟ್ ವೇಳೆಯಲ್ಲಿ ಚರಾಸ್ತಿ ರಿಜಿಸ್ಟರನ್ನು ಹಾಜರುಪಡಿಸಿಲ್ಲ. |
| | **3** | ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | **––"––** |
| | **4** | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಇಲ್ಲಾ |
| | **5** | ಚರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ಚರಾಸ್ತಿಗಳ ಮೇಲೆ ಮಾನ್ಯ ನಿಬಂಧಕರ ಸುತ್ತೋಲೆಯಂತೆ ಸವಕಳಿಯನ್ನು ತೆಗೆಯಲಾಗಿದೆ. |
| | | ವರದಿ ಸಾಲಿನಲ್ಲಿ ವಿಲೇಮಾಡಿರುವ ಚರಾಸ್ತಿಗಳ ಕುರಿತು ವಿಮರ್ಷೆ. | ವರದಿ ಸಾಲಿನಲ್ಲಿ ಚರಾಸ್ತಿಗಳನ್ನು ವಿಲೇಮಾಡಿರುವುದಿಲ್ಲ. |
| | | ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಕೊಂಡಿರುವ ಕ್ರಮಗಳ ಕುರಿತು ವಿಮರ್ಷೆ. | ಅನ್ವಯಿಸುವುದಿಲ್ಲ |
| | **6** | ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಷೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ? | ಸಂಘವು ವಾಹನವನ್ನು ಹೊಂದಿರುವುದಿಲ್ಲ. |
| | **7** | ವರದಿ ಸಾಲಿನಲ್ಲಿ ವಿಲೇಮಾಡಿರುವ ವಾಹನದ ಕುರಿತು ವಿಮರ್ಷೆ. | ಇಲ್ಲ |

**(27)** **ಇತರೆ ಬರತಕ್ಕವುಗಳು :**

| ಕ್ರ.ಸ | ವಿವರ |
|---|---|
| 1 | ಸದಸ್ಯರ ಮತ್ತು ಸಹ ಸದಸ್ಯರ ನಿವೇಶನಗಳ ಖಾತೆ ಮಾಡಿಸಲು, ಪಿ.ಡಿ.ಒ. ಗೊಲ್ಲಹಳ್ಳಿ ಗ್ರಾಮ ಪಂಚಾಯತಿಗೆ ರೂ. 150856–00 ಗಳು ಮತ್ತು ಪಿ.ಡಿ.ಒ. ವಾಜರಹಳ್ಳಿ ಗ್ರಾಮ ಪಂಚಾಯತಿಗೆ ರೂ. 168365–00 ಗಳು ಪಾವತಿಸಿರುವುದು ಒಟ್ಟು ರೂ. 319221–00 ಗಳು ದಿನಾಂಕ 31–03–2021 ಕ್ಕೆ ಸದಸ್ಯರಿಂದ ಮತ್ತು ಸಹ ಸದಸ್ಯರಿಂದ ಸಂಘಕ್ಕೆ ಬರಲು ಬಾಕಿ ಇರುತ್ತದೆ. ಕುಳುವಾರು ಪಟ್ಟಿ ತಯಾರಿಸಿದ್ದು ಗೊಳ್ಳಹಳ್ಳಿ ಗ್ರಾಮ ಪಂಚಾಯಿತಿ ಬಾಬ್ತು ಕುಳುವಾರು ಪಟ್ಟಿ ತಾಳೆ ಇದೆ. ವಾಜರಹಳ್ಳಿ ಗ್ರಾಮ ಪಂಚಾಯಿತಿ ಬಾಬ್ತು ಕುಳುವಾರು ಪಟ್ಟಿ ತಯಾರಿಸಿದ್ದು ಕುಳುವಾರು ಬಾಕಿ ಪಟ್ಟಿ ಪ್ರಕಾರ ರೂ. 169700–00 ಇದ್ದು ವ್ಯತ್ಯಾಸ 1335–00 ರೂಗಳು. ಈ ವ್ಯತ್ಯಾಸವನ್ನು ಪರಿಶೀಲಿಸಿ ಸರಿಪಡಿಸುವುದು. ಕುಳುವಾರು ಪಟ್ಟಿಯನ್ನು ವರದಿಯೊಂದಿಗೆ ಲಗತ್ತಿಸಿದೆ. **ಅನುಬಂಧ–12ಬಿ ಮತ್ತು 12ಸಿ.** ಈ ಮೊಬಲಗುಗಳ ವಸೂಲಾತಿಗೆ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಕ್ಷಣವೇ ಕ್ರಮ ತೆಗೆದುಕೊಂಡು ವಸೂಲಾತಿ ಮಾಡುವುದು ಅತ್ಯಾಗತ್ಯ. |
| 2 | ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ ರಡಿ ಕೇಸ್‌ಗೆ ವಕೀಲರುಗಳಿಗೆ ನೀಡಿರುವ ಮೊಬಲಗು ವಸೂಲಾತಿಗೆ ರೂ. 1,53,650–00 :–<br><br>2020–21ನೇ ಸಾಲಿನಲ್ಲಿ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ ರಡಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರಿಗೆ ಮತ್ತು ಕಾರ್ಯದರ್ಶಿಯವರಾದ ಶ್ರೀ ಮಹೇಶ್. ಎಂ.ಎನ್ ರವರಿಗೆ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ರವರು, ನೋಟೀಸ್ ನೀಡಿದ್ದು, ಸದರಿ ಕಲಂ 29ಸಿ ರಡಿ ಕೇಸ್ ನಡೆಸಲು ವಕೀಲರಾದ ಶ್ರೀ ಎಂ.ಎಸ್. ರುದ್ರಯ್ಯ ರವರಿಗೆ ರೂ. 1,26,650–00 ಗಳನ್ನು ಮತ್ತು ವಕೀಲರಾದ ಶ್ರೀ ಮಹೇಶ್ ಬಿ.ಎಸ್. ರವರಿಗೆ ರೂ. 27,000–00 ಗಳನ್ನು 2020–21 ನೇ ಸಾಲಿನಲ್ಲಿ (ವರದಿ ಸಾಲಿನಲ್ಲಿ) ಸಂಘದಿಂದ ನೀಡಿರುತ್ತಾರೆ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ ರಡಿ ಕೇಸ್‌ಗೆ ಸಂಘದಿಂದ ನೀಡಲು ಅವಕಾಶವಿಲ್ಲದೇ ಇರುವುದರಿಂದ, ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಂದ, ವಸೂಲಾತಿಗೆ ರೂ. 1,53,650–00 ಗಳನ್ನು ದಿನಾಂಕ 31–3–2021ಕ್ಕೆ ಬ್ಯಾಲನ್ ಷೀಟಿನ ಆಸ್ತಿಯ ಕ್ರಮ ಸಂಖ್ಯೆ 8 ರಲ್ಲಿ ತೋರಿಸಿದೆ. ಸದರಿಯವರಿಂದ ವಸೂಲಾತಿ ಮಾಡಲು ಕ್ರಮ ಅಗತ್ಯ. |

**(28) ಮೋಸ, ವಂಚನೆ, ಹಣ ದುರುಪಯೋಗದ ವರದಿ**

| | |
|---|---|
| ಹಣ ದುರೂಪಯೊಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕ ಪರಿಶೋಧನಾ ಇಲಾಖಾ ಮೇಲಾಧಿಕಾರಿಗಳಿಗೆ ಅಂತಿಮ ವರದಿ ಸಲ್ಲಿಸಲಾಗಿದೆಯೇ? | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| ಪ್ರತಿಯೊಂದು ಹಣದುರುಪಯೋಗದ ಅಂಶದ ಸ್ವರೂಪದ ಬಗ್ಗೆ ದಿನಾಂಕವಾರು, ಹಣದುರುಪಯೋಗ ಮಾಡಿದ ರೀತಿ, ಉದ್ದೇಶ, ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸಿ ಆಪಾದಿತರಿಗೆ ವಿವರಣೆ ನೀಡಲು ನೊಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ ನೀಡಲಾಗಿದೆಯೇ? | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| ಹಣದುರೂಪಯೋಗ ಸಾಬೀತವಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸಿ, ಫೌಜದಾರಿ ಮತ್ತು ದಿವಾಣಿ (Criminal & Civil) ಕ್ರಮಕ್ಕೆ ಏಕೆ ಕ್ರಮ ಕೈಕೊಳ್ಳಬಾರದೆಂಬ ಬಗ್ಗೆ ಸಂಭಂದಪಟ್ಟವರಿಗೆ ಜಾರಿ ಮಾಡಿರುವ ನೋಟಿಸು ಹಾಗೂ ಸಮನ್ಸ್‌ಗಳ ಕುರಿತು ಹಾಗೂ ಅದಕ್ಕೆ ಅವರು ನೀಡಿರುವ ವಿವರಣೆಯನ್ನು ಪರಿಗಣಿಸಿದ ಬಗ್ಗೆ ವಿವರವಾಗಿ | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |

| | |
|---|---|
| ವಿಮರ್ಷಿಸುವುದು. | |
| ಹಣದುರೂಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| ಹಣದುರೂಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತ:ಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ರಕ್ಕಮುಗಳಿಗೆ ಸೂಕ್ತ ಅವಕಾಶ ಕಲ್ಪಿಸಿರುವುದರ ಬಗ್ಗೆ ಹಾಗೂ ಹಣದುರೂಪಯೋಗದ ರಕ್ಕಮನ್ನು ವಸೂಲಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಷಿಸುವುದು. | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| ಹಣದುರುಪಯೋಗದ ರಕ್ಕಮನ್ನು ವಸೂಲಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಷಿಸುವುದು. | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| ಕೇಂದ್ರ ಕಚೇರಿ ಸುತ್ತೋಲೆ ಸಂಖ್ಯೆ.ಲೆಪಶಾ–1/ಇತರೆ/ಲೆಪನೆ/16/ 2016–17 ದಿನಾಂಕ 23.02.2017ರ ಹಾಗೂ ನಿರ್ದೇಶನಗಳಂತೆ ಹಣದುರುಪಯೋಗವುಳ್ಳ ವರದಿಗಳನ್ನು ಲೆಕ್ಕ ಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಕೊಂಡು, ಅವರು ಸೂಚಿಸಿರುವ ಎಲ್ಲ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಯಾವುದೇ ಪ್ರಕರಣಗಳು ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |

**(29) ನಿಬಂಧಕರ ಆದೇಶಗಳ ಅನುಪಾಲನೆ**

| | |
|---|---|
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ? | ಇಲ್ಲಾ. |
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65 ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ? | ಪ್ರಸಕ್ತ ಸಾಲಿನಲ್ಲಿ ಸಂಘದ ಮೇಲೆ ಕಲಂ 65ರ ಅನ್ವಯ ಪರಿವೀಕ್ಷಣೆ ನಡೆದಿದೆ ಎಂದು ಸಂಘದ ಕಾರ್ಯದರ್ಶಿಯವರು ಮತ್ತು ಅಧ್ಯಕ್ಷರು ತಿಳಿಸಿರುತ್ತಾರೆ. |
| ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ನಿವಾರಿಸಲು ನಿಬಂಧಕರಿಂದ ಕಲಂ 68 ರ ಅಡಿ ಆದೇಶ ಜಾರಿಯಾಗಿದೆಯೇ? | ಇಲ್ಲಾ. |
| ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂಧಕರ ಕಲಂ 68 ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ? | ಮಾನ್ಯ ನಿಬಂಧಕರು ಕಲಂ 68 ರಡಿ ಸಂಘಕ್ಕೆ ಯಾವುದೇ ಆದೇಶವನ್ನು ನೀಡಿರುವುದಿಲ್ಲ, ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. |

**ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು**
**(ಶೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ)**

| | |
|---|---|
| ಸಂಘದ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ | 11. ದಿನಾಂಕ 20–11–2018ರ ತಿದ್ದುಪಡಿಯಾದ ಸಂಘದ ಬೈಲಾ ಸಂಖ್ಯೆ 41 |

| | |
|---|---|
| | (ಆ) ಪ್ರಕಾರ 13 ಜನ ನಿರ್ದೇಶಕರು. ಇದರ ಪ್ರಕಾರ (1) ಸಾಮಾನ್ಯ ಸದಸ್ಯರಿಗೆ–07, (2) ಪರಿಶಿಷ್ಟ ಜಾತಿಗೆ–01, (3) ಪರಿಶಿಷ್ಟ ವರ್ಗಕ್ಕೆ–01, (4) ಮಹಿಳಾ ಸದಸ್ಯರಿಗೆ–02 (5) ಹಿಂದುಳಿದ ವರ್ಗಕ್ಕೆ–02. |
| ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ | ಸಂಘದ ಆಡಳಿತ ಮಂಡಳಿಯಲ್ಲಿ 2 ಹಿಂದುಳಿದ ವರ್ಗ, ಮತ್ತು 2 ಮಹಿಳಾ ಮೀಸಲು ಸ್ಥಾನ ಹಾಗೂ 1 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರಿಗೆ ಮೀಸಲಾತಿ ಕಲ್ಪಿಸಿದ್ದು, ಸದರಿ ಸ್ಥಾನಗಳನ್ನು ಭರ್ತಿ ಮಾಡಲಾಗಿದೆ. |
| ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ | ದಿನಾಂಕ29–01–2020 [ಆಡಳಿತ ಮಂಡಳಿ ಸಭೆಯ ದಿನಾಂಕ 29–1–2020 ಠರಾವಿನ ಸಂಖ್ಯೆ 2ರಲ್ಲಿ ತಿಳಿಸಿರುವಂತೆ] |
| ಮಂಡಳಿಯ ಅವಧಿ | ದಿನಾಂಕ 31–12–2019 ರಂದು ಶ್ರೀ ಹಮೀದುಲ್ಲಾ ಖಾನ್, ರಿಟರ್ನಿಂಗ್ ಅಧಿಕಾರಿಯವರು ಸಂಘದ ಆಡಳಿತ ಮಂಡಳಿ ಚುನಾವಣೆ ಬಗ್ಗೆ ಘೋಷಿಸಿರುವ ಚುನಾವಣಾ ಫಲಿತಾಂಶದ ಘೋಷಣಾ ಪತ್ರವನ್ನು 2019–20ನೇ ಸಾಲಿನ ಆಡಿಟ್ ವರದಿಗೆ ಲಗತ್ತಿಸಿರುತ್ತಾರೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರು ಆಯ್ಕೆ ಯಾಗಿರುತ್ತಾರೆ. |
| ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ | ಇಲ್ಲಾ |
| ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ | 06 |
| ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ | ರೂ. 80000–00 ಗಳು. |
| ನಿರ್ದೇಶಕರ ತರಬೇತಿ ಕಾರ್ಯಕ್ರಮಗಳ ವಿವರ | ವರದಿ ಸಾಲಿನಲ್ಲಿ ಯಾವುದೇ ನಿರ್ದೇಶಕರ ತರಬೇತಿ ಕಾರ್ಯಕ್ರಮ ನಡೆದಿರುವುದಿಲ್ಲ. |
| ನಿರ್ದೇಶಕರ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಇಲ್ಲಾ |

ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ:–

ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ; ಮಾಹೆಯಾನ ಜಮಾ–ಖರ್ಚು ಅನುಮೋದನೆ, ಸದಸ್ಯರ / ಸಹ ಸದಸ್ಯರ ಸದಸ್ಯತ್ವದ ಅನುಮೋದನೆ, ರದ್ದತಿ; ನಿವೇಶನ ಡಿಪಾಜಿಟ್ (ಠೇವಣಿ) ಸಂಗ್ರಹಣೆ, ವಾಪಸ್ಸಾತಿ ಮಾಡುವ ಬಗ್ಗೆ, ಸಂಘದ ಬಡಾವಣೆಗಳ ಪ್ರಗತಿ ಬಗ್ಗೆ, ಬಡಾವಣೆ ವೆಚ್ಚ, ದಿನಾಂಕ 31–3–2020ಕ್ಕೆ ಮತ್ತು ದಿನಾಂಕ 31–3–2021ಕ್ಕೆ ಇದ್ದಂತೆ ಸಂಘದ ಬಡಾವಣೆಗಳ ಡೆವಲಪರ್ಸ್‌ರವರುಗಳಿಗೆ ನೀಡಿರುವ ಮೊಬಗಿನ ಬಗ್ಗೆ ಚರ್ಚೆ, ಸಂಘದ ಮಾಜಿ ನಿರ್ದೇಶಕರಾದ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ವಿರುದ್ಧ ಅಮಲ್ಜಾರಿ ಪ್ರಕರಣ ಕೇಸಿನ ಬಗ್ಗೆ ಚರ್ಚೆ, ಸಂಘದ ಸಹ ಸದಸ್ಯರಾದ ಶ್ರೀ ಅಜಯ್ ಅಗರ್‌ವಾಲ್ ಮತ್ತು ಇತರರ ದೂರಿನ ಬಗ್ಗೆ ಚರ್ಚೆ, ಸಂದೇಶ್ ನಗರ–2ನೇ ಹಂತದ ವಸತಿ ವಿನ್ಯಾಸ ನಕ್ಷೆ ಮಂಜೂರಾತಿ ಬಗ್ಗೆ ಚರ್ಚೆ, ಲಾಯರ್ಸ್ ರವರಿಗೆ ಸಂಘದಿಂದ ಮೊಬಲಗನ್ನು ಪಾವತಿಸುವ ಬಗ್ಗೆ, ನ್ಯಾಯಾಲಯದಲ್ಲಿ ಇರುವ ಮೊಕದ್ದಮೆಗಳ ಬಗ್ಗೆ ಚರ್ಚೆ, ವಾರ್ಷಿಕ ಸಭೆಯನ್ನು ನಡೆಸುವ ಬಗ್ಗೆ, ಬಡಾವಣೆಯ ಡೆವಲಪರ್ಸ್ ರವರುಗಳಿಗೆ ಹಣ ಬಿಡುಗಡೆ ಮಾಡಿರುವ ಬಗ್ಗೆ, ಸಂಘಕ್ಕೆ ಜಮೀನನ್ನು, ಭೂಪರಿವರ್ತನಾ ಜಮೀನುಗಳನ್ನು ನೋಂದಣಿ ಮಾಡಿಕೊಳ್ಳುವ ಬಗ್ಗೆ,

ಮಾಡಿಕೊಂಡಿರುವ ಬಗ್ಗೆ, ನ್ಯಾಯಾಲಯದಲ್ಲಿ, ಸಹಕಾರ ಇಲಾಖೆಯಲ್ಲಿ ನಡೆಯುತ್ತಿರುವ ಕೇಸುಗಳ ಬಗ್ಗೆ, ಲೆಕ್ಕಪರಿಶೋಧನೆ ಬಗ್ಗೆ, ಇತ್ಯಾದಿ ವಿಷಯಗಳ ಬಗ್ಗೆ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಿರುತ್ತಾರೆ.

ಸಂಘದ ಆಡಳಿತ ಮಂಡಳಿಯ ಅಧಿಕಾರ ಅವಧಿಯು ದಿನಾಂಕ 25–01–2020ಕ್ಕೆ ಅಂತ್ಯಗೊಂಡ ಪ್ರಯುಕ್ತ ಮುಂದಿನ 5 ವರ್ಷದ ಅವಧಿಗೆ ದಿನಾಂಕ 05–01–2020 ರಂದು ಚುನಾವಣೆಯನ್ನು ನಿಗಧಿಪಡಿಸಿದ್ದರು. ಆದರೆ ಚುನಾವಣೆಯು ನಡೆಯದೇ ಇದ್ದುದರಿಂದ, ಆಡಳಿತ ಮಂಡಳಿ ಸಭೆಗೆ 13 ಜನರು ಅವಿರೋಧವಾಗಿ

ಚುನಾಯಿತರಾಗಿದ್ದಾರೆಂದು ಸದರಿ 13 ಜನರ ಆಡಳಿತ ಮಂಡಳಿ ಸದಸ್ಯರ ಹೆಸರನ್ನು ರಿಟರ್ನಿಂಗ್ ಆಫೀಸರ್ ರವರಾದ ಶ್ರೀ ಹಮೀದುಲ್ಲಾ ಖಾನ್ ರವರು ದಿನಾಂಕ 31–12–2019 ರಂದು ಘೋಷಿಸಿರುತ್ತಾರೆ. ಇದರ ಜೆರಾಕ್ಸ್ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿರುತ್ತಾರೆ.

**30 ಸಂಘದ ಆಡಳಿತ:** **ವರದಿ ಸಾಲಿನಲ್ಲಿ 06 ಸಭೆಗಳು ನಡೆದಿರುತ್ತದೆ.**

ನಿರ್ದೇಶಕರ ಸಭಾ ಹಾಜರಾತಿ:– 2020–21ನೇ ಸಾಲಿನ ನಿರ್ದೇಶಕರ ಸಭಾ ಹಾಜರಾತಿಯ ವಿವರ.

| ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳ ಸಂಖ್ಯೆ | ಸಂಭಾವನೆ |
|---|---|---|---|
| ಶ್ರೀಯುತ ಜಯರಾಮಯ್ಯ | ಅಧ್ಯಕ್ಷರು | 06 | 6000–00 |
| ಶ್ರೀಯುತ ಗಂಗಾಧರಯ್ಯ. ಕೆ.ಹೆಚ್ | ಉಪಾಧ್ಯಕ್ಷರು | 06 | 6000–00 |
| ಶ್ರೀಯುತ ಬಾಲಸುಬ್ರಮಣ್ಯಂ. ಬಿ | ನಿರ್ದೇಶಕರು | 05 | 5000–00 |
| ಶ್ರೀಯುತ ಸದಾಶಿವಾರಾಧ್ಯ. ಎಂ.ಆರ್ | ನಿರ್ದೇಶಕರು | 06 | 6000–00 |
| ಶ್ರೀಯುತ ನಾಗೇಂದ್ರ | ನಿರ್ದೇಶಕರು | 05 | 5000–00 |
| ಶ್ರೀಯುತ ನಾಗರಾಜ್. ಜಿ | ನಿರ್ದೇಶಕರು | 05 | 5000–00 |
| ಶ್ರೀಯುತ ಸೋಮಶೇಖರ್. ಎನ್ | ನಿರ್ದೇಶಕರು | 06 | 6000–00 |
| ಶ್ರೀಯುತ ಜವರಾಯಿ. ಡಿ.ಸಿ | ನಿರ್ದೇಶಕರು | 06 | 6000–00 |
| ಶ್ರೀಯುತ ಪಾಂಡುರಂಗಯ್ಯ. ಬಿ.ಆರ್ | ನಿರ್ದೇಶಕರು | 06 | 6000–00 |
| ಶ್ರೀಯುತ ಕೃಷ್ಣಮೂರ್ತಿ. ಎ | ನಿರ್ದೇಶಕರು | 06 | 6000–00 |
| ಶ್ರೀಯುತ ಹೇಮಂತ್ ಕುಮಾರ್. ಸಿ | ನಿರ್ದೇಶಕರು | 05 | 5000–00 |
| ಶ್ರೀಮತಿ ಶಾಂತ ಲಕ್ಷ್ಮೀಕಾಂತ್ | ನಿರ್ದೇಶಕರು | 06 | 6000–00 |
| ಶ್ರೀಮತಿ ಕೆಂಪಮ್ಮ. ಎಂ | ನಿರ್ದೇಶಕರು | 06 | 6000–00 |

| | | | |
|---|---|---|---|
| | | **ಒಟ್ಟು ರೂ.** | **74000–00** |

ಸಂಘದಲ್ಲಿ ದಿನಾಂಕ 9–1–2020 ರಂದು ನಡೆದ ಸಂಘದ ಅಧ್ಯಕ್ಷರ ಚುನಾವಣೆಯಲ್ಲಿ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷದ ಅವಧಿಗೆ ಶ್ರೀಯುತ ಜಯರಾಮಯ್ಯ ರವರು ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಯಾಗಿರುತ್ತಾರೆ. ಮತ್ತು ದಿನಾಂಕ 9–1–2020 ರಂದು ನಡೆದ ಸಂಘದ ಉಪಾಧ್ಯಕ್ಷರ ಚುನಾವಣೆಯಲ್ಲಿ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷದ ಅವಧಿಗೆ ಶ್ರೀಯುತ ಗಂಗಾಧರಯ್ಯ. ಕೆ.ಹೆಚ್ ರವರು ಸಂಘದ ಉಪಾಧ್ಯಕ್ಷರಾಗಿ ಆಯ್ಕೆ ಯಾಗಿರುತ್ತಾರೆ.

ದಿನಾಂಕ 9–1–2020 ರಂದು ನಡೆದ ಸಂಘದ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಠರಾವಿನ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಯಲ್ಲಿ ಮಾಹಿತಿಗಾಗಿ ಲಗತ್ತಿಸಿರುತ್ತಾರೆ.

**ಮಂಡಳಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ**

| | |
|---|---|
| ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆಯೇ? | ಹೌದು |
| ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ? | ಹೌದು |
| ಮಂಡಳಿಯ / ಸಮಿತಿಗಳ ಸಭೆಗಳ ನಡವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವರದಿ ಸಾಲಿನಲ್ಲಿ 06 ಆಡಳಿತ ಮಂಡಳಿ ಸಮಿತಿಗಳ ಸಭೆಗಳನ್ನು ನಡೆಸಿ, ಸಂಘದ ಆರ್ಥಿಕ ಚಟುವಟಿಕೆಗಳ ಬಗ್ಗೆ ಮತ್ತು ಕ್ರಮ ಸಂಖ್ಯೆ 29 ರಲ್ಲಿ ಪುಟ ಸಂಖ್ಯೆ 31 ರಲ್ಲಿ (ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು) ತಿಳಿಸಿರುವ ವಿಷಯಗಳ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚಿಸಿ, ಸಂಘದ ಸಭಾ ನಡವಳಿಕೆಗಳನ್ನು ನಿರ್ವಹಿಸಿ ಸಭೆಗೆ ಹಾಜರಾದ ಎಲ್ಲಾ ನಿರ್ದೇಶಕರ ಸಹಿ ಪಡೆದಿರುತ್ತಾರೆ. |

**ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ**

| | |
|---|---|
| ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೆ? | ನಿರ್ದೇಶಕರುಗಳಿಗೆ ಸಾಲ ನೀಡಿರುವುದಿಲ್ಲ. |
| ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೆ? | ಹೌದು |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ | ಸಾಲ ಪಡೆದಿರುವುದಿಲ್ಲ |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ | ಅನ್ವಯಿಸುವುದಿಲ್ಲ |
| ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ | ಅನ್ವಯಿಸುವುದಿಲ್ಲ |
| **(31) ವಾರ್ಷಿಕ ಸಾಮಾನ್ಯ ಸಭೆ** | |

| | |
|---|---|
| ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ | ದಿನಾಂಕ: 20–12–2020 |
| ಸಂಘದ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ | 84 ಸದಸ್ಯರು |
| ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ | 129 ಸದಸ್ಯರು |
| ಸಭಾ ನಡವಳಿಗಳ ಪರಿಶೀಲನೆ ಬಗ್ಗೆ ಟಿಪ್ಪಣಿ | ದಿನಾಂಕ 20–12–2020 ರಂದು ನಡೆದ 55ನೇ ವಾರ್ಷಿಕ (2019–20ನೇ ಸಾಲಿನ) ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಲೆಕ್ಕಪರಿಶೋಧನಾ ವೇಳೆಯಲ್ಲಿ ಪರಿಶೀಲಿಸಿರುತ್ತದೆ. |

| | |
|---|---|
| ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯವ್ಯಯ ಪತ್ರದ ಮಿತಿಕಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆಯೇ?ವಿವರಿಸಿ. | ಪಡೆಯಲಾಗಿದೆ |
| ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ ? | ಪಡೆಯಲಾಗಿದೆ |
| ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆಯೆ? | ಪಡೆಯಲಾಗಿದೆ |
| ಸದರಿ ಸಭೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆಯೇ? ನೇಮಕ ಮಾಡಿದಲ್ಲಿ ಲೆಕ್ಕ ಪರಿಶೋಧಕರ ಹೆಸರು/ಪದನಾಮ ಹಾಗೂ ಠರಾವಿನ ಕ್ರಮಾಂಕ ಹಾಗೂ ವಾರ್ಷಿಕ ಮಹಾಸಭೆಯ ದಿನಾಂಕ ಹಾಗೂ ಜಿಲ್ಲಾ ಉಪನಿರ್ದೇಶಕರಿಗೆ ವರದಿಸಿದ ದಿನಾಂಕ | ಹೌದು<br>ಶ್ರೀ. ಸಿಎ. ವರದರಾಜು, ವರದರಾಜು & ಅಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು, ಸದಸ್ಯತ್ವ ಸಂಖ್ಯೆ 200/29660. ಇವರನ್ನು ವಾರ್ಷಿಕ ಮಹಾ ಸಭೆಯ ದಿನಾಂಕ 20–12–2020. ಠರಾವಿನ ಸಂಖ್ಯೆ 10 ರಲ್ಲಿ ನೇಮಕ ಮಾಡಲಾಗಿದೆ. ಜಿಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಿಗೆ ವರದಿಸಿದ ದಿನಾಂಕ 24–12–2019 ಮತ್ತು 22–4–2021 |
| ವಾರ್ಷಿಕ ಸಭೆಯ ನಡವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ಲೆಕ್ಕಪರಿಶೋಧನಾ ವೇಳೆಯಲ್ಲಿ ದಿನಾಂಕ 20–12–2020 ರಂದು ನಡೆದ 55ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಲೆಕ್ಕಪರಿಶೋಧನಾ ಅವಧಿಯಲ್ಲಿ ಪರಿಶೀಲಿಸಿದ್ದು, ಸಭಾನಡವಳಿಯನ್ನು ಬರೆದು ನಿರ್ವಹಿಸಿರುತ್ತಾರೆ. |

| | | | |
|---|---|---|---|
| **32** | 1 | **ಸಿಬ್ಬಂದಿ ವರ್ಗ**<br>ಸಂಘದಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ. | ಸಂಘದಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಇರುವುದಿಲ್ಲ. ಆದರೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ –3 |
| | 2 | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸುರುವ ಬಗ್ಗೆ. | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ. ಮತ್ತು ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವುದಿಲ್ಲ. |
| | 3 | ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ | ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ |

| | | | |
|---|---|---|---|
| | | ಲಭ್ಯವಿರುವ ಬಗ್ಗೆ. | ಲೆಕ್ಕಪರಿಶೋಧನಾ ವೇಳೆಯಲ್ಲಿ ಲಭ್ಯವಿರುವುದಿಲ್ಲ. |

4

ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು.

| ಕ್ರ ಸಂ | ಹೆಸರು | ಹುದ್ದೆ | ಜನ್ಮ ದಿನಾಂಕ | ವೇತನ ಶ್ರೇಣಿ (ಕ್ರೋಢೀಕೃತ ಸಂಭಳ ದಿ. 31–3–2021ಕ್ಕೆ ಇದ್ದಂತೆ) | ವಿದ್ಯಾರ್ಹತೆ | ಸೇವೆಗೆ ಸೇರಿದ ದಿನಾಂಕ |
|---|---|---|---|---|---|---|
| 1 | ಮಹೇಶ್. ಎಂ.ಎನ್ | ಕಾರ್ಯದರ್ಶಿ | 2–9–1986 | 24000–00 | ಪಿ.ಯು.ಸಿ | 22–10–2008 |
| 2 | ಶುಭಕರಿ. ಎ.ಎಂ | ಕ್ಲರ್ಕ್ | 24–6–1969 | 12500–00 | ಪಿ.ಯು.ಸಿ | 15–7–2008 |
| 3 | ಕೃಷ್ಣಮೂರ್ತಿ. ಕೆ | ಅಟೆಂಡರ್ | 1–6–1986 | 11000–00 | ಎಸ್.ಎಸ್. ಎಲ್.ಸಿ. (ಫೇಲ್) | 11–8–2010 |

ಆಡಳಿತ ಮಂಡಳಿ ಸಭೆಯ ದಿನಾಂಕ 27–10–2008 ಮತ್ತು ದಿನಾಂಕ 20–8–2010 ಹಾಗೂ ದಿನಾಂಕ 13–7–2008 ರಲ್ಲಿ ಮೇಲೆ ತಿಳಿಸಿರುವ ಸಿಬ್ಬಂದಿಗಳು ಸಂಘಕ್ಕೆ ಕೆಲಸಕ್ಕೆ ಸೇರಿದ ಬಗ್ಗೆ ಠರಾವು ಮಾಡಿದ್ದಾರೆ. ಶ್ರೀಮತಿ ವೆಂಕಟಲಕ್ಷ್ಮಮ್ಮ ನವರು ಸ್ವೀಪರ್ (ಕಛೇರಿ ಕ್ಲೀನಿಂಗ್ ಕೆಲಸ) ಆಗಿ ಸಂಘದಲ್ಲಿ ಕೆಲಸ ಮಾಡುತ್ತಿದ್ದು, ಇವರ ಕ್ರೂಡೀಕೃತ ಸಂಬಳ ದಿನಾಂಕ 31–3–2021ಕ್ಕೆ ರೂ. 3500–00 ಇರುತ್ತದೆ.

| | | | |
|---|---|---|---|
| | 5 | ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ: | ಸಿಬ್ಬಂದಿಯಿಂದ ಭದ್ರತೆ ಪಡೆದಿರುವುದಿಲ್ಲ. |
| | 6 | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು | ರೂ. 554000–00 |
| | 7 | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ | ಶೇ. 0.017 |
| | 8 | ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು. | ವರದಿ ಸಾಲಿನಲ್ಲಿ ಯಾವುದೇ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿರುವುದಿಲ್ಲ. |
| | 9 | ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು. | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಬೋನಸ್ ನೀಡಿರುವುದಿಲ್ಲ. |
| | 10 | ಶೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ? | ತಾಳೆ ಆಗುತ್ತದೆ. |
| | 11 | ಸಿಬ್ಬಂದಿಗಾಗಿ ಖರ್ಚುಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ? | ಹೌದು |

**ಸಿಬ್ಬಂದಿಗಳಿಗೆ ಮತ್ತು ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ**

| | |
|---|---|
| ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ಯಾವುದೇ ತರಬೇತಿ ನಡೆದಿರುವುದಿಲ್ಲ. |
| ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | –ಇಲ್ಲ– |
| ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | –ಇಲ್ಲ– |
| ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | –ಇಲ್ಲ– |

**ಸಂಘದ ಆರ್ಥಿಕ ಫಲಿತಾಂಶಗಳ ವಿವರಗಳು**

**ಹಣಕಾಸಿನ ವರದಿಯ ವಿಶ್ಲೇಷಣೆ**

| | **ಪ್ರಸಕ್ತ ಸಾಲು** | **ಹಿಂದಿನ ಸಾಲು** |
|---|---|---|
| ಸಂಘದ ಒಟ್ಟು ವಹಿವಾಟು | ರೂ. 47438458–93 | ರೂ. 186663210–93 |
| ಸಂಘದ ಒಟ್ಟು ದುಡಿಯುವ ಬಂಡವಾಳ | ರೂ. 3176885966–61 | ರೂ. 3179411707–61 |
| ಸಂಘದ ಲಾಭ ಅಥವಾ ನಷ್ಟ | ನಷ್ಟ ರೂ. 1651474–00 | ನಷ್ಟ ರೂ. 1243671.08 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | – | – |

**(33) ತಲಾ ಷೇರಿನ ಗಳಿಕೆ**

| | **ಪ್ರಸಕ್ತ ಸಾಲು** | **ಹಿಂದಿನ ಸಾಲು** |
|---|---|---|
| ನಿವ್ವಳ ಲಾಭ | ಇಲ್ಲ | ಇಲ್ಲ |
| ಒಟ್ಟು ಷೇರುಗಳು (ಸದಸ್ಯರ ಮತ್ತು ಸಹ ಸದಸ್ಯರು) | ರೂ. 9573000–00 | ರೂ. 9536000–00 |
| ತಲಾ ಷೇರಿನ ಗಳಿಕೆ | – | – |

**34. 1) <u>ವರ್ಷಾಂತ್ಯಕ್ಕೆ ಸಂಘಕ್ಕೆ ಸ್ವಾಧೀನ ಆಗಿರುವ ಜಮೀನು</u>**

ದಿನಾಂಕ: 31–03–2021 ಕ್ಕೆ ಸಂಘಕ್ಕೆ ಭೂಪರಿವರ್ತಿತ ಜಮೀನು ನೋಂದಣಿಯಾಗಿ ಸಂಘಕ್ಕೆ ಸ್ವಾಧೀನವಾಗಿರುವ ಜಮೀನಿನ ವಿವರಗಳು, ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ಸ್ವಾಧೀನತೆ ವಿಧಾನ | ಸರ್ವೆ ನಂ. | ಗ್ರಾಮ | ಕ್ಷೇತ್ರ ವಿಸ್ತೀರ್ಣ ಎ.ಗು | ಬಡಾವಣೆ (ಪ್ರಾಜೆಕ್ಟ್ ವಿವರ) |
|---|---|---|---|---|---|
| 1 | ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿಮಾಡಿಸಲಾಗಿದೆ. | ವಿವಿಧ ಸರ್ವೆ ನಂಬರ್‌ಗಳು | ಅನುಬಂಧ–13 ರಲ್ಲಿ ತಿಳಿಸಿರುವಂತೆ | ಒಟ್ಟು 46 ಎಕರೆ 14 ಗುಂಟೆ | ಸಂದೇಶ್ ನಗರ –1 ನೇ ಹಂತದ ಬಡಾವಣೆ ನೆಲಮಂಗಲ |
| 2 | ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿಮಾಡಿಸಲಾಗಿದೆ. | ವಿವಿಧ ಸರ್ವೆ ನಂಬರ್‌ಗಳು | ಅನುಬಂಧ–14 ರಲ್ಲಿ ತಿಳಿಸಿರುವಂತೆ | ಒಟ್ಟು 25 ಎಕರೆ 31.5 ಗುಂಟೆ | ಸಂದೇಶ್ ನಗರ –2 ನೇ ಹಂತದ ಬಡಾವಣೆ ನೆಲಮಂಗಲ |
| 3 | ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿಮಾಡಿಸಲಾಗಿದೆ. | ವಿವಿಧ ಸರ್ವೆ ನಂಬರ್‌ಗಳು | ಅನುಬಂಧ–15 ರಲ್ಲಿ ತಿಳಿಸಿರುವಂತೆ | ಒಟ್ಟು 13 ಎಕರೆ 0.38 ಗುಂಟೆ (ಖರಾಬು ಸೇರಿ) | ಸಂದೇಶ್ ಭಾಗ್ ಬಡಾವಣೆ ವರ್ತೂರು |
| 4 | ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿಮಾಡಿಸಲಾಗಿದೆ. | ವಿವಿಧ ಸರ್ವೆ ನಂಬರ್‌ಗಳು | ಅನುಬಂಧ–16 ರಲ್ಲಿ ತಿಳಿಸಿರುವಂತೆ | ಒಟ್ಟು 13 ಎಕರೆ 0.05.6 ಗುಂಟೆ | ಸಂದೇಶ್ ನಗರ –3 ನೇ ಹಂತದ ಬಡಾವಣೆ ನೆಲಮಂಗಲ |
| 5 | ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಸಲಾಗಿದೆ | ವಿವಿಧ ಸರ್ವೆ ನಂಬರ್‌ಗಳು | ಅನುಬಂಧ–17 ರಲ್ಲಿ ತಿಳಿಸಿಸುವಂತೆ | ಒಟ್ಟು 67 ಎಕರೆ 25.12 ಗುಂಟೆ | ಸಂದೇಶ್ ಲೇಕ್ ಸೈಡ್– 1, 2, 3 ಮತ್ತು 4ನೇಹಂತದ ಬಡಾವಣೆ ಬೆಟ್ಟನಹಳ್ಳಿ ಗ್ರಾಮ ದೇವನಹಳ್ಳಿ ತಾಲ್ಲೂಕು |
| | ಮೇಲೆ ವಿವರಿಸಿರುವ ರೀತ್ಯಾ 46 ಎಕರೆ 14 ಗುಂಟೆ, (ಖರಾಬು 0.01 ಗುಂಟೆ) + 25 ಎಕರೆ 31.05 ಗುಂಟೆ, + 13 ಎಕರೆ 38 ಗುಂಟೆ + (0.12 ಗುಂಟೆ ಖರಾಬು ಜಮೀನು) ಭೂಪರಿವರ್ತಿತ ಜಮೀನು ಸಂಘಕ್ಕೆ ದಿನಾಂಕ 31–3–2021 ರೊಳಗೆ ನೊಂದಣಿಯಾಗಿರುತ್ತದೆ. ಸಂಘಕ್ಕೆ ಭೂಪರಿವರ್ತಿತ ಜಮೀನು ಅನುಬಂಧಗಳಲ್ಲಿ ತೋರಿಸಿರುವ ದಿನಾಂಕಗಳಂದು ನೊಂದಣಿಯಾಗಿರುತ್ತದೆ. ಸಂದೇಶ್ ನಗರ–3ನೇ ಹಂತಕ್ಕೆ ಸಂಬಂದ ಪಟ್ಟಂತೆ 13 ಎಕರೆ 0.05.6 ಗುಂಟೆ ಭೂಪರಿವರ್ತಿತ ಜಮೀನು ಸಂಘಕ್ಕೆ ನೋಂದಣಿ ಆಗಿರುತ್ತದೆ. ಸಂದೇಶ್ ನಗರ–1 ಮತ್ತು ಸಂದೇಶ್ ನಗರ–2 ಹಾಗೂ ಸಂದೇಶ್ ಭಾಗ್ ಮತ್ತು ಸಂದೇಶ್ ನಗರ–3ನೇ ಹಂತದ ಬಡಾವಣೆಗಳ ಭೂಪರಿವರ್ತಿತ ಜಮೀನು ನೊಂದಣಿ ಆಗಿರುವ ಬಗ್ಗೆ **ಅನುಬಂಧ –13, 14, 15 ಮತ್ತು 16** ನ್ನು ವರದಿಯೊಂದಿಗೆ ಲಗತ್ತಿಸಿದೆ. ಸಂದೇಶ್ ಲೇಕ್ ಸೈಡ್– 1, 2 ಮತ್ತು 3ನೇ ಹಂತದ | | | | |

| | |
|---|---|
| | ಬಡಾವಣೆಗಳ 67 ಎಕರೆ 25.12 ಗುಂಟೆ ಭೂಪರಿವರ್ತಿತ ಜಮೀನು ನೋಂದಣಿ ಆಗಿರುವ ಬಗ್ಗೆ **ಅನುಬಂಧ–17** ನ್ನು ವರದಿಯೊಂದಿಗೆ ಲಗತ್ತಿಸಿದೆ. |

2) ಈ ವ್ಯವಹಾರವು ಸಂಬಂಧಿಸಿದ ನಿಯಮಾನುಸಾರ ಅಗಿದೆಯೇ?ಈ ವ್ಯವಹಾರದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ವಿವರಿಸುವುದು.

ಸಂಘ ಮತ್ತು ಭೂ ಅಭಿವೃದ್ಧಿದಾರರ ಒಡಂಬಡಿಕೆಯನ್ವಯ ನಡೆದಿರುತ್ತದೆ.

3) ಈ ಜಮೀನಿನಲ್ಲಿಸಂಬಂಧಿಸಿದ ಪ್ರಾಧಿಕಾರದಿಂದ ವಸತಿ ವಿನ್ಯಾಸದ ಅಂಗೀಕರವಾಗಿದೆಯೇ?

ಸಂದೇಶ್ ನಗರ–1 ಮತ್ತು ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ನಕ್ಷೆ ಅನುಮೋದನೆಯಾದ ಬಗ್ಗೆ ಹಾಗೂ ಸಂದೇಶ್ ಭಾಗ್ ಬಡಾವಣೆ (ವರ್ತೂರು ಪ್ರಾಜೆಕ್ಟ್) ಗೆ ಕರಡು ನಕ್ಷೆ ಅನುಮೋದನೆಯಾಗಿರುವ ಬಗ್ಗೆ, 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 38 ಮತ್ತು 39 ರಲ್ಲಿ ವಿವರವಾಗಿ ಬರೆದಿರುವುದು, ವರದಿ ಸಾಲಿಗೂ ವ್ಯತ್ಯಾಸವಿಲ್ಲದೇ ಮುಂದುವರಿಯುತ್ತದೆ. ಆದುದರಿಂದ ಪುನಃ ಈ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಿಲ್ಲ. ಇದರ ಬಗ್ಗೆ ವಿವರಣಾ ಪಟ್ಟಿಯನ್ನು ವರದಿಗೆ ಲಗತ್ತಿಸಿದೆ.

ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಿರುವ ಮತ್ತು ಕರಡು ನಕ್ಷೆಯನ್ನು ಅನುಮೋದಿಸಿರುವ ನೆಲಮಂಗಲ ಯೋಜನಾ ಪ್ರಾಧಿಕಾರ ಮತ್ತು ಆನೇಕಲ್ ಯೋಜನಾ ಪ್ರಾಧಿಕಾರ ಆನೇಕಲ್ ರವರು ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಷರತ್ತುಗಳ ಅನ್ವಯ, ಸಂಘದ ಪದಾಧಿಕಾರಿಗಳು; ಕ್ರಮವಿಡುವುದು ಅತ್ಯಾಗತ್ಯ.

4) ವಸತಿ ಭೂ ದಾಖಲೆಗಳಲ್ಲಿ ನಿವೇಶನಗಳ ದಾಖಲೆ ಅಗಿ ನಿವೇಶನವಾರು ಖಾತೆಗಳು ನಿರ್ಮಾಣವಾಗಿದೆಯಾ?

ವಸತಿ ಭೂ ದಾಖಲೆಗಳಲ್ಲಿ ನಿವೇಶನಗಳ ದಾಖಲೆ ಆಗಿ ನಿವೇಶನವಾರು ಖಾತೆಗಳ ನಿರ್ಮಾಣವಾಗುತ್ತಿದೆ, ಈ ಕಾರ್ಯವು ಪ್ರಗತಿಯಲ್ಲಿದೆ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ಮೌಖಿಕವಾಗಿ ತಿಳಿಸಿರುತ್ತಾರೆ.

5) ವಸತಿ ವಿನ್ಯಾಸದ ಅಂಗೀಕಾರವಾಗಿದ್ದಲ್ಲಿ ಕೆಳಗಿನ ವಿವರಗಳು

ಈ ವರದಿಯ ಕ್ರಮ ಸಂಖ್ಯೆ 34 (3) ರಲ್ಲಿ ತಿಳಿಸಿರುವಂತೆ 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 38 ಮತ್ತು 39 ರಲ್ಲಿ ವಿವರಿಸಿರುವಂತೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆಗಿದೆ. ಕ್ರಮ ಸಂಖ್ಯೆ 34 (3) ರಲ್ಲಿ ವಿವರಿಸಿರುವಂತೆ ವಸತಿ ವಿನ್ಯಾಸದ ಬಗ್ಗೆ ಈ ವರದಿಯೊಂದಿಗೆ ಪಟ್ಟಿ ಲಗತ್ತಿಸಿರುವುದರಿಂದ ಪುನಃ ಇಲ್ಲಿ ವಸತಿ ವಿನ್ಯಾಸದ ಬಗ್ಗೆ ವಿವರಣೆ ನೀಡಿರುವುದಿಲ್ಲ.

6) ಸಾರ್ವಜನಿಕ ಸೌಲಭ್ಯ ಖುಲ್ಲಾ ಜಾಗ ಹಾಗೂ ಉದ್ಯಾನವನಕ್ಕೆ ಮೀಸಲಿರಿಸಿದ ನಿವೇಶನಗಳು ಉದ್ದೇಶಿತ ಕಾರ್ಯಕ್ಕೆ ಉಪಯೋಗವಾಗದೇ ಬೇರೆ ಉದ್ದೇಶಕ್ಕೆ ಉಪಯೋಗಿಸಲಾಗಿದೆಯೇ? ಅತಿಕ್ರಮಣವಾಗಿದೆಯೇ?

2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 38 ರಲ್ಲಿ ವಿವರಿಸಿರುವಂತೆ, ಖುಲ್ಲಾ ಜಾಗ, ಉದ್ಯಾನವನ, ನಾಗರೀಕ ಸೌಲಭ್ಯದ ಪ್ರದೇಶ ಮತ್ತು ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶಗಳನ್ನು ನೆಲಮಂಗಲ ಯೋಜನಾ

ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ದಿನಾಂಕ 11–10–2013 ರಂದು ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ರವರು ಪರಿತ್ಯಾಜನ ಪತ್ರದ ಮುಖಾಂತರ ಉಪನೊಂದಣಾಧಿಕಾರಿ, ನೆಲಮಂಗಲ ರವರ ಕಛೇರಿಯಲ್ಲಿ ನೋಂದಣಿ ಮಾಡಿಕೊಟ್ಟಿರುತ್ತಾರೆ.

ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, ಸಾರ್ವಜನಿಕ ಸೌಲಭ್ಯ ಖುಲ್ಲಾ ಜಾಗ ಹಾಗೂ ಉದ್ಯಾನವನಕ್ಕೆ ಮೀಸಲಿರಿಸಿದ ನಿವೇಶನಗಳನ್ನು ಮತ್ತು ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶಗಳನ್ನು ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖಾಂತರ ನೋಂದಣಿ ಮಾಡಿಕೊಟ್ಟಿರುವುದಿಲ್ಲ.

ಸಂದೇಶ್ ಭಾಗ್ ಬಡಾವಣೆಗೆ ಸಂಬಂಧಿಸಿದಂತೆ, (12 ಎಕರೆ 02 ಗುಂಟೆ ಕರಾಬು 24 ಗುಂಟೆಗೆ ಸಂಬಂಧಿಸಿದಂತೆ) ಸದಸ್ಯ ಕಾರ್ಯದರ್ಶಿ ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ರವರಿಗೆ ದಿನಾಂಕ 18–9–2018 ರಂದು ಪರಿತ್ಯಾಜನಾ ಪತ್ರವನ್ನು ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರು ಮಾಡಿಕೊಟ್ಟಿರುತ್ತಾರೆ. ಹಾಗೂ ದಿನಾಂಕ 18–9–2018 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಗಳೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಆನೇಕಲ್ ರವರಿಗೆ ಪರಿತ್ಯಾಜನಾ ಪತ್ರವನ್ನು ಸಂಘದ ಅಧ್ಯಕ್ಷರು ಮಾಡಿಕೊಟ್ಟಿರುತ್ತಾರೆ.

**7) ವರ್ಷಾಂತ್ಯದವರೆಗೆ ಈ ಜಮೀನಿನಲ್ಲಿ ವಿನಿಯೋಗಿಸಿ ಬಂಡವಾಳಿಕರಿಸಿದ ಮೊತ್ತ :**

| | | |
|---|---|---|
| ಜಮೀನು ಬೆಲೆ ರೂ. | ಸಂಘವು ನೇರವಾಗಿ ಜಮೀನು ಖರೀದಿಸುವ ವ್ಯವಹಾರ ನಡೆಸದೇ ಇರುವುದರಿಂದ ಅನ್ವಯಿಸುವುದಿಲ್ಲ. | ಸಂಘದ ಡೆವಲಪರ್ಸ್ ರವರಿಂದ ಶುದ್ಧ ನಿವೇಶನಗಳನ್ನು ಕ್ರಯಮಾಡುವುದರಿಂದ ಪೂರ್ತಿ ಕಾಮಗಾರಿ ಆಧಾರದ ಮೇಲೆ ಬೆಲೆ ನಿರ್ಧರಿಸಿ ಖರೀದಿಸುವುದರಿಂದ ವಿವರಗಳು ಲಭ್ಯವಿಲ್ಲ. |
| ಖರೀದಿ ವೆಚ್ಚ | | |
| ಪರಿವರ್ತನ ಶುಲ್ಕ | | |
| ಬೆಟರ್ ಮೆಂಟ್ ಲೇವಿ | | |
| ಇತರೆ ವೆಚ್ಚಗಳು (ವಿವರಗಳೊಂದಿಗೆ) | | |
| ಒಟ್ಟು | | |

ಈ ಕೆಳಕಂಡ ಬಡಾವಣೆಗಳಡಿಯಲ್ಲಿ ಈ ಕೆಳಕಂಡಲ್ಲಿ, ವಿವರಿಸಿರುವಂತೆ ಬಂಡವಾಳೀಕರಿಸಿ ದಿನಾಂಕ 31–3–2021ಕ್ಕೆ ಆಸ್ತಿಯ ಕಡೆ ತೋರಿಸಿದೆ.

| **ಕ್ರ. ಸಂ** | **ಬಡಾವಣೆಯ ಹೆಸರು** | **ದಿನಾಂಕ 31–3–2021ರ ವರೆವಿಗೆ ಒಟ್ಟು ಮೊಬಲಗು** |
|---|---|---|
| 1 | ಸಂದೇಶ್ ನಗರ–1ನೇ ಹಂತದ ಬಡಾವಣೆಗೆ<br>ದಿನಾಂಕ 31–3–2021ರ ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5 (1) (ಎ) ಮತ್ತು 5 (1) (ಬಿ) ಯಿಂದ (ಎಲ್) ವರೆವಿಗೆ ವಿವರಿಸಿರುವಂತೆ ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಒಟ್ಟು ಮೊಬಲಗು | ರೂ. 75,82,69,165–00 |

| | | |
|---|---|---|
| 2 | ಸಂದೇಶ್ ನಗರ–2ನೇ ಹಂತ ಬಡಾವಣೆಗೆ<br>ದಿನಾಂಕ 31–3–2021ರ ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5 (2) ಮತ್ತು (5) (2) (ಎ) ಯಿಂದ (ಇ) ವರೆವಿಗೆ ವಿವರಿಸಿರುವಂತೆ ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಒಟ್ಟು ಮೊಬಲಗು | ರೂ. 43,93,79,937–00 |
| 3 | ಸಂದೇಶ್ ನಗರ–3ನೇ ಹಂತದ ಬಡಾವಣೆಗೆ:–<br>ದಿನಾಂಕ 31–3–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(5) (ಎ) (ಬಿ) (ಸಿ) ವರೆವಿಗೆ ವಿವರಿಸಿರುವ ರೀತ್ಯಾ ಸಂದೇಶ್ ನಗರ–3ನೇ ಹಂತದ ಬಡಾವಣೆಗೆ ಒಟ್ಟು ಮೊಬಲಗು<br>[ರೂ. 369520550–00 (+) ರೂ. 484000–00] | ರೂ. 37,00,04,550–00 |
| 4 | ಸಂದೇಶ್ ಭಾಗ್ (ವರ್ತೂರು ಪ್ರಾಜೆಕ್ಟ್‌ಗೆ) ಬಡಾವಣೆಗೆ<br>ದಿನಾಂಕ 31–3–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(3) (ಎ) ಯಿಂದ (ಹೆಚ್) ವರೆವಿಗೆ ವಿವರಿಸಿರುವಂತೆ, ಸಂದೇಶ್ ಭಾಗ್ ಬಡಾವಣೆಗೆ ಒಟ್ಟು ಮೊಬಲಗು | ರೂ. 14,10,87,647–00 |
| 5 | ದಿನಾಂಕ 31–3–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(4) (ಎ) ಯಿಂದ (ಇ) ವರೆವಿಗೆ ವಿವರಿಸಿರುವಂತೆ:–<br>ಸಂದೇಶ್ ಲೇಕ್ ಸೈಡ್–1ನೇ ಬಡಾವಣೆಗೆ<br>ಅಮೋಸ್ ಪ್ರಾಪರ್ಟಿಸ್ ಡೆವಲಪರ್ಸ್ ರವರಿಗೆ ಮುಂಗಡ | ರೂ. 41,95,00,000–00 |
| 6 | ಸಂದೇಶ್ ಲೇಕ್ ಸೈಡ್–2ನೇ ಬಡಾವಣೆಗೆ<br>ಅಮೋಸ್ ಪ್ರಾಪರ್ಟಿಸ್ ಡೆವಲಪರ್ಸ್ ರವರಿಗೆ ಮುಂಗಡ | ರೂ. 46,30,00,000–00 |
| 7 | ಸಂದೇಶ್ ಲೇಕ್ ಸೈಡ್–3ನೇ ಬಡಾವಣೆಗೆ ಒಟ್ಟು ಮೊಬಲಗು [ರೂ. 47,10,00,000–00 (+) ರೂ. 72,65,565–00]<br>ಅಮೋಸ್ ಪ್ರಾಪರ್ಟಿಸ್ ಡೆವಲಪರ್ಸ್ ರವರಿಗೆ ಮುಂಗಡ | ರೂ. 47,82,65,565–00 |
| 8 | ಸಂದೇಶ್ ಲೇಕ್ ಸೈಡ್–4ನೇ ಬಡಾವಣೆಗೆ<br>ಅಮೋಸ್ ಪ್ರಾಪರ್ಟಿಸ್ ಡೆವಲಪರ್ಸ್ ರವರಿಗೆ ಮುಂಗಡ | ರೂ. 8,85,00,000–00 |
| | **ಒಟ್ಟು** | **ರೂ. 315,80,06,864–00** |

ಲೆಕ್ಕಪರಿಶೋಧನಾ ವರದಿಯ ಕ್ರಮ ಸಂಖ್ಯೆ 34 (7) (1) ರಿಂದ (8)ರ ವರೆವಿಗೆ ಮೇಲೆವಿವರಿಸಿರುವಂತೆ ಬಡಾವಣೆವಾರು ಬಡಾವಣೆಗಳ ಬಾಬ್ತು ಡೆವಲಪರ್ಸ್ ರವರುಗಳಿಗೆ ಮುಂಗಡ ಸಂಘದಿಂದ ನೀಡಿರುವುದು, ಸಂಘದಿಂದ ಬಡಾವಣೆಗೆ ಖರ್ಚುಮಾಡಿರುವುದು, ಮತ್ತು ಬಡಾವಣೆಗಳ ಬಾಬ್ತು ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ ರವರ ಲಿಖಿತ ಪತ್ರದ ಹೇಳಿಕೆಯ ಮೇಲೆ, ಪತ್ರದಲ್ಲಿ ತಿಳಿಸಿದವರಿಗೆ ಸಂದೇಶ್ ನಗರ–1, 2 ಮತ್ತು 3ನೇ ಹಂತದ ಬಡಾವಣೆಗಳಿಗೆ ಸಂಘದಿಂದ ಮೊಬಲಗು ನೀಡಿ, ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಲೆಕ್ಕಕ್ಕೆ

ಹಾಕಿರುವುದು. ಮತ್ತು ಇತರೆ ಖರ್ಚು ಬಡಾವಣೆವಾರು ದಿನಾಂಕ 31–3–2021 ಕ್ಕೆ ಒಟ್ಟು ರೂ. 315,80,06,864–00 ಗಳು.

**8)** ಈ ಎಲ್ಲಾ ಬಂಡವಾಳೀಕರಿಸಿದ ಮೊತ್ತಗಳು ನಿಯಮಾನುಸಾರ ಹಾಗೂ ದಾಖಲಾತಿ ಗಳಿಗೆ ಅನುಗುಣವಾಗಿಯೇ ? (ನಕಾರತ್ಮಕ ಉತ್ತರವಿದ್ದಲ್ಲಿ ವಿವರಗಳನ್ನು ನೀಡುವುದು.

ಹೌದು (ಆಯಾಯ ಬಡಾವಣೆಗಳಡಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟು)

**9) ನಿವೇಶನಗಳ ಅಭಿವೃದ್ದಿ ಕಾರ್ಯ :**

1) ಜಮೀನು ಸ್ವಾಧೀನಕ್ಕೆ ಬರುವ ಪೂರ್ವದಲ್ಲಿಯೇ ಅಭಿವೃದ್ದಿ ಕಾರ್ಯ ಪ್ರಾರಂಭಿಸಲಾಗಿದೆಯೇ? ಈ ಬಗ್ಗೆ ಗುತ್ತಿಗೆದಾರರನ್ನು ನೇಮಿಸಿ ಮುಂಗಡ ಪಾವತಿ ಮಾಡಲಾಗಿದೆಯೇ? ಇದನ್ನು ಅಕ್ಷೇಪಿಸಿ ವಿವರಿಸುವುದು.

ಜಮೀನು ಸ್ವಾಧೀನಕ್ಕೆ ಬರುವ ಪೂರ್ವದಲ್ಲಿಯೇ ಅಭಿವೃದ್ದಿ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲವೆಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಅದರೆ ಬಡಾವಣೆ ರಚಿಸಿಕೊಡಲು ಗುತ್ತಿಗೆದಾರರನ್ನು ನೇಮಿಸಿಕೊಂಡು ಜಮೀನನ್ನು ಖರೀದಿಸಲು ಹಾಗೂ ಭೂ ಪರಿವರ್ತನೆ ಮಾಡಿಸಲು ಸಂಘಕ್ಕೆ ಜಮೀನನ್ನು ನೋಂದಣಿ ಮಾಡಿಸಲು ಇತರೇ ಕಾರ್ಯಗಳಿಗೆ ಸಂಘದಿಂದ ಮುಂಗಡವನ್ನು ಡೆವಲಪರ್ಸ್ (ಗುತ್ತಿಗೆದಾರರು) ರವರುಗಳಿಗೆ ಪಾವತಿಸಲಾಗಿದೆ ಎಂದು ಸಂಘದ ಅಧ್ಯಕ್ಷರು ಲೆಕ್ಕಪರಿಶೋಧನೆ ವೇಳೆಯಲ್ಲಿ ತಿಳಿಸಿರುತ್ತಾರೆ.

2) ಜಮೀನು ಸ್ವಾಧೀನಕ್ಕೆ ಬಂದ ನಂತರ ಅಭಿವೃದ್ದಿ ಕಾಮಗಾರಿಯ ಅಂದಾಜು ವೆಚ್ಚ ತಯಾರಿಸಿ ಸಂಬಂಧಿಸಿದ ಪ್ರಾಧಿಕಾರದಿಂದ ಮಂಜೂರಿ ಪಡೆಯಲಾಗಿದೆಯೇ?

ಸಂಘವು ಡೆವಲಪರ್ಸ್ ರವರೊಂದಿಗೆ (ಗುತ್ತಿಗೆದಾರರೊಂದಿಗೆ) ಬಡಾವಣೆ ಮಾಡಲು ನೋಂದಣಿ ರಹಿತ ಎಂ.ಒ.ಯು / ಕರಾರು ಮಾಡಿಕೊಂಡು, ಮೊಬಲಗನ್ನು ಡೆವಲಪರ್ಸ್ ರವರುಗಳಿಗೆ ಸ್ಟೇಜ್ ವೈಸ್ ಪಾವತಿಸಲು ಕರಾರು / M.O.U ಮಾಡಿಕೊಂಡಿರುವುದರಿಂದ, ಜಮೀನು ಸ್ವಾಧೀನಕ್ಕೆ ಬಂದ ನಂತರ ಅಭಿವೃದ್ದಿ ವೆಚ್ಚ ತಯಾರಿಸಿ ಯಾವುದೇ ಪ್ರಾಧಿಕಾರದಿಂದ ಮಂಜೂರು ಪಡೆಯಲಾಗಿಲ್ಲ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ.

3) ಅಂದಾಜು ವೆಚ್ಚದ ವಿವರ :

ಸಂಘವು 8 ಬಡಾವಣೆಗಳನ್ನು ನಿರ್ಮಾಣ ಮಾಡಲು ಗುತ್ತಿಗೆದಾರರಿಂದ ಕರಾರು / ಎಂ.ಓ.ಯು. ಮಾಡಿಕೊಂಡಾಗ ಸ್ಟೇಜ್ ವೈಸ್ ದರವನ್ನು ಒಂದೊಂದು ಬಡಾವಣೆಗೂ ನಿಗದಿಪಡಿಸಿರುತ್ತಾರೆ.

4) ಅಭಿವೃದ್ದಿ ಕಾಮಗಾರಿ ಗುತ್ತಿಗೆದಾರರಿಗೆ ವಹಿಸಿದಲ್ಲಿ ನಿಯಮಗಳನ್ವಯ ಟೆಂಡರ್ ಕರೆದು ಸ್ವರ್ಧಾತ್ಮಕ ನಿಯಮಗಳನ್ವಯ ಟೆಂಡರ್ ಕರೆದು ಸ್ವರ್ಧಾತ್ಮಕ ಧರಗಳನ್ನು ಕ್ರಮವಿಡಲಾಗಿದೆಯೇ? (ಕೋಟೇಷನ್)

ಸಂದೇಶ ನಗರ – 1 ಮತ್ತು ಸಂದೇಶ್ ನಗರ – 2ಕ್ಕೆ ಸಂದೇಶ್ ಬಾಗ್ ಬಡಾವಣೆಗೆ ಕೊಟೇಷನ್‌ನ್ನನ್ನು ಎಂ.ಒ.ಯು. ಮಾಡುವಾಗಲೇ ಗುತ್ತಿಗೆದಾರರಿಂದ ದರ ಪಟ್ಟಿ ಪಡೆಯಲಾಗಿದೆಯೆಂದು ತಿಳಿಸಿರುತ್ತಾರೆ. ನೆಲಮಂಗಲ,

ದೇವನಹಳ್ಳಿ ಅನೇಕಲ್, ವರ್ತೂರು, ರಾಮನಗರ ತಾಲ್ಲೂಕುಗಳಲ್ಲಿ ಭೂ ಪರಿವರ್ತಿತ ಜಮೀನಿನ ಬಗ್ಗೆ ಮತ್ತು ಬಡಾವಣೆ ಮಾಡುವ ಗುತ್ತಿಗೆದಾರರು ಬೇಕೆಂದು ಶ್ರೀ ಹೆಚ್.ಕೆ. ಗೋಪಾಲಕೃಷ್ಣ, ಎಕ್ಸಿಕ್ಯೂಟೀವ್ ಡೈರೆಕ್ಟರ್ ರವರು ನ್ಯೂಸ್ ಪೇಪರ್ ನಲ್ಲಿ ಪ್ರಕಟಿಸಿದ ಬಗ್ಗೆ ದಾಖಲಾತಿ ಇರುತ್ತದೆ. ಯಾವ ನ್ಯೂಸ್ ಪೇಪರ್ ಎಂದು ಹೆಸರು ಇರುವುದಿಲ್ಲ. ಹಾಗೂ ದಿನಾಂಕವು ಇರುವುದಿಲ್ಲ. ಎಂದು ಹಿಂದಿನ ಸಾಲಿನ ವರದಿಯಲ್ಲಿ ನಮೂದಿಸಿದೆ ಹಾಗೂ 2011–12ನೇ ಸಾಲಿನಲ್ಲಿ ಸಂದೇಶ್ ಲೇಕ್ ಸೈಡ್ – 2 ಮತ್ತು 3ನೇ ಹಂತದ ಬಡಾವಣೆಗೆ ಮತ್ತು 2013–14ನೇ ಸಾಲಿನಲ್ಲಿ ಸಂದೇಶ್ ನಗರ–3ನೇ ಹಂತದ

ಬಡಾವಣೆಗೆ ಮತ್ತು ಸಂದೇಶ್ ಲೇಕ್ ಸೈಡ್–4ನೇ ಹಂತದ ಬಡಾವಣೆಗಳಿಗೆ ಟೆಂಡರ್ ಕರೆದಿರುವುದಕ್ಕೆ; ಕೋಟೇಷನ್ ಪಡೆದಿರುವುದಕ್ಕೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ದಾಖಲಾತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿಯ ಆದೇಶದನ್ವಯ ಭೂ ಅಭಿವೃದ್ಧಿದಾರರನ್ನು ನಿಯೋಜಿಸಲಾಗಿರುತ್ತದೆ.

5) ಕಾಮಗಾರಿಗೆ ಮಾಡಿಕೊಂಡಿರುವ ಒಪಂದವು ಪರಿಪೂರ್ಣವಾಗಿದೆಯೇ? ಒಪ್ಪಂದವು ನೋಂದಾಯಿಸಲ್ಪಟ್ಟಿದೆಯೇ? ಒಪ್ಪಂದದಲ್ಲಿ ಷರತ್ತುಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆಯೇ?

ಒಪ್ಪಂದವು ಪರಿಪೂರ್ಣವಾಗಿರುವ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆದ ಬಗ್ಗೆ ದಾಖಲಾತಿ ಇರುವುದಿಲ್ಲ. ಒಪ್ಪಂದವು ನೋಂದಾಯಿಸಲ್ಪಟ್ಟಿರುವುದಿಲ್ಲ. ಎಂ.ಒ.ಯು / ಒಪ್ಪಂದದಲ್ಲಿ ಷರತ್ತುಗಳನ್ನು ಸ್ಪಷ್ಟವಾಗಿ ನಮೂದಿಸಿರುತ್ತಾರೆ.

6) ಕಾಮಗಾರಿ ಗುತ್ತಿಗೆದಾರರಿಗೆ ಪಾವತಿಸಿರುವ ಮೊತ್ತ ಅವರಿಗೆ ವಹಿಸಿರುವ ಕಾಮಗಾರಿಯ ಪ್ರಗತಿಗೆ ಅನುಗುಣವಾಗಿದೆಯೇ?

ಇಲ್ಲ

7) ಗುತ್ತಿಗೆದಾರರ ಕೆಲಸದ ಸಮರ್ಪಕತೆ ಬಗ್ಗೆ ದೃಢೀಕರಿಸಿಕೊಳ್ಳಲು ಸೂಕ್ತ ಕ್ರಮ ಅನುಸರಿಸಲಾಗಿದೆಯೇ? ಹಂತಹಂತವಾಗಿ ಪ್ರಗತಿ ಪರಿಶೀಲನೆಗೆ ಅವಶ್ಯವಿರುವ ದಾಖಲೆಗಳನ್ನು ಅವರಿಂದ ಪಡೆದು ಪರಿಶೀಲಿಸಲಾಗಿದೆಯೇ?

ಇಲ್ಲ

8) ಗುತ್ತಿಗೆದಾರರು ನಿರ್ವಹಿಸಲು ಕಾಮಗಾರಿಯ ಬಿಲ್ಲುಗಳನ್ನು ಪಾವತಿಸಿದ ಮೊತ್ತದಿಂದ ವರಮಾನ ತೆರಿಗೆ ಕಟಾಯಿಸಿ ಸರ್ಕಾರಕ್ಕೆ ಪಾವತಿಸಲಾಗಿದೆಯೇ?

ಬಡಾವಣೆಗಳಿಗೆ ಬೇಕಾದ ಜಮೀನು ಪಡೆಯಲು ಇನ್ನಿತರ ಕೆಲಸಕ್ಕೆ, ಕಾಮಗಾರಿಯ ಕೆಲಸಕ್ಕೆ ಗುತ್ತಿಗೆದಾರರಿಗೆ ಮುಂಗಡ ನೀಡುತ್ತಿದ್ದು, ಕಾಮಗಾರಿಯ ಬಿಲ್ಲುಗಳನ್ನು ಗುತ್ತಿಗೆದಾರರಿಂದ ಪಡೆದು ಮೊತ್ತವನ್ನು ಸಂಘದಿಂದ ಪಾವತಿಸಿರುವುದಿಲ್ಲ.

2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ ಜಮಾದ ಕ್ರಮ ಸಂಖ್ಯೆ 5 (ಎ) ಯಿಂದ (ಡಿ) ವರೆವಿಗೆ ವಿವರಿಸಿರುವಂತೆ ರೂ. 183078–00 ಗಳನ್ನು ಟಿಡಿಎಸ್ ಬಾಬ್ತು ಹಿಡಿದಿದ್ದು, ಈ ಮೊಬಲಗಿನ ಬಾಬ್ತು 2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ ಖರ್ಚಿನ ಕ್ರಮ ಸಂಖ್ಯೆ 3 (1) ರಿಂದ (10)ರ ವರೆವಿಗೆ ವಿವರಿಸಿರುವಂತೆ ರೂ. 173298–00 ಗಳನ್ನು ಆದಾಯ ತೆರಿಗೆ ಇಲಾಖೆಗೆ ಟಿ.ಡಿ.ಎಸ್. ಬಾಬ್ತು ಪಾವತಿಸಿದ್ದು,

ಉಳಿಕೆ ರೂ. 9780–00 ಟಿ.ಡಿ.ಎಸ್. ಅನ್ನು ದಿನಾಂಕ 7–6–2021 ರಂದು ಮತ್ತು ದಿನಾಂಕ ದಿನಾಂಕ 9–6–2021 ರಂದು ಆದಾಯ ತೆರಿಗೆ ಇಲಾಖೆಗೆ ಪಾವತಿಸಿದ್ದಾರೆ.

ಡೆವಲಪರ್ಸ್ ರವರುಗಳಿಗೆ, ಹಿಂದಿನ ಸಾಲುಗಳಲ್ಲಿ ನೀಡಿರುವ ಮೊಬಲಗುಗಳ ಬಾಬ್ತು ಕೆಲವು ಮೊಬಲಗುಗಳಿಗೆ ಟಿಡಿಎಸ್ ಹಿಡಿದಿದ್ದು, ಇನ್ನು ಕೆಲವು ಮೊಬಲಗುಗಳಿಗೆ ಟಿಡಿಎಸ್ ಹಿಡಿದಿಲ್ಲ, ಎಂದು ಹಿಂದಿನ ಸಾಲುಗಳ ಆಡಿಟ್ ವರದಿಗಳಲ್ಲಿ ತಿಳಿಸಿದ್ದು, ಇದರ ಬಗ್ಗೆ ಸಂಘದವರು ಪರಿಶೀಲಿಸಿ, ನಿಯಮಾನುಸಾರ ಸಂಘದ ಡೆವಲಪರ್ಸ್‌ಗಳಿಂದ ಟಿಡಿಎಸ್ ಹಿಡಿದು ಆದಾಯ ತೆರಿಗೆ ಇಲಾಖೆಗೆ ಪಾವತಿಸಲು ಕಾರ್ಯದರ್ಶಿಯವರು ಹಾಗೂ ಸಂಘದ ಪದಾಧಿಕಾರಿಗಳು ಕ್ರಮವಿಡುವುದು ಅತ್ಯಾಗತ್ಯ;

9) ಅಭಿವೃದ್ಧಿ ಕಾರ್ಯವನ್ನು ಸಂಘದ ವತಿಯಿಂದ ನಿರ್ವಹಿಸುತ್ತಿದ್ದಲ್ಲಿ ಈ ಕೆಲಸಕ್ಕೆ ತಾಂತ್ರಿಕ ಸಿಬ್ಬಂದಿ ಸೇವೆ ಪಡೆಯಲಾಗಿದೆಯೇ? ಸಾಮಾಗ್ರಿ ಖರೀದಿ ವಿದಿ ವಿಧಾನಗಳು ಸಮರ್ಪಕವಾಗಿದೆಯೇ? ದಾಸ್ತಾನು ಪುಸ್ತಕ, ಬಳಕೆ ಪುಸ್ತಕ, ಕೆಲಸದ ಅಳತೆ ಪುಸ್ತಕಗಳನ್ನು ಸರಿಯಾಗಿ ಇಡಲಾಗಿದೆಯೇ?

ಅಭಿವೃದ್ದಿ ಕಾರ್ಯವನ್ನು ಸಂಘದ ವತಿಯಿಂದ ನಿರ್ವಹಿಸುತ್ತಿಲ್ಲ.

10) ಅಭಿವೃದ್ಧಿ ಕಾಮಗಾರಿಯು ಪೂರ್ತಿ ಮುಗಿಸಿದ್ದರೆ ಸಂಬಂಧಿಸಿದ ಪ್ರಾಧಿಕಾರದಿಂದ ಮುಕ್ತಾಯ ಪತ್ರ ಪಡೆದು ದಾಖಲೆಯಲ್ಲಿಡಲಾಗಿದೆಯೇ?

ಬಡಾವಣೆಗಳ ಅಭಿವೃದ್ದಿ ಕಾಮಗಾರಿಯು ಪೂರ್ತಿ ಮುಗಿದಿರುವುದಿಲ್ಲ.

11) ಅಭಿವೃದ್ಧಿಗೊಳಿಸಿದ ಖುಲ್ಲಾ ಜಾಗ; ಉದ್ಯಾನವನ ಹಾಗೂ ರೋಡ್ ಗಳನ್ನು ಮುಂದಿನ ನಿರ್ವಹಣೆಗಾಗಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆಯೇ?

ದಿನಾಂಕ 11–10–2013 ರಂದು (1ನೇ ಪುಸ್ತಕದ ದಸ್ತಾವೇಜು ನಂಬರ್ NMG–1–07799–2013–14 ಆಗಿ ಸಿಡಿ ನಂಬರ್ NMGD 296ನೇದ್ದರಲ್ಲಿ) ಸನ್ಮಾನ್ಯ ಕರ್ನಾಟಕ ರಾಜ್ಯ ಪಾಲರ ಪರವಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ, ಅಧ್ಯಕ್ಷರು ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 94 ಇವರು ಒಪ್ಪಿ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಬಾಬ್ತು ಪರಿತ್ಯಾಜನ ಪತ್ರವನ್ನು ಅಂದರೆ ಖುಲ್ಲಾಜಾಗ:– ಉದ್ಯಾನವನಗಳನ್ನು ಹಾಗೂ ರೋಡ್‌ಗನ್ನು ಸಿಎ ಜಾಗವನ್ನು (ಸಾರ್ವಜನಿಕ ಸೌಲಭ್ಯ ಜಾಗವನ್ನು) ಉಪನೋಂದಣಾಧಿಕಾರಿ ನೆಲಮಂಗಲ ರವರ ಕಛೇರಿಯಲ್ಲಿ ನೋಂದಣಿ ಮಾಡಿಕೊಟ್ಟಿರುತ್ತಾರೆ.

ವಿವರವನ್ನು 2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 27 ರಿಂದ 29ರ ವರೆವಿಗೆ ವಿವರವಾಗಿ ವಿವರಿಸಿರುವುದರಿಂದ ಪುನಃ ವರದಿ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಿಲ್ಲ.

**34 12) ವರ್ಷಾಂತ್ಯದವರಿಗೆ ವಿವಿಧ ಕಾಮಗಾರಿಯ ಒಟ್ಟು ವೆಚ್ಚಗಳು :**

ಗುತ್ತಿಗೆದಾರರು ಜಮೀನನ್ನು ಖರೀದಿಸಿ; ಭೂ ಪರಿವರ್ತನೆ ಮಾಡಿಸಿ, ಸಂಘದ ಹೆಸರಿಗೆ ಭೂ ಪರಿವರ್ತನೆಯಾದ ಜಮೀನನ್ನು ಲೆಕ್ಕಪರಿಶೋಧನಾ ವರದಿಯಕ್ರಮ ಸಂಖ್ಯೆ34 (1) ರಲ್ಲಿ ವಿವರಿಸಿರುವಂತೆ,

ಸಂಘದ ಹೆಸರಿಗೆ ನೋಂದಣಿ ಮಾಡಿಸಿರುತ್ತಾರೆ. ಹಾಗೂ ಸಂದೇಶ್ ನಗರ– 1 ಮತ್ತು 2ನೇ ಬಡಾವಣೆಗೆ ಸಂಬಂಧಿಸಿದಂತೆ ಮತ್ತು ಸಂದೇಶ್ ಲೇಕ್ ಸೈಡ್– 1, 2 ಮತ್ತು 3ನೇ ಹಂತದ ಬಡಾವಣೆ ಕೆಲಸಗಳು ನಡೆದಿದ್ದು, ನಡೆಯುತ್ತಿದ್ದು, ಸಂದೇಶ್ ನಗರ–3ನೇ ಹಂತ, ಸಂದೇಶ್ ಭಾಗ್ ಬಡಾವಣೆಗಳಿಗೆ ಮತ್ತು ಸಂದೇಶ್ ಲೇಕ್ ಸೈಡ್–1, 2 ಮತ್ತು 3ನೇ ಹಾಗೂ 4ನೇ ಹಂತದ ಬಡಾವಣೆಗಳಿಗೆ ದಿನಾಂಕ 31–03–2021 ಕ್ಕೆ ಲೆಕ್ಕಪರಿಶೋಧನಾ ವರದಿ ಕ್ರಮ ಸಂಖ್ಯೆ 34 (7) (1) ರಿಂದ (8)ರ ವರೆವಿಗೆ ತೋರಿಸಿರುವಂತೆ, ರೂ. 315,80,06,864–00 ಗಳು.

**ಬಡಾವಣೆಯ ವೆಚ್ಚಗಳು :**

ಸಂಘದ ಉಪನಿಯಮ ಕ್ರಮ ಸಂಖ್ಯೆ 4ರಲ್ಲಿ ತಿಳಿಸಿರುವ ಪ್ರಕಾರ ಜಮೀನು ಖರೀದಿಸುವುದು, ಲೇಔಟ್ ನಿರ್ಮಾಣ ಮಾಡುವುದು ಹಾಗೂ ನಿವೇಶನಗಳನ್ನು ವಿಂಗಡಿಸಿ ಸದಸ್ಯರುಗಳಿಗೆ ಹಂಚಿಕೆ ಮಾಡುವುದು ಮುಖ್ಯವಾಗಿರುತ್ತದೆ. ಈ ಉದ್ದೇಶವನ್ನು ಈಡೇರಿಸುವ ಸಲುವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಹ್ಯಾಡಾಳು, ಕೆ.ಜಿ. ಶ್ರೀನಿವಾಸಪುರ, ಬೆತ್ತನಗೆರೆ, ಮೈಲನಹಳ್ಳಿ ಮತ್ತು ಆನೇಕಲ್ ತಾಲ್ಲೂಕು ಚಿಕ್ಕನಹಳ್ಳಿ ಮತ್ತು ಕಾಮನಹಳ್ಳಿ, ವರ್ತೂರು ಹೋಬಳಿ ಮತ್ತು ದೇವನಹಳ್ಳಿ ತಾಲ್ಲೂಕಿನ ಬೆಟ್ಟನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ ಜಮೀನನ್ನು ಖರೀದಿಸಿ ಈ ಕೆಳಗೆ ವಿವರಿಸಿರುವಂತೆ 8 ಬಡಾವಣೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

**(1) ಸಂದೇಶ್ ನಗರ–1ನೇ ಬಡಾವಣೆ (2) ಸಂದೇಶ್ ನಗರ–2ನೇ ಬಡಾವಣೆ**

**(3) ಸಂದೇಶ್ ನಗರ–3ನೇ ಬಡಾವಣೆ (4) ಸಂದೇಶ್ ಭಾಗ್ ಬಡಾವಣೆ**

**(5) ಸಂದೇಶ್ ಲೇಕ್ ಸೈಡ್–1ನೇ ಹಂತದ ಬಡಾವಣೆ (6) ಸಂದೇಶ್ ಲೇಕ್ ಸೈಡ್–2ನೇ ಹಂತದ ಬಡಾವಣೆ**

**(7) ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆ (8) ಸಂದೇಶ್ ಲೇಕ್ ಸೈಡ್–4ನೇ ಹಂತದ ಬಡಾವಣೆ**

ಮೇಲೆ ತಿಳಿಸಿರುವ 8 ಬಡಾವಣೆಗಳಿಗೆ, ಈ ಕಳಕಂಡಲ್ಲಿ ಆಯಾಯ ಬಡಾವಣೆಗಳಲ್ಲಿ ವಿವರಿಸಿರುವಂತೆ ಬಡಾವಣೆಯ ವೆಚ್ಚಗಳಾಗಿರುತ್ತದೆ.

**1. ಸಂದೇಶ್ ನಗರ 1ನೇ ಹಂತದ ಬಡಾವಣೆ ಅಮೋಸ್ ಪ್ರಾಪರ್ಟೀಸ್ ಬೆಂಗಳೂರು**

ಸಂಘವು ತನ್ನ ಸದಸ್ಯರುಗಳ ಅನುಕೂಲಕ್ಕಾಗಿ ನಿವೇಶನಗಳನ್ನು ಹಂಚಿಕೆ ಮಾಡಲು ದಿನಾಂಕ: 17–09–2006 ರ ವಾರ್ಷಿಕ ಮಹಾಸಭೆಯಲ್ಲಿ ಹಾಗೂ ದಿನಾಂಕ: 29–10–2006 ರ ಆಡಳಿತ ಮಂಡಳಿ ಸಭೆಯಲ್ಲಿ ಹಾಗೂ ಮುಂದಿನ ಹಲವಾರು ಮಾಸಿಕ ಆಡಳಿತ ಮಂಡಳಿ ಸಭೆಗಳಲ್ಲಿ ತೀರ್ಮಾನಿಸಿದಂತೆ ವಸತಿ ಬಡಾವಣೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು. ಈ ಉದ್ದೇಶಕ್ಕಾಗಿ ಮೊದಲನೇ ಹಂತದಲ್ಲಿ ಸಂದೇಶ್ ನಗರ 1ನೇ ಬಡಾವಣೆಯ ನಿರ್ಮಾಣಕ್ಕಾಗಿ ನೆಲಮಂಗಲ ತಾಲ್ಲೂಕಿನ ಮೈಲನಹಳ್ಳಿ, ಹ್ಯಾಡಾಳು ಮತ್ತು ಕೆ.ಜಿ.ಶ್ರೀನಿವಾಸಪುರ ಗ್ರಾಮಗಳಲ್ಲಿ ಬರುವ ಸುಮಾರು 50 ಎಕರೆ ಜಮೀನನ್ನು ಸಂಘದ ಪರವಾಗಿ ಖರೀದಿಸಿ ಸದರಿ ಜಮಿನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಅಂದರೆ ಬಡಾವಣೆ ನಿರ್ಮಾಣ ಮಾಡಿಕೊಡಲು ಜಮೀನು ಖರೀದಿ; ಭೂ ಪರಿವರ್ತನೆ ಮತ್ತು ಬಡಾವಣೆ ನಿರ್ಮಾಣ ಮಾಡಲು ಅನುಭವವುಳ್ಳ ಮೂರು ಜನ ಬಡಾವಣೆ ನಿರ್ಮಾಣ ಮಾಡುವ ಗುತ್ತಿಗೆದಾರರಿಂದ ದರಪಟ್ಟಿ ಪಡೆಯಲಾಗಿದೆ. ಸದರಿ ದರ ಪಟ್ಟಿಗಳನ್ನು ದಿನಾಂಕ: 3–3–2007 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಅತಿ ಕಡಿಮೆ ದರ

ನಮೂದಿಸಿರುವ ಅಮೋಸ್ ಪ್ರಾಪರ್ಟೀಸ್, ಬೆಂಗಳೂರು, ಇವರಿಗೆ ಬಡಾವಣೆ ನಿರ್ಮಾಣ ಮಾಡುವ ಗುತ್ತಿಗೆಯನ್ನು ನೀಡಲು ತೀರ್ಮಾನಿಸಿರುವ ಬಗ್ಗೆ ಹಿಂದಿನ ವರದಿಗಳಲ್ಲಿ ಉಲ್ಲೇಖಿಸಿದೆ. ಈ ತೀರ್ಮಾನದಂತೆ ಅಮೋಸ್ ಪ್ರಾಪರ್ಟೀಸ್ ಬೆಂಗಳೂರು, ಇದನ್ನು ಪ್ರತಿ ನಿಧಿಸತಕ್ಕ ಶ್ರೀ.ಬಿ. ರವಿಕುಮಾರ್ ರೆಡ್ಡಿ, ಇವರೊಂದಿಗೆ ದಿನಾಂಕ: 10–04–2007 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದವು ನೋಂದಣಿ ಯಾಗಿರುವುದಿಲ್ಲ. ಅಮೋಸ್ ಪ್ರಾಪರ್ಟೀಸ್ ರವರಿಗೆ ಪಾವತಿಸಿರುವ ಮೊಬಲಗಿಗೆ ಬ್ಯಾಂಕ್ ಗ್ಯಾರಂಟಿ ಪಡೆದಿರುವುದಿಲ್ಲ.

ಸಂಘವು ಅಮೋಸ್ ಪ್ರಾಪರ್ಟೀಸ್ ಬೆಂಗಳೂರು, ಇವರೊಂದಿಗೆ ದಿನಾಂಕ: 10–04–2007 ರಂದು ಮಾಡಿಕೊಂಡಿರುವ ಒಪ್ಪಂದದ ಮುಖ್ಯಾಂಶಗಳು ಹಣ ಬಿಡುಗಡೆ ಮಾಡುವ ಬಗ್ಗೆ, ಹಾಗೂ ಇನ್ನಿತರ ವಿಷಯಗಳ ಬಗ್ಗೆ 2013–2014ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 30 ರಿಂದ 35 ರ ವರೆವಿಗೆ ವಿವರಿಸಲಾಗಿದೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ವರದಿ ಸಾಲಿನಲ್ಲಿ ವಿವರಿಸಿರುವುದಿಲ್ಲ.

ದಿನಾಂಕ 31–7–2013ರ ಮತ್ತು ದಿನಾಂಕ 8–1–2015ರ ಆಡಳಿತ ಮಂಡಳಿ ಠರಾವಿನ ರೀತ್ಯಾ ಸಂದೇಶ್ ನಗರ –1ನೇ ಹಂತದ ಡೆವಲಪರ್ಸ್ ರವರಾದ ಅಮೋಸ್ ಪ್ರಾಪರ್ಟಿಸ್ ಬೆಂಗಳೂರು ಇದನ್ನು ಪ್ರತಿನಿಧಿಸತಕ್ಕ ಶ್ರೀ ಬಿ. ರವಿಕುಮಾರ್ ರೆಡ್ಡಿ ಯವರು ದಿನಾಂಕ 10–4–2007 ರಂದು ಮಾಡಿಕೊಂಡಿರುವ ಒಪ್ಪಂದದ ರೀತ್ಯಾ ಸಂದೇಶ್ ನಗರ–1ನೇ ಹಂತದ ಬಡಾವಣೆಯನ್ನು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ ಪ್ರಯುಕ್ತ ದಿನಾಂಕ 15–9–2013ರ ಸಂಘದ ವಾರ್ಷಿಕ ಮಹಾ ಸಭೆಯಲ್ಲಿ ತೀರ್ಮಾನಿಸಿ, ದಿನಾಂಕ 16–9–2013ರ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ಬಾಕಿ ಇರುವ ಕೆಲಸಗಳನ್ನು ಶ್ರೀ ಎಂ.ಜಿ. ರಂಗಧಾಮಯ್ಯ ರವರಿಗೆ ವಹಿಸಲು ತೀರ್ಮಾನಿಸಿ, ದಿನಾಂಕ 16–9–2013 ರಂದು ನೋಂದಣಿ ರಹಿತ M.O.U ಕರಾರನ್ನು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ಮಾಡಿಕೊಂಡಿರುತ್ತಾರೆ. ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು M.O.U ನಲ್ಲಿ ಸಹಿ ಮಾಡಿರುತ್ತಾರೆ. ಸಂದೇಶ್ ನಗರ–1ನೇ ಹಂತದ ಬಡಾವಣೆಯ ಗುತ್ತಿಗೆದಾರರಾದ ಶ್ರೀ ಅಮೋಸ್ ಪ್ರಾಪರ್ಟಿಸ್ ನವರು ಸಹಾ ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಬಂಧಪಟ್ಟಂತಹ 46 ಎಕರೆ 18 ಗುಂಟೆ (ಭೂಪರಿವರ್ತಿತ ಜಮೀನು, ಭೂಪರಿವರ್ತನೆ ಯಾಗಲು ಬಾಕಿ ಇರುವ ಜಮೀನು) ಜಮೀನಿನ ದಾಖಲಾತಿಗಳನ್ನು ಸಂಘಕ್ಕೆ ಹಸ್ತಾಂತರಿಸಿ, ದಿನಾಂಕ 10–4–2007 ರಂದು ಮಾಡಿಕೊಂಡಿರುವ ಒಪ್ಪಂದವನ್ನು ರದ್ದು ಮಾಡಿಕೊಳ್ಳಲು ಸಂಘವನ್ನು ಕೇಳಿದ್ದರು. ಇದರ ಬಗ್ಗೆ ಆಡಳಿತ ಮಂಡಳಿ ಸಭೆಯ ದಿನಾಂಕ 31–07–2013 ರಲ್ಲಿ ಚರ್ಚಿಸಿ, ನಿರ್ಣಯಕೈಗೊಂಡಿದ್ದರು. ಇದರ ಪ್ರಕಾರ ಮತ್ತು ಆಡಳಿತ ಮಂಡಳಿ ಸಭೆಯ ದಿನಾಂಕ 8–1–2015ರ ಠರಾವಿನ ರೀತ್ಯಾ ಅಮೋಸ್ ಪ್ರಾಪರ್ಟಿಸ್ ನವರೊಂದಿಗೆ ಮಾಡಿಕೊಂಡಿದ್ದ ದಿನಾಂಕ 10–4–2007ರ M.O.U ಅನ್ನು ದಿನಾಂಕ 8–01–2015 ರಂದು ರದ್ದು ಮಾಡಿಕೊಂಡು, ಅಮೋಸ್ ಪ್ರಾಪರ್ಟಿಸ್ ನವರಿಗೆ ನೀಡಿದ್ದ ಮೊಬಲಗು ಸಂಘಕ್ಕೆ ಬರಲು ಬಾಕಿ ಇಲ್ಲ ಹಾಗೂ ಸಂಘದಿಂದ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಬಾಬ್ತು ಡೆವಲಪರ್ಸ್ ರವರಾದ ಅಮೋಸ್ ಪ್ರಾಪರ್ಟಿಸ್ ನವರಿಗೆ ಮೊಬಲಗನ್ನು ಪಾವತಿಸಲುಬಾಕಿ ಇರುವುದಿಲ್ಲವೆಂದು ದಿನಾಂಕ 8–01–2015ರ ಆಡಳಿತ ಮಂಡಳಿ ಸಭೆಯಲ್ಲಿ ಠರಾವು ಮಾಡಿ ಲೆಕ್ಕವನ್ನು ಖೈದು ಮಾಡಿಕೊಂಡಿರುತ್ತಾರೆ.

ದಿನಾಂಕ 31–03–2017ಕ್ಕೆ ಸಂಘದ ನಿರ್ದೇಶಕರಾದ ಶ್ರೀ ನಾಗೇಂದ್ರ ರವರ ಹೆಸರಿಗೆ ಹ್ಯಾಡಾಳು ಗ್ರಾಮದ ಸರ್ವೆ ನಂ. 12 ರ 1 ಎಕರೆ 06 ಗುಂಟೆ ಜಮೀನನ್ನು ನೋಂದಣಿ ಜಿ.ಪಿ.ಎ. ಮಾಡಿಕೊಂಡಿರುತ್ತಾರೆ. ಇದು ಸಾಲು ಪ್ರಾರಂಭದಿಂದ ದಿನಾಂಕ 31–3–2021ಕ್ಕೆ ಸಂದೇಶ್ ನಗರ–2ನೇ ಹಂತದ ಬಡಾವಣೆಯ ಲೆಕ್ಕದಲ್ಲಿ ಮುಂದುವರಿಯುತ್ತದೆ. **ಅನುಬಂಧ–14**ನ್ನು ಲಗತ್ತಿಸಿದೆ.

ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, ಮೈಲನಹಳ್ಳಿ ಗ್ರಾಮದ ಸರ್ವೆ ನಂ. 85/1 ರಲ್ಲಿ 0.29 ಗುಂಟೆ ಜಮೀನು ಹಿಂದೆ ಜನಾರ್ಧನ ರೆಡ್ಡಿಯವರ ಹೆಸರಿನಲ್ಲಿ ಜಿ.ಪಿ.ಎ. ಇದ್ದುದನ್ನು ಶ್ರೀ ಗಂಗಾಧರಯ್ಯ. ಕೆ.ಹೆಚ್ ಸಂಘದ ಉಪಾಧ್ಯಕ್ಷರು ರವರ ಹೆಸರಿಗೆ ದಿನಾಂಕ 12–11–2019 ರಂದು ನೋಂದಣಿಯಾಗಿದೆ. ಸದರಿ ಜಮೀನು ಸಾಲು

ಪ್ರಾರಂಭದಿಂದ ದಿನಾಂಕ 31–3–2021ಕ್ಕೆ ಸಂದೇಶ್ ನಗರ–2ನೇ ಹಂತದ ಬಡಾವಣೆಯ ಲೆಕ್ಕದಲ್ಲಿ ಮುಂದುವರಿಯುತ್ತದೆ **ಅನುಬಂಧ– 14**ನ್ನು ಲಗತ್ತಿಸಿದೆ.

ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, ದಿನಾಂಕ 31–03–2015ರ ವರೆವಿಗೆ ಅಮೋಸ್ ಪ್ರಾಪರ್ಟಿಸ್ ಬೆಂಗಳೂರು ಇದನ್ನು ಪ್ರತಿನಿಧಿಸತಕ್ಕ ಶ್ರೀ ಬಿ. ರವಿ ಕುಮಾರ್ ರೆಡ್ಡಿ ಯವರಿಗೆ ಬ್ಯಾಲನ್‌ಷೀಟಿನಲ್ಲಿರುವಂತೆ ಮೊಬಲಗನ್ನು (ಕ್ರಮ ಸಂಖ್ಯೆ 5(1) ಎ ರಲ್ಲಿ ತಿಳಿಸಿರುವಂತೆ)  ಹಿಂದಿನ ಆಡಿಟ್ ವರದಿಗಳಲ್ಲಿ ತಿಳಿಸಿರುವಂತೆ ಪಾವತಿಸಲಾಗಿದೆ. ಸಂದೇಶ್ ನಗರ–1ನೇ ಹಂತದ ಬಡಾವಣೆಯ ಲೆಕ್ಕದಡಿಯಲ್ಲಿ ದಿನಾಂಕ 31–3–2016ರ ಆಸ್ತಿ ಜವಾಬ್ದಾರಿಯ, ಆಸ್ತಿಯ ಕ್ರಮ ಸಂಖ್ಯೆ 5(1)(ಎ) ರಲ್ಲಿ ತೋರಿಸಿರುವಂತೆ ಮೊಬಲಗು ರೂ. 486312783–00 ಮತ್ತು ರೂ. 105600–00 ಗಳುದಿನಾಂಕ 31–03–2017 ರಿಂದದಿನಾಂಕ 31–03–2021ಕ್ಕೆ ಮುಂದುವರಿಯುತ್ತದೆ. ದಿನಾಂಕ 26–9–2012 ರಲ್ಲಿ ನೆಲಮಂಗಲ ತಾಲ್ಲೂಕು ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ ಆಸ್ತಿ 1 ಎಕರೆ 24 ಗುಂಟೆಯನ್ನು ಹಿರಿಯ ಉಪನೋಂದಣಾಧಿಕಾರಿ ನೆಲಮಂಗಲ ರವರ ಕಛೇರಿಯಲ್ಲಿ ಜಿ.ಪಿ.ಎ ಮಾಡಿಕೊಳ್ಳಲು ದಿನಾಂಕ 26–9–2012 ರಂದು ಖರೀದಿಸಿದ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆಯ ಡಿ.ಡಿ ನಂ. 355824 ರ ಬಾಬ್ತು ರೂ. 88000–00 ಗಳನ್ನು ಮತ್ತು ದಿನಾಂಕ 26–9–2012 ರಂದು ಖರೀದಿಸಿದ ಡಿ.ಡಿ ನಂ. 355825 ರ ಬಾಬ್ತು ರೂ. 17600–00 ಗಳನ್ನು ಉಪಯೋಗಿಸಿಕೊಂಡಿದೆ. ಸದರಿ ಒಟ್ಟು ಮೊಬಲಗು  ರೂ. 105600–00 (ರೂ. 88000–00 + ರೂ. 17600–00) ಗಳನ್ನು ಆಸ್ತಿಯ ಕಡೆ ದಿನಾಂಕ 31–3–2016ಕ್ಕೆ ಬಂಡವಾಳೀಕರಿಸಿದೆ. ದಿನಾಂಕ 31–3–2017 ರಿಂದ ದಿನಾಂಕ 31–03–2021ಕ್ಕೆ ಸದರಿ ಮೊಬಲಗು ಮುಂದುವರಿಯುತ್ತದೆ.

2. **ಸಂದೇಶ್ ನಗರ–1ನೇ ಹಂತದ ಬಡಾವಣೆ ಶ್ರೀ ಮೂಕಾಂಬಿಕ ಎಂಟರ್ ಪ್ರೈಸಸ್ ನೆಲಮಂಗಲ ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್‌ನೆಲಮಂಗಲ:**

ಮೆ॥ ಅಮೋಸ್ ಪ್ರಾಪರ್ಟೀಸ್ ರವರೊಂದಿಗೆ, ಸಂದೇಶ್ ನಗರ–1 ನೇ ಹಂತದಲ್ಲಿ ಬಡಾವಣೆಯ ಕೆಲಸಕಾರ್ಯಗಳನ್ನು ಮಾಡಲು ಮಾಡಿಕೊಂಡಿರುವ ದಿನಾಂಕ 10–4–2007 ರ ಎಂ.ಒ.ಯು ಅನ್ನು ರದ್ದುಪಡಿಸಿ, ಸಂದೇಶ್ ನಗರ–1 ರ ಬಡಾವಣೆ ಅಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹ್ಯಾಡಾಳು ಮತ್ತು ಕೆ.ಜಿ.ಶ್ರೀನಿವಾಸಪುರ ಗ್ರಾಮಗಳಲ್ಲಿ ಬರುವ ವಿವಿಧ ಸರ್ವೆ ನಂಬರ್ ಗಳ ಒಟ್ಟಾರೆ 41 ಎಕರೆ 03 ಗುಂಟೆ ಜಮೀನಿನಲ್ಲಿ ಬಡಾವಣೆ ನಿರ್ಮಿಸಲು ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗದಾಮಯ್ಯ ರವರೊಂದಿಗೆ ಮಾಡಿಕೊಳ್ಳುವ ಬಗ್ಗೆ ಸಂಘದ ಆಡಳಿತ ಮಂಡಳಿ ಸಭೆಯ ದಿನಾಂಕ 16–9–2013 ರಲ್ಲಿ ಚರ್ಚಿಸಿರುತ್ತಾರೆ. ಮತ್ತು ದಿನಾಂಕ 16–9–2013 ರಂದು ನೋಂದಣಿ ರಹಿತ ಪರಸ್ಪರ ಒಪ್ಪಂದದ ಕರಾರು ಪತ್ರ (M.O.U ಕರಾರನ್ನು) [MEMORANDUM OF UNDERSTANDING] ವನ್ನು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ಮಾಡಿಕೊಂಡಿರುತ್ತಾರೆ.ಶ್ರೀ ಎಂ.ಜಿ. ರಂಗಧಾಮಯ್ಯ ನವರಿಂದ ಸಾಲಾಖೈರಿಗೆ ಪಾವತಿಸಿರುವ ಮೊಬಲಗಿಗೆ ಬ್ಯಾಂಕ್ ಗ್ಯಾರೆಂಟಿ, ಭದ್ರತೆ ಪಡೆದಿಲ್ಲ. ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ಮಾಡಿಕೊಂಡಿರುವ ನೋಂದಣಿ ರಹಿತ M.O.U ನ ಮುಖ್ಯಾಂಶಗಳನ್ನು, ಮತ್ತು ಹಣ ಬಿಡುಗಡೆಯ ಬಗ್ಗೆ, ಹಾಗೂ ಇತರೆ ವಿಷಯಗಳ ಬಗ್ಗೆ 2013–14 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 35 ರಿಂದ 45ರ ವರೆವಿಗೆ ವಿವರವಾಗಿ ವಿವರಿಸಿರುತ್ತಾರೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ವರದಿ ಸಾಲಿನ ಈ ವರದಿಯಲ್ಲಿ ವಿವರಿಸಿರುವುದಿಲ್ಲ.

ಸಂದೇಶ್ ನಗರ–1ನೇ ಹಂತದ ಬಡಾವಣೆಯಲ್ಲಿ ಬಾಕಿ ಇರುವ ಕೆಲಸಗಳನ್ನು ಮಾಡಲು ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್ ಎಂ.ಜಿ. ರಸ್ತೆ, ಸುಭಾಷ್ ನಗರ, ನೆಲಮಂಗಲ ಟೌನ್, ಪ್ರತಿನಿಧಿಸುವ ಇದರ ಮಾಲೀಕರು ಶ್ರೀ ಎಂ. ಜಿ. ರಂಗಧಾಮಯ್ಯ ಬಿನ್ ಲೇಟ್ ಶ್ರೀ ಗಂಗಯ್ಯ. ಸಿ 42 ವರ್ಷ ವಯಸ್ಸು, ವಾಸ ಮುನಿಯಪ್ಪ ಬಡಾವಣೆ, 2ನೇ ಅಡ್ಡ ರಸ್ತೆ, ಸುಭಾಷ್ ನಗರ, ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರೊಂದಿಗೆ ಅಂದರೆ ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ನೋಂದಣಿ ರಹಿತ ಪರಸ್ಪರ ಒಪ್ಪಂದದ

ಕರಾರು ಪತ್ರವನ್ನು [ಎಂ.ಒ.ಯು ಅನ್ನು] ದಿನಾಂಕ 16–9–2013 ರಂದು ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು–560094 [ಸಂಘ] ಸಂಘದವರು ಮಾಡಿಕೊಂಡಿರುತ್ತಾರೆ. ದಿನಾಂಕ 16–9–2013ರ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ ತಿಳಿಸಿರುವಂತೆ ಕೆಲಸಕಾರ್ಯಗಳು ನಿಗದಿತ 10 ತಿಂಗಳುಗಳ ಕಾಲಾವಕಾಶದ ಒಳಗೆಪೂರ್ಣಗೊಳಿಸಿ, ಸಂಘಕ್ಕೆ ಬಡಾವಣೆಯನ್ನು ವರ್ಗಾಯಿಸಿಲ್ಲ. ಇದರ ಬಗ್ಗೆ ಆಡಳಿತ ಮಂಡಳಿ ಸದಸ್ಯರು ಮತ್ತು ಪದಾಧಿಕಾರಿಗಳು ಗಮನ ಹರಿಸಿ ಸೂಕ್ತ ಕ್ರಮ ವಿಡುವುದು.

ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್‌ನ್ನು ವ್ಯಾಪಾರ ಸಂಸ್ಥೆಗಳ ನೋಂದಣಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೋಂದಣಿ ಮಾಡಿರುವುದಿಲ್ಲ. **<u>ದಿನಾಂಕ 19–11–2015 ರಂದು ಶ್ರೀ ಮೂಕಾಂಭಿಕ ಡೆವಲಪರ್ಸ್</u>** ವೈನತೇಯಧಾಮ, 5ನೇ ಕ್ರಾಸ್ ರೋಡ್, ಭರತ್ ಗಜಾರಿಯ ಲೇಔಟ್ ರೋಡ್, ಸುಭಾಷ ನಗರ, ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ– 562123 ಎಂದು ವ್ಯಾಪಾರ ಸಂಸ್ಥೆಗಳ ನೋಂದಣಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೋಂದಣಿ ಮಾಡಿಸಲಾಗಿದೆ FIRM No. BLR-F65-2015-16. Date: 19-11-2015 ಎಂದು ನೋಂದಣಿ ಸರ್ಟಿಫಿಕೇಟ್ ಮತ್ತು ಡೀಡ್ ಆಫ್ ಪಾರ್ಟ್‌ನರ್‌ಶಿಪ್ ಅನ್ನು ಸಂಘಕ್ಕೆ ದಿನಾಂಕ 18–9–2019 ರಂದು ಶ್ರೀ ಎಂ.ಜಿ. ರಂಗಧಾಮಯ್ಯ ನವರು ನೀಡಿರುತ್ತಾರೆ. ಹಾಗೂ ಸಂದೇಶ್ ನಗರ–1ನೇ ಹಂತದ ಬಡಾವಣೆ ಮತ್ತು ಸಂದೇಶ್ ನಗರ–2ನೇ ಹಂತದ ಬಡಾವಣೆ ಮಾಡುವ ಬಗ್ಗೆ ದಿನಾಂಕ 16–09–2013 ರಂದು ಮತ್ತು ದಿನಾಂಕ 28–02–2008 ರಂದು ಮಾಡಿಕೊಂಡಿರುವ ಎಂ.ಒ.ಯು / ಒಪ್ಪಂದವನ್ನು, ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟ್‌ನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಹೆಸರಿನಲ್ಲಿ ಹೊಸದಾಗಿ ಎಂ.ಒ.ಯು ಮಾಡಿಕೊಳ್ಳಬೇಕೆಂದು,ಮತ್ತು ದಿನಾಂಕ 16–09–2013 ರಂದು ಮತ್ತು ದಿನಾಂಕ 28–02–2008 ರಂದು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಹೆಸರಿನಲ್ಲಿ ಎಂ.ಒ.ಯು, ಕರಾರುಗಳಾಗಿದ್ದು, ಸದರಿ ಎಂ.ಒ.ಯು, ಕರಾರುಗಳಲ್ಲಿ ತಿಳಿಸಿರುವ ಟರ್ಮ್ & ಕಂಡಿಷನ್ಸ್ ಹಾಗೂ ಇತರೆ ವಿಷಯಗಳುಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಹೆಸರಿನಲ್ಲಿ ಎಂ.ಒ.ಯು ಕರಾರು ಮಾಡಿಕೊಳ್ಳುವಾಗ ಯಾವ ಬಡಾವಣೆ ಇಲ್ಲದೇ ಮುಂದುವರಿಯುತ್ತದೆ ಎಂದು, ದಿನಾಂಕ 18–9–2019ರ ಪತ್ರದ ಮುಖಾಂತರ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪ್ರೋಪ್ರೈಟರ್ / ಪಾರ್ಟ್‌ನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಸಂಘಕ್ಕೆ ತಿಳಿಸಿರುತ್ತಾರೆ. ಇದರ ಜೆರಾಕ್ಸ್ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಯೊಂದಿಗೆ ಲಗತ್ತಿಸಿದೆ. ಮೇಲೆ ತಿಳಿಸಿರುವ ವಿಷಯವನ್ನು ಸಂಘದ ಮಾಹೆಯಾನ ಸಭೆಯ ದಿನಾಂಕ 28–9–2019 ಠರಾವಿನ ಸಂಖ್ಯೆ 8 ರಲ್ಲಿ ಚರ್ಚಿಸಿದೆ. ಸಂಘದ ಮಾಹೆಯಾನ ಸಭೆಯ ದಿನಾಂಕ 28–9–2019 ಠರಾವಿನ ಸಂಖ್ಯೆ 8 ರಲ್ಲಿ ಸಂಘದ ಸಂದೇಶ್ ನಗರ–1ನೇ ಹಂತದ ಬಡಾವಣೆಗಳ ಕೆಲಸಕಾರ್ಯಗಳಿಗೆ, ಬಡಾವಣೆಗೆ ಸಂಬಂಧಿಸಿದಂತೆ; ದಿನಾಂಕ 31–3–2019 ಕ್ಕೆ ರೂ. 26,50,38,424–00 ಗಳನ್ನು ಹಾಗೂ ಸಂದೇಶ್ ನಗರ–2ನೇ ಹಂತದ ಬಡಾವಣೆಗಳ ಕೆಲಸಕಾರ್ಯಗಳಿಗೆ ಬಡಾವಣೆಗೆ ಸಂಬಂಧಿಸಿದಂತೆ ದಿನಾಂಕ31–3–2019ಕ್ಕೆ ರೂ. 43,24,81,791–00 ಗಳನ್ನು ಸಂದೇಶ್ ನಗರ–1ನೇ ಹಂತದ ಮತ್ತು ಸಂದೇಶ್ ನಗರ–2ನೇ ಹಂತದ ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ಸಂಘದಿಂದ ನೀಡಿದ ಬಗ್ಗೆ ಶ್ರೀ ಎಂ.ಜಿ. ರಂಗಧಾಮಯ್ಯ ನವರು ದಿನಾಂಕ 31–3–2019ಕ್ಕೆ ದೃಢೀಕರಣ ಪತ್ರ ನೀಡಿದ ಬಗ್ಗೆ ದಿನಾಂಕ 28–9–2019ರ ಮಾಹೆಯಾನ ಸಭೆಯಲ್ಲಿ ಠರಾವಿನ ಸಂಖ್ಯೆ 8 ರಲ್ಲಿ ಚರ್ಚಿಸಿರುತ್ತಾರೆ, ಹಾಗೂ ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್ ರವರು ದಿನಾಂಕ 18–09–2019 ರಂದು ನೀಡಿರುವ ಪತ್ರದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ನಿರ್ದೇಶಕರುಗಳು ಕೂಲಂಕುಶವಾಗಿ ಚರ್ಚಿಸಿ, ದಿನಾಂಕ 16–9–2013 ರಂದು ಮತ್ತು ದಿನಾಂಕ 28–2–2008 ರಂದು ಡೆವಲಪರ್ಸ್ ರವರಾದ ಶ್ರೀ. ಎಂ.ಜಿ. ರಂಗಧಾಮಯ್ಯನವರೊಂದಿಗೆ ಮಾಡಿಕೊಂಡಿರುವ ಎಂ.ಒ.ಯು / ಕರಾರನ್ನು ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಹೆಸರಿನಲ್ಲಿ ಹೊಸದಾಗಿ ನವೀಕೃತ ಎಂ.ಒ.ಯು / ಕರಾರನ್ನು ಮಾಡಿಕೊಳ್ಳಲು ದಿನಾಂಕ 28–9–2019ರ ಆಡಳಿತ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ.

ದಿನಾಂಕ 16–09–2019 ರಲ್ಲಿ ಸಂದೇಶ್ ನಗರ–1ನೇ ಹಂತದ ಬಡಾವಣೆಯನ್ನು ಮಾಡಲು, ಸಂಘವು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಪ್ರತಿನಿಧಿ ಮತ್ತು ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು (M.O.U) ಮಾಡಿಕೊಂಡಿರುತ್ತಾರೆ. ನಂತರ ಸಂಘದ ಮಾಹೆಯಾನ ಆಡಳಿತ ಮಂಡಳಿ

ಸಭೆಯ ದಿನಾಂಕ 28–9–2019 ರ ಠರಾವಿನಂತೆ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಹೆಸರಿನಲ್ಲಿ ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ದಿನಾಂಕ 7–11–2019 ರಲ್ಲಿ ಸಂಘದ ಪ್ರತಿನಿಧಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರು (ಒಂದನೇ ಪಾರ್ಟಿ); ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ (ಎರಡನೇ ಪಾರ್ಟಿ) ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ದಿನಾಂಕ 7–11–2019ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ, ಎರಡನೇ ಪಾರ್ಟಿಯಾದ ಈಗ ಹಾಲಿ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ದಿನಾಂಕ 16–9–2013ರ ಒಪ್ಪಂದದ ಕರಾರು ಪತ್ರದಲ್ಲಿರುವ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಎಲ್ಲಾ ಕೆಲಸಗಳನ್ನು ದಿನಾಂಕ 7–11–2019 ರಿಂದ 3 ತಿಂಗಳೊಳಗಾಗಿ ಬಡಾವಣೆಯ ಎಲ್ಲಾ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಬೇಕೆಂದು ಒಂದನೇ ಪಾರ್ಟಿಯಾದ ಸೊಸೈಟಿಯವರು ಶ್ರೀ ಎಂ.ಜಿ. ರಂಗಧಾಮಯ್ಯ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ರವರಿಗೆ ತಿಳಿಸಿದ ಪ್ರಯುಕ್ತ ಇದಕ್ಕೆ ಎರಡನೇ ಪಾರ್ಟಿಯಾದ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಒಪ್ಪಿರುತ್ತಾರೆ. ಆದರೆ ಒಪ್ಪಿದಂತೆ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಸಂದೇಶ್ ನಗರ–1ನೇ ಹಂತದ ಬಡಾವಣೆ ಕೆಲಸಕಾರ್ಯಗಳನ್ನು 3 ತಿಂಗಳೊಳಗಾಗಿ ಪೂರ್ಣಗೊಳಿಸಿರುವುದಿಲ್ಲ ಹಾಗೂ ದಿನಾಂಕ 7–11–2019ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು 3 ತಿಂಗಳು ಆದ ಮೇಲೆ ನವೀಕರಿಸಿರುವುದಿಲ್ಲ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು, ಕಾರ್ಯದರ್ಶಿಯವರು ಗಮನ ಹರಿಸಿ, ತಕ್ಷಣವೇ ನವೀಕೃತ M.O.U ವನ್ನು ಸೂಕ್ತ ರೀತಿಯಲ್ಲಿ ನಿಯಮಾನುಸಾರ ನವೀಕರಿಸಿಕೊಳ್ಳುವುದು [ರಿನೀವಲ್ ಮಾಡಿಕೊಳ್ಳುವುದು] ಅತ್ಯಾಗತ್ಯ ಹಾಗೂ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಎಲ್ಲಾ ಕೆಲಸ ಕಾರ್ಯಗಳನ್ನು ಮುಕ್ತಾಯಗೊಳಿಸಿ, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿ ನೋಂದಣಿ ಮಾಡಿಕೊಡಲು ಕ್ರಮವಿಡುವುದು.

ದಿನಾಂಕ 31–03–2021ಕ್ಕೆ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಕೆಲಸಕಾರ್ಯಗಳ ಬಗ್ಗೆ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟ್‌ನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ (ಡೆವಲಪರ್ಸ್) ರವರಿಗೆ ಈ ಕೆಳಕಂಡಂತೆ ಮೊಬಲಗನ್ನು ಪಾವತಿಸಿದೆ, ಹಾಗೂ ಶ್ರೀ ಎಂ.ಜಿ. ರಂಗಧಾಮಯ್ಯ ನವರ ದಿನಾಂಕ 04–04–2020 ರ ಮತ್ತು ದಿನಾಂಕ 15–06–2021ರ [ದಿನಾಂಕ 4–4–2020 ಮತ್ತು ದಿನಾಂಕ 15–6–2021 ರ ಪತ್ರದ ಜೆರಾಕ್ಸ್ ಪ್ರತಿಯನ್ನು ವರದಿ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಮಾಹಿತಿಗಾಗಿ ಲಗತ್ತಿಸಿದೆ] ಲಿಖಿತ ಪತ್ರದ ಹೇಳಿಕೆಯ ಪ್ರಕಾರ ಸಂಘದಿಂದ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಕೆಲಸಕಾರ್ಯಗಳಿಗೆ 2020–21ನೇ ಸಾಲಿನಲ್ಲಿ, 2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ; ಖರ್ಚಿನ ಕ್ರಮ ಸಂಖ್ಯೆ 6(ಎ) 1 ರಿಂದ 8 ರಲ್ಲಿ ವಿವರಿಸಿರುವ ವರೆವಿಗೆ ನೀಡಿರುವ ಮೊಬಲಗು ರೂ. 1070868–00 ಗಳನ್ನು ಸಂದೇಶ್ ನಗರ–1ನೇ ಹಂತದ ಬಡಾವಣೆಯ ಡೆವಲಪರ್ಸ್ ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಸಂದೇಶ್ ನಗರ–1ನೇ ಹಂತದ ಬಡಾವಣೆಯ ಲೆಕ್ಕಕ್ಕೆ, ಶ್ರೀ ಮೂಕಾಂಭಿಕ ಡೆವಲಪರ್ಸ್ ರವರ ಲೆಕ್ಕಕ್ಕೆ ಹಾಕಿರುತ್ತದೆ ಎಂದು ಕಾರ್ಯದರ್ಶಿಯವರು ಮತ್ತು ಅಧ್ಯಕ್ಷರು 2020–21ನೇ ಸಾಲಿನ ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿ, 2020–21ನೇ ಸಾಲಿನ ಸಂಘದ ಹಣಕಾಸಿನ ತಃಖ್ತೆಗಳನ್ನು ಹಾಜರುಪಡಿಸಿದ್ದಾರೆ.

<u>ದಿನಾಂಕ 31–03–2021ರ ವರೆವಿಗೆ ಶ್ರೀ ಮೂಕಾಂಭಿಕ ಎಂಟರ್ ಪ್ರೈಸಸ್</u>

<u>ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್ ರವರಿಗೆ ಮುಂಗಡ ಶ್ರೀ ಎಂ.ಜಿ. ರಂಗಧಾಮಯ್ಯ</u>

<u>ನವರಿಗೆ: ಶ್ರೀ ಮೂಕಾಂಭಿಕ ಡೆವಲಪರ್ಸ್ ರವರ ಲೆಕ್ಕಕ್ಕೆ:– ದಿನಾಂಕ 31–3–2021ರ</u>

<u>ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5 (ಬಿ) ರೀತ್ಯಾ **ರೂ. 18,73,20,000–00**</u>

1) ದಿನಾಂಕ 31–03–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ, ಆಸ್ತಿಯ

| | | |
|---|---|---|
| ಕ್ರಮ ಸಂಖ್ಯೆ 5 (ಸಿ) ರೀತ್ಯಾ | ರೂ. | 84,26,000–00 |
| ಕ್ರಮ ಸಂಖ್ಯೆ 5 (ಡಿ) ರೀತ್ಯಾ | ರೂ. | 4,92,25,540–00 |
| ಕ್ರಮ ಸಂಖ್ಯೆ 5(ಇ) ರೀತ್ಯಾ | ರೂ. | 1,31,34,452–00 |
| ಕ್ರಮ ಸಂಖ್ಯೆ 5 (ಎಫ್) ರೀತ್ಯಾ | ರೂ. | 52,44,270–00 |
| ಕ್ರಮ ಸಂಖ್ಯೆ 5 (ಜಿ) ರೀತ್ಯಾ | ರೂ. | 39,21,292–00 |
| ಕ್ರಮ ಸಂಖ್ಯೆ 5 (ಹೆಚ್) ರೀತ್ಯಾ | ರೂ. | 10,70,868–00 |
| ಕ್ರಮ ಸಂಖ್ಯೆ 5 (ಐ) ರೀತ್ಯಾ | ರೂ. | 17,53,162–00 |

ಮೇಲೆ ವಿವರಿಸಿದಂತೆ ದಿನಾಂಕ 31–03–2021ರ ವರೆವಿಗೆ ಸಂದೇಶ್ ನಗರ–1ನೇ ಹಂತದ ಬಡಾವಣೆ ಬಾಬ್ತು ಶ್ರೀ ಮೂಕಾಂಬಿಕ ಎಂಟರ್ ಪ್ರೈಸಸ್‌ನ ಮಾಲೀಕರಾದ ಮತ್ತು ಶ್ರೀ ಮೂಕಾಂಬಿಕ ಡೆವಲಪರ್ಸ್‌ನ ಪಾರ್ಟ್‌ನರ್–1 ಆದ ಡೆವಲಪರ್ಸ್ ರವರಾದ ಶ್ರೀ ಎಂ.ಜಿ.ರಂಗಧಾಮಯ್ಯ ನವರಿಗೆ ಮುಂಗಡ ಮತ್ತು ಇವರ ಲೆಕ್ಕದಲ್ಲಿರುವ ಮತ್ತು ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್ ನವರ ಲೆಕ್ಕದಲ್ಲಿರುವ ಮತ್ತು ಶ್ರೀ ಮೂಕಾಂಬಿಕ ಡೆವಲಪರ್ಸ್ ರವರ ಲೆಕ್ಕದಲ್ಲಿರುವ ಒಟ್ಟು ಮೊಬಲಗು **ರೂ. 27,00,95,584–00**
(31–3–2021ರ ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5 (ಬಿ) ಯಿಂದ 5 (ಐ) ವರೆವಿಗೆ ವಿವರಿಸಿರುವಂತೆ)

ದಿನಾಂಕ 31–03–2021ರ ವರವಿಗೆ ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್‌ನ ಹೆಸರಿನಲ್ಲಿ ಮತ್ತು ಶ್ರೀ ಮೂಕಾಂಬಿಕ ಡೆವಲಪರ್ಸ್‌ನ ಹೆಸರಿನಲ್ಲಿ ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು, ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಘದಿಂದ ಪಡೆದ ಮೊಬಲಗಿನ ಲೆಕ್ಕಗಳ ಬಗ್ಗೆ ಶ್ರೀ ಮೂಕಾಂಬಿಕ ಡೆವಲಪರ್ಸ್‌ನವರ ಹೆಸರಿನಲ್ಲಿ ದಿನಾಂಕ 31–3–2021ಕ್ಕೆ ದೃಢಿಕರಣ ಪತ್ರವನ್ನು ರೂ. 27,00,95,584–00 ಗಳಿಗೆ ದಿನಾಂಕ 16–6–2021 ರಂದು ಸಂಘಕ್ಕೆ ನೀಡಿದ್ದು ತಾಳೆ ಇದೆ. ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು **ಅನುಬಂಧ–18** ಎಂದು ಈ ವರದಿಯೊಂದಿಗೆ ಲಗತ್ತಿಸಿದೆ. 2020–21ನೇ ಸಾಲಿನಲ್ಲಿ ಸಂದೇಶ್ ನಗರ–1ನೇ ಹಂತದ ಬಡಾವಣೆ ಬಾಬ್ತು, 2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ, ಜಮಾದ ಕ್ರಮ ಸಂಖ್ಯೆ 5 (ಬಿ) 1 ರಿಂದ 4ರ ವರೆವಿಗೆ ವಿವರಿಸಿರುವಂತೆ ರೂ. 20540–00 ಗಳ ಟಿ.ಡಿ.ಎಸ್ ನ್ನು ಹಿಡಿದು, 2020–21ನೇ ಸಾಲಿನಲ್ಲಿ 2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ, ಖರ್ಚಿನ ಕ್ರಮ ಸಂಖ್ಯೆ 3 (ಸಿ) ಯಿಂದ 3 (ಎಫ್) ವರೆವಿಗೆ ವಿವರಿಸಿರುವಂತೆ ರೂ. 12910–00 ಟಿ.ಡಿ.ಎಸ್ ನ್ನು ಆದಾಯ ತೆರಿಗೆ ಇಲಾಖೆಗೆ ಪಾವತಿಸಿದ್ದು, ಉಳಿಕೆ ರೂ. 7630–00 ಗಳನ್ನು [ರೂ. 20540–00 (–) ರೂ. 12910–00] ದಿನಾಂಕ 31–3–2021ಕ್ಕೆ ಪಾವತಿಸಲು ಬಾಕಿ ಇದ್ದು, ಇದನ್ನು ದಿನಾಂಕ 7–6–2021 ರಂದು ಸಂಘದಿಂದ ಆದಾಯ ತೆರಿಗೆ ಇಲಾಖೆಗೆ ರೂ. 7630–00 ಗಳನ್ನು ಪಾವತಿಸಿರುತ್ತಾರೆ. ಸಂಘದಿಂದ ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್ ಮತ್ತು ಶ್ರೀ ಮೂಕಾಂಬಿಕ ಡೆವಲಪರ್ಸ್ ರವರಿಗೆ, ಸಂದೇಶ್ ನಗರ–1ನೇ ಹಂತದ ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್ ರವರಿಗೆ ಪಾವತಿಸಿರುವ ಮೊಬಲಗಿಗೆ ತಕ್ಕಂತೆ ಸಂದೇಶ್ ನಗರ–1ನೇ ಹಂತದ ಬಡಾವಣೆ ಕೆಲಸಗಳು ಆಗಿರುವುದಿಲ್ಲ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಸೂಕ್ತ ಕ್ರಮವಿಡುವುದು.

ಸಂದೇಶ್ ನಗರ–1ನೇ ಹಂತದ ಬಡಾವಣೆಯ ಹ್ಯಾಡಾಳು ಗ್ರಾಮದ ಸರ್ವೆ ನಂ. 12 ರ ಭೂಪರಿವರ್ತಿತ ಜಮೀನಿನ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನನ್ನು ನಕ್ಷೆಗೆ ಸೇರಿಸಲು ಬರುವುದಿಲ್ಲ ಎಂದು ನೆಲಮಂಗಲ ಯೋಜನಾ ಪ್ರಾಧಿಕಾರದವರು ಹಿಂಬರಹವನ್ನು ದಿನಾಂಕ 14–02–2014 ರಂದು ನೀಡಿರುತ್ತಾರೆ. ಇದರ ಬಗ್ಗೆ ಆಡಳಿತ ಮಂಡಳಿ ಸಭೆಯ ದಿನಾಂಕ 02–06–2014 ರಲ್ಲಿ ವಿವರವಾಗಿ ಚರ್ಚಿಸಿದ ನಂತರ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹ್ಯಾಡಾಳು ಗ್ರಾಮದ ಸರ್ವೆ ನಂ. 12 ರಲ್ಲಿ ಬರುವ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘದ ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ನೀಡಿ, ಇದರ ಬದಲು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೆತ್ತನಗೆರೆ ಗ್ರಾಮದ ಸರ್ವೆ ನಂ. 35/1 ರಲ್ಲಿ ಬರುವ 5 ಎಕರೆ 18

ಗುಂಟೆ ಭೂಪರಿವರ್ತಿತ ಜಮೀನನ್ನು ಕ್ರಯ ಪತ್ರ ಮಾಡಿಕೊಳ್ಳಲು ಸರ್ವಾನುಮತದಿಂದ ದಿನಾಂಕ 02–06–2014 ರ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದ್ದು, ಈ ತೀರ್ಮಾನದಂತೆ ದಿನಾಂಕ 07–06–2014 ರಂದು ಹಿರಿಯ ಉಪನೋಂದಣಾಧಿಕಾರಿ, ನೆಲಮಂಗಲ ರವರ ಕಛೇರಿಯಲ್ಲಿ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ಹ್ಯಾಡಾಳು ಗ್ರಾಮದ ಸರ್ವೆ ನಂ. 12 ರಲ್ಲಿ ಬರುವ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನ್ನು ಸಂಘದಿಂದ ನೋಂದಣಿ ಕ್ರಯಪತ್ರ ಮಾಡಿಕೊಡಲಾಗಿದೆ. ಇದರ ಬಗ್ಗೆ ಸಂಘದಿಂದ ದಿನಾಂಕ 12–11–2014 ರಂದು ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು ರವರಿಗೆ ಅನುಮತಿಗೆ ಪತ್ರವನ್ನು ಸಹಾ ಬರೆದಿರುತ್ತಾರೆ.

ದಿನಾಂಕ 19–02–2015 ರಂದು ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ರವರು ಪತ್ರದ ಸಂಖ್ಯೆ ಹೆಚ್ಎಸ್ಜಿ–2/249/ಹೆಚ್‌ಹೆಚ್‌ಎಸ್/2014–15 ರ ಮುಖಾಂತರ ಆಡಳಿತಾತ್ಮಕ ಅನುಮತಿ ನೀಡಿರುತ್ತಾರೆ. ಶ್ರೀ ಎಂ.ಜಿ. ರಂಗಧಾಮಯ್ಯ ನವರು ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ, ಬೆತ್ತನಗೆರೆ ಗ್ರಾಮದ ಸರ್ವೆ ನಂ. 35/1 ರಲ್ಲಿ ಬರುವ 5 ಎಕರೆ 18 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಟ್ಟಿರುವುದಿಲ್ಲ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಗಮನ ಹರಿಸಿ, ನಿಯಮಾನುಸಾರ ತಕ್ಷಣವೇ ಸಂಘಕ್ಕೆ ಸದರಿ 5 ಎಕರೆ 18 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಸಿಕೊಳ್ಳುವುದು, ಎಂದು ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಲಾಗಿದೆ.

ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ದಿನಾಂಕ 4–1–2018 ರಂದು ಮತ್ತು ದಿನಾಂಕ 5–5–2018 ರಂದು, ಹಾಗೂ ದಿನಾಂಕ 20–11–2018 ರಂದು, ದಿನಾಂಕ 4–10–2019 ರಂದು, ದಿನಾಂಕ 5–02–2021 ರಂದು ಸಂಘದಿಂದ ಪತ್ರ ಬರೆದು ಹ್ಯಾಡಾಳು ಗ್ರಾಮದ ಸರ್ವೆ ನಂ. 12ರ 4 ಎಕರೆ 37 ಗುಂಟೆ ಜಮೀನಿಗೆ ಬದಲಾಗಿ ಬೆತ್ತನಗೆರೆ ಗ್ರಾಮದ ಸರ್ವೆ ನಂ. 35/1 ರಲ್ಲಿನ 5 ಎಕರೆ 18 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಡಲು ಕೇಳಲಾಗಿತ್ತು. ಶ್ರೀ ಎಂ.ಜಿ. ರಂಗಧಾಮಯ್ಯ ಮಾಲೀಕರು, ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್, ಶ್ರೀ ಮೂಕಾಂಭಿಕ ಡೆವಲಪರ್ಸ್ ನವರು ದಿನಾಂಕ 9–6–2014 ರಂದು, ದಿನಾಂಕ 10–12–2018 ರಂದು, ದಿನಾಂಕ 27–02–2019 ರಂದು, ದಿನಾಂಕ 15–10–2019 ರಂದು ಹಾಗೂ ದಿನಾಂಕ 10–02–2021 ರಂದು ಸಂಘಕ್ಕೆ ಪತ್ರ ಬರೆದು, ಬೆತ್ತನಗೆರೆ ಗ್ರಾಮದ ಸರ್ವೆ ನಂ. 35/1 ರಲ್ಲಿನ 5 ಎಕರೆ 18 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಡಲು ಕಾಲಾವಕಾಶವನ್ನು ಕೋರಿರುತ್ತಾರೆ.

ಇದಾದ ನಂತರ ದಿನಾಂಕ 26–04–2021 ರಂದು ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಸಹಕಾರ ಸಂಘಗಳ ನಿಬಂಧಕರ ಕಛೇರಿ ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052 ರವರಿಗೆ, ಬೆತ್ತನಗೆರೆ ಗ್ರಾಮದ ಸರ್ವೆ ನಂ. 35/1 ರಲ್ಲಿನ 5 ಎಕರೆ 18 ಗುಂಟೆ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಡುವ ಬಗ್ಗೆ ಶ್ರೀ ಎಂ.ಜಿ. ರಂಗಧಾಮಯ್ಯ ಮಾಲೀಕರು ಶ್ರೀ ಮೂಕಾಂಭಿಕ ಡೆವಲಪರ್ಸ್ ರವರು ಪತ್ರ ಬರೆದು ಕಾಲಾವಕಾಶ ಕೇಳಿ, ದಿನಾಂಕ 26–04–2021ರ ಪತ್ರದ ಪ್ರತಿಯನ್ನು ಸಂಘಕ್ಕೆ ಮಾಹಿತಿಗಾಗಿ ಸಲ್ಲಿಸಿರುತ್ತಾರೆ. ದಿನಾಂಕ 26–04–2021ರ ಪತ್ರದ ಝೆರಾಕ್ಸ್ ಪ್ರತಿಯನ್ನು 2020–21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಸಹಕಾರ ಸಂಘಗಳ ನಿಬಂಧಕರ ಕಛೇರಿ ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052 ಇವರು ಇವರ ಪತ್ರದ ಕ್ರಮ ಸಂಖ್ಯೆ; ಹೆಚ್‌ಎಸ್‌ಜಿ–3:41:ಹೆಚ್‌ಹೆಚ್‌ಎಸ್:2021–22 ದಿನಾಂಕ 17–07–2021 ರಂದು ಸಂಘದ ಕಾರ್ಯದರ್ಶಿ / ಅಧ್ಯಕ್ಷರು ಗೆ ಪತ್ರ ಬರೆದು, ಅಭಿವೃದ್ಧಿದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ಇವರು ಸಂಘದಿಂದ ಪಡೆದಿರುವ ಹ್ಯಾಡಾಳು ಗ್ರಾಮದ ಸರ್ವೆ ನಂ. 12 ರ 4 ಎಕರೆ 37 ಗುಂಟೆ ಜಮೀನಿಗೆ ಬದಲಾಗಿ ಬೆತ್ತನಗೆರೆ ಗ್ರಾಮದ ಸರ್ವೆ ನಂ. 35/1 ರಲ್ಲಿನ 5 ಎಕರೆ 18 ಗುಂಟೆ ಜಮೀನನ್ನು ನೀಡಬೇಕಾಗಿದ್ದು, ಸದರಿ ಜಮೀನು ಅವರ ವಶದಲ್ಲಿಲ್ಲದ ಕಾರಣ, ಕೂಡಲೇ ಬದಲಿ ಜಮೀನನ್ನು ಸಂಘದ

ವಶಕ್ಕೆ ಪಡೆಯುವ ಅಥವಾ ಸದರಿ ಜಮೀನಿನ ಮೌಲ್ಯದ ಹಣವನ್ನು ಸಂಘಕ್ಕೆ ಜಮಾ ತೆಗೆದುಕೊಳ್ಳುವ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಅಗತ್ಯ ಮುಂದಿನ ಕ್ರಮವಿಡಲು ಸೂಚಿಸಿದೆ, ಎಂದು ದಿನಾಂಕ 17–07–2021 ರಂದು ಸಂಘಕ್ಕೆ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು–52 ರವರು ಪತ್ರ ಬರೆದಿರುತ್ತಾರೆ. ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ರವರು ದಿನಾಂಕ 17–07–2021 ರಂದು ಸಂಘಕ್ಕೆ ಬರೆದಿರುವ ಪತ್ರದ ಜೆರಾಕ್ಸ್ ಪ್ರತಿಯನ್ನು ಮಾಹಿತಿಗಾಗಿ ಈ ವರದಿಯೊಂದಿಗೆ ಲಗತ್ತಿಸಿದೆ.

ದಿನಾಂಕ 17–07–2021ರ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು–52 ರವರು ಬರೆದಿರುವ ಪತ್ರದ ಬಗ್ಗೆ ದಿನಾಂಕ 24–07–2021 ರ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ 4 ಎಕರೆ 37 ಗುಂಟೆ ಜಮೀನಿಗೆ ಬದಲಾಗಿ, ಬದಲಿ ಜಮೀನನ್ನು ಸಂಘಕ್ಕೆ ಕೂಡಲೇ ನೋಂದಣಿ ಮಾಡಿಕೊಡಬೇಕೆಂದು, ಅಥವಾ ಸದರಿ ಜಮೀನಿನ ಮೌಲ್ಯದ ಹಣವನ್ನು ಸಂಘಕ್ಕೆ ಜಮಾ ಮಾಡಬೇಕೆಂದು ಆಡಳಿತ ಮಂಡಳಿ ಸಭೆಯ ದಿನಾಂಕ 24–07–2021 ರಲ್ಲಿ ತೀರ್ಮಾನಿಸಿರುತ್ತದೆಂದು ಮತ್ತು ಶ್ರೀ ಎಂ.ಜಿ. ರಂಗಧಾಮಯ್ಯ ಮಾಲೀಕರು ಶ್ರೀ ಮೂಕಾಂಭಿಕ ಡೆವಲಪರ್ಸ್ ರವರಿಗೆ ಸಂಘದಿಂದ ಪತ್ರ ಬರೆಯಲಾಗುವುದೆಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯನವರು ತಿಳಿಸಿರುತ್ತಾರೆ.

ಆದುದರಿಂದ ತಕ್ಷಣವೇ ಶ್ರೀ ಎಂ.ಜಿ. ರಂಗಧಾಮಯ್ಯ ಮಾಲೀಕರು ಶ್ರೀ ಮೂಕಾಂಭಿಕ ಡೆವಲಪರ್ಸ್ ರವರಿಂದ ಕೂಡಲೇ ಬದಲಿ ಜಮೀನನ್ನು ಸಂಘದ ವಶಕ್ಕೆ ಪಡೆಯುವುದು ಅಥವಾ ಜಮೀನಿನ ಮೌಲ್ಯದ ಹಣವನ್ನು ಸಂಘಕ್ಕೆ ಪಡೆಯಲು, ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು–52 ಇವರ ಪತ್ರದ ಕ್ರಮ ಸಂಖ್ಯೆ; ಹೆಚ್‌ಎಸ್‌ಜಿ–3:41:ಹೆಚ್‌ಹೆಚ್‌ಎಸ್:2021–22 ದಿನಾಂಕ 17–07–2021 ರಂತೆ ಕ್ರಮವಿಡಲು ಸೂಚಿಸಿರುತ್ತಾರೆ.

ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ 4 ಎಕರೆ 37 ಗುಂಟೆ ಜಮೀನಿಗೆ ಬದಲಾಗಿ, ಬೆತ್ತನಗೆರೆ ಗ್ರಾಮದ ಸರ್ವೇ ನಂ. 35/1 ರಲ್ಲಿನ 5 ಎಕರೆ 18 ಗುಂಟೆ ಭೂಪರಿವರ್ತಿತ ಜಮೀನನ್ನು ನೋಂದಣಿ ಮಾಡಿಕೊಡುತ್ತೇನೆಂದು, ಶ್ರೀ ಎಂ.ಜಿ. ರಂಗಧಾಮಯ್ಯ ಮಾಲೀಕರು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್ ರವರು ತಿಳಿಸಿದ ಪ್ರಯುಕ್ತ, ದಿನಾಂಕ 7–06–2014 ರಂದು ಮೆ॥ ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್ ಇದರ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ಸಂಘದಿಂದ ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನನ್ನು ಕ್ರಯಪತ್ರದ ಮೂಲಕ ನೋಂದಣಿ ಮಾಡಿಕೊಟ್ಟು, ಸದರಿ ಜಮೀನಿಗೆ ಮೊಬಲಗನ್ನು ಪಡೆದಿರುವುದಿಲ್ಲವೆಂದು, ಸಂಘದ ಅಧ್ಯಕ್ಷರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನಿಗೆ ಸಂಘಕ್ಕೆ ಮೊಬಲಗನ್ನು ಪಾವತಿಸಿಲ್ಲ ಎಂದು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ದಿನಾಂಕ 9–6–2014 ರಂದು ಸಂಘಕ್ಕೆ ಪತ್ರ ಬರೆದಿರುತ್ತಾರೆ. ಇದರ ಅಂದರೆ ದಿನಾಂಕ 9–6–2014ರ ಪತ್ರದ ಜೆರಾಕ್ಸ್ ಪ್ರತಿಯನ್ನು ಲೆಕ್ಕಪರಿಶೋಧನಾ ವರದಿಗೆ ಮಾಹಿತಿಗಾಗಿ ಲಗತ್ತಿಸಿದೆ. ಸಂಘದಿಂದ ಹ್ಯಾಡಾಳು ಗ್ರಾಮದ ಸರ್ವೇ ನಂ. 12 ರ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನನ್ನು ಕ್ರಯ ಪತ್ರ ಮಾಡಿಕೊಟ್ಟಿರುವ ದಿನಾಂಕ 7–06–2014ರ ಕ್ರಯ ಪತ್ರದಲ್ಲಿ ಸಹಾ ಸಂಘಕ್ಕೆ ಮೊಬಲಗನ್ನು ಪಾವತಿಸಿದ ಬಗ್ಗೆ ನಮೂದು ಇರುವುದಿಲ್ಲ, ಮತ್ತು ಸೇಲ್ Consideration ಬಗ್ಗೆಯು ಸಹಾ ದಿನಾಂಕ 7–6–2014ರ ಕ್ರಯ ಪತ್ರದಲ್ಲಿ ನಮೂದು ಇರುವುದಿಲ್ಲ. ದಿನಾಂಕ 7–06–2014ರ ಕ್ರಯ ಪತ್ರದಲ್ಲಿ, ಸ್ವತ್ತಿನ ಮಾರುಕಟ್ಟೆ ಮೌಲ್ಯವು ರೂ. 1,18,20,000–00 (ರೂ. ಒಂದು ಕೋಟಿ ಹದಿನೆಂಟು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಆಗಿದ್ದು, ಅದು ಶೇಕಡ 1 ರಷ್ಟು ಟಿ.ಡಿ.ಎಸ್ ಒಳಗೊಂಡಿರುತ್ತದೆ ಎಂದು ಮಾತ್ರ ಇರುತ್ತದೆ. ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು, ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನಿಗೆ ಮೊಬಲಗನ್ನು ಸಂಘಕ್ಕೆ ಪಾವತಿಸದೇ ಇರುವುದರಿಂದ, ಸದರಿ ಸ್ವತ್ತಿನ ಬಾಬ್ತು ಮೊಬಲಗನ್ನು 2014–15ನೇ ಸಾಲಿನಲ್ಲಿ ಸಂಘಕ್ಕೆ ಜಮಾ ತೆಗೆದುಕೊಂಡಿಲ್ಲವೆಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ

ನವರು ತಿಳಿಸಿರುತ್ತಾರೆ ಹಾಗೂ ದಿನಾಂಕ 17–07–2021ರ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ರವರ ಪತ್ರದಂತೆ ಬದಲಿ ಜಮೀನನ್ನು ಸಂಘದ ವಷಕ್ಕೆ ಪಡೆಯಲು ಅಥವಾ ಸದರಿ ಜಮೀನಿನ ಮೌಲ್ಯದ ಹಣವನ್ನು ಸಂಘಕ್ಕೆ ಜಮಾ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದೆಂದು, ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ ಮತ್ತು ದಿನಾಂಕ 9–06–2014ರ ಪತ್ರದಲ್ಲಿ ಮತ್ತು ದಿನಾಂಕ 26–04–2021ರ ಪತ್ರದಲ್ಲಿ ತಿಳಿಸಿರುವಂತೆ 4 ಎಕರೆ 37 ಗುಂಟೆ ಜಮೀನಿಗೆ ಬದಲಾಗಿ 5 ಎಕರೆ 18 ಗುಂಟೆ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಡಬೇಕಾದುದರಿಂದ 4 ಎಕರೆ 37 ಗುಂಟೆ ಜಮೀನಿಗೆ ಸಂಘಕ್ಕೆ ಮೊಬಲಗನ್ನು ಶ್ರೀ ಎಂ.ಜಿ. ರಂಗಧಾಮಯ್ಯ ಮಾಲೀಕರು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್ ನವರು ಪಾವತಿಸಿಲ್ಲ ಎಂದು ಸಂಘದ ಅಧ್ಯಕ್ಷರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ದಿನಾಂಕ 26–4–2021 ರಂದು ಶ್ರೀ ಎಂ.ಜಿ. ರಂಗಧಾಮಯ್ಯ ನವರು ಮಾಲೀಕರು ಶ್ರೀ ಮೂಕಾಂಭಿಕ ಡೆವಲಪರ್ಸ್ ರವರು ಹ್ಯಾಡಾಳು ಗ್ರಾಮದ ಸರ್ವೇ ನಂ. 12ರ 4 ಎಕರೆ 37 ಗುಂಟೆ ಭೂಪರಿವರ್ತಿತ ಜಮೀನಿಗೆ ಸಂಘಕ್ಕೆ ಮೊಬಲಗನ್ನು ಪಾವತಿಸಿಲ್ಲ ಎಂದು ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು–52 ರವರಿಗೆ ಪತ್ರ ಬರೆದಿದ್ದು, ದಿನಾಂಕ 9–6–2014ರ ಪತ್ರ ಮತ್ತು 26–4–2021ರ ಪತ್ರದ ಜೆರಾಕ್ಸ್ ಪ್ರತಿಯನ್ನು ಈ ಲೆಕ್ಕಪರಿಶೋಧನಾ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹ್ಯಾಡಾಳು ಗ್ರಾಮದ ವಿವಿಧ ಸರ್ವೇ ನಂಬರ್‌ಗಳ 17 ಎಕರೆ 34 ಗುಂಟೆ ಮತ್ತು ಕೆ.ಜಿ. ಶ್ರೀನಿವಾಸಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳ 28 ಎಕರೆ 20 ಗುಂಟೆ ಒಟ್ಟಾರೆ 46 ಎಕರೆ 14 ಗುಂಟೆ ವಿಸ್ತೀರ್ಣ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ 17–10–2013 ರಂದು ಕಾರ್ಯಾದೇಶದ ಪತ್ರದ ಸಂಖ್ಯೆ ನೆಯೋಪ್ರಾ:LAO/21/2012–13ರ ಮುಖಾಂತರ ನೆಲಮಂಗಲ ಯೋಜನಾ ಪ್ರಾಧಿಕಾರದವರು ಅನುಮೋದನೆಯನ್ನು ನೀಡಿರುತ್ತಾರೆ. ದಿನಾಂಕ 11–10–2013 ರಂದು ಪರಿತ್ಯಾಜನಾ ಪತ್ರವನ್ನು ಸನ್ಮಾನ್ಯ ಕರ್ನಾಟಕ ರಾಜ್ಯಪಾಲರ ಪರವಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಂಘದ ಅಧ್ಯಕ್ಷರು ಪರಿತ್ಯಾಜನಾ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಒಟ್ಟಾರೆ 46 ಎಕರೆ 14 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಿವಿಧ ಅಳತೆಯ 617 ನಿವೇಶನಗಳನ್ನು ಮಾಡಿದ್ದು, ನೆಲಮಂಗಲ ಪ್ರಾಧಿಕಾರದಿಂದ 370 ವಿವಿಧ ಅಳತೆಯ ನಿವೇಶನಗಳು ಮಾತ್ರ ದಿನಾಂಕ 31–3–2014ಕ್ಕೆ ಬಿಡುಗಡೆಯಾಗಿದ್ದು, ಉಳಿಕೆ 247 ವಿವಿಧ ಅಳತೆಯಗಳ ನಿವೇಶನಗಳು ದಿನಾಂಕ 31–3–2021ರ ವರೆವಿಗೂ ಬಿಡುಗಡೆಯಾಗಿಲ್ಲ. ತಕ್ಷಣವೇ ಇದರ ಬಗ್ಗೆ ಸಂಘದ ಪದಾಧಿಕಾರಿಗಳು (ಅಧ್ಯಕ್ಷರು, ಉಪಾಧ್ಯಕ್ಷರು) ಮತ್ತು ಆಡಳಿತ ಮಂಡಳಿ ಸದಸ್ಯರು ಗಮನ ಹರಿಸಿ, ಬಿಡುಗಡೆಗೆ ಸೂಕ್ತ ಕ್ರಮ ವಿಡುವುದು.

ದಿನಾಂಕ 31–3–2021ರ ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5 (ಜೆ), (ಕೆ) ಮತ್ತು (ಎಲ್)ನಲ್ಲಿ ತೋರಿಸಿರುವಂತೆ, ಸಾಲು ಪ್ರಾರಂಭದಿಂದ ಸಾಲಾಖೈರಿಗೆ ಸಂದೇಶ್ ನಗರ–1ನೇ ಹಂತದ ಬಡಾವಣೆ ತೆರಿಗೆ ಬಾಬ್ತು ರೂ. 84,700–00 ಗಳು ಮತ್ತು ಲೀಗಲ್ ಫೀ ರೂ. 3,19,100–00 ಗಳು ಮತ್ತು ಸಂದೇಶ್ ನಗರ–1ನೇ ಹಂತದ ಬಡಾವಣೆ ನಿವೇಶನ ಹಂಚಿಕೆ ಸಭೆ ವೆಚ್ಚದ ಬಾಬ್ತು ರೂ. 13,51,398–00 ಗಳು ಸಂದೇಶ್ ನಗರ–1ನೇ ಹಂತದ ಬಡಾವಣೆ ಲೆಕ್ಕದಡಿ ಮುಂದುವರಿಯುತ್ತದೆ.

**2 <u>ಸಂದೇಶ್ ನಗರ 2ನೇ ಹಂತದ ಬಡಾವಣೆ ಶ್ರೀ ಮೂಕಾಂಬಿಕ ಎಂಟರ್ ಪ್ರೈಸಸ್ ನೆಲಮಂಗಲ ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್ ನೆಲಮಂಗಲ.</u>**

ಸಂಘವು ತನ್ನ ಸದಸ್ಯರುಗಳ ಅನುಕೂಲಕ್ಕಾಗಿ ನಿವೇಶನಗಳನ್ನು ಹಂಚಿಕೆ ಮಾಡಲು ದಿನಾಂಕ: 17–09–2006ರ ವಾರ್ಷಿಕ ಮಹಾಸಭೆಯಲ್ಲಿ ಹಾಗೂ ದಿನಾಂಕ: 29–10–2006 ರ ಆಡಳಿತ ಮಂಡಳಿ ಸಭೆಗಳಲ್ಲಿ ತೀರ್ಮಾನಿಸಿದಂತೆ.

ಸಂಘವು 2 ಹಂತದ ಬಡಾವಣೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು. ಈ ಉದ್ದೇಶಕ್ಕಾಗಿ ಸುಂದೇಶ್ ನಗರ 2ನೇ ಬಡಾವಣೆಯ ವಿವಿಧ ಸರ್ವೆ ನಂಬರುಗಳಲ್ಲಿ ಅಂದರೆ 29/2, 30/1, 31/3, 26/1, 27/5, 30/2, 28, 26/2, 26/7, 27/7, 23/1 ರಿಂದ 23/3, 22/1, 25, 24/1, ಹಾಗೂ ಬೆತ್ತನಗೆರೆ ಗ್ರಾಮದ ಸರ್ವೆ ನಂಬರ್ 25/2, 25, 24/1 ರಿಂದ 24/3, 16, 17 ಮತ್ತು 18 ರಲ್ಲಿ ಸುಮಾರು 11 ಎಕರೆ 25 ಗುಂಟೆ ಭೂ ಪರಿವರ್ತಿತ ಜಮೀನು ಮತ್ತು ಸುಮಾರು 30 ಎಕರೆ ಕೃಷಿ ಜಮೀನು ಒಟ್ಟು ಸುಮಾರು 41 ಎಕರೆ 25 ಗುಂಟೆ ಪೈಕಿ ಸುಮಾರು 37 ಎಕರೆ ಜಮೀನನ್ನು ಸಂಘದ ಪರವಾಗಿ ಖರೀದಿಸಿ ಸದರಿ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಅಂದರೆ ಬಡಾವಣೆ ನಿರ್ಮಾಣ ಮಾಡಿಕೊಡಲು ಜಮೀನು ಖರೀದಿ, ಭೂ ಪರಿವರ್ತನೆ ಮತ್ತು ಬಡಾವಣೆ ನಿರ್ಮಾಣ ಮಾಡಲು ಅನುಭವವುಳ್ಳ ಎರಡು ಜನ ಬಡಾವಣೆ ನಿರ್ಮಾಣ ಮಾಡುವ ಗುತ್ತಿಗೆದಾರರಿಂದ ದರ ಪಟ್ಟಿ ಪಡೆದು ಸದರಿ ದರ ಪಟ್ಟಿಗಳನ್ನು ದಿನಾಂಕ: 24-2-2008 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್ ನೆಲಮಂಗಲ, ಇವರಿಗೆ ಬಡಾವಣೆ ನಿರ್ಮಾಣ ಮಾಡುವ ಗುತ್ತಿಗೆಯನ್ನು ನೀಡಲು ತೀರ್ಮಾನಿಸ ಲಾಗಿರುವುದಾಗಿ ಹಿಂದಿನ ವರದಿಗಳಲ್ಲಿ ಉಲ್ಲೇಖಿಸಿದೆ. ಈ ತೀರ್ಮಾನದಂತೆ ಸಂದೇಶ್ ನಗರ-2ನೇ ಹಂತದ ಬಡಾವಣೆ ಮಾಡಲು ಡೆವಲಪರ್ಸ್ ರವರಾದ ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್ ಎಂ.ಜಿ. ರೋಡ್, ಸುಭಾಶ್ ನಗರ, ನೆಲಮಂಗಲ ಟೌನ್- ಇದರ ಪರವಾಗಿ ಇದರ ಪ್ರೋಪ್ರೈಟರ್ (ಮಾಲೀಕರು) ಆದ ಶ್ರೀ ಎಂ.ಜಿ. ರಂಗಧಾಮಯ್ಯ ಬಿನ್ ಲೇಟ್ ಗಂಗಯ್ಯ.ಸಿ, ಮುನಿಯಪ್ಪ ಲೇಔಟ್, 2ನೇ ಕ್ರಾಸ್ ಸುಭಾಷ್‌ನಗರ, ನೆಲಮಂಗಲ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ಇವರೊಂದಿಗೆ ದಿ ಬೆಂಗಳೂರು ಪೋಸ್ಟಲ್ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ. 7, ಸಂದೇಶ್ ಭವನ, 3ನೇ ಮುಖ್ಯರಸ್ತೆ, ಮೊದಲನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು- 560094. ಈ ಸಂಘದ ಪ್ರತಿನಿಧಿಯಾಗಿ ಶ್ರೀ ಹೆಚ್.ಕೆ. ಗೋಪಾಲಕೃಷ್ಣ, ಆಥರೈಸ್ಡ್ ಡೈರೆಕ್ಟರ್ ರವರು ದಿನಾಂಕ 28-02-2008 ರಂದು ನೋಂದಣಿ ರಹಿತ ಪರಸ್ಪರ ಒಪ್ಪಂದದ [MEMORANDUM OF UNDERSTANDING] [M.O.U] ವನ್ನು ಮಾಡಿಕೊಂಡಿದ್ದಾರೆ. ಸಂದಾಯಿಸಿರುವ ಮೊಬಲಗಿಗೆ ಬ್ಯಾಂಕ್ ಗ್ಯಾರಂಟಿ, ಭದ್ರತೆ ಪಡೆದಿರುವುದಿಲ್ಲ. ದಿನಾಂಕ 28-02-2008 ರ M.O.U ನಲ್ಲಿ ತಿಳಿಸಿರುವಂತೆ ಸಂದೇಶ್ ನಗರ-2ನೇ ಹಂತದ ಬಡಾವಣೆ ಕೆಲಸಕಾರ್ಯಗಳು, ನಿಗಧಿತ 24 ತಿಂಗಳೊಳಗಾಗಿ ಮುಕ್ತಾಯವಾಗಿಲ್ಲ.

ದಿನಾಂಕ 28-02-2008 ರಲ್ಲಿ ಸಂದೇಶ್ ನಗರ-2ನೇ ಹಂತದ ಬಡಾವಣೆಯನ್ನು ಮಾಡಲು, ಸಂಘವು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಪ್ರತಿನಿಧಿ ಮತ್ತು ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು (M.O.U) ಮಾಡಿಕೊಂಡಿರುತ್ತಾರೆ. ದಿನಾಂಕ 28-02-2008ರ M.O.U ನಲ್ಲಿ ತಿಳಿಸಿರುವ ಕರಾರಿನ ಅವಧಿಯು ಮುಗಿದ ಕಾರಣ ಸಂಘದ ಮಾಹೆಯಾನ ಆಡಳಿತ ಮಂಡಳಿ ಸಭೆಯ ದಿನಾಂಕ 28-9-2019 ರ ಠರಾವಿನಂತೆ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಹೆಸರಿನಲ್ಲಿ ಸಂದೇಶ್ ನಗರ-2ನೇ ಹಂತದ ಬಡಾವಣೆಗೆ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ದಿನಾಂಕ 7-11-2019 ರಲ್ಲಿ ಸಂಘದ ಪ್ರತಿನಿಧಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರು (ಒಂದನೇ ಪಾರ್ಟಿ); ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್-1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ (ಎರಡನೇ ಪಾರ್ಟಿ) ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ದಿನಾಂಕ 7-11-2019ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ, ಎರಡನೇ ಪಾರ್ಟಿಯಾದ ಈಗ ಹಾಲಿ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್-1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ದಿನಾಂಕ 28-2-2008ರ ಒಪ್ಪಂದದ ಕರಾರು ಪತ್ರದಲ್ಲಿ (M.O.U) ರುವ ಸಂದೇಶ್ ನಗರ-2ನೇ ಹಂತದ ಬಡಾವಣೆಯ ಎಲ್ಲಾ ಕೆಲಸಗಳನ್ನು ದಿನಾಂಕ 7-11-2019 ರಿಂದ 12 ತಿಂಗಳುಗಳ ಅವಧಿಯೊಳಗಾಗಿ ಬಡಾವಣೆಯ ಎಲ್ಲಾ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ, ಒಂದನೇ ಪಾರ್ಟಿಯಾದ ಸೊಸೈಟಿಯವರಿಗೆ ವರ್ಗಾಯಿಸುವುದಾಗಿ ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್-1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ತಿಳಿಸಿದ ಪ್ರಯುಕ್ತ ಇದಕ್ಕೆ ಒಂದನೇ ಪಾರ್ಟಿಯಾದ ಸೊಸೈಟಿಯವರು ಸಹಾ ಒಪ್ಪಿಕೊಂಡಿರುತ್ತಾರೆ. ಆದರೆ ದಿನಾಂಕ 7-11-2019ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ ಮಾಡಿಕೊಂಡಿರುವ ಅವಧಿಯು ಸಹಾ ಮುಗಿದಿರುತ್ತದೆ. ನವೀಕರಿಸಿಲ್ಲ, ಸಂದೇಶ್ ನಗರ-2ನೇ ಹಂತದ ಬಡಾವಣೆಯ ಕೆಲಸಕಾರ್ಯಗಳು ಪೂರ್ತಿಯಾಗಿ ಮುಗಿದಿಲ್ಲ. ಇದರ ಬಗ್ಗೆ ಸಂಘದ ಅಧ್ಯಕ್ಷರು,

ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು, ಕಾರ್ಯದರ್ಶಿಯವರು ಗಮನ ಹರಿಸಿ, ತಕ್ಷಣವೇ ನವೀಕೃತ M.O.U ವನ್ನು ಸೂಕ್ತ ರೀತಿಯಲ್ಲಿ ನಿಯಮಾನುಸಾರ ಮಾಡಿಕೊಳ್ಳುವುದು ಅತ್ಯಾಗತ್ಯ ಹಾಗೂ ಸಂದೇಶ್ ನಗರ-2ನೇ ಹಂತದ ಬಡಾವಣೆಯ ಎಲ್ಲಾ ಕೆಲಸ ಕಾರ್ಯಗಳನ್ನು ಮುಕ್ತಾಯಗೊಳಿಸಿ, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿ ನೋಂದಣಿ ಮಾಡಿಕೊಡಲು ಕ್ರಮವಿಡುವುದು.

ಸಂಘವು ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್ ನೆಲಮಂಗಲ, ಇವರೊಂದಿಗೆ ದಿನಾಂಕ: 28-02-2008 ರಂದು ಮಾಡಿಕೊಂಡಿರುವ M.O.Uನ ಮುಖ್ಯಾಂಶಗಳನ್ನು ಮತ್ತು ಹಣ ಬಿಡುಗಡೆಯ ಬಗ್ಗೆ ಹಾಗೂ ನಿವೇಶನದ ಚದರ ಅಡಿಗೆ ರೂ. 470-00 ಗಳನ್ನು ಡೆವಲಪರ್ಸ್ ರವರಿಗೆ ಸಂಘದಿಂದ ನೀಡುವ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ 2013-14 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 46 ರಿಂದ 55 ರ ವರೆವಿಗೆ ವಿವರವಾಗಿ ವಿವರಿಸಿರುತ್ತಾರೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ವರದಿ ಸಾಲಿನ ಈ ವರದಿಯಲ್ಲಿ ವಿವರಿಸಿರುವುದಿಲ್ಲ.

ಸಂದೇಶ್ ನಗರ-2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ ದಿನಾಂಕ 31-03-2021 ಕ್ಕೆ ವರದಿಯಲ್ಲಿ ಲಗತ್ತಿಸಿರುವ **ಅನುಬಂಧ-14**ರ ರೀತ್ಯಾ25 ಎಕರೆ 31.5 ಗುಂಟೆ ಜಮೀನು ಭೂ ಪರಿವರ್ತನೆಯಾಗಿ ಸಂಘದ ಹೆಸರಿಗೆ ನೊಂದಣಿಯಾಗಿದೆ ಮತ್ತು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದ ಶ್ರೀ. ಹೆಚ್.ಕೆ. ಗೋಪಾಲ ಕೃಷ್ಣ ಇವರ ಹೆಸರಿನಲ್ಲಿ ಬೆತ್ತನಗೆರೆ ಗ್ರಾಮದ ಸರ್ವೆ ನಂ. 36/2ಎ, 36/2ಬಿ ಗೆ ಸಂಬಂಧಪಟ್ಟ 0.16 ಗುಂಟೆ ಜಮೀನು ಸೇಲ್‌ಡೀಡ್ ಅಗಿದೆ. ಈ 0.16 ಗುಂಟೆ ಜಮೀನು ದಿನಾಂಕ 31-3-2018ರ ವರೆವಿಗೂ ಭೂಪರಿವರ್ತನೆಯಾಗಿಲ್ಲ. ಶ್ರೀ ಹೆಚ್.ಕೆ.ಗೋಪಾಲಕೃಷ್ಣ ಮಾಜಿ ಕಾರ್ಯ ನಿರ್ವಾಹಕ ನಿರ್ದೇಶಕರು ಸದರಿ 0.16 ಗುಂಟೆ ಜಮೀನನ್ನು ಸಂಘದ ಪರವಾಗಿ ಸಂಘದ ವಿಳಾಸ ನೀಡಿ, ತಮ್ಮ ಹೆಸರಿಗೆ ನೋಂದಣಿ ಮಾಡಿಕೊಳ್ಳದೇ ತಮ್ಮ ಮನೆ ವಿಳಾಸ ನೀಡಿ, ಸೇಲ್‌ಡೀಡ್‌ನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ.ಈ ಸಂಬಂಧವಾದ ಮೂಲ ನೊಂದಣಿ ಪತ್ರಗಳು ಸಂಘದ ವಶದಲ್ಲಿರುತ್ತದೆ.ಸದರಿ 0.16 ಗುಂಟೆಜಮೀನನ್ನು ಶ್ರೀ ಗೋಪಾಲಕೃಷ್ಣ ಹೆಚ್.ಕೆ. ರವರು ಸಂಘಕ್ಕೆ ನೋಂದಣಿ ಮಾಡಿಕೊಟ್ಟಿರುವುದಿಲ್ಲ. ಇದರ ಬಗ್ಗೆ ಆಡಳಿತ ಮಂಡಳಿಯವರು ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು ರವರ ಕಛೇರಿಯಲ್ಲಿ ದಾವೆ ಹೂಡಿದ್ದು, ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ತಮ್ಮ ಹೆಸರಿನಲ್ಲಿ ಖರೀದಿಸಿ ಸಂಘಕ್ಕೆ ವರ್ಗಾಯಿಸಲು ಬಾಕಿ ಇರುವ ಮೇಲೆ ವಿವರಿಸಿರುವ 0.16 ಗುಂಟೆ ಕೃಷಿ ಜಮೀನನ್ನು ದಿನಾಂಕ 17-11-2018 ರ ದಿನಾಂಕದಿಂದ 03 ತಿಂಗಳೊಳಗಾಗಿ ಭೂಪರಿವರ್ತನೆ ಮಾಡಿಸಿ ಸಂಘಕ್ಕೆ ಹಸ್ತಾಂತರಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರಿಗೆ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ದಿನಾಂಕ 17-11-2018 ರಂದು (ಸಂಖ್ಯೆ ಅನಿ(ವ&ಇ)ಡಿ6:ಎಂಡಿ/01/2014-15) ಆದೇಶ ನೀಡಿರುತ್ತಾರೆ ತಪ್ಪಿದಲ್ಲಿ ಸಂಘವು ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ವಿರುದ್ಧ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲು ಸಂಘವು ಸ್ವತಂತ್ರರು ಎಂದು ಸಹಾ ದಿನಾಂಕ 17-11-2018ರ ಆದೇಶದಲ್ಲಿ ತಿಳಿಸಿರುತ್ತಾರೆ. ದಿನಾಂಕ 17-11-2018ರ ಆದೇಶದ ಪ್ರತಿಯನ್ನು ಲೆಕ್ಕಪರಿಶೋಧನಾ ವರದಿಯೊಂದಿಗೆ ಲಗತ್ತಿಸಿದೆ.

ಈ ಆದೇಶದ ರೀತ್ಯಾ 3 ತಿಂಗಳೊಳಗೆ ಭೂಪರಿವರ್ತನೆ ಮಾಡಿಸಿ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ಸಂಘಕ್ಕೆ 0.16 ಗುಂಟೆ ಜಮೀನನ್ನು ನೋಂದಣಿ ಮಾಡಿಕೊಟ್ಟಿರುವುದಿಲ್ಲ; ಹಸ್ತಾಂತರಿಸಿರುವುದಿಲ್ಲ, ನಂತರ ಸಂಘದಿಂದ ದಿನಾಂಕ 2-1-2019 ರಂದು, ಶ್ರೀ ಹೆಚ್.ಕೆ. ಗೋಪಾಲಕೃಷ್ಣ ಸಂಘದ ಮಾಜಿ ನಿರ್ದೇಶಕರಿಗೆ ಪತ್ರ ಬರೆದು, ಬೆತ್ತನಗೆರೆ ಗ್ರಾಮದ ಸರ್ವೆ ನಂ. 36/2ಎ, 36/2ಬಿ ಗೆ ಸಂಬಂಧಿಸಿದ 0.16 ಗುಂಟೆ ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಕೊಡಲು ತಿಳಿಸಲಾಗಿದೆ. ದಿನಾಂಕ 2-1-2019ರ ಪತ್ರದ ಜೆರಾಕ್ಸ್ ಪ್ರತಿಯನ್ನು ಈ ಪತ್ರದೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ. ನಂತರ ದಿನಾಂಕ 26-3-2019 ರಂದು ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ಸಂಘಕ್ಕೆ ಪತ್ರ ಬರೆದು 0.16 ಗುಂಟೆಗೆ ಸಂಬಂಧಿಸಿದಂತೆ, ಕೆಲವು ಕಾಗದ ಪತ್ರಗಳನ್ನು, Original Documents ನ್ನು ಮತ್ತು ರೂ. 25 ಲಕ್ಷಗಳನ್ನು Advance ಆಗಿ ನೀಡಿದರೇ 0.16 ಗುಂಟೆ ನೋಂದಣಿ ಮಾಡಿಕೊಡಲು ತಿಳಿಸಿದರು. ದಿನಾಂಕ 26-3-2019ರ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ಪತ್ರದ ಜೆರಾಕ್ಸ್ ಪ್ರತಿಯನ್ನು ವರದಿಯೊಂದಿಗೆ

ಲಗತ್ತಿಸಿದೆ. ನಂತರ ಸಂಘದಿಂದ ದಿನಾಂಕ 26–8–2019 ರಂದು ಮತ್ತು ದಿನಾಂಕ 20–6–2020 ರಂದು ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರಿಗೆ ಪತ್ರ ಬರೆದರು 0.16 ಗುಂಟೆ ಕೃಷಿ ಜಮೀನನ್ನು ಭೂಪರಿವರ್ತನೆ ಮಾಡಿಸಿ, ಸಂಘಕ್ಕೆ 15 ದಿವಸದಲ್ಲಿ ಹಸ್ತಾಂತರಿಸುವುದು ಎಂದು ತಿಳಿಸಿದ್ದರು ಸಹಾ, ಸಂಘಕ್ಕೆ ನೋಂದಣಿ ಮಾಡಿಕೊಟ್ಟಿಲ್ಲ. ಸಂಘದ ದಿನಾಂಕ 26–8–2019 ಮತ್ತು 20–6–2020ರ ಪತ್ರದ ಝೆರಾಕ್ಸ್ ಪ್ರತಿಯನ್ನು ವರದಿಯೊಂದಿಗೆ ಲಗತ್ತಿಸಿದೆ. ನಂತರ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು, ದಿನಾಂಕ 17–11–2018ರ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ರವರ ಆದೇಶ ರದ್ದು ಪಡಿಸಲು ಕೆ.ಎ.ಟಿ ಗೆ ಅಪೀಲು ಹೋಗಿರುತ್ತಾರೆ. ಕೆ.ಎ.ಟಿ ಯಿಂದ ಸಂಘಕ್ಕೆ ದಿನಾಂಕ 20–02–2021 ರಂದು ಪತ್ರ (ಅಪೀಲ್ ನಂ. 255/2019) ಬಂದಿದೆ. ಸಂಘವು ಸಹಾ ಕೆ.ಎ.ಟಿ ಯಲ್ಲಿ ತಕರಾರು (Objection) ಹಾಕಲು ಶ್ರೀ ಅಶೋಕ್ ಹಂದೆ ವಕೀಲರನ್ನು ನೇಮಿಸಿಕೊಳ್ಳಲಾಗಿದೆ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಕಾರ್ಯದರ್ಶಿಯವರು ಮತ್ತು ಅಧ್ಯಕ್ಷರು ತಿಳಿಸಿರುತ್ತಾರೆ. ಮೇಲೆ ತಿಳಿಸಿರುವ 0.16 ಗುಂಟೆ ಜಮೀನಿನ ಬಗ್ಗೆ ತಕ್ಷಣವೇ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ಕೃಷ್ಣ ರವರ ವಿರುದ್ಧ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲು ಆಡಳಿತ ಮಂಡಳಿಯವರು ಮತ್ತು ಕಾರ್ಯದರ್ಶಿಯವರು ಕ್ರಮವಿಡುವುದು ಅತ್ಯಾಗತ್ಯ.

ಸಂದೇಶ್ ನಗರ–2ನೇ ಹಂತದ ಡೆವಲಪಪರ್ಸ್ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಹೆಸರಿಗೆ 8 ಎಕರೆ 0.3 ಗುಂಟೆ ಜಮೀನು ಅಗ್ರಿಮೆಂಟ್ ಆಫ್ ಸೇಲ್, ಸೇಲ್‌ಡೀಡ್ ಆಗಿದೆ. Conversion under Progress ಎಂದು ಹಿಂದಿನ ಸಾಲುಗಳಿಂದ ಮುಂದುವರಿಯುತ್ತದೆ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು, ಡೆವಲಪರ್ಸ್ ರವರೊಂದಿಗೆ ಮಾತನಾಡಿ, ತಕ್ಷಣವೇ ಕ್ರಮ ತೆಗೆದುಕೊಂಡು ನಿಯಮಾನುಸಾರ ಭೂಪರಿವರ್ತನೆ ಮಾಡಿಸಿ, ಸಂಘಕ್ಕೆ ನೋಂದಣಿ ಮಾಡಿಸಿಕೊಳ್ಳುವುದು ಅತ್ಯಾಗತ್ಯ. ಇದೇ ರೀತಿ ಹ್ಯಾಡಾಳು ಗ್ರಾಮದ ಸರ್ವೇ ನಂ. 12 ರ 1 ಎಕರೆ 06 ಗುಂಟೆ ಮತ್ತು ಮೈಲನಹಳ್ಳಿಯ ಸರ್ವೇ ನಂ. 85/1ರ 29 ಗುಂಟೆ ಜಮೀನಿನ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಂಡು ಭೂಪರಿವರ್ತನೆ ಮಾಡಿಸುವುದು ಅತ್ಯಾಗತ್ಯ.ಇದರ ಬಗ್ಗೆ **ಅನುಬಂಧ– 14** ನ್ನು ವರದಿಯೊಂದಿಗೆ ಲಗತ್ತಿಸಿದೆ. ಇದರ ಭೂಪರಿವರ್ತನೆ ಕಾರ್ಯ ಪ್ರಗತಿಯಲ್ಲಿದೆ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಅಧ್ಯಕ್ಷರು ತಿಳಿಸಿರುತ್ತಾರೆ.

ಸಂದೇಶ್ ನಗರ–2ನೇ ಹಂತದ ಬಡಾವಣೆಯ ಬಾಬ್ತು ಶ್ರೀ ಮೂಕಾಂಬಿಕ ಎಂಟರ್‌ಪ್ರೈಸಸ್ ನವರ ಮಾಲೀಕರಾದ ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಲೆಕ್ಕದಲ್ಲಿ ಹಿಂದಿನ ಆಡಿಟ್ ವರದಿಯಲ್ಲಿ ವಿವರಿಸಿರುವಂತೆ ದಿನಾಂಕ 31–03–2020 ಕ್ಕೆ ರೂ. 43,79,60,037–00 ಗಳಿರುತ್ತದೆ. 2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ ಖರ್ಚಿನ ಕ್ರಮ ಸಂಖ್ಯೆ 7 (ಎ) ಮತ್ತು 7 (ಬಿ) 1 ರಿಂದ 2ರ ವರೆವಿಗೆ ವಿವರಿಸಿರುವಂತೆ ರೂ. 13,97,400–00 ಗಳನ್ನು ಸಂದೇಶ್ ನಗರ–2ನೇ ಹಂತದ ಬಡಾವಣೆ ಲೆಕ್ಕಕ್ಕೆ ಸಂಘದವರು ಹಾಕಿರುತ್ತಾರೆ. ಈ ಕೆಳಕಂಡ ವಿವರದ ರೀತ್ಯಾ, ಸಂದೇಶ್ ನಗರ–2ನೇ ಹಂತದ ಬಡಾವಣೆಯ ಬಾಬ್ತು ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್ ನವರ ಮಾಲೀಕರಾದ ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ಸಂದೇಶ್ ನಗರ–2ನೇ ಹಂತದ ಬಡಾವಣೆಯ ಬಾಬ್ತು, ಶ್ರೀ ಮೂಕಾಂಭಿಕ ಡೆವಲಪರ್ಸ್ ರವರ ಲೆಕ್ಕಕ್ಕೆ, ಮುಂಗಡ ಹಾಗೂ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಪತ್ರದ ದಿನಾಂಕ 4–4–2021 ಮತ್ತು ದಿನಾಂಕ 15–6–2021 [ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರ ಪತ್ರದ ದಿನಾಂಕ 4–4–2020 ಮತ್ತು ದಿನಾಂಕ 15–6–2021ರ ಪತ್ರದ ಝೆರಾಕ್ಸ್ ಪ್ರತಿಯನ್ನು ವರದಿ ಸಾಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ] ರ ಹೇಳಿಕೆಯ ಪ್ರಕಾರ ಸಂದೇಶ್ ನಗರ–2ನೇ ಹಂತದ ಬಡಾವಣೆ ಬಾಬ್ತು ಸಂಘದಿಂದ 2020–21ನೇ ಸಾಲಿನಲ್ಲಿ ಖರ್ಚು ಮಾಡಿರುವ ಮೊಬಲಗನ್ನು ಸಂದೇಶ್ ನಗರ–2ನೇ ಹಂತದ ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ, ಪಾರ್ಟನರ್–1 ಆದ ಶ್ರೀ ಮೂಕಾಂಭಿಕ ಡೆವಲಪರ್ಸ್ ನವರ ಸಂದೇಶ್ ನಗರ–2ನೇ ಹಂತದ ಬಡಾವಣೆಯ ಲೆಕ್ಕಕ್ಕೆ ಸಂಘದವರು ಹಾಕಿರುತ್ತಾರೆ. ದಿನಾಂಕ 31–3–2021ಕ್ಕೆ ಈ ಕೆಳಕಂಡಂತೆ ಇರುತ್ತದೆ.

ದಿನಾಂಕ 31–3–2021ರ ಬ್ಯಾಲನ್ ಷೀಟಿನ ಆಸ್ತಿ ಜವಾಬ್ದಾರಿ
ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(2)ರ ರೀತ್ಯಾ ದಿನಾಂಕ
31–03–2021ರ ವರೆವಿಗೆ ಶ್ರೀ ಮೂಕಾಂಭಿಕ ಎಂಟರ್ ಪ್ರೈಸಸ್
ಮಾಲೀಕರಾದ ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1
ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ ಸಂದೇಶ್ ನಗರ–2ನೇ
ಹಂತದ ಬಡಾವಣೆ ಬಾಬ್ತು ಮುಂಗಡ, ಶ್ರೀ ಮೂಕಾಂಭಿಕ
ಡೆವಲಪರ್ಸ್ ರವರ ಲೆಕ್ಕಕ್ಕೆ ರೂ. 42,94,45,609–00

1) ದಿನಾಂಕ 31–3–2021ರ ಬ್ಯಾಲನ್ ಷೀಟಿನ ಆಸ್ತಿ–ಜವಾಬ್ದಾರಿಯ
ಆಸ್ತಿಯ ಕ್ರಮ ಸಂಖ್ಯೆ 5(2) (ಎ) ನಲ್ಲಿ ವಿವರಿಸಿರುವಂತೆ ರೂ. 31,24,982–00

2) ದಿನಾಂಕ 31–3–2021ರ ಬ್ಯಾಲನ್ ಷೀಟಿನ ಆಸ್ತಿ–ಜವಾಬ್ದಾರಿಯ
ಆಸ್ತಿಯ ಕ್ರಮ ಸಂಖ್ಯೆ 5(2)(ಬಿ) ನಲ್ಲಿ ವಿವರಿಸಿರುವಂತೆ ರೂ. 34,76,200–00

3) ದಿನಾಂಕ 31–03–2021ರ ಬ್ಯಾಲನ್‌ಷೀಟಿನ ಆಸ್ತಿ–ಜವಾಬ್ದಾರಿ
ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(2) (ಸಿ) ನಲ್ಲಿ ವಿವರಿಸಿರುವಂತೆ ರೂ. 31,63,246–00

4) ದಿನಾಂಕ 31–03–2021ರ ಬ್ಯಾಲನ್‌ಷೀಟಿನ ಆಸ್ತಿ–ಜವಾಬ್ದಾರಿ
ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(2) (ಡಿ) ನಲ್ಲಿ ವಿವರಿಸಿರುವಂತೆ ರೂ. 1,47,400–00

ಮೇಲೆ ವಿವರಿಸಿರುವ ರೀತ್ಯಾ ದಿನಾಂಕ 31–03–2021ರ ವರೆವಿಗೆ
ಸಂದೇಶ್ ನಗರ–2ನೇ ಹಂತದ ಬಾಬ್ತು ಶ್ರೀ ಮೂಕಾಂಭಿಕ
ಡೆವಲಪರ್ಸ್‌ನ ಪಾರ್ಟನರ್–1 ಆದ ಮತ್ತುಶ್ರೀ ಮೂಕಾಂಭಿಕ
ಎಂಟರ್‌ಪ್ರೈಸಸ್ ನವರ ಮಾಲೀಕರಾದ ಶ್ರೀ ಎಂ.ಜಿ. ರಂಗಧಾಮಯ್ಯ
ನವರಿಗೆ ಮುಂಗಡ ಮತ್ತು ಶ್ರೀ. ಎಂ.ಜಿ. ರಂಗಧಾಮಯ್ಯ ನವರ
ಲೆಕ್ಕದಲ್ಲಿ ಇರುವ ಒಟ್ಟು ಮೊಬಲಗು, ಶ್ರೀ ಮೂಕಾಂಭಿಕ
ಡೆವಲಪರ್ಸ್ ರವರ ಲೆಕ್ಕದಲ್ಲಿ **ರೂ. 43,93,57,437–00**

ದಿನಾಂಕ 31–3–2021ರ ವರೆವಿಗೆ ಶ್ರೀ ಮೂಕಾಂಭಿಕ ಎಂಟರ್‌ಪ್ರೈಸಸ್‌ನ ಹೆಸರಿನಲ್ಲಿ ಮತ್ತು ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಹೆಸರಿನಲ್ಲಿ ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್‌ನವರು, ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಪಡೆದ ಮೊಬಲಗಿನ ಲೆಕ್ಕಗಳ ಬಗ್ಗೆ ಶ್ರೀ ಮೂಕಾಂಭಿಕ ಡೆವಲಪರ್ಸ್ ನವರ ಹೆಸರಿನಲ್ಲಿ ದಿನಾಂಕ 31–3–2021ಕ್ಕೆ ದೃಢೀಕರಣ ಪತ್ರವನ್ನು ರೂ. 43,93,57,437–00 ಗಳಿಗೆ ನೀಡಿದ್ದು, ತಾಳೆ ಇದೆ. ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ಅನುಬಂಧ–19 ಎಂದು ವರದಿಗೆ ಲಗತ್ತಿಸಿದೆ. 2020–21ನೇ ಸಾಲಿನಲ್ಲಿ ಸಂದೇಶ್ ನಗರ–2ನೇ ಹಂತದ ಬಾಬ್ತು ರೂ. 27400–00 ಟಿ.ಡಿ.ಎಸ್ ಹಿಡಿದು, ರೂ. 26900–00 ಗಳ ಟಿ.ಡಿ.ಎಸ್ ನ್ನು ಆದಾಯ ತೆರಿಗೆ ಇಲಾಖೆಗೆ ಸಂಘದಿಂದ ಪಾವತಿಸಿರುತ್ತಾರೆ. ಉಳಿಕೆ ರೂ. 500–00 [ರೂ. 27400–00 (–) ರೂ. 26900–00 = 500–00] ಗಳನ್ನು ದಿನಾಂಕ 7–6–2021 ರಂದು ಆದಾಯ ತೆರಿಗೆ ಇಲಾಖೆಗೆ ಪಾವತಿಸಿರುತ್ತಾರೆ. ಸಂದೇಶ್ ನಗರ–2ನೇ ಹಂತದ ಬಡಾವಣೆ ಬಾಬ್ತು ಸಂಘದಿಂದ ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್ ರವರಿಗೆ ಶ್ರೀ ಮೂಕಾಂಭಿಕ ಡೆವಲಪರ್ಸ್ ರವರಿಗೆ ಪಾವತಿಸಿರುವ ಮೊಬಲಗಿಗೆ ತಕ್ಕಂತೆ ಬಡಾವಣೆ ಕೆಲಸಗಳು ಆಗಿರುವುದಿಲ್ಲ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು [ಅಧ್ಯಕ್ಷರು, ಉಪಾಧ್ಯಕ್ಷರು] ಮತ್ತು ಆಡಳಿತ ಮಂಡಳಿ ಸದಸ್ಯರು ಕ್ರಮವಿಡುವುದು.

ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, 8 ಎಕರೆ 30 ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆಗಾಗಿ ಜಂಟಿ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ ಕಾರ್ಯದರ್ಶಿ ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲದವರು ಹಣ ಪಾವತಿಸಲು ತಿಳುವಳಿಕೆ ಪತ್ರದ ಸಂಖ್ಯೆ: ನೆಯೋಪ್ರಾ:LAO:24:2015–16 ದಿನಾಂಕ 5–03–2017 ರಲ್ಲಿ ರೂ. 16,00,700–00 ಗಳನ್ನು ಪಾವತಿಸಿ ಎಂದು ಸಂಘಕ್ಕೆ ಪತ್ರ ಕಳುಹಿಸಿದ ಮೇರೆಗೆ, ಸಂಘದಿಂದ ದಿನಾಂಕ 7–4–2017 ರಲ್ಲಿ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆ, ಬೆಂಗಳೂರು ಡಿ.ಡಿ. ನಂ. 432041 ರ ಮುಖಾಂತರ ರೂ. 16,00,700–00 ಗಳನ್ನು ನೆಲಮಂಗಲ ಯೋಜನಾ ಪ್ರಾಧಿಕಾರದ ಹಣ ಸಂದಾಯದ ರಶೀತಿ ನಂ. 7248 ದಿನಾಂಕ 12–04–2017 ರಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಪಾವತಿಸಿದೆ. ನೆಲಮಂಗಲ ಯೋಜನಾ ಪ್ರಾಧಿಕಾರದವರು, ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ 8 ಎಕರೆ 30 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ದಿನಾಂಕ 25–05–2018 (ಕ್ರಮ ಸಂಖ್ಯೆ: ನೆಯೋಪ್ರಾ:LAO:24:2015–16)ರಂದು ನೀಡಿರುತ್ತಾರೆ. ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ 6 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆಗಾಗಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ, ಯೋಜನಾ ಪ್ರಾಧಿಕಾರದ ರಶೀದಿ ನಂ. 8032 ದಿನಾಂಕ 02–01–2019ರ ಮೂಲಕ ರೂ. 11,66,200–00 ಗಳನ್ನು ಸಂಘದಿಂದ ಪಾವತಿಸಿದೆ.

ಮತ್ತು 2019–20ನೇ ಸಾಲಿನಲ್ಲಿ ಸಂದೇಶ್ ನಗರ–2ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ, 4 ಎಕರೆ 04 $^{1}/_{2}$ ಗುಂಟೆ ಮತ್ತು 3 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆಗಾಗಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ, ಕ್ರಮವಾಗಿ ಯೋಜನಾ ಪ್ರಾಧಿಕಾರದ ರಶೀದಿ ನಂ. 8210 ದಿನಾಂಕ 06–05–2019 ರಲ್ಲಿ ರೂ. 7,52,400–00 [ಅಪೆಕ್ಸ್ ಬ್ಯಾಂಕ್ ಪೇ–ಆರ್ಡರ್ ನಂ. 289507 ದಿನಾಂಕ 03–05–2019] ಗಳನ್ನು ಮತ್ತು ರಶೀದಿ ನಂ. 8320 ದಿನಾಂಕ 17–08–2019 ರಲ್ಲಿ ರೂ. 5,49,100–00 [ಅಪೆಕ್ಸ್ ಬ್ಯಾಂಕ್ ಪೇ–ಆರ್ಡರ್ ನಂ. 289572 ದಿನಾಂಕ 13–08–2019] ಗಳನ್ನು ಸಂಘದಿಂದ ಪಾವತಿಸಿರುತ್ತಾರೆ. ಸದರಿ ಮೊಬಲಗುಗಳನ್ನು ಸಂದೇಶ್ ನಗರ–2ನೇ ಹಂತದ ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ ಶ್ರೀ ಮೂಕಾಂಭಿಕ ಡೆವಲಪರ್ಸ್ ರವರ ಲೆಕ್ಕಕ್ಕೆ ಸಂಘದವರು ಹಾಕಿರುತ್ತಾರೆ.

ಸಂದೇಶ್ ನಗರ–1 ಮತ್ತು 2ನೇ ಹಾಗೂ 3ನೇ ಹಂತದ ಬಡಾವಣೆಯ ಡೆವಲಪರ್ಸ್‌ರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಗೆ [ಶ್ರೀ ಮೂಕಾಂಭಿಕೆ ಎಂಟರ್‌ಪ್ರೈಸಸ್, ಶ್ರೀ ಮೂಕಾಂಭಿಕ ಡೆವಲಪರ್ಸ್, ಗರುಡಾದ್ರಿ ಡೆವಲಪರ್ಸ್] ದಿನಾಂಕ 25–9–2020 ರಂದು ಬಡಾವಣೆಗಳ ಪ್ರಗತಿಯ ಬಗ್ಗೆ, ಎಂ.ಓ.ಯು ರಿನೀವಲ್ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ ಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರು ಪತ್ರ ಬರೆದು ಪತ್ರದ ಪ್ರತಿಯನ್ನು ಸಂಘದ ಅಧ್ಯಕ್ಷರಿಗೆ / ಕಾರ್ಯದರ್ಶಿಯವರಿಗೆ 2019–20ನೇ ಸಾಲಿನಲ್ಲಿ ನೀಡಲಾಗಿದೆ. ದಿನಾಂಕ 25–9–2020ರ ಪತ್ರದ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಗೆ ಲಗತ್ತಿಸಿದೆ. ದಿನಾಂಕ 30–9–2020 ರೊಳಗೆ; ಬಡಾವಣೆಗಳ ಪ್ರಗತಿ ಬಗ್ಗೆ; ಇನ್ನಿತರ ವಿಷಯಗಳ ಬಗ್ಗೆ ಮಾಹಿತಿಯನ್ನು ಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರಿಗೆ ನೀಡಲು ತಿಳಿಸಲಾಗಿತ್ತು, ಆದರೆ ಮಾಹಿತಿಯನ್ನು ಸಂದೇಶ್ ನಗರ–1, 2, 3ನೇ ಹಂತದ ಬಡಾವಣೆಯ ಡೆವಲಪರ್ಸ್ ರವರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ನೀಡಿಲ್ಲ. ಆದುದರಿಂದ ವಿವರವಾಗಿ ಬಡಾವಣೆಗಳ ಪ್ರಗತಿಯ ಬಗ್ಗೆ ಬರೆಯಲು ಸಾಧ್ಯವಾಗಲಿಲ್ಲ, ಎಂದು 2019–20ನೇ ಸಾಲಿನ ಆಡಿಟ್ ವರದಿಯಲ್ಲಿ ತಿಳಿಸಿರುತ್ತಾರೆ. ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ ಕಾರ್ಯದರ್ಶಿಯವರು ದಿನಾಂಕ 25–9–2020 ರ ಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರ ಪತ್ರದ ಬಗ್ಗೆ ಗಮನಹರಿಸಿ, ಕ್ರಮವಿಡುವುದು. ಶ್ರೀ ಮೂಕಾಂಭಿಕ ಡೆವಲಪರ್ಸ್ ನವರು ಬಡಾವಣೆಗಳ ಪ್ರಗತಿ ಬಗ್ಗೆ ವರದಿಯನ್ನು ಶ್ರೀ ಮೂಕಾಂಭಿಕ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಸಂಘಕ್ಕೆ ನೀಡಿರುವುದಿಲ್ಲ. ಮತ್ತು ದಿನಾಂಕ 25–9–2020ರ ಪತ್ರಕ್ಕೆ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ಶ್ರೀ ಮೂಕಾಂಭಿಕ ಡೆವಲಪರ್ಸ್ ರವರಿಂದ ಬಡಾವಣೆಯ ಪ್ರಗತಿಯ ಬಗ್ಗೆ ವರದಿಯನ್ನು ಪಡೆಯಲು ಮತ್ತು ಇನ್ನಿತರ ವಿಷಯಗಳ ಬಗ್ಗೆ ಕ್ರಮವಿಡುವುದು.

2020–21ನೇ ಸಾಲಿನಲ್ಲಿ ಸಂದೇಶ್ ನಗರ–2ನೇ ಹಂತದ ಬಡಾವಣೆಯ ಕೇಸ್‌ಗಳ ಬಗ್ಗೆ 2020–21ನೇ ಸಾಲಿನ ಜಮಾ–ಖರ್ಚಿನ ತಃಖ್ತೆಯ ಖರ್ಚಿನ ಕ್ರಮ ಸಂಖ್ಯೆ 13 ರಲ್ಲಿ ವಿವರಿಸಿರುವಂತೆ ರೂ. 22,500–00 ಗಳನ್ನು ಲೀಗಲ್ ಚಾರ್ಜಸ್ ಬಾಬ್ತು ವಕೀಲರುಗಳಿಗೆ ನೀಡಿರುವುದನ್ನು ದಿನಾಂಕ 31–03–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(2)(ಇ) ನಲ್ಲಿ ಸಂದೇಶ್ ನಗರ–2ನೇ ಹಂತದ ಬಡಾವಣೆ ಲೆಕ್ಕದಡಿ ತೋರಿಸಿದೆ.

### 3) ಸಂದೇಶ್ ಭಾಗ್ ಬಡಾವಣೆ:– ಪ್ರಕೃತ್ತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಬೆಂಗಳೂರು.

ಸಂಘದ ಸದಸ್ಯರುಗಳ ನಿವೇಶನಗಳ ಬೇಡಿಕೆ ಅನುಸರಿಸಿ ದಿನಾಂಕ: 17–04–2008 ಮತ್ತು ದಿನಾಂಕ: 25–04–2008 ಸಮಿತಿ ಸಭೆಗಳಲ್ಲಿ ನಿರ್ಣಯಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ತಾಲ್ಲೂಕು, ವರ್ತೂರು ಹೋಬಳಿ ಚಿಕ್ಕನಹಳ್ಳಿ ಕಾಮನಹಳ್ಳಿ ಗ್ರಾಮಗಳಿಗೆ ಸೇರಿದ ಸರ್ವೆ ನಂ. 19/3, 19/4, 19/5, 21, 22, 25, 27 ಮತ್ತು 28 ರಲ್ಲಿನ ಸುಮಾರು 30 ಎಕರೆ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ನಿರ್ಧರಿಸಿರುವುದ ರನ್ವಯ, ಸದರಿ ಜಮೀನುಗಳ ಸಂಬಂಧ ಭೂಮಾಲೀಕರಿಂದ ಮಾರಾಟ ಕರಾರು ಹೊಂದಿರುವವರೆನ್ನಲಾದ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ನಂ. 95/1, ಮೊದಲನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು– 560020 ಈ ಸಂಸ್ಥೆಯನ್ನು ಪ್ರತಿನಿಧಿಸತಕ್ಕ ವ್ಯವಸ್ಥಾಪಕ ನಿರ್ದೇಶಕ [Managing Director] ರೆನ್ನಲಾದ ಶ್ರೀ.ಅರ್.ಜಿ.ತಿಲಕ್ ಬಿನ್ ಬಿ.ಎಸ್. ರಾಜ ಗೋಪಾಲ್ ರವರೊಂದಿಗೆ ದಿನಾಂಕ: 26.04.2008 ರಂದು ದಿ ಬೆಂಗಳೂರು ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ. 7, ಸಂದೇಶ್ ಭವನ, 3ನೇ ಮುಖ್ಯ ರಸ್ತೆ, ಮೊದಲನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560094 ಈ ಸಂಘದ ಪ್ರತಿನಿಧಿಯಾಗಿ Executive Director ಆದ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು, ಸಂಘಕ್ಕೆನೊಂದಣಿ ರಹಿತ ಪರಸ್ಪರ ಒಪ್ಪಂದ [MEMORANDUM OF UNDERSTANDING] [M.O.U] ಮಾಡಿಕೊಂಡಿದ್ದು ಈ [M.O.U] ನ ಮುಖ್ಯಾಂಶಗಳು ಈ ಕೆಳಕಂಡಂತೆ ಇರುತ್ತದೆ.

1 ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ತಾಲ್ಲೂಕು, ವರ್ತೂರು ಹೋಬಳಿಯ ಚಿಕ್ಕನಹಳ್ಳಿ ಮತ್ತು ಕಾಮನಹಳ್ಳಿ ಗ್ರಾಮಗಳಿಗೆ ಸೇರಿದ ಮೇಲ್ಕಂಡ ಸರ್ವೆ ನಂಬರುಗಳಲ್ಲಿನ ಸುಮಾರು 30 ಎಕರೆ ಜಮೀನು ಸಂಬಂಧ ಕರ್ನಾಟಕ ಭೂಸುಧಾರಣಾ ಕಾಯ್ದೆಯನ್ವಯ ಕೃಷಿ ಭೂಮಿ ಖರೀದಿ ಸಂಬಂಧ ಸರ್ಕಾರದಿಂದ ಅವಶ್ಯಕ ಅನುಮತಿ ಪಡೆದು ಇಲ್ಲವೇ ವಾಸದ ಉದ್ದೇಶಕ್ಕೆ ಭೂಪರಿವರ್ತನೆಯಾದ ಜಮೀನು ಸಂಘದ ಹೆಸರಿಗೆ ನೊಂದಣಿ ಮಾಡಿ ಕೊಡುವುದು.

2 ಸಂಘದ ಬಡಾವಣೆ ನಿರ್ಮಾಣ ಮಾಡಲು ಅನುವಾಗುವಂತೆ ಸಕ್ಷಮ ಪ್ರಾಧಿಕಾರಗಳಿಂದ ಅಕ್ಷೇಪಣಾ ರಹಿತ ಅನುಮತಿಗಳನ್ನು ಪಡೆಯುವುದು. ಆನೇಕಲ್ ಅಭಿವೃದ್ಧಿ ಪ್ರಾಧಿಕಾರ / ಬಿ ಎಂ ಅರ್ ಡಿ ಎ ಅಥವಾ ಇತರೆ ಸಕ್ಷಮ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಮಂಜೂರಾತಿ ಮತ್ತು ವರ್ಕ್ ಆರ್ಡರ್ ಮಾಡಿಸಿಕೊಡುವುದು.

3 ನಕ್ಷೆಯ ಪ್ರಕಾರ ನಿವೇಶನಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸೈಟುಗಳ ಬೌಂಡರಿಗಳನ್ನು ನಿರ್ಧರಿಸಲು ಕಲ್ಲುಗಳನ್ನು ಹಾಕಿಸುವುದು ಹಾಗೂ ಸಂಘದ ಜಮೀನಿನ ಸುತ್ತ ಕಾಂಪೌಂಡ್ ನಿರ್ಮಾಣ ಮಾಡುವುದು.

4 ಸಂಘವು ನೇಮಿಸುವ ಇಂಜಿನಿಯರ್‌ರವರ ಸಹಾಯದಿಂದ ನಿವೇಶನ ಅಭಿವೃದ್ಧಿ ಪಡಿಸುವುದು.

5 ಬಡಾವಣೆ ನಿರ್ಮಾಣ ಸಲುವಾಗಿ ಎಲ್ಲಾ ಕಾರ್ಯಗಳಿಗೆ ಸಂಘವು ನೆರವು ನೀಡುವುದು.

6 ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಗುತ್ತಿಗೆದಾರರು ಮುಖ್ಯವಾಗಿ ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ.

1) ರಸ್ತೆ ನಿರ್ಮಾಣ 2) ಡ್ರೈನೇಜ್ ನಿರ್ಮಾಣ 3) ಸ್ಟ್ರಾಂಮ್ ವಾಟರ್ ಡ್ರೈನೇಜ್ ನಿರ್ಮಾಣ 4) ನೀರು ಸರಬರಾಜು ಕೊಳವೆ ಪೈಪುಗಳನ್ನು ಹಾಕಿಸುವುದು 5) ಬೊರ್‌ವೆಲ್ ಗಳನ್ನು ನಿರ್ಮಾಣ

ಮಾಡುವುದು 6) ಬಡಾವಣೆಗೆ ಸುತ್ತ ಗೋಡೆ ನಿರ್ಮಾಣ ಮಾಡುವುದು ಹಾಗೂ ಬಡಾವಣೆಗೆ ಅವಶ್ಯಕವಿರುವ ವಿದ್ಯುಚ್ಛಕ್ತಿ ಒದಗಿಸಲು ವ್ಯವಸ್ಥೆ ಮಾಡುವುದು.

7 ಮೇಲ್ಕಂಡ ಎಲ್ಲಾ ಕಾರ್ಯಗಳು ಒಪ್ಪಂದದ ದಿನಾಂಕದಿಂದ 24 ತಿಂಗಳೊಳಗಾಗಿ ಮುಕ್ತಾಯ ವಾಗಬೇಕಾಗಿರುತ್ತದೆ.

8 ಮೇಲ್ಕಂಡ ಕಾರ್ಯಗಳನ್ನು ನಿರ್ವಹಿಸಲು ನಿವೇಶನ ಏರಿಯಾದ ಪ್ರತಿ ಚದರ ಅಡಿಗೆ ರೂ. 490/= ಗಳನ್ನು ನೀಡಲು ಹಾಗು ಪಡೆಯಲು ತೀರ್ಮಾನಿಸಲಾಗಿದ್ದು, ಸಂಘವು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಬೆಂಗಳೂರು ರವರಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲು ಒಪ್ಪಲಾಗಿದೆ.

1) ಸಂಘದ ಹೆಸರಿಗೆ ಜಮೀನನ್ನು ನೊಂದಣಿ ಮತ್ತು ಭೂಪರಿವರ್ತನೆ ಮಾಡಿದ ಸಂದರ್ಭ ಅಥವಾ ಅದರ ಪೂರ್ವ ಬಡಾವಣೆಯಲ್ಲಿ ದೊರೆಯುವ ನಿವೇಶನ ಏರಿಯಾ ಚದುರ ಅಡಿಗೆ ರೂ. 235/= ಗಳು. ಅಥವಾ ಒಂದು ಎಕರೆಗೆ ರೂ. 56,40,000/= ಗಳು.

2) ಸಂಘದ ಬಡಾವಣೆ ನಿಲಿನಕ್ಷೆ ಅನುಮೋದನೆ ಮತ್ತು ಬಡಾವಣೆ ನಿರ್ಮಾಣಕ್ಕೆ ಅನುಮತಿ ಪಡೆದ ಅಥವಾ ಅದರ ಪೂರ್ವ ನಿವೇಶನ ಏರಿಯಾ ಚದರ ಅಡಿಗೆ ರೂ. 120/= ಗಳು.

3) ಬಡಾವಣೆಯ ಸಿವಿಲ್ ಕಾಮಗಾರಿ ಅಂದರೆ ರಸ್ತೆ ನಿರ್ಮಾಣ ಬಾಕ್ಸ್ ಟೈಪ್ ಡ್ರೈನೇಜ್ ನಿರ್ಮಾಣ ಕಲ್ವರ್ಟ್ಸ್ ಮತ್ತು ಇತರೆ ಕೆಲಸಗಳ ಮುಕ್ತಾಯದ ಸಮಯದಲ್ಲಿ ಅಥವಾ ಅದರ ಪೂರ್ವ ನಿವೇಶನ ಏರಿಯಾ ಚದರ ಅಡಿಗೆ ರೂ. 50/= ಗಳು.

4) ಬಡಾವಣೆಗೆ ವಿದ್ಯುಚ್ಛಕ್ತಿ ಒದಗಿಸಲು ಕೆ.ಪಿ.ಟಿ.ಸಿ.ಎಲ್. ನಿಂದ ಅನುಮತಿ ಪಡೆದ ವೇಳೆಗೆ ಅಥವಾ ಅದರ ಪೂರ್ವ ಮತ್ತು ವಿದ್ಯುತ್ ಕೆಲಸಗಳ ಪ್ರಗತಿ ವೇಳೆಗೆ ನಿವೆಶನ ಏರಿಯಾ ಚದರ ಅಡಿಗೆ ರೂ. 20/= ಗಳು.

5) ಬಡಾವಣೆ ಕೆಲಸಗಳಾದ ಬೋರ್ ವೆಲ್ಸ್ ನಿರ್ಮಾಣ, ಸಂಪ್ ನಿರ್ಮಾಣ ಸಂಪ್ ಟ್ಯಾಂಕ್ ನಿರ್ಮಾಣ, ಓವರ್ ಹೆಡ್ ಟ್ಯಾಂಕ್ ನಿರ್ಮಾಣ, ಪಂಪ್ ಹೌಸ್ ನಿರ್ಮಾಣ, ಬೋರ್ ವೆಲ್ ನಿಂದ ನೀರೆತ್ತುವ ಮತ್ತು ಬಡಾವಣೆಗೆ ಸರಬರಾಜು ಮಾಡುವ ಹಂತದಲ್ಲಿ ಚದರ ಅಡಿಗೆ ರೂ. 25/= ಗಳು.

6) ಬಡಾವಣೆ ರಸ್ತೆಗಳಿಗೆ ಜೆಲ್ಲಿ ಹಾಕಿಸಿ, ಟಾರ್ ಹಾಕಿಸುವ ಅಥವಾ ಟಾರ್ ಹಾಕಿಸಿದ ನಂತರ ಚದರ ಅಡಿಗೆ ರೂ. 20/= ಗಳು.

7) ಬಡಾವಣೆಗೆ ಸಂಬಂಧಿಸಿದ ರಸ್ತೆ, ಉದ್ಯಾನವನ ಮತ್ತು ಸಾರ್ವಜನಿಕ ಉದ್ದೇಶದ ಸ್ಥಳಗಳನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಕೆಲಸಗಳಿಗೆ ಪೂರೈಕೆ ವೇಳೆಗೆ ನೀವೇಶನ ಏರಿಯಾ ಚದರ ಅಡಿಗೆ ರೂ. 20/= ಗಳು.

ಮೇಲ್ಕಂಡ M.O.U ನಡಿ ಸಂಘವು ಸಂದೇಶ್ ಭಾಗ್ ಬಡಾವಣೆಯ ನಿರ್ಮಾಣದ ಬಗ್ಗೆ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಗೆ (ಸಂಸ್ಥೆಯನ್ನು ಪ್ರತಿನಿಧಿಸುವ ಪ್ರೊಪ್ರೈಟರ್ ಶ್ರೀ ಆರ್.ಜಿ. ತಿಲಕ್) ದಿನಾಂಕ 31-3-2013ಕ್ಕೆ ಒಟ್ಟು ರೂ. 11,58,80,000-00 ಗಳನ್ನು ಸಂಘದಿಂದ ನೀಡಿರುತ್ತಾರೆ. ಈ ಮೊಬಲಗು ದಿನಾಂಕ 31-3-2014ಕ್ಕೆ ಮತ್ತು ದಿನಾಂಕ 31-03-2015 ಕ್ಕೆ ಮುಂದುವರಿಯುತ್ತದೆ.

ಸಂಘದಿಂದ ದಿನಾಂಕ 6-6-2015 ರಂದು ಮತ್ತು ದಿನಾಂಕ 29-6-2015 ರಂದು ನೊಂದಾಯಿತ ಅಂಚೆ ಮುಖಾಂತರ ಶ್ರೀ ಆರ್.ಜಿ. ತಿಲಕ್ ರವರಿಗೆ ಪತ್ರ ಬರೆದು ದಿನಾಂಕ 31-3-2015ಕ್ಕೆ ದೃಢೀಕರಣ ಪತ್ರ ನೀಡಲು ಪತ್ರ ಬರೆದಿದ್ದು, ಸದರಿಯವರು ದೃಢೀಕರಣ ಪತ್ರ ನೀಡಿಲ್ಲ. ಆದುದರಿಂದ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರು ದಿನಾಂಕ: 31-03-2013ಕ್ಕೆ ದೃಡೀಕರಣ ಪತ್ರವನ್ನು ರೂ. 11,58,80,000-00ಗೆ ನೀಡಿದ್ದು, ದಿನಾಂಕ 31-3-2013ರ ಬ್ಯಾಲನ್‌ಷೀಟಿನ ಮೊಬಲಗಿಗೆ ತಾಳೆ ಇರುತ್ತದೆ. ದೃಡೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ಅನುಬಂಧ-18 ಎಂದು 2016-17ನೇ ಸಾಲಿನ ಆಡಿಟ್ ವರದಿಯೊಂದಿಗೆ ಲಗತ್ತಿಸಿದೆ. ದಿನಾಂಕ 31-3-2021 ಕ್ಕೆ ಸಂಘದಿಂದ ವರ್ತೂರು ಹೌಸಿಂಗ್ ಪ್ರಾಜೆಕ್ಟ್‌ಗೆ ಪಾವತಿಸಿರುವ ಮೊಬಲಗಿನ ಬಗ್ಗೆ ದೃಡೀಕರಣ ಪತ್ರ ನೀಡಬೇಕೆಂದು, ಸಂಘದಿಂದ ದಿನಾಂಕ 19-5-2021

ರಂದು By RPAD Post ಮುಖಾಂತರ ಶ್ರೀ ಆರ್.ಜಿ. ತಿಲಕ್ ಮ್ಯಾನೇಜಿಂಗ್ ಡೈರೆಕ್ಟರ್, ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ನಂ. 95/1, 1ನೇ ಮುಖ್ಯ ರಸ್ತೆ, ಶೇಶಾದ್ರಿಪುರಂ, ಬೆಂಗಳೂರು 560020 ರವರಿಗೆ ಪತ್ರ ಬರೆದಿರುತ್ತಾರೆ. ಈ ಪತ್ರದ ಅಂದರೆ ದಿನಾಂಕ 19–5–2021ರ ಪತ್ರದ ಜ಼ೆರಾಕ್ಸ್ ಪ್ರತಿಯನ್ನು ವರದಿ ಸಾಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ. ಆದರೆ 2020–2021ನೇ ಸಾಲಿನ ಲೆಕ್ಕಪರಿಶೋಧನೆ ಮುಕ್ತಾಯದ ವರೆವಿಗೂ, ದಿನಾಂಕ 31–3–2021ಕ್ಕೆ ದೃಢೀಕರಣ ಪತ್ರವು ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರಿಂದ ಬಂದಿರುವುದಿಲ್ಲವೆಂದು ಸಂಘದ ಅಧ್ಯಕ್ಷರು, ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಮತ್ತು ಕಾರ್ಯದರ್ಶಿಯವರು ಸೂಕ್ತ ಕ್ರಮವಿಡುವುದು ಅತ್ಯಾಗತ್ಯ. ದಿನಾಂಕ 31–3–2021 ಕ್ಕೆ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ನವರು ದೃಢೀಕರಣ ಪತ್ರ ನೀಡದೇ ಇರುವುದರಿಂದ 2020–21ನೇ ಸಾಲಿನ ಆಡಿಟ್ ವರದಿಯೊಂದಿಗೂ ದಿನಾಂಕ 31–3–2013ಕ್ಕೆ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ನವರು ನೀಡಿರುವ ದೃಢೀಕರಣ ಪತ್ರವನ್ನು **ಅನುಬಂಧ–19A** ಎಂದು ಮಾಹಿತಿಗಾಗಿ ಲಗತ್ತಿಸಿದೆ.

ಡೆವಲಪರ್ಸ್ ರವರಿಗೆ ಪಾವತಿಸಿರುವ ಎಲ್ಲಾ ಮೊಬಲಗಿಗೆ ಟಿ.ಡಿ.ಎಸ್. ನ್ನು ಹಿಡಿದು ಅದಾಯ ತೆರಿಗೆ ಇಲಾಖೆಗೆ ಪಾವತಿಸಿರುವ ಬಗ್ಗೆ ಲೆಕ್ಕಪರಿಶೋಧನಾ ವೇಳೆಯಲ್ಲಿ ದಾಖಲಾತಿ ಇರುವುದಿಲ್ಲ. ಹಾಗೂ ಡೆವಲಪರ್ಸ್ ರವರಿಗೆ ಪಾವತಿಸಿರುವ ಮೊಬಲಗಿಗೆ ಸೂಕ್ತವಾದ ಭದ್ರತೆ ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ಡೆವಲಪರ್ಸ್ ರವರಿಂದ ಪಡೆದಿರುವುದಿಲ್ಲ. ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಸಂಸ್ಥೆ ನೋಂದಣಿಯಾಗಿರುವುದಕ್ಕೆ ನೋಂದಣಿ ಸರ್ಟಿಫಿಕೇಟ್ ಸಂಘದಲ್ಲಿ ಇರುವುದಿಲ್ಲ. ದಿನಾಂಕ 26–4–2008 ರ M.O.U ರೀತ್ಯಾ ಸಂಘದ ಬಡಾವಣೆ ಕೆಲಸಗಳು 24 ತಿಂಗಳೊಳಗಾಗಿ ಮುಕ್ತಾಯ ವಾಗಿರುವುದಿಲ್ಲ. ಸಂಘದಿಂದ ಪಾವತಿಸಿರುವ ಮೊಬಲಗಿಗೆ ತಕ್ಕಂತೆ ಬಡಾವಣೆ ಕೆಲಸಗಳು ನಿಗಧಿತ ಅವಧಿಯಲ್ಲಿ ಆಗಿರುವುದಿಲ್ಲ. M.O.U ಅವಧಿಯು ಮುಗಿದಿದ್ದು, M.O.U ನ್ನು ರಿನೀವಲ್ ಮಾಡಿರುವುದಿಲ್ಲ.

2011–12ನೇ ಸಾಲಿನಲ್ಲಿ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರು 5 ಎಕರೆ 09 ಗುಂಟೆ (ಖರಾಬು 0.12 ಗುಂಟೆ = ಒಟ್ಟು 5 ಎಕರೆ 21 ಗುಂಟೆ) ಭೂ ಪರಿವರ್ತನೆಯಾದ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಸಿ ಕೊಟ್ಟಿರುತ್ತಾರೆ. 2012–13 ನೇ ಸಾಲಿನಲ್ಲಿ 6 ಎಕರೆ 19 ಗುಂಟೆ ಜಮೀನನ್ನು ಸಂಘಕ್ಕೆ ಡೆವಲಪರ್ಸ್ ರವರು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ.

ದಿನಾಂಕ 31–3–2013ಕ್ಕೆ ಒಟ್ಟು 12 ಎಕರೆ (11 ಎಕರೆ 28 ಗುಂಟೆ + 0.12 ಗುಂಟೆ ಖರಾಬು) ವರದಿ ಪುಟ 20 ಮತ್ತು 21 ರಲ್ಲಿ ವಿವರಿಸಿರುವಂತೆ ಭೂ ಪರಿವರ್ತಿತ ಜಮೀನನ್ನು ಸಂಘಕ್ಕೆ ಡೆವಲಪರ್ಸ್ ರವರು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ.

ದಿನಾಂಕ 31–3–2013ಕ್ಕೆ ಸಂಘದ ಹೆಸರಿಗೆ ನೊಂದಣಿಯಾಗಿರುವ ಭೂ ಪರಿವರ್ತನೆ ಜಮೀನು 12 ಎಕರೆ ಮತ್ತು 3 ಎಕರೆ 38 ಗುಂಟೆ ಜಮೀನು ಸೇಲ್ ಅಗ್ರಿಮೆಂಟ್ ಮತ್ತು ಜಿ.ಪಿ.ಎ. ಆಗಿರುವುದನ್ನು ತೆಗೆದುಕೊಂಡರೆ ಒಟ್ಟಾರೆ 15 ಎಕರೆ 38 ಗುಂಟೆ (382800 ಚದರ ಅಡಿಗಳು) (ಒಂದು ಎಕರೆಗೆ 24000 ಚದರ ಅಡಿಯಂತೆ 15 ಎಕರೆ 38 ಗುಂಟೆಗೆ = 382800 ಚದರ ಅಡಿಗಳು) ಜಮೀನು ಸಂಘದ ವಶದಲ್ಲಿರುವುದನ್ನು ಲೆಕ್ಕಾಚಾರಕ್ಕೆ ತೆಗೆದುಕೊಂಡರೆ; ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ರವರಿಗೆ ದಿನಾಂಕ: 31.03.2013 ಕ್ಕೆ (382800x235–00 ರೂ) ರೂ. 8,99,58,000–00 ಗಳನ್ನು ಪಾವತಿಸಬೇಕಾಗಿದ್ದು, ರೂ. 11,58,80,000–00 ಗಳನ್ನು ಪಾವತಿಸಿರುತ್ತಾರೆ. ಅಂದರೆ ಹೆಚ್ಚಿಗೆ ರೂ. 2,59,22,000–00 ಗಳನ್ನು ಡೆವಲಪರ್ಸ್ ರವರಿಗೆ ದಿನಾಂಕ 31–3–2013ಕ್ಕೆ ಪಾವತಿಸಿರುತ್ತಾರೆ.

2013–14ನೇ ಸಾಲಿನಲ್ಲಿ ಸಂಘದ ನಗದು ಪುಸ್ತಕದ ದಿನಾಂಕ 31–3–2014 ರಲ್ಲಿ ಈ ಕೆಳಕಂಡ ವಿವರದ ರೀತ್ಯಾ ರೂ. 54,62,315–00 ಗಳನ್ನು ಸಂದೇಶ್ ಭಾಗ್ ಬಡಾವಣೆಯ ಡೆವಲಪಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್

ರವರ ಲೆಕ್ಕಕ್ಕೆ (ಹಿಂದಿನ ಬ್ಯಾಲನ್ ಷೀಟಿನ ಮತ್ತು ಆಡಿಟ್ ವರದಿಗಳ ಆಧಾರದ ಮೇಲೆ ಹೊಂದಾಣಿಕೆ ಲೆಕ್ಕದ ಮುಖಾಂತರ) ಸಂಘದವರು ಹಾಕಿರುತ್ತಾರೆ.

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | 2011–12ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟ ಭೂಪರಿವರ್ತನಾ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಸಿಕೊಂಡ ಬಾಬ್ತು ನೋಂದಣಿ ವೆಚ್ಚವನ್ನು (ಸಂದೇಶ್ ಭಾಗ್ ಬಡಾವಣೆಯ ಲೆಕ್ಕಕ್ಕೆ) ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 1937560–00 |
| 2 | 2012–13ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗ ಸಂಬಂಧಪಟ್ಟ ಭೂಪರಿವರ್ತಿತ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಸಿಕೊಂಡ ಬಾಬ್ತು ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ, ಇತರೆ ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 2246649–00 |
| 3 | 2012–13ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್, ಜಿ.ಪಿ.ಎ ಮಾಡಿಕೊಂಡ ಬಾಬ್ತು ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 10850–00 |
| 4 | 2012–13ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್, ಜಿ.ಪಿ.ಎ ಮಾಡಿಕೊಂಡ ಬಾಬ್ತು ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 608000–00 |
| 5 | 2012–13ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್, ಜಿ.ಪಿ.ಎ ಮಾಡಿಕೊಂಡ ಬಾಬ್ತು ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 11230–00 |
| 6 | 2012–13ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್, ಜಿ.ಪಿ.ಎ ಮಾಡಿಕೊಂಡ ಬಾಬ್ತು ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 621400–00 |
| 7 | 2012–13ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟ ಜಮೀನನ್ನು ಅಗ್ರಿಮೆಂಟ್ ಆಫ್ ಸೇಲ್, ಜಿ.ಪಿ.ಎ ಮಾಡಿಕೊಂಡ ಬಾಬ್ತು, ಇ–ಸ್ಟಾಂಪ್ ಬಾಬ್ತು ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 1545–00 |
| 8 | ಹಿಂದಿನ ಬ್ಯಾಲನ್ ಷೀಟಿನಂತೆ ದಿ. 31–3–2011 ಕ್ಕೆ ಜಮೀನಿನ ಬಗ್ಗೆ ನೋಂದಣಿ ಶುಲ್ಕ, ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ ಸಂದೇಶ್ ಭಾಗ್ ಬಡಾವಣೆಯ ಬಾಬ್ತು ವೆಚ್ಚವನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ | 25081–00 |
| | **ಒಟ್ಟು** | **54,62,315–00** |

ಮೇಲೆ ವಿವರಿಸಿರುವ ರೂ. 54,62,315–00 ಗಳಿಗೆ ವಿವರವಾದ ಪಟ್ಟಿಯನ್ನು ಅನುಬಂಧ–26 ಎಂದು 2013–14ನೇ ಸಾಲಿನ ಆಡಿಟ್ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿರುತ್ತಾರೆ.

ದಿನಾಂಕ 31–3–2013ಕ್ಕೆ ರೂ. 11,58,80,000–00 ಗಳನ್ನು ಪಾವತಿಸಿದೆ ಎಂದು 2012–13ನೇ ಸಾಲಿನ ಹಿಂದಿನ ಆಡಿಟ್ ವರದಿಯಲ್ಲಿ ತಿಳಿಸಿದ್ದು, 2013–14ನೇ ಸಾಲಿನಲ್ಲಿ ಮೇಲೆ ವಿವರಿಸಿರುವಂತೆ, ರೂ. 54,62,315–00 ಗಳನ್ನು ದಿನಾಂಕ 31–3–2014 ಕ್ಕೆ ನಗದು ಪುಸ್ತಕದಲ್ಲಿ ಸಂದೇಶ್ ಭಾಗ್ ಬಡಾವಣೆಯ ಡೆವಲಪರ್ಸ್ ರವರಾದ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ರವರ ಲೆಕ್ಕಕ್ಕೆ ಸಂಘದವರು ಖರ್ಚು ತೋರಿಸಿರುವುದನ್ನು ಸೇರಿಸಿದರೇ ದಿನಾಂಕ 31–3–2014 ಕ್ಕೆ ಒಟ್ಟು ರೂ. 12,13,42,315–00 (ರೂ. 11,58,80,000–00 + ರೂ. 54,62,315–00) ಗಳನ್ನು ಸಂದೇಶ್ ಭಾಗ್ ಬಡಾವಣೆಯ ಬಗ್ಗೆ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ರವರಿಗೆ ನೀಡಿದಂತಾಗಿದೆ. ಇದಕ್ಕೆ ಸಂಘದಿಂದ ದಿನಾಂಕ 21–8–2014 ರಂದು ಪತ್ರ ಬರೆದು ದಿನಾಂಕ 31–3–2014ಕ್ಕೆ ದೃಢೀಕರಣ ಪತ್ರ ಕೇಳಿದರು ದೃಢೀಕರಣ ಪತ್ರವನ್ನು ನಿಡಿರುವುದಿಲ್ಲ ಎಂದು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ದೃಢಿಕರಣ ಪತ್ರವನ್ನು ಸಂಘದವರು ಪಡೆದು ಲೆಕ್ಕ ಪರಿಶೋಧನಾ ವೇಳೆಯಲ್ಲಿ ಹಾಜರು ಪಡಿಸಿಲ್ಲ ಆದುದರಿಂದ ಈ ಲೆಕ್ಕದ ನಿಖರತೆಯನ್ನು ದೃಢೀಕರಿಸಲು ಸಾಧ್ಯವಾಗಿಲ್ಲ, ಮತ್ತು ತಕ್ಷಣವೇ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಂದ ದಿನಾಂಕ 31–3–2014 ಕ್ಕೆ ದೃಢೀಕರಣ ಪತ್ರ ಪಡೆದು ತಾಳೆ ನೋಡುವುದು ಅತ್ಯಗತ್ಯ, ಎಂದು 2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 61 ರಲ್ಲಿ ವಿವರಿಸಲಾಗಿತ್ತು. 2014–15ನೇ ಸಾಲಿನಲ್ಲಿ ಅಂದರೆ ದಿನಾಂಕ 6–6–2015 ರಂದು ದಿನಾಂಕ 29–6–2015 ರಂದು ದಿನಾಂಕ 31–3–2015ಕ್ಕೆ ದೃಢೀಕರಣ ಪತ್ರ ಕೇಳಿ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ನವರಿಗೆ ಸಂಘದಿಂದ ಪತ್ರ ಬರೆದಿರುತ್ತಾರೆ. ಪತ್ರ ಬರೆದರು ದಿನಾಂಕ 31–3–2015ಕ್ಕೆ ದೃಢಿಕರಣ ಪತ್ರ ನೀಡಿರುವುದಿಲ್ಲ ಆದುದರಿಂದ ನಿಖರತೆಯನ್ನು ದೃಢಿಕರಿಸಿಲ್ಲ, ಎಂದು ಹಿಂದಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿದೆ. ದಿನಾಂಕ 31–3–2016ಕ್ಕೆ ಸಂಘದಿಂದ ಮೊಬಲಗು ಪಡೆದಿರುವುದಕ್ಕೆ ದೃಢೀಕರಣ ಪತ್ರ ಕೇಳಿ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ದಿನಾಂಕ 09–06–2016 ರಂದು ಪತ್ರವನ್ನು ಸಂಘದಿಂದ ಬರೆದಿರುತ್ತಾರೆ. ಆದರೇ ದಿನಾಂಕ 31–3–2016 ಕ್ಕೆ ದೃಢೀಕರಣ ಪತ್ರ ನೀಡಿಲ್ಲ. ಆದುದರಿಂದ ನಿಖರತೆಯನ್ನು ದೃಢೀಕರಿಸಿಲ್ಲ.

2012–13ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 38 ರಲ್ಲಿ ವಿವರಿಸಿರುವಂತೆ ರೂ. 2,59,22,000–00 ಗಳನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಹೆಚ್ಚಿಗೆ ಪಾವತಿಸಿರುತ್ತಾರೆ.

ಹಾಗೂ ದಿನಾಂಕ 31–3–2013ಕ್ಕೆ, 2012–13ನೇ ಸಾಲಿನ ಆಡಿಟ್ ವರದಿಯ ಪುಟಸಂಖ್ಯೆ 38 ರಲ್ಲಿ ವಿವರಿಸಿರುವಂತೆ ರೂ. 8,99,58,000–00 ಗಳನ್ನು ಪಾವತಿಸಬೇಕಾಗಿದ್ದು, 2013–14 ನೇ ಸಾಲಿನಲ್ಲಿ ದಿನಾಂಕ 31–3–2014 ರಲ್ಲಿ ಹಿಂದಿನ ಸಾಲಿನ ಬಾಬ್ತು ರೂ. 54,62,315–00 ಗಳನ್ನು ಸಂದೇಶ್ ಭಾಗ್ ಬಡಾವಣೆಯ ಲೆಕ್ಕದ ಬಾಬ್ತು ಎಂದು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ತೋರಿಸಿರುವುದರಿಂದ ದಿನಾಂಕ 31–3–2014ಕ್ಕೆ ಮತ್ತು ದಿನಾಂಕ 31–03–2015 ಕ್ಕೆ ರೂ. 12,13,42,315–00(ರೂ. 11,58,80,000–00 + ರೂ. 54,62,315–00) ಗಳನ್ನು ಪ್ರಕೃತಿ ಬಿಲ್ಡರ್ಸ ಮತ್ತು ಡೆವಲಪರ್ಸ್ ರವರಿಗೆ ನೀಡಿದಂತಾಗಿದೆ. ಆದರೆ ಸದರಿ ಯವರಿಗೆ 2012–13 ನೇ ಸಾಲಿನ ಆಡಿಟ್ ವರದಿಯ ಪುಟ ಸಂಖ್ಯೆ 38 ರಲ್ಲಿ ವಿವರಿಸಿರುವಂತೆ ರೂ. 8,99,58,000–00 ಗಳನ್ನು ಪಾವತಿಸಬೇಕಾಗಿರುತ್ತದೆ. ಅಂದರೆ ಹೆಚ್ಚಿಗೆ ರೂ. 3,13,84,315–00 ಗಳನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ದಿನಾಂಕ 31–3–2014ಕ್ಕೆ ಪಾವತಿಸಿದಂತಾಗುತ್ತದೆ, ಸದರಿ ಮೊಬಲಗು ದಿನಾಂಕ 31–3–2015ಕ್ಕೆ ಹೆಚ್ಚಿಗೆ ಪಾವತಿಸಿದಂತಾಗಿದೆ. ಎಂದು 2014–15ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 41 ರಲ್ಲಿ ವಿವರಿಸಿದ್ದು, ಸದರಿ ವಿವರಣೆ 2015–16ನೇ ಸಾಲಿಗೂ ಮುಂದುವರಿಯುತ್ತದೆ. ಹಿಂದಿನ ವರದಿಯ ರೀತ್ಯಾ ದಿನಾಂಕ 31–3–2016 ಕ್ಕೆ ರೂ. 3,13,84,315–00 ಗಳನ್ನು ಹೆಚ್ಚಿಗೆ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಪಾವತಿಸಿದೆ.

ಶ್ರೀ ಆರ್.ಜಿ. ತಿಲಕ್ ಮ್ಯಾನೇಜಿಂಗ್ ಡೈರೆಕ್ಟರ್, ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರಿಗೆ ಸಂದೇಶ್ ಭಾಗ್ ಬಡಾವಣೆಯಲ್ಲಿ ಕಲ್ಲುಬಂಡೆ ಹೊಡಿಸಲು, ಜಮೀನು ಸಮತಟ್ಟು ಮಾಡಿಸಲು ಹಾಗೂ ಕಾಂಪೌಂಡ್ ಹಾಕಿಸಲು ಮತ್ತು ನಕ್ಷೆ ಮಂಜೂರಾತಿ ಮಾಡಿಸಲು ಮತ್ತು ಬಡಾವಣೆಗೆ ಹೊಂದಿಕೊಂಡಂತೆ ಇರುವ ಸರ್ವೇ ನಂ. 100ರ 2 ಎಕರೆ ಜಮೀನನ್ನು ಅಗ್ರಿಮೆಂಟ್ ಮಾಡಿಕೊಳ್ಳಲು 2017–18ನೇ ಸಾಲಿನಲ್ಲಿ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಿ ಅದರಂತೆ ದಿನಾಂಕ 15–6–2017 ರಂದು ಶಿವಾಜಿನಗರ ಶಾಖೆ ಅಪೆಕ್ಸ್ ಬ್ಯಾಂಕ್, ಬೆಂಗಳೂರು, ಚೆಕ್ ನಂ. 610462 ರ ಮುಖಾಂತರ ರೂ. 1,47,00,000–00 ಗಳನ್ನು ಮತ್ತು ಟಿ.ಡಿ.ಎಸ್. ಬಾಬ್ತು ರೂ. 3,00,000–00 (ಹೊಂದಾಣಿಕೆ) ಗಳನ್ನು

ಅಂದರೆ ಒಟ್ಟು. ರೂ. 1,50,00,000–00 ಗಳನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಸಂದೇಶ್ ಭಾಗ್ ಬಡಾವಣೆಗಾಗಿ ಸಂಘದಿಂದ ಮುಂಗಡ ಪಾವತಿಸಲಾಗಿದೆ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಸಂಘದ ಅಪೆಕ್ಸ್ ಬ್ಯಾಂಕ್ ಶಿವಾಜಿನಗರ ಶಾಖೆಯ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ದಿನಾಂಕ 16–6–2017 ರಂದು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಹೆಸರಿಗೆ ನಗದೀಕರಣವಾಗಿದೆ.

2018–19ನೇ ಸಾಲಿನಲ್ಲಿ ದಿನಾಂಕ 24–07–2018 ರಂದು ಗಂಗಾನಗರ ಶಾಖೆ ಅಪೆಕ್ಸ್ ಬ್ಯಾಂಕ್, ಬೆಂಗಳೂರು ಚೆಕ್ ನಂ. 297489ರ ಮುಖಾಂತರ ರೂ. 5,00,000–00 ಗಳನ್ನು ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ರವರಿಗೆ ಸಂದೇಶ್ ಭಾಗ್ ಬಡಾವಣೆಗಾಗಿ ಸಂಘದಿಂದ ಮುಂಗಡ ಪಾವತಿಸಿರುತ್ತಾರೆ. ಈ ಮೊಬಲಗಿಗೆ ಟಿಡಿಎಸ್ ನ್ನು ಹಿಡಿದಿಲ್ಲ. ಸಂಘದ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆಯ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ದಿನಾಂಕ 25–07–2018 ರಲ್ಲಿ ನಗದೀಕರಣವಾಗಿದೆ.

ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಯನ್ನು ಪ್ರತಿನಿಧಿಸತಕ್ಕ ವ್ಯವಸ್ಥಾಪಕ ನಿರ್ದೇಶಕರೆನ್ನಲಾದ ಶ್ರೀ ಆರ್.ಜಿ. ತಿಲಕ್ ರವರಿಗೆ ಈ ಕೆಳಕಂಡ ವಿವರದ ರೀತ್ಯಾ ಸಂದೇಶ್ ಭಾಗ್ ಬಡಾವಣೆಗೆ

(ವರ್ತೂರು ಪ್ರಜೆಕ್ಟ್) ಗೆ ಮೊಬಲಗನ್ನು ಪಾವತಿಸಿದ್ದು, ಹಾಗೂ ಇನ್ನಿತರ ಲೆಕ್ಕಗಳ ಮೊಬಲಗನ್ನು ಸಂಘದವರು ಸದರಿಯವರ ಲೆಕ್ಕಕೆ ಹಾಕಿರುವುದು ದಿನಾಂಕ 31–3–2020ಕ್ಕೆ ರೂ. 13,97,43,580–00 ಗಳು ಇದ್ದು, ಸದರಿ ಮೊಬಲಗು ದಿನಾಂಕ 31–03–2021ಕ್ಕೂ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರ ಲೆಕ್ಕದಲ್ಲಿ ಮುಂದುವರೆದಿದೆ.

| ಕ್ರ. ಸಂ | ವಿವರ | ಮೊಬಲಗು |
|---|---|---|
| 1 | 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವಂತೆ ಮತ್ತು ದಿನಾಂಕ 31–3–2017ರ ಬ್ಯಾಲನ್ ಷೀಟಿನ ಆಸ್ತಿಯ ಕ್ರಮ ಸಂಖ್ಯೆ 5 (3)(ಎ) ರಲ್ಲಿ ವಿವರಿಸಿರುವಂತೆ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಮುಂಗಡ<br>2017–18ನೇ ಸಾಲಿನಲ್ಲಿ ಪ್ರಕೃತಿ ಬಿಲ್ಡರ್ಸ್ ರವರಿಗೆ ಮುಂಗಡ<br>2018–19ನೇ ಸಾಲಿನಲ್ಲಿ ಪ್ರಕೃತಿ ಬಿಲ್ಡರ್ಸ್ ರವರಿಗೆ ಮುಂಗಡ | 11,58,80,000–00<br>(+) 1,50,00,000–00<br>(+)5,00,000–00 |
| | ಮೇಲಂಡ ವಿವರದ ರೀತ್ಯಾ ದಿನಾಂಕ 31–3–2021ರ ವರೆವಿಗೆ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಮುಂಗಡ. ದಿನಾಂಕ 31–3–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5 (3) (ಎ) ರೀತ್ಯಾ<br><br>1) ಸಂದೇಶ್ ಭಾಗ್ ಬಡಾವಣೆ ಲೆಕ್ಕದ ಬಾಬ್ತು 2013–14ನೇ ಸಾಲಿನಲ್ಲಿ ದಿನಾಂಕ 31–3–2014ಕ್ಕೆ ಹೊಂದಾಣಿಕೆ ಲೆಕ್ಕದ ಮೂಲಕ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ [2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ರೂ. 54,62,315–00 ಗಳಿಗೆ ವಿವರಣೆಯನ್ನು ಅನುಬಂಧ–26 ಎಂದು ಪಟ್ಟಿಯನ್ನು ಲಗತ್ತಿಸಿದೆ.]<br>ದಿನಾಂಕ 31–3–2020ರ ಆಸ್ತಿ–ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(3) (ಬಿ) ರೀತ್ಯಾ.<br><br>2) ದಿನಾಂಕ 31–3–2016ರ ವರೆವಿಗೆ ಮತ್ತು 2016–17ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಸಂಬಂದಪಟ್ಟಂತೆ | 13,13,80,000–00<br><br>54,62,315–00 |

| | | |
|---|---|---|
| | ಲಾಯರ್ ರವರಾದ ಶ್ರೀ ಅಶೋಕ್ ಹಂದೆ ರವರಿಗೆ ಲೀಗಲ್ ಫೀ ನೀಡಿರುವುದು. ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ, ದಿನಾಂಕ 31-3-2020ರ ಆಸ್ತಿ-ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(3) (ಇ) ರೀತ್ಯಾ.<br><br>3) 2016-17 ನೇ ಸಾಲಿನಲ್ಲಿ ಚಿಕ್ಕನಹಳ್ಳಿ-ಕಾಮನಹಳ್ಳಿ ಗ್ರಾಮದ ಸರ್ವೆ ನಂ. 101 ರಲ್ಲಿ 1 ಎಕರೆ 38 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ಖರೀದಿ ಬಾಬ್ತು ಟಿ.ಡಿ.ಎಸ್. 1%<br><br>ಆದಾಯ ತೆರಿಗೆ ಇಲಾಖೆಗೆ ಸಂಘದಿಂದ ಪಾವತಿಸಿದ್ದು, ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ. ದಿನಾಂಕ 31-3-2020ರ ಆಸ್ತಿ-ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(3) (ಡಿ) ರೀತ್ಯಾ.<br><br>4) 2016-17ನೇ ಸಾಲಿನಲ್ಲಿ ಸಂದೇಶ್ ಭಾಗ್ ಬಡಾವಣೆಗೆ ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ರಿಜಿಸ್ಟ್ರೇಷನ್ ಫೀ, ಸ್ಟಾಂಪ್ ಫೀ, ಇತರೆ ಖರ್ಚು. ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ ಲೆಕ್ಕಕ್ಕೆ. ದಿನಾಂಕ 31-3-2020ರ ಆಸ್ತಿ-ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(3) (ಸಿ) ರೀತ್ಯಾ. | 16,16,500-00<br><br>101400-00<br><br>11,83,365-00 |
| | **ದಿನಾಂಕ 31-03-2021ಕ್ಕೆ ಒಟ್ಟು ಮೊಬಲಗು** | **13,97,43,580-00** |

2015-16ನೇ ಸಾಲಿನಲ್ಲಿ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಸಂಘದಿಂದ ಮೊಬಲಗನ್ನು ಪಾವತಿಸಿಲ್ಲ. ಆದರೆ ದಿನಾಂಕ 31-3-2013ರ ವರೆವಿಗೆ ಸಂಘದಿಂದ ಸಂದೇಶ್ ಭಾಗ್ ಬಡಾವಣೆಗೆ ಸಂಬಂಧಪಟ್ಟ ಭೂಪರಿವರ್ತಿತ ಜಮೀನನ್ನು, ಸಂಘದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ಹಾಗೂ 2013-14ನೇ ಸಾಲಿನ ಆಡಿಟ್ ವರದಿಯಲ್ಲಿ ಲಗತ್ತಿಸಿರುವ ಅನುಬಂಧ- 26 ರ ರೀತ್ಯಾ ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ, ಇತರೆ ಖರ್ಚನ್ನು ವರದಿ ಸಾಲಿನಲ್ಲಿ ದಿನಾಂಕ 31-3-2014 ಕ್ಕೆ ನಗದು ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಂಡಿರುವ ಮೊಬಲಗು ರೂ. 54,62,315-00 ಗಳನ್ನು ಮಾತ್ರ ದಿನಾಂಕ 31-3-2013 ಕ್ಕೆ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರ, ಸಂದೇಶ್ ಭಾಗ್ ಬಡಾವಣೆಯ ಲೆಕ್ಕದಲ್ಲಿದ್ದ ರೂ. 11,58,80,000-00 ಗಳಿಗೆ ಸೇರಿಸಿದರೇ ದಿನಾಂಕ 31-3-2014ಕ್ಕೆ ರೂ. 12,13,42,315-00 ಗಳು ಆಗುತ್ತದೆ ಎಂದು 2013-14 ನೇ ಸಾಲಿನ ಆಡಿಟ್ ವರದಿಯ ಪುಟ ಸಂಖ್ಯೆ 62 ರಲ್ಲಿ ವಿವರಿಸಿದೆ. ಈ ಮೊಬಲಗು ದಿನಾಂಕ 31-03-2015 ಕ್ಕೆ ಮುಂದುವರಿಯುತ್ತದೆ. ದಿನಾಂಕ 31-3-2015 ಕ್ಕೆ ದೃಢೀಕರಣ ಪತ್ರ ನೀಡಲು ಸಂಘದಿಂದ ದಿನಾಂಕ 6-6-2015 ರಂದು ಮತ್ತು ದಿನಾಂಕ 29-6-2015 ರಂದು ಶ್ರೀ ಆರ್.ಜಿ. ತಿಲಕ್ ರವರಿಗೆ ಪತ್ರ ಬರೆದಿರುತ್ತಾರೆ. ಆದರೇ ಸದರಿಯವರು ದಿನಾಂಕ 31-03-2015 ಕ್ಕೆ ದೃಢೀಕರಣ ಪತ್ರವನ್ನು ನೀಡಿರುವುದಿಲ್ಲ. ಆದುದರಿಂದ ಈ ಲೆಕ್ಕದ ನಿಖರತೆಯನ್ನು ದೃಢೀಕರಿಸಿರುವುದಿಲ್ಲ. ಶ್ರೀ ಆರ್.ಜಿ. ತಿಲಕ್ ರವರಿಗೆ ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ ಬಡಾವಣೆಯ ಕೆಲಸಗಳ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ ದಿನಾಂಕ 26-3-2014, ದಿನಾಂಕ 9-4-2014, ದಿನಾಂಕ 19-6-2014, ದಿನಾಂಕ 21-7-2014, ದಿನಾಂಕ 19-11-2014, ಮತ್ತು ದಿನಾಂಕ 11-12-2014 ಹಾಗೂ ದಿನಾಂಕ 2-5-2015 ರಂದು ಮತ್ತು ದಿನಾಂಕ 28-9-2015 ಪತ್ರಗಳನ್ನು ಬರೆದಿದ್ದು ಈ ಪತ್ರಗಳಿಗೆ ಮಾಹಿತಿಯನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ್ನು ಪ್ರತಿನಿಧಿಸುವ Managing Directorರವರಾದಶ್ರೀ ಆರ್.ಜಿ. ತಿಲಕ್ ರವರು ನೀಡಿರುವುದಿಲ್ಲ, ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ.

ಹಾಗೂ ಸದರಿ ಪತ್ರಗಳನ್ನು By RPAD ಮುಖಾಂತರ ಶ್ರೀ ಆರ್.ಜಿ. ತಿಲಕ್ ರವರಿಗೆ ಕಳುಹಿಸಿದ್ದರೂ ಸಹಾ ಬಡಾವಣೆಯ ಪ್ರಗತಿಯ ಬಗ್ಗೆ ಸಂಘಕ್ಕೆ ಮಾಹಿತಿಯನ್ನು ನೀಡದೇ ಇರುವುದರಿಂದ, ದಿನಾಂಕ 31-03-2014 ಕ್ಕೆ ಮತ್ತು 31-03-2015 ಕ್ಕೆ 31-03-2016ಕ್ಕೆ ದೃಢೀಕರಣ ಪತ್ರವನ್ನು ಸಹಾ ನೀಡದೇ ಇರುವುದರಿಂದ, ಹಾಗೂ ಸಂಘವು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಯನ್ನು ಪ್ರತಿನಿಧಿಸತಕ್ಕ ವ್ಯವಸ್ಥಾಪಕ ನಿರ್ದೇಶಕರೆನ್ನಲಾದ ಶ್ರೀ ಆರ್.ಜಿ. ತಿಲಕ್ ರವರೊಂದಿಗೆ ದಿನಾಂಕ 26-04-2008 ರಂದು ನೋಂದಣಿ ರಹಿತ M.O.U ಮಾಡಿಕೊಂಡಿದ್ದು, ಈ M.O.Uನ ಅನ್ವಯ ಬಡಾವಣೆಯ ಕೆಲಸಕಾರ್ಯಗಳನ್ನು ನಿಗಧಿತ ಅವಧಿಯೊಳಗೆ ಅಂದರೆ ಎಂ.ಒ.ಯು ದಿನಾಂಕ 26-4-2008 ರಿಂದ 24 ತಿಂಗಳೊಳಗಾಗಿ ಬಡಾವಣೆಯ ಎಲ್ಲಾ ಕೆಲಸಗಳನ್ನು ಶ್ರೀ ಆರ್.ಜಿ. ತಿಲಕ್ ರವರು ಮಾಡಿಕೊಡದೇ ಇರುವುದರಿಂದ, ಎಂ.ಒ.ಯು ಅವಧಿ ಮುಗಿದಿದ್ದರೂ ಎಂ.ಒ.ಯು ಅನ್ನು ರಿನೀವಲ್ ಮಾಡದೇ ಇರುವುದರಿಂದ, ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಯ ಅಸ್ತಿತ್ವದ ಬಗ್ಗೆ, ನೈಜತೆಯ ಬಗ್ಗೆ ಅನುಮಾನಾಸ್ಪದವಾಗಿರುವುದು ಮೇಲು ನೋಟಕ್ಕೆ ಕಂಡು ಬರುತ್ತದೆ ಎಂದು ಬಾವಿಸಲಾಗಿದೆ. ಆದುದರಿಂದ ತಕ್ಷಣವೇ ಆಡಳಿತ ಮಂಡಳಿ ಸದಸ್ಯರು ತೆಗೆದುಕೊಳ್ಳಬಹುದಾದ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಂಡು, ದಿನಾಂಕ 31-03-2014 ಕ್ಕೆ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆ ಹೆಚ್ಚಿಗೆ ನೀಡಿರುವ ಮೊಬಲಗು ರೂ. 3,13,84,315-00 ಗಳನ್ನು ಕಾನೂನು ರೀತ್ಯಾ ಆಡಳಿತ ಮಂಡಳಿ ಸದಸ್ಯರು ಕ್ರಮ ವಿಡುವುದು ಸಂಘದ ಹಿತದೃಷ್ಟಿಯಿಂದ ಮತ್ತು ಸದಸ್ಯರ ಮತ್ತು ಸಹ ಸದಸ್ಯರ ಹಿತದೃಷ್ಟಿಯಿಂದ ಅತ್ಯಾವಶ್ಯಕ. ಎಂದು 2015-16ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 44 ಮತ್ತು 45 ರಲ್ಲಿ ವಿವರಿಸಿಸುವುದು ವರದಿ ಸಾಲಿಗೂ ಮುಂದುವರೆದಿದೆ.

ಸಂಘದಿಂದ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಯನ್ನು ಪ್ರತಿನಿಧಿಸತಕ್ಕ ವ್ಯವಸ್ಥಾಪಕ ನಿರ್ದೇಶಕರೆನ್ನಲಾದ ಶ್ರೀ ಆರ್.ಜಿ. ತಿಲಕ್ ರವರಿಗೆ ದಿನಾಂಕ 03-08-2017 ರಂದು ಪತ್ರ ಬರೆದು (By RPAD & Speed Post) ಸಂಘವು ಡೆವಲಪರ್ಸ್ ರವರಿಗೆ ನೀಡಿರುವ ಹಾಗೂ ಬಡಾವಣೆಯ ಕೆಲಸಕ್ಕೆ ಸಂಘದಿಂದ ನೀಡಿ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರ ಲೆಕ್ಕಕ್ಕೆ ಹಾಕಿರುವ ಮೊಬಲಗಿಗೆ ದಿನಾಂಕ 31-3-2017ಕ್ಕೆ ದೃಢೀಕರಣ ನೀಡಲು ಕೋರಿದ್ದರು ಸಂಘಕ್ಕೆ ಧೃಢೀಕರಣ ಪತ್ರವನ್ನು ನೀಡಿರುವುದಿಲ್ಲ. ಆದುದರಿಂದ ನಿಖರತೆಯನ್ನು ದೃಢೀಕರಿಸಲು ಸಾಧ್ಯವಿಲ್ಲ. ದೃಢೀಕರಣ ಪತ್ರವನ್ನು ಪಡೆದು ನೋಡುವುದು, ಎಂದು 2016-17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 62 ರಲ್ಲಿ ವಿವರಿಸಿದೆ. ಶ್ರೀ ಆರ್.ಜಿ. ತಿಲಕ್ ರವರಿಗೆ ನೀಡಿರುವ ಮೊಬಲಗಿಗೆ ದಿನಾಂಕ 31-03-2018ಕ್ಕೆ ದೃಢೀಕರಣ ಪತ್ರ ನೀಡಬೇಕೆಂದು ದಿನಾಂಕ 30-04-2018 ರಂದು ನೋಂದಾಯಿತ ಅಂಚೆ ಮುಖಾಂತರ ಹಾಗೂ ಸ್ಪೀಡ್ ಪೋಸ್ಟ್ ಮುಖಾಂತರ ಪತ್ರ ಬರೆದಿದ್ದರು ಸಂಘಕ್ಕೆ ದೃಢೀಕರಣ ಪತ್ರವನ್ನು ನೀಡಿರುವುದಿಲ್ಲ. ಶ್ರೀ ಆರ್.ಜಿ. ತಿಲಕ್ ರವರಿಗೆ ದಿನಾಂಕ 26-4-2019 ರಂದು ನೋಂದಾಯಿತ ಅಂಚೆ ಮುಖಾಂತರ ಸಂಘದಿಂದ ಪತ್ರ ಬರೆದು, ಸಂಘದಿಂದ ದಿನಾಂಕ 31-3-2019ರ ವರೆವಿಗೆ ಆರ್.ಜಿ. ತಿಲಕ್ ರವರಿಗೆ /ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರಿಗೆ ನೀಡಿರುವ ಮೊಬಲಗಿಗೆ ದೃಢೀಕರಣ ಪತ್ರವನ್ನು ನೀಡಲು ತಿಳಿಸಿದ್ದರು ಸಹಾ ಸಂಘಕ್ಕೆ ಶ್ರೀ ಆರ್.ಜಿ. ತಿಲಕ್ ರವರು ದಿನಾಂಕ 31-3-2019ಕ್ಕೆ ದೃಢೀಕರಣ ಪತ್ರವನ್ನು ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ 27-5-2019ರ ವರೆವಿಗೂ ನೀಡಿರುವುದಿಲ್ಲ. ಆದುದರಿಂದ ಶ್ರೀ ಆರ್.ಜಿ. ತಿಲಕ್ ರವರಿಗೆ ನೀಡಿರುವ ಮೊಬಲಗಿನ ಬಗ್ಗೆ ನಿಖರತೆಯನ್ನು ದೃಢೀಕರಿಸಲುಸಾಧ್ಯವಿಲ್ಲ. ತಕ್ಷಣವೇ ಕಾರ್ಯದರ್ಶಿಯವರು ಮತ್ತು ಸಂಘದ ಪದಾಧಿಕಾರಿಗಳು ಗಮನಹರಿಸಿ, ಸೂಕ್ತ ಕ್ರಮವಿಟ್ಟು ಶ್ರೀ ಆರ್.ಜಿ. ತಿಲಕ್ ರವರಿಂದ ದೃಢೀಕರಣ ಪತ್ರವನ್ನು ಪಡೆದು ತಾಳೆ ನೋಡುವುದು ಅತ್ಯಾಗತ್ಯ, ಎಂದು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಲಾಗಿದೆ.

ಸಂಘದಿಂದ ದಿನಾಂಕ 11-05-2020 [ಸಂಘದ ಪತ್ರದ ನಂ. KPTEHCSL/08/2020-21]ರಲ್ಲಿ ನೋಂದಾಯಿತ ಅಂಚೆ ಮುಖಾಂತರ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್‌ರವರಾದ ಶ್ರೀ ಆರ್.ಜಿ. ತಿಲಕ್ ರವರಿಗೆ ಪತ್ರ ಬರೆದು ದಿನಾಂಕ 31-03-2020ಕ್ಕೆ ಸಂಘದಿಂದ ಪಡೆದಿರುವ ಮೊಬಲಗಿಗೆ ದೃಢೀಕರಣ ಪತ್ರವನ್ನು ನೀಡುವುದೆಂದು ತಿಳಿಸಿದ್ದರೂ ಸಹಾ ದಿನಾಂಕ 31-3-2020ಕ್ಕೆ ದೃಢೀಕರಣ ಪತ್ರವನ್ನು ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಸಂಸ್ಥೆಯನ್ನು ಪ್ರತಿನಿಧಿಸತಕ್ಕ ವ್ಯವಸ್ಥಾಪಕ ನಿರ್ದೇಶಕರೆನ್ನಲಾದ ಶ್ರೀ ಆರ್.ಜಿ. ತಿಲಕ್ ರವರು ನೀಡಿರುವುದಿಲ್ಲ ಎಂದು ಲೆಕ್ಕಪರಿಶೋಧನಾ

ವೇಳೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ದಿನಾಂಕ 31–03–2020ಕ್ಕೆ ಡೆವಲಪರ್ಸ್ ರವರಿಂದ ದೃಢೀಕರಣ ಪತ್ರ ಇಲ್ಲದೇ ಇರುವುದರಿಂದ ಶ್ರೀ ಆರ್.ಜಿ. ತಿಲಕ್, ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ರವರಿಗೆ ನೀಡಿರುವ ಮೊಬಲಗಿನ ಬಗ್ಗೆ, ಇವರ ಲೆಕ್ಕದಲ್ಲಿರುವ ಮೊಬಲಗಿನ ಬಗ್ಗೆ ನಿಖರತೆಯನ್ನು ದೃಢೀಕರಿಸಲು ಸಾಧ್ಯವಿಲ್ಲ, ಎಂದು ಮೇಲಿನ ವಿವರವನ್ನು 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುತ್ತಾರೆ. ಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರು ದಿನಾಂಕ 11–09–2020 ರಂದು By Speed Post ಮುಖಾಂತರ ಶ್ರೀ ಆರ್.ಜಿ. ತಿಲಕ್ ಮ್ಯಾನೇಜಿಂಗ್ ಡೈರೆಕ್ಟರ್, ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್, ಬೆಂಗಳೂರು–560020 ರವರಿಗೆ ಪತ್ರ ಕಳುಹಿಸಿ, ದಿನಾಂಕ 31–03–2020ರ ವರೆವಿಗೆ ಸಂದೇಶ್ ಭಾಗ್ ಬಡಾವಣೆಯ ಕೆಲಸಕಾರ್ಯಗಳ ಬಗ್ಗೆ ಸಂಘದಿಂದ ಪಡೆದಿರುವ ಮೊಬಲಗಿಗೆ ದೃಢೀಕರಣ ಪತ್ರವನ್ನು ಹಾಗೂ ಬಡಾವಣೆಗೆ ಸಂಬಂಧಿಸಿದಂತೆ ಪ್ರಗತಿಯನ್ನು, ಇನ್ನಿತರ ವಿಷಯಗಳ ಬಗ್ಗೆ ವಿವರಣೆಯನ್ನು ದಾಖಲಾತಿಗಳನ್ನು ದಿನಾಂಕ 20–09–2020 ರೊಳಗೆ ಶ್ರೀ ಮಲ್ಲಪ್ಪ. ಕೆ. ಸನ್ನದು ಲೆಕ್ಕಪರಿಶೋಧಕರಿಗೆ ನೀಡಲು ದಿನಾಂಕ 11–9–2020ರ ಶ್ರೀ ಕೆ. ಮಲ್ಲಪ್ಪ ಸಿಎ ರವರ ಪತ್ರದಲ್ಲಿ ತಿಳಿಸಲಾಗಿತ್ತು. ಆದರೆ ದಿನಾಂಕ 20–09–2020 ರವರಿಗೂ ಶ್ರೀ ಆರ್.ಜಿ. ತಿಲಕ್ ರವರು ದಿನಾಂಕ 31–3–2020ಕ್ಕೆ ದೃಢೀಕರಣ ಪತ್ರವನ್ನು ಹಾಗೂ ನನ್ನ ಪತ್ರದ ದಿನಾಂಕ 11–9–2020 ರಲ್ಲಿ ಕೇಳಿರುವ ದಾಖಲಾತಿಗಳನ್ನು ಮತ್ತು ಮಾಹಿತಿಯನ್ನು ಲಿಖಿತವಾಗಿ ಶ್ರೀ. ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರಿಗೆ ನೀಡಿರುವುದಿಲ್ಲ. ಆದರೆ ದಿನಾಂಕ 21–09–2020 ರಂದು ಶ್ರೀ ಆರ್.ಜಿ. ತಿಲಕ್ ರವರು ಪತ್ರ ಬರೆದು ರೂ. 13,97,43,580–00 ಗಳನ್ನು ನೀಡಿರುವುದು ಸರಿಯಾದ ಅಂಕಿ ಅಂಶಗಳಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಸಂಘಕ್ಕೆ ದಿನಾಂಕ 29–11–2014 ರಲ್ಲಿ ಮತ್ತು ದಿನಾಂಕ 19–5–2020 ರಲ್ಲಿ ಪತ್ರ ಬರೆದು ಪೇಮೆಂಟ್ ವಿವರ ಕೇಳಿದ್ದೇನೆ, ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಇದರ ಬಗ್ಗೆ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ವಿಚಾರಿಸಲಾಗಿ, ಸಂಘದಿಂದ ಸಂಘದ ಪತ್ರದ ನಂ. KPTEHCSL/49/2014–15 ದಿನಾಂಕ 11–12–2014 ರಲ್ಲಿ ನೋಂದಾಯಿತ ಅಂಚೆ ಮುಖಾಂತರ ಮತ್ತು KPTEHCSL/11/2020–21 ದಿನಾಂಕ 12–06–2020 ರಲ್ಲಿ ಸ್ಪೀಡ್ ಪೋಸ್ಟ್ ಮುಖಾಂತರ ಪತ್ರ ಬರೆಯಲಾಗಿದೆ, ಹಾಗೂ ವಿವರ ನೀಡಲಾಗಿದೆ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಶ್ರೀ ಮಲ್ಲಪ್ಪ. ಕೆ. ಸನ್ನದು ಲೆಕ್ಕಪರಿಶೋಧಕರಿಗೆ ಸಂಘದ ಕಾರ್ಯದರ್ಶಿಯವರು ತಿಳಿಸಿ, ದಿನಾಂಕ 11–12–2014 ಮತ್ತು ದಿನಾಂಕ 12–06–2020ರ ಪತ್ರಗಳ ಜೆರಾಕ್ಸ್ ಪ್ರತಿಯನ್ನು ನೀಡಿರುತ್ತಾರೆ. ಸದರಿ ಪತ್ರಗಳ ಜೆರಾಕ್ಸ್ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಯೊಂದಿಗೆ ಅನುಬಂಧ–19B ಮತ್ತು ಅನುಬಂಧ–19C ಎಂದು ಮಾಹಿತಿಗಾಗಿ ಲಗತ್ತಿಸಿದೆ. ತಕ್ಷಣವೇ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯದರ್ಶಿಯವರು ಆದ್ಯತೆಯ ಮೇಲೆ ಶ್ರೀ ಆರ್.ಜಿ. ತಿಲಕ್ ಪ್ರಕೃತಿ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ರವರ ಲೆಕ್ಕದ ಬಗ್ಗೆ ಗಮನ ಹರಿಸಿ, ಸೂಕ್ತ ರೀತಿಯಲ್ಲಿ ಸರಿಪಡಿಸತಕ್ಕದ್ದು, ಇಲ್ಲವಾದರೇ ಸೂಕ್ತ ರೀತಿಯಲ್ಲಿ ಕ್ರಮವಿಡುವುದು ಅತ್ಯಾಗತ್ಯ, ಎಂದು 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಮೇಲಿನಂತೆ ವಿವರಿಸಿರುತ್ತಾರೆ, ಸದರಿ ವಿವರಣೆ ವರದಿ ಸಾಲಿಗೂ ಮುಂದುವರೆದಿದೆ.

ಶ್ರೀ ಆರ್.ಜಿ. ತಿಲಕ್ ಮ್ಯಾನೇಜಿಂಗ್ ಡೈರೆಕ್ಟರ್ ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರಿಗೆಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರು ಕಳುಹಿಸಿದ್ದ ದಿನಾಂಕ 11–9–2020ರ ಜೆರಾಕ್ಸ್ ಪ್ರತಿಯನ್ನು ಅನುಬಂಧ–19D ಎಂದು 2019–20ನೇ ಸಾಲಿನಲ್ಲಿ ಆಡಿಟ್ ವರದಿಗೆ ಈ ವರದಿಯೊಂದಿಗೆ ಲಗತ್ತಿಸಿದೆ. ಈ ಪತ್ರದ ಅಂದರೆ ದಿನಾಂಕ 11–9–2020 ರ ಪತ್ರದ ಪ್ರತಿಯನ್ನು ಸಂಘದ ಅಧ್ಯಕ್ಷರಿಗೂ / ಕಾರ್ಯದರ್ಶಿಯವರಿಗೂ ನೀಡಲಾಗಿದೆ. ಆದುದರಿಂದ ತಕ್ಷಣವೇ ಸಂಘದ ಪದಾಧಿಕಾರಿಗಳು [ಅಧ್ಯಕ್ಷರು, ಉಪಾಧ್ಯಕ್ಷರು] ಮತ್ತು ಆಡಳಿತ ಮಂಡಳಿ ಸದಸ್ಯರು, ಕಾರ್ಯದರ್ಶಿಯವರು, ದಿನಾಂಕ 11–9–2020 ರ ಪತ್ರದ ಬಗ್ಗೆ ಗಮನಹರಿಸಿ ಪತ್ರದಲ್ಲಿರುವ ವಿಷಯಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು, ಎಂದು 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುತ್ತಾರೆ. ಆದರೆ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರು ಬಡಾವಣೆಯ ಪ್ರಗತಿಯ ವರದಿಯನ್ನು ಸಂಘಕ್ಕೆ ನೀಡಿರುವುದಿಲ್ಲ ಹಾಗೂ ದಿನಾಂಕ 11–9–2020ರ ಪತ್ರಕ್ಕೆ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರಿಂದ ಬಡಾವಣೆಯ ಪ್ರಗತಿ ಬಗ್ಗೆ ವರದಿಯನ್ನು ಪಡೆಯಲು ಮತ್ತು ಇನ್ನಿತರ ವಿಷಯಗಳ ಬಗ್ಗೆ; ಸಂಘದ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಮತ್ತು ಕಾರ್ಯದರ್ಶಿಯವರು ಕ್ರಮವಿಡುವುದು.

ಮೇಲೆ ವಿವರಿಸಿರುವಂತೆ ಹೆಚ್ಚುವರಿಯಾಗಿ ಪಾವತಿಸಿರುವುದನ್ನು ತೀರ್ವವಾಗಿ ಆಕ್ಷೇಪಿಸಿದ್ದು, ತಕ್ಷಣವೇ M.O.Uಪ್ರಕಾರ ಮಾಡಬೇಕಾದ ಸಂದೇಶ್ ಭಾಗ್ ಬಡಾವಣೆಯ ಕೆಲಸಕಾರ್ಯಗಳನ್ನು ಪ್ರಕೃತಿ ಬಿಲ್ಡರ್ಸ್ ಮತ್ತು ಡೆವಲಪರ್ಸ್ ರವರು ಮಾಡದೇ ಇದ್ದರೆ ಸೂಕ್ತ ಕಾನುನು ಕ್ರಮವನ್ನು ಆದ್ಯತೆಯ ಮೇರೆಗೆ ಆಡಳಿತ ಮಂಡಳಿ ಸದಸ್ಯರು ತೆಗೆದುಕೊಳ್ಳುವುದು ಅತ್ಯಾಗತ್ಯ, ತಪ್ಪಿದಲ್ಲಿ ಹೆಚ್ಚುವರಿ ಹಣ ಪಾವತಿಸಿರುವ ಬಗ್ಗೆ ಸಂಘಕ್ಕೆ ಉಂಟಾಗಬಹುದಾದ ಆರ್ಥಿಕ ಹಾನಿಗೆ ಸಂಬಂದಪಟ್ಟ ಸಾಲಿನ ಆಡಳಿತ ಮಂಡಳಿಯವರೇ ಜವಾಬ್ದಾರರು ಎಂದು 2013–14ನೇ ಸಾಲಿನ ಲೆಕ್ಕಪರಿಶೋಧನೆ ವರದಿಯ ಪುಟ ಸಂಖ್ಯೆ 62 ರಲ್ಲಿ ವಿವರಿಸಿದೆ. ಇದರ ಬಗ್ಗೆ ಆಡಳಿತ ಮಂಡಳಿಯವರು ಕಾನೂನು ಕ್ರಮ ತೆಗೆದುಕೊಂಡಿಲ್ಲ ಇನ್ನಾದರು ತಕ್ಷಣವೇ ಸೂಕ್ತವಾದ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದು ಅತ್ಯಾಗತ್ಯ. ಮಾಜಿ ಉಪಾಧ್ಯಕ್ಷರಾದ ಶ್ರೀ ಎನ್.ಎ. ಕೃಷ್ಣಮೂರ್ತಿ ಮತ್ತು ಮಾಜಿ ಆಥರೈಸ್ಡ್ ಡೈರೆಕ್ಟರ್ ರವರಾದ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ಹೆಸರಿನಲ್ಲಿ ಕೂತಗಾನಹಳ್ಳಿ ಗ್ರಾಮದ ಸರ್ವೇ ನಂ. 68/24 ರ 2 ಎಕರೆ ಜಮೀನು ಸೇಲ್ ಅಗ್ರಿಮೆಂಟ್ ಮತ್ತು ಜಿಪಿಎ ಆಗಿದ್ದು, ಇದನ್ನು ಸಂಘದ ಹೆಸರಿಗೆ ಮಾಡಿಸಿಕೊಳ್ಳಲು ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಕ್ರಮವಿಡುವುದು ಅತ್ಯಾಗತ್ಯ ಎಂದು 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿದೆ. ಸಂಘದ ಹೆಸರಿಗೆ ಮಾಡಿಸಿಕೊಳ್ಳು ಕ್ರಮವಿಡುವುದು.

ಸಂಘದಿಂದ ದಿನಾಂಕ 19–5–2021 (ಸಂಘದ ಪತ್ರದ ನಂ. KPTEHCSL/08/2021–22) ರಲ್ಲಿ ನೋಂದಾಯಿತ ಅಂಚೆ ಮುಖಾಂತರ / ಸ್ಪೀಡ್ ಪೋಸ್ಟ್ ಮುಖಾಂತರ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಆರ್.ಜಿ. ತಿಲಕ್ ರವರಿಗೆ ಪತ್ರ ಬರೆದು, ದಿನಾಂಕ 31–3–2021ಕ್ಕೆ ಸಂಘದಿಂದ ಪಡೆದಿರುವ ಮೊಬಲಗಿಗೆ ದೃಢೀಕರಣ ಪತ್ರವನ್ನು ನೀಡುವುದೆಂದು ತಿಳಿಸಿದ್ದರೂ ಸಹಾ ದಿನಾಂಕ 31–3–2021ಕ್ಕೆ ದೃಢೀಕರಣ ಪತ್ರವನ್ನು ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ಸಂಸ್ಥೆಯನ್ನು ಪ್ರತಿನಿಧಿಸತಕ್ಕ ವ್ಯವಸ್ಥಾಪಕ ನಿರ್ದೇಶಕರೆನ್ನಲಾದ ಶ್ರೀ ಆರ್.ಜಿ. ತಿಲಕ್ ರವರು ನೀಡಿರುವುದಿಲ್ಲ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಸಂಘದಿಂದ ದಿನಾಂಕ 19–5–2021 ರಂದು ಶ್ರೀ ಆರ್.ಜಿ. ತಿಲಕ್ ರವರಿಗೆ ಬರೆದಿರುವ ಪತ್ರದ ಝೆರಾಕ್ಸ್ ಪ್ರತಿಯನ್ನು ಈ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ. ದಿನಾಂಕ 31–3–2021ಕ್ಕೆ ಶ್ರೀ ಆರ್.ಜಿ. ತಿಲಕ್ ಡೆವಲಪರ್ಸ್ ರವರಿಂದ ದೃಢೀಕರಣ ಪತ್ರ ಇಲ್ಲದೇ ಇರುವುದರಿಂದ, ಶ್ರೀ ಆರ್.ಜಿ. ತಿಲಕ್ ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್ ರವರಿಗೆ ನೀಡಿರುವ ಮೊಬಲಗಿನ ಬಗ್ಗೆ, ಇವರ ಲೆಕ್ಕದಲ್ಲಿರುವ ಮೊಬಲಗಿನ ಬಗ್ಗೆ ನಿಖರತೆಯನ್ನು ದೃಢೀಕರಿಸಲು ಸಾಧ್ಯವಿಲ್ಲ.

ಪ್ರಕೃತಿ ಬಿಲ್ಡರ್ಸ್ & ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಆರ್.ಜಿ. ತಿಲಕ್ ರವರಿಗೆ ಸಂಘದಿಂದ ಸಂದೇಶ್ ಭಾಗ್ ಬಡಾವಣೆಯ ಪ್ರಗತಿಯ ಬಗ್ಗೆ, ಸಂಘದಿಂದ ಪಾವತಿಸಿರುವ ಮೊಬಲಗಿನ ದೃಢೀಕರಣ ಪತ್ರದ ಬಗ್ಗೆ ಸಂಘದಿಂದ ಅನೇಕ ಪತ್ರಗಳನ್ನು ಬರೆದಿದ್ದರೂ ಸಹಾ ದೃಢೀಕರಣ ಪತ್ರವನ್ನು ನೀಡಿರುವುದಿಲ್ಲ, ಪ್ರಗತಿ ಬಗ್ಗೆಯೂ ಸಹಾ ಪತ್ರವನ್ನು ಬರೆದಿಲ್ಲ ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಸಂದೇಶ್ ಭಾಗ್ ಬಡಾವಣೆಯ ಕರಡು ನೀಲಿ ನಕ್ಷೆ ದಿನಾಂಕ 29–9–2018 ರಂದುಅನುಮೋದನೆಯಾಗಿದ್ದರೂ ಸಹಾ ಬಡಾವಣೆಯ ಕೆಲಸಗಳನ್ನು ಡೆವಲಪರ್ಸ್ ರವರು ತ್ವರಿತ ಗತಿಯಲ್ಲಿ ಪ್ರಾರಂಭಿಸಿ ಸಮರ್ಪಕವಾಗಿ ಮಾಡುತ್ತಿಲ್ಲ. ಎಂದು ಅಧ್ಯಕ್ಷರು ತಿಳಿಸಿರುತ್ತಾರೆ. 31–3–2014 ಕ್ಕೆ ಸಂಘದಿಂದ ಹೆಚ್ಚಿಗೆ ನೀಡಿರುವ ಮೊಬಲಗು ರೂ. 3,13,84,315–00 ಗಳನ್ನು ನಿಯಮಾನುಸಾರ ಪ್ರಕೃತಿ ಬಿಲ್ಡರ್ಸ & ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಆರ್.ಜಿ. ತಿಲಕ್ ರವರಿಂದ ವಸೂಲಾತಿ ಮಾಡಲು ಆಡಳಿತ ಮಂಡಳಿಯವರು ಮತ್ತು ಕಾರ್ಯದರ್ಶಿಯವರು ಕ್ರಮ ವಿಡುವುದು ಅತ್ಯಾಗತ್ಯ. ಹಾಗೂ ಬಡಾವಣೆ ಕೆಲಸಗಳ ಬಗ್ಗೆ ತಕ್ಷಣವೇ ಶ್ರೀ ಆರ್.ಜಿ. ತಿಲಕ್ ರವರನ್ನು ಸಂಪರ್ಕಿಸಿ, ಬಡಾವಣೆಯ ಕೆಲಸವನ್ನು ಅವರು ಮಾಡದೇ ಇದ್ದರೇ ಆಡಳಿತ ಮಂಡಳಿ ಸದಸ್ಯರು ಮತ್ತು ಪದಾಧಿಕಾರಿಗಳು ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುವುದು ಅತ್ಯಾಗತ್ಯ.

ಸಂಘವು ತನ್ನ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ನೀಡುವ ಸಲುವಾಗಿ, ಅನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮದ ಸರ್ವೇ ನಂ. 10/5ರಲ್ಲಿ ವಿಸ್ತೀರ್ಣ 3 ಎಕರೆ 25 ಗುಂಟೆ ಜಮೀನನ್ನು ಭೂಮಾಲೀಕರಾಗಿದ್ದ ಶ್ರೀಮತಿ ಅಕ್ಕಯಮ್ಮ ಮತ್ತು ಆಕೆಯ ಪತಿಯವರಾದ ಶ್ರೀ ಪಾಪರೆಡ್ಡಿ ಮತ್ತು ಮಕ್ಕಳಿಗೆ ಸಂಘದಿಂದ ರೂ. 22,00,000–00 (ಇಪ್ಪತ್ತೆರಡು ಲಕ್ಷ) ಗಳನ್ನು ನೀಡಿ, ದಿನಾಂಕ 23–08–2010 ರಂದು ಸಂಘದ ಪರವಾಗಿ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕರು (ನಿರ್ದೇಶಕರು) ರವರ ಹೆಸರಿನಲ್ಲಿ ಕರಾರು ಮಾಡಿಕೊಂಡಿದ್ದರು.

ಮೇಲೆ ತಿಳಿಸಿರುವ ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮದ ಸರ್ವೆ ನಂ. 10/5 ರಲ್ಲಿ 3 ಎಕರೆ 25 ಗುಂಟೆ ಜಮೀನು ಭೂಪರಿವರ್ತನೆಯಾದ ಮೇಲೆ ಸಂಘದ ಹೆಸರಿಗೆ ಭೂಮಾಲೀಕರು ನೋಂದಣಿ ಮಾಡಿಕೊಡದೇ ಇದ್ದುದರಿಂದ ಇದರ ಬಗ್ಗೆ ದಿನಾಂಕ 18–7–2011 ರಂದು ಆನೇಕಲ್ ತಹಸಿಲ್ದಾರರವರಿಗೆ ಸಂಘದಿಂದ ಪತ್ರ ಬರೆದು ಯಾರಿಗೂ ಖಾತೆ ಬದಲಾವಣೆ ಮಾಡಬಾರದೆಂದು ತಿಳಿಸಿದೆ. ಮತ್ತು ಸರ್ಜಾಪುರ ಪೋಲೀಸ್ ಠಾಣೆ ಆನೇಕಲ್ ತಾಲ್ಲೂಕಿನ, ಪೋಲೀಸ್ ಇನ್ಸ್‌ಪೆಕ್ಟರ್ ರವರಿಗೂ ದಿನಾಂಕ 27–5–2011 ರಂದು ಸಂಘದಿಂದ ಪತ್ರ ಬರೆದು, ಸಂಘಕ್ಕೆ ಜಮೀನು ನೋಂದಣಿ ಮಾಡಿಕೊಡದ ಜಮೀನು ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದೆ. ಈ ಪತ್ರಗಳನ್ನು ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರೇ ಬರೆದಿರುತ್ತಾರೆ.

ಹಾಗೂ ದಿನಾಂಕ 27–7–2011 ರಂದು ಕೇಸ್ ಓ.ಎಸ್. ನಂ. 526/2011 ರ ಮುಖಾಂತರ ಆನೇಕಲ್ ಕೋರ್ಟ್‌ನಲ್ಲಿ ಸರ್ವೆ ನಂ. 10/5 ರ 3 ಎಕರೆ 25 ಗುಂಟೆ ಜಮೀನಿನ ಬಗ್ಗೆ ವ್ಯಾಜ್ಯ ಹೂಡಲಾಗಿದೆ. ಮತ್ತು ದಿನಾಂಕ 20–1–2013 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರಿಗೆ ನೀಡಲಾಗಿದ್ದ ಎಲ್ಲಾ ಅಧಿಕಾರ ಹಿಂಪಡೆದು ಬ್ಯಾಂಕ್ ವ್ಯವಹಾರಗಳನ್ನು ಮತ್ತು ಚೆಕ್‌ಗಳಿಗೆ ಸಹಿ ಮಾಡಲು ನೀಡಿದ್ದ ಅಧಿಕಾರವನ್ನು ಹಿಂದಕ್ಕೆ ಪಡೆಯಲಾಗಿದೆ.

ಹಾಗೂ ಅಧಿಕಾರ ದುರುಪಯೋಗ ಆರೋಪದ ಮೇಲೆ ಮತ್ತು ಅಭಿವೃದ್ಧಿದಾರರಿಗೆ ಮುಂಗಡ ಹಣ ನೀಡಿ, ಸಂಘದ ಹಣವನ್ನು ದುರುಪಯೋಗ ಪಡಿಸಿಕೊಂಡಂತಾಗಿರುತ್ತದೆ, ಎಂದು ದಿನಾಂಕ 3–10–2013 ರಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು ರವರು ಇವರ ಕಛೇರಿ ಪತ್ರದ ಸಂಖ್ಯೆ ಹೆಚ್‌ಎಸ್‌ಜಿ–2/143/ಹೆಚ್‌ಹೆಚ್‌ಎಸ್/2013–14 (ದಿನಾಂಕ 3–10–2013) ರಂದು 5 ವರ್ಷಗಳ ಅವಧಿಗೆ ಸಂಘದ ನಿರ್ದೇಶಕರ ಸ್ಥಾನದಿಂದ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರನ್ನು ಅನರ್ಹಗೊಳಿಸಿ ಆದೇಶ ಹೊರಡಿಸಿದ್ದರು, ಇದರ ಬಗ್ಗೆ ಸದರಿಯವರು ನ್ಯಾಯಾಲಯದ ಮೊರೆ ಹೋಗಿ ಪುನಃ ಸಂಘದ ನಿರ್ದೇಶಕರಾಗಿ, ದಿನಾಂಕ 25–1–2015 ರಂದು ನಡೆದ ಆಡಳಿತ ಮಂಡಳಿ ಸದಸ್ಯರ ಚುನಾವಣೆಯಲ್ಲಿ ಸ್ಪರ್ಧಿಸಿ, ಸೋತಿರುತ್ತಾರೆ.

ಮೇಲಿನ ಎಲ್ಲಾ ವಿಷಯವು ಶ್ರೀ ಹೆಚ್.ಕೆ. ಗೋಪಾಕೃಷ್ಣ ರವರಿಗೆ ಗೊತ್ತಿದ್ದರು ಸಹಾ, ಮತ್ತು ಕೇಸ್ ಒ.ಎಸ್. ನಂ. 526/2011 ರ ದಾವೆಯನ್ನು ಸೀನಿಯರ್ ಸಿವಿಲ್ ಜಡ್ಜ್, ಜೆ.ಎಂ.ಎಫ್.ಸಿ. ಕೋರ್ಟ್ ಆನೇಕಲ್‌ನಿಂದ ದಾವೆಯನ್ನು ವಾಪಸ್ ಪಡೆಯಲು ಸಂಘದ ಆಡಳಿತ ಮಂಡಳಿ ಸಭೆಯ ಠರಾವು ಮತ್ತು ಅನುಮತಿ ಪಡೆಯದೇ, ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ದಿನಾಂಕ 3–10–2013 ರಂದು ನಿರ್ದೇಶಕ ಸ್ಥಾನದಿಂದ 5 ವರ್ಷಗಳ ಅವಧಿಗೆ ಅನರ್ಹಗೊಂಡಿದ್ದರೂ ಸಹಾ ಸಂಘದ ಪರವಾಗಿ ಕರಾರು ಆಗಿದ್ದ ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮದ ಸರ್ವೆ ನಂ. 10/5 ರಲ್ಲಿ 3 ಎಕರೆ 25 ಗುಂಟೆ ಜಮೀನನ್ನು ಶ್ರೀಮತಿ ಸುಜಾತಮ್ಮ ಕೋಂ ಜಿ. ನಾಗರಾಜ್ ರವರಿಗೆ ಒಪ್ಪಿಗೆ ಪತ್ರವನ್ನು ಹಿರಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 04–03–2014 ರಂದು ನೋಂದಣಿ ಮಾಡಿಕೊಟ್ಟಿರುತ್ತಾರೆ. ನೋಂದಣಿ ಮಾಡಿಕೊಟ್ಟ ಮೇಲೆ ದಿನಾಂಕ 11–3–2014 ರಂದು ಸಿವಿಲ್ ಕೋರ್ಟ್ ಆನೇಕಲ್‌ಗೆ, ವಕೀಲರ ಮುಖಾಂತರ ರಾಜೀ ಮೆಮೋವನ್ನು ಸಹಾ ನೀಡಿ ಕೇಸ್ ಒ.ಎಸ್. ನಂ. 526/2011ನ್ನು ವಾಪಸ್ಸು ಪಡೆದಿರುತ್ತಾರೆ.

ಮೇಲಿನ ವಿಷಯದ ಬಗ್ಗೆ ಆಡಳಿತ ಮಂಡಳಿ ಸಭೆಯ ದಿನಾಂಕ 19–1–2013 ರ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ, ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ನಿರ್ದೇಶಕರ ಸ್ಥಾನದಿಂದ 5 ವರ್ಷದ ಅವಧಿಗೆ ಅನರ್ಹಗೊಂಡ ಮೇಲೆ ಸಂಘದಿಂದ ಕಾರ್ಯ ನಿರ್ವಾಹಕ ನಿರ್ದೇಶಕ ಸ್ಥಾನದಿಂದ ತೆಗೆದು ಹಾಕಿದ ಮೇಲೆ, ಆನೇಕಲ್ ಕೋರ್ಟ್‌ನಲ್ಲಿ ಕೇಸ್ ಹಿಂದಕ್ಕೆ ಪಡೆಯಲು ಸಂಘದ ಆಡಳಿತ ಮಂಡಳಿ ಸದಸ್ಯರ ಒಪ್ಪಿಗೆ ಪಡೆಯದೇ, ದಿನಾಂಕ 4–3–2014 ರಂದು ಒಪ್ಪಿಗೆ ಪತ್ರವನ್ನು ಶ್ರೀಮತಿ ಸುಜಾತಮ್ಮ ಕೋಂ ನಾಗರಾಜ್ ರವರಿಗೆ, ಸರ್ವೆ ನಂ. 10/5ರ 3 ಎಕರೆ 25 ಗುಂಟೆ ಜಮೀನಿನ ಬಗ್ಗೆ ಒಪ್ಪಿಗೆ ಪತ್ರವನ್ನು ಮಾಡಿಕೊಟ್ಟು, ಒಪ್ಪಿಗೆ ಪತ್ರದಲ್ಲಿ ಸಂಘದ ಹೆಸರನ್ನು ಸಹಾ ತಪ್ಪು ನಮೂದಿಸಿ ನೋಂದಣಿ ಮಾಡಿಕೊಟ್ಟಿರುವುದರಿಂದ, ಆಡಳಿತ ಮಂಡಳಿ ಸಭೆಯ ದಿನಾಂಕ 19–3–2014 ರಂದು ಆಡಳಿತ ಮಂಡಳಿ ಸಭೆಯಲ್ಲಿ ಶ್ರೀ ಹೆಚ್.ಕೆ.ಗೋಪಾಲಕೃಷ್ಣ ರವರ ಮೇಲೆ ಕ್ರಿಮಿನಲ್ ಕೇಸ್ ಹಾಕಲು ತೀರ್ಮಾನಿಸಿ, ಸಂಜಯನಗರ ಪೋಲೀಸ್ ಠಾಣೆಯಲ್ಲಿ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ಮೇಲೆ ಕ್ರಿಮಿನಲ್ ಕೇಸನ್ನು ದಿನಾಂಕ 25–3–2014 ರಂದು ನೀಡಿದೆ. **F.I.R** ಕೂಡ ರಿಜಿಸ್ಟರ್ ಆಗಿದೆ. ಆನೇಕಲ್ ಕೋರ್ಟಿನಲ್ಲಿ ಕೇಸ್ ನಂ. 526/2011 ನ್ನು ವಾಪಸ್ಸು ಪಡೆದಿದ್ದನ್ನು ಪುನಃ ಕೇಸನ್ನು ರಿಕಾಲ್ ಮಾಡಿಸಲಾಗಿದೆ.

[ಅಪರಾಧ ಸಂಖ್ಯೆ 0082/2014, ದಿನಾಂಕ 25–3–2014) **F.I.R** ನ ಬಗ್ಗೆ ಫೋಟೋ ಪ್ರತಿಯನ್ನು 2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಬಂಧ– “A” ಎಂದು ಮಾಹಿತಿಗಾಗಿ ಲಗತ್ತಿಸಿರುತ್ತಾರೆ.]

**ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿಗೆ ಅಮಲ್ಜಾರಿ ಶುಲ್ಕ ರೂ. 6,56,250–00**

ಸಂಘದ ಆಡಳಿತ ಮಂಡಳಿ ಸಭೆಯ ದಿನಾಂಕ 25–04–2019 ರ ಠರಾವಿನ ಸಂಖ್ಯೆ 10 ರಲ್ಲಿ ವಿವರಿಸಿರುವಂತೆ, ಚರ್ಚಿಸಿ, ಸಂಘದ ಮಾಜಿ ನಿರ್ದೇಶಕರಾದ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮದ ಸರ್ವೆ ನಂ. 10/5 ರಲ್ಲಿ 3 ಎಕರೆ 25 ಗುಂಟೆ ಜಮೀನನ್ನು ಮಾರಿಕೊಂಡ ಬಗ್ಗೆ, ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ರವರು ದಿನಾಂಕ 03–09–2018 ಆದೇಶ ಹೊರಡಿಸಿ [ಆದೇಶದ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಯೊಂದಿಗೆ ಲಗತ್ತಿಸಿದೆ] ಸದರಿ ಆದೇಶದಲ್ಲಿ ದಾವೆ ಹೂಡಿದ ದಿನಾಂಕಕ್ಕೆ ಪಾವತಿಸಲು ಬಾಕಿ ಇರುವ ರೂ. 3,26,25,000–00 ಗಳನ್ನು ಶೇ 9 ರ ಬಡ್ಡಿಯೊಂದಿಗೆ ಪಾವತಿಸಲು ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರಿಗೆ ಆದೇಶದಲ್ಲಿ ತಿಳಿಸಲಾಗಿತ್ತು. ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ರೂ. 3,26,25,000–00 ಗಳನ್ನು ಶೇ 9 ರ ಬಡ್ಡಿಯೊಂದಿಗೆ ಸಂಘಕ್ಕೆ ಪಾವತಿ ಮಾಡದಿದ್ದಲ್ಲಿ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ಚರ ಮತ್ತು ಸ್ಥಿರಾಸ್ತಿಗಳ ವಿಲೇವಾರಿಯಿಂದ ವಸೂಲಾತಿ ಮಾಡಿಕೊಳ್ಳಲು ಸಂಘದವರಿಗೆ, ದಾವೆ ಸಂಖ್ಯೆ ಅನಿ(ವ&ಇ)ಡಿ–2NMD/225/2016–17 ದಿನಾಂಕ 03–09–2018ರ ಆದೇಶದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ವಸತಿ & ಇತರೆ) ಬೆಂಗಳೂರು ರವರು ತಿಳಿಸಿದ ಪ್ರಯುಕ್ತ, ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು ಸಂಘಕ್ಕೆ ರೂ. 3,26,25,000–00 ಗಳನ್ನು ಶೇ 9ರ ಬಡ್ಡಿಯೊಂದಿಗೆ ಪಾವತಿಸದೇ ಇದ್ದುದರಿಂದ, ಶ್ರಿ ಹೆಚ್.ಕೆ. ಗೋಪಾಲಕೃಷ್ಣ ರವರ ವಿರುದ್ಧ ಕಾನೂನಿನ ಕ್ರಮ ತೆಗೆದುಕೊಳ್ಳಲು, ವಸೂಲಾಧಿಕಾರಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಲ್ಲಿ ಸಂಘದಿಂದ ಅಮಲ್ಜಾರಿ ಪ್ರಕರಣ ದಾಖಲಿಸಿರುತ್ತಾರೆ. ಈ ಅಮಲ್ಜಾರಿ ಪ್ರಕರಣ ದಾವೆಗೆ ರೂ. 6,56,250–00 ಗಳನ್ನು ಚಲನ್ ಮುಖಾಂತರ Execution Fees ಅನ್ನು ದಿನಾಂಕ 02–05–2019 ರಂದು ಚೆಕ್ ನಂ. 296348 ರ ಮೂಲಕ ಸಂಘದಿಂದ ರೂ. 6,56,250–00 ಗಳನ್ನು ಚೆಲನ್ [ಚಲನ್ ಉಲ್ಲೇಖ ಸಂಖ್ಯೆ ಸಿಆರ್‌ಓ 519042500032908 & ಡಿಡಿಓ ಕೋಡ್ 185410] ಮುಖಾಂತರ ಪಾವತಿಸಿರುತ್ತಾರೆ. ಚಲನ್‌ನ ಪ್ರತಿಯನ್ನು 2019–20ನೇ ಸಾಲಿನ ಆಡಿಟ್ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ. ದಿನಾಂಕ 30–5–2019 ರ ಆಡಳಿತ ಮಂಡಳಿ ಸಭೆಯ ಠರಾವಿನ ಸಂಖ್ಯೆ 9 ರಲ್ಲಿ ರೂ. 6,56,250–00 ಗಳನ್ನು ಚೆಲನ್ ಮುಖಾಂತರ Execution Fees ಅನ್ನು ಪಾವತಿಸಿರುವುದಕ್ಕೆ ಸರ್ವಾನುಮತದಿಂದ ಸ್ಥಿರೀಕರಣ ಪಡೆದಿರುತ್ತಾರೆ.

ಸದರಿ ರೂ. 6,56,250–00 ಗಳನ್ನು ದಿನಾಂಕ 31–3–2020ರ ಆಸ್ತಿ–ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(3) ಎಫ್ (2) ರಲ್ಲಿ ವಿವರಿಸಿರುವಂತೆ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ಮಾಜಿ ನಿರ್ದೇಶಕರ ದಾವೆ ಬಗ್ಗೆ 2019–20ನೇ ಸಾಲಿನಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ ರವರ ಕಛೇರಿಗೆ ಅಮಲ್ಜಾರಿ ಶುಲ್ಕ ಎಂದು ತೋರಿಸಿದೆ. ಸದರಿ ಮೊಬಲಗು ದಿನಾಂಕ 31–3–2021 ಕ್ಕೂ ಮುಂದುವರಿಯುತ್ತದೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ ರವರ ಕಛೇರಿಯಲ್ಲಿ ದಾವೆಯು ಪ್ರಗತಿಯಲ್ಲಿದೆ ಎಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಸದರಿ ದಾವೆ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮವಿಡುವುದು ಎಂದು 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುತ್ತಾರೆ. ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಇವರ ಆದೇಶದ ದಿನಾಂಕ 3–9–2018ರ ಬಗ್ಗೆ ಮೇಲೆ ತಿಳಿಸಿರುವಂತೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರು–1ನೇ ವಲಯ ರವರ ಕಛೇರಿಗೆ, ರೂ. 3,26,25,000–00 ಗಳ ವಸೂಲಾತಿಯ ಬಗ್ಗೆ ಅಮಲ್ಜಾರಿ ಪ್ರಕರಣ ದಾಖಲಿಸಿ, Execution Fees ಅನ್ನು ರೂ. 6,56,250–00 ಸಹಾ ಸಂಘದಿಂದ ಪಾವತಿಸಿದೆ. ಹಾಗೂ ದಿನಾಂಕ 15–9–2020ರ ವರೆವಿಗೆ ಶ್ರೀ ಗೋಪಾಲಕೃಷ್ಣ ರವರು, ರೂ. 3,26,25,000–00 ಗಳನ್ನು ಶೇ 9ರ ಬಡ್ಡಿಯೊಂದಿಗೆ, ಸಂಘಕ್ಕೆ ಪಾವತಿಸದೇ ಇದ್ದುದರಿಂದ; ಸಂಘದಿಂದ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು ರವರಿಗೆ ದಿನಾಂಕ 15–9–2020 ರಂದು ಪತ್ರ ಬರೆದು ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರ ಮನೆಯನ್ನು ತುರ್ತು ABJ (Attachment before Jugdment) ಮಾಡಿಸಿಕೊಡಬೇಕಾಗಿ ಕೋರಲಾಗಿದೆ ಎಂದು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ದಿನಾಂಕ 15–9–2020ರ ಪತ್ರದ ಜೆರಾಕ್ಸ್ ಪ್ರತಿಯನ್ನು ಈ ಲೆಕ್ಕಪರಿಶೋಧನಾ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ. ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು ಇವರ ಆದೇಶದ ದಿನಾಂಕ 03–09–2018ರ ಆದೇಶದ ಬಗ್ಗೆ ಶ್ರೀ ಹೆಚ್.ಕೆ. ಗೋಪಾಲಕೃಷ್ಣ ರವರು KAT (Karnataka Appellate Tribunal) ಬೆಂಗಳೂರು ರವರಿಗೆ ಅಪೀಲ್ ನಂ. 241/2018 ನ್ನು ದಿನಾಂಕ 11–9–2020 ರಂದು ಹಾಕಿರುತ್ತಾರೆ. KAT ಯಿಂದ ದಿನಾಂಕ 03–09–2018ರ ಆದೇಶವನ್ನು ಮೆರಿಟ್ ಮೇಲೆ ತೀರ್ಮಾನಿಸಲು ಆದೇಶಿಸಿರುತ್ತಾರೆ. ಸದರಿ ವಿಷಯವು ಸಹಕಾರ ಸಂಘಗಳ ಅಪರ ನಿಬಂಧಕರ ಕಛೇರಿ (ವಸತಿ ಮತ್ತು ಇತರೆ) ಯಲ್ಲಿ ನಡೆಯುತ್ತಿದೆ ಎಂದು ಆಡಿಟ್ ವೇಳೆಯಲ್ಲಿ ತಿಳಿಸಿರುತ್ತಾರೆ.

ಶ್ರೀ ಹೆಚ್.ಕೆ. ಗೋಪಾಲಕೃಷ್ಣ ಮಾಜಿ ನಿರ್ದೇಶಕರು ರವರ ಸಂದೇಶ್ ಭಾಗ್ ಬಡಾವಣೆಯ ಜಮೀನಿನ ಕೇಸ್ / ದಾವೆ ಬಗ್ಗೆ ದಿನಾಂಕ 31–3–2021ರ ಆಸ್ತಿ–ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5 (3) ಎಫ್ (1) ರಲ್ಲಿ ವಿವರಿಸಿರುವಂತೆ ರೂ. 1,72,200–00 ಗಳನ್ನು 5 (3) ಎಫ್ (3) ರಲ್ಲಿ ವಿವರಿಸಿರುವಂತೆ ರೂ. 2,38,100–00 ಗಳನ್ನು ಮತ್ತು ಕ್ರಮ ಸಂಖ್ಯೆ 5 (3) ಜಿ (3) ರಲ್ಲಿ ವಿವರಿಸಿರುವಂತೆ ರೂ. 39,000–00 ಗಳನ್ನು ವಕೀಲರುಗಳಿಗೆ ನೀಡಿದೆ. ಸದರಿ ಮೊಬಲಗನ್ನು ಸಂದೇಶ್ ಭಾಗ್ ಬಡಾವಣೆಯ ಲೆಕ್ಕದಡಿ ತೋರಿಸಿದೆ.

2020–21ನೇ ಸಾಲಿನಲ್ಲಿ ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮದ ಸರ್ವೇ ನಂ. 7/2ರ ಭೂಪರಿವರ್ತಿತ ಜಮೀನಿನ ಎಸ್.ಆರ್ ವ್ಯಾಲ್ಯುಯೇಶನ್ ಚಾರ್ಜ್ ಬಗ್ಗೆ ಮತ್ತು ಡಾಕ್ಯೂಮೆಂಟೇಶನ್ ಫೀ ಬಗ್ಗೆ ರೂ. 14,000–00 ಗಳನ್ನು ಖರ್ಚು ಮಾಡಿದ್ದು, ಇದನ್ನು ದಿನಾಂಕ 31–03–221 ರ ಬ್ಯಾಲನ್ ಷೀಟಿನ ಆಸ್ತಿಯ ಕ್ರಮ ಸಂಖ್ಯೆ 5(3) (3)ಜಿ ಕಡೆ ಸಂದೇಶ್ ಭಾಗ್ ಬಡಾವಣೆಯ ಲೆಕ್ಕದಡಿ ತೋರಿಸಿದೆ.

2020–21ನೇ ಸಾಲಿನಲ್ಲಿ ಆನೇಕಲ್ ತಾಲ್ಲೂಕು ಚಿಕ್ಕನಹಳ್ಳಿ–ಕಾಮನಹಳ್ಳಿ ಗ್ರಾಮದ ಸರ್ವೇ ನಂ. 7/2 ರ 1 ಎಕರೆ 24 ಗುಂಟೆ ಭೂ ಮೇಲಿನ ತೆರಿಗೆ 2020–21ಕ್ಕೆ ರೂ. 94,787–00 ಗಳನ್ನು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಮುಗಳೂರು ಗ್ರಾಮ ಪಂಚಾಯಿತಿಗೆ ರಸೀತಿ ನಂ. 1189027 ದಿನಾಂಕ 28–8–2020 ರ ಮೂಲಕ ಪಾವತಿಸಿರುವುದನ್ನು ದಿನಾಂಕ 31–3–2021ರ ಬ್ಯಾಲನ್‌ಷೀಟಿನ ಆಸ್ತಿಯ ಕ್ರಮ ಸಂಖ್ಯೆ 5 (3) (3) (2) ರಲ್ಲಿ ಸಂದೇಶ್ ಭಗ್ ಬಡಾವಣೆಯ ಲೆಕ್ಕದಡಿ ತೋರಿಸಿದೆ. ದಿನಾಂಕ 28–8–2020ರ ರಸೀತಿ ನಂ 1189027ನ್ನು ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

ಸಾಲು ಪ್ರಾರಂಭದಿಂದ ಸಾಲಾಖೈರಿಗೆ ಸಂದೇಶ್ ಭಾಗ್ ಬಡಾವಣೆಯ ಸದಸ್ಯರ / ಸಹ ಸದಸ್ಯರ ಸಭೆಯ ವೆಚ್ಚ ರೂ. 1,29,730–00 ಗಳು ಹಿಂದಿನ ಸಾಲಿನಿಂದ ಮುಂದುವರಿಯುತ್ತದೆ. ಇದನ್ನು ಸಂದೇಶ್ ಭಾಗ್ ಬಡಾವಣೆಯ ಲೆಕ್ಕದಡಿ ತೋರಿಸಿದೆ.

**4 ಸಂದೇಶ್ ಲೇಕ್ ಸೈಡ್ – 1ನೇ ಹಂತ ಅಮೋಸ್ ಪ್ರಾಪರ್ಟೀಸ್ : ರವರಿಗೆ ಮುಂಗಡ ರೂ. 41,95,00,000–00**

ಸಂಘವು ತನ್ನ ಸದಸ್ಯರ ನಿವೇಶನ ಬೇಡಿಕೆಯನ್ನು ಪೂರೈಸುವ ಸಲುವಾಗಿ ಸಂದೇಶ್ ನಗರ 1 ಮತ್ತು 2ನೇ ಹಂತ ಹಾಗೂ ಸಂದೇಶ್ ಭಾಗ್ ಬಡಾವಣೆಗಳ ಜತೆಗೆ ಸಂದೇಶ್ ಲೇಕ್ ಸೈಡ್ 1ನೇ ಹಂತ ಮತ್ತು 2ನೇ ಹಂತ ಎಂಬ ಬಡಾವಣೆಗಳನ್ನು ನಿರ್ಮಿಸಲು ಮಾಸಿಕ ಆಡಳಿತ ಮಂಡಳಿ ಸಭೆಗಳಲ್ಲಿ ನಿರ್ಧರಿಸಿ, ಈ ಉದ್ದೇಶಕ್ಕಾಗಿ ಸಂದೇಶ್ ಲೇಕ್ ಸೈಡ್ 1ನೇ ಹಂತದ ಬಡಾವಣೆಯ ನಿರ್ಮಾಣಕ್ಕಾಗಿ ದೇವನಹಳ್ಳಿ ತಾಲ್ಲೂಕಿನ ಬೆಟ್ಟನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್ ಗಳಾದ 38, 39, 40, 41, 59, 60 ಮತ್ತು 63 ಇವುಗಳ 30 ಎಕರೆ ಜಮೀನನ್ನು ಸಂಘದ ಪರವಾಗಿ ಖರೀದಿಸಿ ಸದರಿ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಬಡಾವಣೆ ನಿರ್ಮಾಣ ಮಾಡಿಕೊಡಲು ಜಮೀನು ಖರೀದಿ, ಭೂಪರಿರ್ವತನೆ ಮತ್ತು ಬಡಾವಣೆ ನಿರ್ಮಾಣ ಮಾಡುವ ಅನುಭವುಳ್ಳ ಮತ್ತು ಈಗಾಗಲೇ ಸಂಘದ ಸಂದೇಶ್ ನಗರ 1ನೇ ಹಂತದ ಬಡಾವಣೆ ನಿರ್ಮಾಣ ಕಾರ್ಯ ವಹಿಸಿಕೊಂಡಿರುವ ಅಮೋಸ್ ಪ್ರಾಪರ್ಟೀಸ್ ಬೆಂಗಳೂರು ಇವರಿಗೆ ಬಡಾವಣೆ ನಿರ್ಮಾಣ ಮಾಡುವ ಗುತ್ತಿಗೆಯನ್ನು ನೀಡಲು ತೀರ್ಮಾನಿಸಿ, ಮೆ॥ ಅಮೋಸ್ ಪ್ರಾಪರ್ಟೀಸ್ ನಂ. 247, 4ನೇ ಮುಖ್ಯ ರಸ್ತೆ, ಗಂಗಾನಗರ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್, ಬೆಂಗಳೂರು–560032 ಇದರ ಪ್ರತಿನಿಧಿಯಾದ ಶ್ರೀ ಬಿ. ರವಿಕುಮಾರ್ ರೆಡ್ಡಿ ಬಿನ್ ಲೇಟ್ ಬಿ. ಗೋಪಾಲ ರೆಡ್ಡಿ ಇವರೊಂದಿಗೆ ದಿನಾಂಕ: 22–09–2010 ರಂದು ನೊಂದಣಿ ರಹಿತವಾದ ಪರಸ್ಪರ ಒಪ್ಪಂದದ ಕರಾರನ್ನು ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ ಅಂಚೆ ಕಾಲೋನಿ, ಸಂಜಯನಗರ, ಬೆಂಗಳೂರು– 560094 ಈ ಸಂಘದವರು ಮಾಡಿಕೊಂಡಿರುತ್ತಾರೆ. ಸಂಘದ ಪರವಾಗಿ ಸಂಘದ ಪ್ರತಿ ನಿಧಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ವೈ. ಜಯಪಾಲ್ ರವರು ಮತ್ತು ಅಮೋಸ್ ಪ್ರಾಪರ್ಟಿಸ್‌ನ ಪರವಾಗಿ ಶ್ರೀ ಬಿ. ರವಿ ಕುಮಾರ್ ರೆಡ್ಡಿ ಯವರು ಪರಸ್ಪರ ಒಪ್ಪಂದದ ಕರಾರಿನಲ್ಲಿ [MEMORANDUM OF UNDERSTANDING] [M.O.U] ಸಹಿ ಮಾಡಿರುತ್ತಾರೆ.

ಈ ಒಪ್ಪಂದದ ಮುಖ್ಯಾಂಶಗಳನ್ನು ಮತ್ತು ಹಣ ಬಿಡುಗಡೆಯ ಬಗ್ಗೆ ಹಾಗೂ ಡೆವಲಪರ್ಸ್‌ಗೆ ನಿವೇಶನದ ಚದರ ಅಡಿಗೆ ರೂ. 630–00 ನಂತೆ ಸಂಘದಿಂದ ಪಾವತಿಸುವ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ 2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 64 ರಿಂದ 68 ರ ವರೆವಿಗೆ ವಿವರಿಸಿರುತ್ತಾರೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ವರದಿ ಸಾಲಿನ ಈ ವರದಿಯಲ್ಲಿ ವಿವರಿಸಿರುವುದಿಲ್ಲ.

ಮೇಲ್ಕಂಡ M.O.U ನಡಿ ಮೆ॥ ಅಮೋಸ್ ಪ್ರಾಪರ್ಟಿಸ್ ರವರಿಗೆ ಸಂದೇಶ್ ಲೇಕ್ ಸೈಡ್–1ನೇ ಹಂತದ ಬಡಾವಣೆಗೆ ದಿನಾಂಕ 31–3–2021 ಕ್ಕೆ ಒಟ್ಟು ರೂ. 41,95,00,000–00 (ನಲವತ್ತೊಂದು ಕೋಟಿ ತೊಂಭತ್ತೈದು ಲಕ್ಷ) ಗಳನ್ನು ಮುಂಗಡವಾಗಿ ಡೆವಲಪರ್ಸ್ ರವರಾದ ಅಮೋಸ್ ಪ್ರಾಪರ್ಟಿಸ್ ರವರಿಗೆ ಸಂಘದಿಂದ ನೀಡಿರುತ್ತಾರೆ. ಈ ಮೊಬಲಗಿಗೆ ಅಮೋಸ್ ಪ್ರಾಪರ್ಟಿಸ್ ಪಾಲುದಾರರಾದ (Partner) ಶ್ರೀ ಬಿ. ರವಿಕುಮಾರ್ ರೆಡ್ಡಿ ಯವರು ದಿನಾಂಕ 30–06–2021 ರಂದು ದೃಢೀಕರಣ ಪತ್ರವನ್ನು Financial Year 2010–2021ರ ವರೆವಿಗೆ ಸಂಘಕ್ಕೆ ನೀಡಿದ್ದು, ತಾಳೆ ಇರುತ್ತದೆ. ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ವರದಿಗೆ ಲಗತ್ತಿಸಿದೆ. (**ಅನುಬಂಧ– 20**).

ಗುತ್ತಿಗೆದಾರರಿಂದ [DEVELOPERS] ಯಾವುದೇ ಭದ್ರತೆ ಅಥವಾ ಬ್ಯಾಂಕ್ ಗ್ಯಾರೆಂಟಯನ್ನಾಗಲೀ ಪಡೆದಿರುವುದಿಲ್ಲ. M.O.Uನ ದಿನಾಂಕದಿಂದ ದಿನಾಂಕ: 31-03-2021 ಕ್ಕೆ ಗುತ್ತಿಗೆದಾರರಿಗೆ ರೂ. 41,95,00,000-00 ರೂಗಳನ್ನು ಪಾವತಿಸಿದ್ದರೂ ಸಹ ಅವಶ್ಯಕ ವಾದಷ್ಟು ಬಡಾವಣೆ ಕೆಲಸಕಾರ್ಯಗಳು ದಿನಾಂಕ 31-03-2021 ರೊಳಗೆ ಆಗಿರುವುದಿಲ್ಲ. M.O.U ಪ್ರಕಾರ ನಿಗಧಿತ ಅವಧಿಯೊಳಗೆ ಸಂದೇಶ್ ಲೇಕ್ ಸೈಡ್-1ನೇ ಹಂತದ ಬಡಾವಣೆ ಕೆಲಸಕಾರ್ಯಗಳು ಆಗಿರುವುದಿಲ್ಲ. ಸದರಿ ಕಾರಣಗಳಿಂದ ಸಂದೇಶ್ ಲೇಕ್ ಸೈಡ್-1ನೇ ಹಂತದ ಬಡಾವಣೆಯ ಬಗ್ಗೆ ನೀಡಿರುವ ಮೊಬಲಗಿನ ಬಗ್ಗೆ, ಸಂಘಕ್ಕೆ ಆರ್ಥಿಕ ಹಾನಿಯಾದರೇ, ಏನಾದರು ಕಾನೂನು ತೊಡಕು ಉಂಟಾಗಿ, ಲೋಪದೋಷ ಉಂಟಾಗಿ ಸಂಘಕ್ಕೆ ನಷ್ಟ ಉಂಟಾದರೇ, M.O.U ಮಾಡಿದ ಅವಧಿಯಲ್ಲಿದ್ದ ಆಡಳಿತ ಮಂಡಳಿ ಸದಸ್ಯರು ಮತ್ತು ಮೊಬಲಗು ಪಾವತಿಸಿದ ಸಂಘದ ಸಂಬಂಧಿಸಿದ ಆಡಳಿತ ಮಂಡಳಿ ಸದಸ್ಯರು ಹಾಗು ಪದಾಧಿಕಾರಿಗಳು ಜವಾಬ್ದಾರರು.

ಮೇಲ್ಕಂಡ ಕರಾರುಗಳ ಪೂರ್ವ ಕರ್ನಾಟಕ ಪಾರದರ್ಶಕ ಅಧಿನಿಯಮದನ್ವಯ ನಿಯಮಾನುಸಾರವಾಗಿ ಟೆಂಡರ್ ಅಹ್ವಾನಿಸಿಲ್ಲ. ಕರಾರುಗಳ ವೇಳೆಗೆ ಗುತ್ತಿಗೆದಾರರ ವಶಕ್ಕೆ ಜಮೀನು ಬಂದಿಲ್ಲ ಹಾಗೂ ರೈತರ ಪರವಾಗಿ ಹಣ ಸ್ವೀಕರಿಸಿಲು ಜಿ.ಪಿ.ಎ. ಪಡೆದಿರುವುದಿಲ್ಲ.

ಸಂಘ ಬಡಾವಣೆಗಳ ರಚನೆ ಸಂಬಂಧ ಜಮೀನು ಪಡೆಯಲು ಅನುಸರಿಸುತ್ತಿರುವ ಕ್ರಮ ನಿಯಮ ಬಾಹಿರವಾಗಿದ್ದು, ಉಲ್ಲೇಖಿಸಿದ ನ್ಯೂನತೆಗಳ ಕಾರಣ ಕರಾರುಗಳಂತೆ ಪಾವತಿಸಿದ ಮುಂಗಡವನ್ನು ಹಾಗೂ ಪ್ರಸಕ್ತ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿದ ಹಣದಿಂದ ಟಿ.ಡಿ.ಎಸ್. ಕಡಿತ ಮಾಡಿ ಆದಾಯ ತೆರಿಗೆ ಇಲಾಖೆಗೆ ಪಾವತಿಸದಿರುವುದನ್ನು ಅಕ್ಷೇಪಿಸಿದೆ ಎಂದು 2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ವಿವರಿಸಿದೆ.

M.O.Uನ ಮಿತಿಗಳಿಗಿಂತ ಅಧಿಕ ಹಣ ಪಾವತಿ ಮಾಡಿರುವ ಬಗ್ಗೆ ಮತ್ತು ಮೇಲ್ಕಂಡ ನ್ಯೂನತೆಗಳ ಹಿನ್ನಲೆಯಲ್ಲಿ ಸಂಘಕ್ಕೆ ಅರ್ಥಿಕ ಹಾನಿ ಮತ್ತು ಉದ್ಭವಿಸುವ ಎಲ್ಲಾ ತೊಡಕುಗಳಿಗೆ ಅಯಾ ಸಾಲಿನ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಮಂಡಳಿಯವರೇ ಜವಾಬ್ದಾರರು.

ದಿನಾಂಕ: 22-09-2010 ರಂದು ಸಂಘವು ನೋಂದಣಿ ರಹಿತವಾದ ಒಪ್ಪಂದವನ್ನು ಬಡಾವಣೆ ನಿರ್ಮಾಣ ಮಾಡಲು ಅಮೋಸ್ ಪ್ರಾಪರ್ಟೀಸ್‌ನ ಶ್ರೀ ಬಿ. ರವಿ ಕುಮಾರ್ ರೆಡ್ಡಿ ರವರೊಂದಿಗೆ ಮಾಡಿಕೊಂಡಿದ್ದು; ಸದರಿ M.O.U. ನಲ್ಲಿ ತಿಳಿಸಿರುವ ಬಡಾವಣೆಯ ಎಲ್ಲಾ ಕಾರ್ಯಗಳು M.O.U.ನ ದಿನಾಂಕದಿಂದ 24 ತಿಂಗಳೊಳಗಾಗಿ ಗುತ್ತಿಗೆದಾರರು ಮುಕ್ತಾಯಗೊಳಿಸಬೇಕಾಗಿದ್ದು, ಮುಕ್ತಾಯಗೊಳಿಸಿಲ್ಲ ಮತ್ತು ತಹಲ್ ವರೆವಿಗೂ ಮುಕ್ತಾಯಗೊಳಿಸಿಲ್ಲ. ಪರಸ್ಪರ ಒಪ್ಪಂದದ ಅವಧಿಯು ಮುಗಿದಿದ್ದು, ಪರಸ್ಪರ ಒಪ್ಪಂದವನ್ನು ರಿನೀವಲ್ ಮಾಡಿರುವುದಿಲ್ಲ, ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ರಿನೀವಲ್ ಮಾಡಿಸಲು ಕ್ರಮವಿಡುವುದು.

ಸಂದೇಶ್ ಲೇಕ್ ಸೈಡ್-1 ರ ಬಡಾವಣೆಯ ಬಾಬ್ತು ದಿನಾಂಕ: 22-09-2010 ರ ಪರಸ್ಪರ ಒಪ್ಪಂದದಲ್ಲಿರುವ ಸರ್ವೆ ನಂಬರ್‌ಗಳ ಜಮೀನು ದಿನಾಂಕ: 31-03-2020 ರವರೆವಿಗೆ ಭೂ ಘರಿವರ್ತನೆಯಾದ ಜಮೀನು ಸಂಘಕ್ಕೆ ಅವಶ್ಯವಿರುವುದಷ್ಟು ನೋಂದಣಿಯಾಗಿರುವುದಿಲ್ಲ.

ಆದುದರಿಂದ ಸಂಘಕ್ಕೆ ಉಂಟಾಗಬಹುದಾದ ಆರ್ಥಿಕ ಹಾನಿಗೆ ಕಾನೂನು ತೊಡಕಿಗೆ ವೆತ್ಯಾಸಕ್ಕೆ ಸಂಬಂಧಪಟ್ಟ ಸಾಲಿನ ಪದಾಧಿಕಾರಿಗಳು ಮತ್ತು ಅಡಳಿತ ಮಂಡಳಿ ಸದಸ್ಯರು ಜವಾಬ್ದಾರರು.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4 ರ ಬಡಾವಣೆಗೆ ಸಂಬಂದ ಪಟ್ಟಂತೆ ದಿನಾಂಕ 31–3–2021ರ ವರೆವಿಗೆ 67 ಎಕರೆ 25. 12 ಗುಂಟೆ ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ಡೆವಲಪರ್ಸ್ ರವರಾದ ಶ್ರೀ ಬಿ. ರವಿಕುಮಾರ್ ರೆಡ್ಡಿಯವರು ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ಇದಲ್ಲದೇ ಜಿ.ಪಿ.ಎ. ಮತ್ತು ಸೇಲ್ ಅಗ್ರಿಮೆಂಟ್ 2 ಎಕರೆ 32. 12 ಗುಂಟೆ ಮತ್ತು ಅಗ್ರಿಕಲ್ಚರಲ್ ಸೇಲ್ ಡೀಡ್ Registered to Amos Nominees 11 ಎಕರೆ 0.36 ಗುಂಟೆ ಮತ್ತು ಸೇಲ್ ಅಗ್ರಿಮೆಂಟ್ 1 ಎಕರೆ 0.17 ಗುಂಟೆ. ಇದರ ಬಗ್ಗೆ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸ್ಟೇಟ್‌ಮೆಂಟ್ ನೀಡಿದ್ದು, **ಅನುಬಂಧ–17** ಎಂದು ವರದಿಯೊಂದಿಗೆ ಲಗತ್ತಿಸಿದೆ. ಆದರೆ ಸಂದೇಶ್ ಲೇಕ್ ಸೈಡ್–1ರ ಬಡಾವಣೆಗೆ ಎಷ್ಟು, ಸಂದೇಶ್ ಲೇಕ್ ಸೈಡ್–2ರ ಬಡಾವಣೆಗೆ ಎಷ್ಟು ಮತ್ತು ಸಂದೇಶ್ ಲೇಕ್ ಸೈಡ್–3ರ ಬಡಾವಣೆಗೆ ಎಷ್ಟು ಮತ್ತು ಸಂದೇಶ್ ಲೇಕ್ ಸೈಡ್–4ರ ಬಡಾವಣೆಗೆ ಎಷ್ಟು ಭೂಪರಿವರ್ತಿತ ಜಮೀನು ಮತ್ತು ಜಿ.ಪಿ.ಎ, ಮತ್ತು ಸೇಲ್ ಅಗ್ರಿಮೆಂಟ್ ಅಗ್ರಿಕಲ್ಚರಲ್ ಸೇಲ್ ಡೀಡ್ ಮತ್ತು ಸೇಲ್ ಅಗ್ರಿಮೆಂಟ್, ಸಂಘದ ಹೆಸರಿಗೆ ಮತ್ತು ಸಂಘದ ಪರವಾಗಿ ಸಂಘದ ಅಧ್ಯಕ್ಷರಿಗೆ ನೋಂದಣಿಯಾಗಿದೆ ಎಂಬ ಬಗ್ಗೆ ಪ್ರತ್ಯೇಕ, ಪ್ರತ್ಯೇಕವಾದ ಮಾಹಿತಿ ಲೆಕ್ಕಪರಿಶೋಧನಾ ವೇಳೆಯಲ್ಲಿ ಇರುವುದಿಲ್ಲ.

ಆದುದರಿಂದ ಬಡಾವಣೆವಾರು ಭೂಪರಿವರ್ತಿತ ಜಮೀನನು ್ನಮತ್ತು ಜಿ.ಪಿ.ಎ ಮತ್ತು ಸೇಲ್ ಅಗ್ರಿಮೆಂಟ್ ಅಗ್ರಿಕಲ್ಚರಲ್ ಸೇಲ್ ಡೀಡ್ ಮತ್ತು ಸೇಲ್ ಅಗ್ರಿಮೆಂಟ್ ಜಮೀನನ್ನು ವಿವರವಾಗಿ ಬರೆಯಲು ಸಾಧ್ಯವಾಗಿರುವುದಿಲ್ಲ.

**ಸಂದೇಶ್ ಲೇಕ್ ಸೈಡ್ – 2ನೇ ಹಂತ ಅಮೋಸ್ ಪ್ರಾಪರ್ಟೀಸ್:**
**ರವರಿಗೆ ಮುಂಗಡ ರೂ. 46,30,00,000–00**

ಸಂಘವು ತನ್ನ ಸಾಮಾನ್ಯ ಸದಸ್ಯರ / ಸಹ ಸದಸ್ಯರ ನಿವೇಶನ ಬೇಡಿಕೆಯನ್ನು ಪೂರೈಸುವ ಸಲುವಾಗಿ ಆಡಳಿತ ಮಂಡಳಿ ಸಭೆಯ ದಿನಾಂಕ: 17.04.2011ರ ಠರಾವಿನ ಸಂಖ್ಯೆ 13ರಲ್ಲಿ ಅಮೋಸ್ ಪ್ರಾಪರ್ಟೀಸ್ ಮಾಲೀಕರಾದ ಶ್ರೀ ಬಿ.ರವಿಕುಮಾರ್ ರೆಡ್ಡಿ ರವರು; ಸಂದೇಶ್ ಲೇಕ್ ಸೈಡ್–2ನೇ ಹಂತಕ್ಕೆ ನೀಡಿದ ಕರಡು ಎಂ.ಓ.ಯು. ಪತ್ರವನ್ನು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ; ಸರ್ವಾನುಮತದಿಂದ ಕರಡು ಎಂ.ಓ.ಯು. ಗೆ ಒಮ್ಮತದ ಒಪ್ಪಿಗೆ ಸೂಚಿಸಿ; ಮುಂದಿನ ಕಾರ್ಯಕ್ಕೆ ಕಾರ್ಯದರ್ಶಿಯವರಿಗೆ ಅಧಿಕಾರ / ಅವಕಾಶ ನೀಡಿರುತ್ತಾರೆ.

ಆಡಳಿತ ಮಂಡಳಿ ಸಭೆಯ ದಿನಾಂಕ: 08.05.2011ರ ಠರಾವಿನ ಸಂಖ್ಯೆ 9ರಲ್ಲಿ; ಸಂದೇಶ್ ಲೇಕ್ ಸೈಡ್–2ನೇ ಹಂತದ ಬಡವಣೆಯ ಸ್ವಚ್ಛ ಪ್ರತಿ ಎಂ.ಓ.ಯು. ಗೆ ಸಹಿ ಮಾಡಿದ ಬಗ್ಗೆ ಹಾಗೂ ಗುತ್ತಿಗೆದಾರರಿಗೆ ಒಂದು ಕೋಟಿ ರೂಪಾಯಿಗಳನ್ನು ಮುಂಗಡವಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಗಂಗಾನಗರ

ಶಾಖೆ ಬೆಂಗಳೂರು ಚೆಕ್ ನಂಬರ್ 559253 ದಿನಾಂಕ: 06.05.2011ರ ಮುಖಾಂತರ ನೀಡಿರುವುದಕ್ಕೆ ಅಡಳಿತ ಮಂಡಳಿ ಸಭೆಯ ದಿನಾಂಕ: 08.05.2011ರಂದು ಸ್ಥಿರೀಕರಣ ಪಡೆದಿರುತ್ತಾರೆ.

ದಿನಾಂಕ: 28–04–2011ರ ಇ–ಸ್ಟಾಂಪ್ (ರೂ. 100–00ಗಳ ಎರಡು ಇ–ಸ್ಟಾಂಪ್) ನಲ್ಲಿ ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., [ಸಂಘ] ಸಂಘದ ಪರವಾಗಿ ಸಂಘದ ಅಧ್ಯಕ್ಷರಾದ ಶ್ರೀ ವೈ. ಜಯಪಾಲ್ ರವರು ಮೆ॥ ಅಮೋಸ್ ಪ್ರಾಪರ್ಟೀಸ್ ನಂ. 207, 4ನೇ ಮೈನ್, ಗಂಗಾನಗರ, (ಮಹಿಳಾ ಕೋ–ಅಪರೇಟಿವ್ ಬಿಲ್ಡಿಂಗ್) ಬೆಂಗಳೂರು–560032 ರವರೊಂದಿಗೆ ಪರಸ್ಪರ ಒಪ್ಪಂದ (MEMORANDM OF UNDERSTANDING) ದ ಕರಾರು ಮಾಡಿಕೊಂಡಿದ್ದಾರೆ. ನೋಂದಣಿ ರಹಿತವಾದ ಎಂ.ಓ.ಯು. ಮಾಡಿಕೊಂಡ ದಿನಾಂಕ ಎಂ.ಓ.ಯು. ನಲ್ಲಿ 28ನೇ ಗುರುವಾರ 2011 ಬೆಂಗಳೂರು ಎಂದಿದೆ. ಆದರೆ ಯಾವ ಮಾಹೆ ಎಂದು ನಮೂದಿಸಿರುವುದಿಲ್ಲ. ಆದರೆ ಇ–ಸ್ಟಾಂಪ್ ಪೇಪರ್‌ನಲ್ಲಿ ದಿನಾಂಕ 28–4–2011 ಎಂದಿದೆ. ಆದುದರಿಂದ M.O.U.ನ ದಿನಾಂಕವನ್ನು 28–4–2011 ಎಂದು ನಮೂದಿಸಿದೆ. ಎಂ.ಓ.ಯು. ನಲ್ಲಿ ಸಹಿ ಮಾಡಿರುವ ಸಂಘದ ಅಧ್ಯಕ್ಷರು ಮತ್ತು ಮೆ॥ ಅಮೋಸ್ ಪ್ರಾಪರ್ಟೀಸ್ ನವರು ಸಹಾ ದಿನಾಂಕವನ್ನು ಹಾಕಿರುವುದಿಲ್ಲ. ಮೆ॥ ಅಮೋಸ್ ಪ್ರಾಪರ್ಟೀಸ್ ನಿಂದ ಪ್ರತಿನಿಧಿಸುವವರ ಹೆಸರು ಎಂ.ಓ.ಯು.

ನಲ್ಲಿ ಇರುವುದಿಲ್ಲ. ಎಂ.ಓ.ಯು. ನಲ್ಲಿ ಸೆಕೆಂಡ್ ಪಾರ್ಟಿ ಜಾಗದಲ್ಲಿ ಮೆ॥ ಅಮೋಸ್ ಪ್ರಾಪರ್ಟೀಸ್ ಪರವಾಗಿ ಸಹಿ ಮಾಡಿದ್ದು; ಸಹಿ ಮಾಡಿರುವವರ ಹೆಸರನ್ನು ಮುದ್ರಿಸಿಲ್ಲ. ಅದುದರಿಂದ ಎಂ.ಓ.ಯು. ನಲ್ಲಿ ಸಹಿ ಮಾಡಿರುವವರು ಯಾರು ಎಂದು ವಿಚಾರಿಸಿದಾಗ, ಸಹಿ ಮಾಡಿರುವವರು ಅಮೋಸ್ ಪ್ರಾಪರ್ಟೀಸ್ ಪಾಲುದಾರರಾದ / ಪ್ರೋಪ್ರೈಟರ್ ರವರಾದಶ್ರೀ ಬಿ.ರವಿಕುಮಾರ್ ರೆಡ್ಡಿ ಯವರು ಎಂದು ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಸಂಘವು ಅಮೋಸ್ ಪ್ರಾಪರ್ಟೀಸ್ ಬೆಂಗಳೂರು ರವರೊಂದಿಗೆ ಇ–ಸ್ಟಾಂಪ್‌ನ ದಿನಾಂಕ 28.04.2011 ರಂದು ಮಾಡಿಕೊಂಡಿರುವ ನೋಂದಣಿರಹಿತ ಒಪ್ಪಂದದದಲ್ಲಿ ಈ ಕೆಳಕಂಡಂತೆ ಇರುತ್ತದೆ. (ಸಂಕ್ಷಿಪ್ತವಾಗಿ ತಿಳಿಸಿದೆ)

1) ಬೆಂಗಳೂರು ಗ್ರಾಮಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಬೆಟ್ಟನಹಳ್ಳಿ ಗ್ರಾಮದ ಸರ್ವೆ ನಂ. 36, 37, 39, 57, 58, 61 ಮತ್ತು 62 ರಲ್ಲಿ ಬರುವ ಸುಮಾರು 30 ಎಕರೆ ಜಮೀನನ್ನು ಗುತ್ತಿಗೆದಾರರು ಅರ್ಹ ಜಮೀನುದಾರರಿಂದ ಖರೀದಿಸಲು ಅಗ್ರಿಮೆಂಟ್ ಹಾಕಿಕೊಂಡಿರುತ್ತಾರೆ ಎಂದು ಅಗ್ರಿಮೆಂಟ್ ನಲ್ಲಿ ನಮೂದಿಸಿರುತ್ತಾರೆ.

2) ಗುತ್ತಿಗೆದಾರರು ಸ್ವಂತ ಖರ್ಚಿನಿಂದ ಜಮೀನಿನ ಕ್ಲಿಯರ್ ಮತ್ತು ಮಾರ್ಕಟಬಲ್ ಟೈಟಲ್ ನ್ನು ಮಾಡಿಕೊಳ್ಳಬೇಕಾಗಿರುತ್ತದೆ.

3) ಮೇಲ್ಕಂಡ ಸರ್ವೆ ನಂಬರ್ ಗಳಲ್ಲಿ ಬರುವ 30 ಎಕರೆ ಪ್ರದೇಶದಲ್ಲಿ ವಾಸದ ಬಡಾವಣೆ ಮಾಡಲು ಗುತ್ತಿಗೆದಾರರು ಒಪ್ಪಿರುತ್ತಾರೆ. ಸದರಿ ಸರ್ವೆ ನಂಬರ್ ಗಳಲ್ಲಿ ವಾಸಯೋಗ್ಯ ಬಡಾವಣೆ ನಿರ್ಮಿಸಲು, ಗುತ್ತಿಗೆದಾರರಿಂದ ಪ್ರಾಜೆಕ್ಟ್ ಲ್ಯಾಂಡ್ ಖರೀದಿಸಲು ಸಂಘವರು ಸಹಾ ಒಪ್ಪಿಕೊಂಡಿರುತ್ತಾರೆ.

4) ಸಂದೇಶ್ ಲೇಕ್ ಸೈಡ್–2ನೇ ಹಂತದ ಬಡಾವಣೆಯ ಕೆಲಸಕಾರ್ಯಗಳನ್ನು M.O.U ದಿನಾಂಕದಿಂದ 24 ತಿಂಗಳೊಳಗಾಗಿ ಮುಗಿಸಿಕೊಡಬೇಕು.

ಗುತ್ತಿಗೆದಾರರು ಖರೀದಿಸಿದ ಜಮೀನನ್ನು ವ್ಯವಸಾಯೇತರ ಉಪಯೋಗಕ್ಕೆ ಅಂದರೆ ವಾಸಯೋಗ್ಯ ಬಡಾವಣೆ ಮಾಡಲು ಭೂ ಪರಿವರ್ತನೆಯನ್ನು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಡುವುದು.

ಸೇಲ್ ಡೀಡ್ ನ್ನು ಗುತ್ತಿಗೆದಾರರು ತಮ್ಮ ಹೆಸರಿಗೆ ಮಾಡಿಕೊಂಡ ಮೇಲೆ, ಎಲ್ಲಾ ದಾಖಲಾತಿಗಳನ್ನು ಸಂಘಕ್ಕೆ ನೀಡಬೇಕು.

ಸಂಘದ ಬಡಾವಣೆ ನಿರ್ಮಾಣ ಮಾಡಲು ಅನುಕೂಲವಾಗುವಂತೆ ಬೈಯಪ್ಪ ಅಥವಾ ಇತರೆ ಸಕ್ಷಮ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಮಂಜೂರಾತಿ ಮಾಡಿಸಿಕೊಡುವುದು; ಸಕ್ಷಮ ಪ್ರಾಧಿಕಾರದ ನಿಯಮದಂತೆ, SPECIFICATION ನಂತೆ ಬಡಾವಣೆಯನ್ನು ಗುತ್ತಿಗೆದಾರರು ಮಾಡಿಕೊಡಬೇಕು, ಎಂದು ದಿನಾಂಕ 28–04–2011 ರಂದು ಮಾಡಿಕೊಂಡಿರುವ ನೋಂದಣಿ ರಹಿತM.O.Uನಲ್ಲಿದ್ದು ಮತ್ತು ದಿನಾಂಕ: 28–04–2011 ರ ಎಂ.ಓ.ಯು. (MEMORANDM OF UNDERSTANDING) ನಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನಿನಲ್ಲಿ ಗುತ್ತಿಗೆದಾರರು ವಾಸಯೋಗ್ಯ ವಿವಿಧ ಅಳತೆಯ ನಿವೇಶನಗಳನ್ನು ಮಾಡಿ ಸಂಘಕ್ಕೆ ನೀಡಲು ಗುತ್ತಿಗೆದಾರರು ಒಪ್ಪಿಕೊಂಂಡಿದ್ದು; ಎಂ.ಓ.ಯು. ನ ಮುಖ್ಯಾಂಶಗಳನ್ನು ಮತ್ತು ಇದಲ್ಲದೇ ದಿನಾಂಕ 28–4–2011 ರಂದು ಮಾಡಿಕೊಂಡಿರುವ ಒಪ್ಪಂದದ ಮುಖ್ಯಾಂಶಗಳನ್ನು ಮತ್ತು ಹಣ ಬಿಡುಗಡೆಯ ಬಗ್ಗೆ ಹಾಗೂ ಡೆವಲಪರ್ಸ್‌ಗೆ ಪ್ರತಿ ನಿವೇಶನ ಚದರ ಅಡಿಗೆ ರೂ. 690–00 ನಂತೆ ಸಂಘದಿಂದ ಪಾವತಿಸುವ ಬಗ್ಗೆ ಇತರೆ ವಿಷಯಗಳ ಬಗ್ಗೆ 2013–14ನೇ ಸಾಲಿನ ವರದಿಯ ಪುಟ ಸಂಖ್ಯೆ 68 ರಿಂದ 74 ರ ವರೆವಿಗೆ ವಿವರವಾಗಿ ವಿವರಿಸಿರುತ್ತಾರೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ಈ ವರದಿಯಲ್ಲಿ ವಿವರಿಸಿರುವುದಿಲ್ಲ.

ಮೇಲ್ಕಂಡ ನೋಂದಣಿ ರಹಿತ ಎಂ.ಓ.ಯು. ನಡಿ ದಿನಾಂಕ 31–03–2021 ಕ್ಕೆ ರೂ. 46,30,00,000–00 (ನಲವತ್ತಾರು ಕೋಟಿ ಮೂವತ್ತು ಲಕ್ಷ) ರೂಗಳನ್ನು ಮುಂಗಡವಾಗಿ ಅಮೋಸ್ ಪ್ರಾಪರ್ಟೀಸ್ ಡೆವಲಪರ್ಸ್ ರವರಿಗೆ ಸಂಘದಿಂದ ನೀಡಲಾಗಿದೆ.

ದಿನಾಂಕ 31–3–2021 ರ ವರೆವಿಗೆ ಸಂದೇಶ್ ಲೇಕ್ ಸೈಡ್–2ನೇ ಹಂತದ ಬಡಾವಣೆಗೆ ರೂ. 46,30,00,000–00 (ನಲವತ್ತಾರು ಕೋಟಿ ಮೂವತ್ತು ಲಕ್ಷ) ಗಳನ್ನು ಸಂಘದಿಂದ ಪಡೆದ ಬಗ್ಗೆ ಅಮೋಸ್ ಪ್ರಾಪರ್ಟೀಸ್ ಪಾಲುದಾರರಾದ ಶ್ರೀ ಬಿ. ರವಿಕುಮಾರ್ ರೆಡ್ಡಿ ಯವರು ದಿನಾಂಕ 30–06–2021 ರಂದು ದೃಡೀಕರಣ ಪತ್ರವನ್ನು Financial year 2011–2020ಕ್ಕೆ ಸಂಘಕ್ಕೆ ನೀಡಿದ್ದು; ತಾಳೆ ಇರುತ್ತದೆ. ದೃಡೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ಈ ವರದಿಯೊಂದಿಗೆ ಮಾಹಿತಿಗಾತಿ ಲಗತ್ತಿಸಿದೆ. (**ಅನುಬಂಧ –21**).

ದಿನಾಂಕ : 31–03–2021 ರೊಳಗೆ ಸಂದೇಶ್ ಲೇಕ್ ಸೈಡ್–2ನೇ ಹಂತದ ಬಡಾವಣೆಯ ಬಾಬ್ತು; ಅವಶ್ಯಕವಾದಷ್ಟು ಭೂ ಪರಿವರ್ತನ ಜಮೀನು ಸಂಘಕ್ಕೆ ನೋಂದಣಿಯಾಗಿರುವುದಿಲ್ಲ. ದಿನಾಂಕ: 28–04–2011ರ ಎಂ.ಓ.ಯು ನಲ್ಲಿ ನಮೂದಿಸಿರುವ 30 ಎಕರೆ ಜಮೀನು ಡೆವಲಪರ್ಸ್ ರವರ ಹೆಸರಿಗೆ ನೋಂದಣೆಯಾಗಿರುವ ಬಗ್ಗೆ; ಭೂ ಪರಿವರ್ತನೆಯಾದ ಬಗ್ಗೆ; ಲೆಕ್ಕ ಪರಿಶೋಧನಾ ವೇಳೆಯಲ್ಲಿ ದಾಖಲಾತಿ ಇರುವುದಿಲ್ಲ. ಡೆವಲಪರ್ಸ್ ರವರು ಜಮೀನು ಖರೀದಿಸಿದ್ದರೆ ಜಮೀನನ್ನು ಖರೀದಿಸಲು ಅಗ್ರಿಮೆಂಟ್ ಹಾಕಿ ಕೊಂಡಿದ್ದರೆ, ಭೂಪರಿವರ್ತನೆಯಾಗಿದ್ದರೆ ಅಂತಹ ದಾಖಲಾತಿಗಳನ್ನು ಸಹ ಸಂಘಕ್ಕೆ ನೀಡಿಲ್ಲ.

ಎಂ.ಓ.ಯು. ಮಾಡಿಕೊಳ್ಳುವ ಮೊದಲು ಕಾನೂನು ಸಲಹೆ ಪಡೆದ ಬಗ್ಗೆ ದಾಖಲಾತಿ ಇರುವುದಿಲ್ಲ. ಬಡಾವಣೆಯ ಕೆಲಸ ಕಾರ್ಯಗಳ ಬಗ್ಗೆ ಪಾರದರ್ಶಕ ಕಾಯಿದೆಯಡಿಯಲ್ಲಿ ಟೆಂಡರ್ ಕರೆದು, ಕೊಟೇಶನ್‌ಪಡೆದ ಬಗ್ಗೆ ದಾಖಲಾತಿ ಇರುವುದಿಲ್ಲ; ಹಾಗೂ ಗುತ್ತಿಗೆದಾರರಿಂದ ಸೂಕ್ತ ಭದ್ರತೆ ಮತ್ತು ಬ್ಯಾಂಕ್ ಗ್ಯಾರಂಟಿ ಪಡೆದಿರುವುದಿಲ್ಲ. M.O.U ನಲ್ಲಿ ತಿಳಿಸಿರುವ ಅವಧಿಯು ಮುಗಿದಿದ್ದು M.O.U ಅನ್ನು ರಿನೀವಲ್ ಮಾಡಿಸಿಲ್ಲ. ಮಾಡಿಸಲು ಕ್ರಮವಿಡುವುದು. ಸಂದೇಶ್ ಲೇಕ್ ಸೈಡ್–2ನೇ ಹಂತಕ್ಕೆ ನೀಡಿರುವ ಮೊಬಲಗಿಗೆ ತಕ್ಕಂತೆ ಬಡಾವಣೆ ಕೆಲಸಗಳು M.O.U. ನಲ್ಲಿ ತಿಳಿಸಿರುವ 24 ತಿಂಗಳೊಳಗಾಗಿ ನಿಗಧಿತ ಅವಧಿಯಲ್ಲಿ ಆಗಿಲ್ಲ.

ಮೇಲ್ಕಂಡ ಕಾರಣಗಳಿಂದ ಸಂಘಕ್ಕೆ ಆರ್ಥಿಕ ಹಾನಿಯಾದರೆ, ಕಾನೂನು ತೊಡಕು ಬಂದು ಸಂಘಕ್ಕೆ ನಷ್ಟ ಉಂಟಾದರೆ, ಎಂ.ಓ.ಯು. ಮಾಡಿಕೊಂಡ ಅವಧಿಯಲ್ಲಿದ್ದ ಪದಾಧಿಕಾರಿಗಳು ಮತ್ತು ಮೊಬಲಗು ಪಾವತಿಸಿದ, ಸಂಬಂಧಿಸಿದ ಆಡಳಿತ ಮಂಡಳಿ ಸದಸ್ಯರು ಜವಾಬ್ದಾರರು.

**ಸಂದೇಶ್ ಲೇಕ್ ಸೈಡ್ 3ನೇ ಹಂತ ಅಮೋಸ್ ಪ್ರಾಪರ್ಟೀಸ್‌ರವರಿಗೆ ಮುಂಗಡ:– ರೂ. 47,82,65,565–00**
**[ರೂ. 47,10,00,000–00 (+) ರೂ. 72,65,565–00]**

ಸಂಘವು ತನ್ನ ಸಾಮಾನ್ಯ ಸದಸ್ಯರ / ಸಹ ಸದಸ್ಯರ ನಿವೇಶನ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಆಡಳಿತ ಮಂಡಳಿ ಸಭೆಯ ದಿನಾಂಕ: 07–08–2011ರ ಠರಾವಿನ ಸಂಖ್ಯೆ 8 ರಲ್ಲಿ, ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಗೆ ಡೆವಲಪರ್ಸ್‌ರವರಾದ ಅಮೋಸ್ ಪ್ರಾಪರ್ಟೀಸ್ ರವರೊಂದಿಗೆ ಎಂ.ಓ.ಯು. ಮಾಡಿಕೊಳ್ಳುವ ಬಗ್ಗೆ ಚರ್ಚಿಸಿರುತ್ತಾರೆ. ನಂತರ ಆಡಳಿತ ಮಂಡಳಿ ಸಭೆಯ ದಿನಾಂಕ: 11–09–2011ರ ಠರಾವಿನ ಸಂಖ್ಯೆ 10 ರಲ್ಲಿ ಸಂದೇಶ್ ಲೇಕ್ ಸೈಡ್ –3ನೇ ಹಂತದ ಬಡಾವಣೆಯನ್ನು ಮಾಡಲು ಅಮೋಸ್ ಪ್ರಾಪರ್ಟಿಸ್ ರವರು ಮಂಡಿಸಿದ ಎಂ.ಓ.ಯು. ಕರಾರು ಪತ್ರದ ಸ್ವಚ್ಚ 2 ಪ್ರತಿಗಳನ್ನು ಆಡಳಿತ ಮಂಡಳಿ ಸಭೆಯಲ್ಲಿ ಪರಿಶೀಲಿಸಿದ ನಂತರ ಅಧ್ಯಕ್ಷರು ಮತ್ತು ಅಮೋಸ್ ಪ್ರಾಪರ್ಟೀಸ್ ಪಾಲುದಾರರಾದ ಶ್ರೀ ಬಿ. ರವಿಕುಮಾರ್ ರೆಡ್ಡಿಯವರು ಸಹಿ ಮಾಡಿರುತ್ತಾರೆ. ಆಡಳಿತ ಮಂಡಳಿ ಒಪ್ಪಿಗೆ ಮೇರೆಗೆ ಕ.ರಾ. ಸಹಕಾರಿ ಅಪೆಕ್ಸ್ ಬ್ಯಾಂಕ್, ಗಂಗಾನಗರ ಶಾಖೆ, ಬೆಂಗಳೂರಿನ ಚೆಕ್ ನಂಬರ್ 559288 ದಿನಾಂಕ: 11–09–2011ರ ಮುಖಾಂತರ ಒಂದು ಕೋಟಿಯನ್ನು ಮುಂಗಡವಾಗಿ ಅಮೋಸ್ ಪ್ರಾಪರ್ಟೀಸ್ ರವರಿಗೆ ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಯ ಬಾಬ್ತು ಪಾವತಿಸಿರುತ್ತಾರೆ.

ಎಂ.ಓ.ಯು. ಮಾಡಿಕೊಂಡ ದಿನಾಂಕ ಎಂ.ಓ.ಯು. ನಲ್ಲಿ 11th day of Sunday 2011 at Bangalore ಎಂದಿದೆ. ಮಾಹೆಯನ್ನು ನಮೂದಿಸಿಲ್ಲ. ಅದರೆ ಉಪ ನೋಂದಣಾಧಿಕಾರಿ, ಯಶವಂತಪುರ, ಬೆಂಗಳೂರು –22 ರವರು ರೂ. 100–00 ಗಳಿಗೆ 2–00 ಗಳ 2 ದಾಸ್ತಾವೇಜು ಹಾಳೆಯಲ್ಲಿ ಫ್ರಾಂಕಿಂಗ್ ಮಾಡಿರುತ್ತಾರೆ. ಫ್ರಾಂಕಿಂಗ್ ಮಾಡಿರುವ ದಿನಾಂಕ: 02–09–2011 ಎಂದಿರುತ್ತದೆ. ಆದುದರಿಂದ M.O.U ದಿನಾಂಕ 2–09–2011 ಎಂದು ತೆಗೆದುಕೊಂಡಿದೆ.

ದಿನಾಂಕ: 02–09–2011 [2 ರೂಗಳ ದಾಸ್ತಾವೇಜು ಹಾಳೆಯಲ್ಲಿ ಉಪ ನೋಂದಣಾಧಿಕಾರಿ ಯವರು ಫ್ರಾಂಕಿಂಗ್ ಮಾಡಿದ ದಿನಾಂಕ: 02–09–2011] ರ ನೋಂದಣಿ ರಹಿತವಾದ ಎಂ.ಓ.ಯು. ನಲ್ಲಿ ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ. 7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560094 ಈ ಸಂಘದ ಪರವಾಗಿ ಸಂಘದ ಅಧ್ಯಕ್ಷರಾದ ಶ್ರೀ ವೈ. ಜಯಪಾಲ್ ರವರು ಸಹಿ ಮಾಡಿರುತ್ತಾರೆ. ಮತ್ತು ಮೆ॥ ಅಮೋಸ್ ಪ್ರಾಪರ್ಟೀಸ್ ನಂ. 207, 4ನೇ ಮುಖ್ಯ ರಸ್ತೆ, ಗಂಗಾನಗರ (ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್) ಬೆಂಗಳೂರು– 560032 ಇದರ ಪರವಾಗಿ ಪ್ರತಿನಿಧಿಸುವವರ ಹೆಸರು ಎಂ.ಓ.ಯು. ನಲ್ಲಿ ಇರುವುದಿಲ್ಲ. ಅದರೆ ಎಂ.ಓ.ಯು. ನಲ್ಲಿ ಅಮೋಸ್ ಪ್ರಾಪರ್ಟೀಸ್ ಪರವಾಗಿ ಶ್ರೀ ಬಿ. ರವಿ ಕುಮಾರ್ ರೆಡ್ಡಿ ಯವರು ಸಹಿ ಮಾಡಿರುತ್ತಾರೆ. ಸಹಿ ಮಾಡಿದವರ ಹೆಸರನ್ನು ಸಹ ಮುದ್ರಿಸಿಲ್ಲ. ಅದುದರಿಂದ ಎಂ.ಓ.ಯು. ನಲ್ಲಿ ಸಹಿ ಮಾಡಿರುವವರು ಯಾರು ಎಂದು ವಿಚಾರಿಸಲಾಗಿ; ಅಮೋಸ್ ಪ್ರಾಪರ್ಟೀಸ್‌ನ ಪಾಲುದಾರರಾದ ಶ್ರೀ ರವಿಕುಮಾರ್ ರೆಡ್ಡಿ ಯವರು ಎಂದು ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಸಂಘವು ಆಡಳಿತ ಮಂಡಳಿ ಸಭೆಯ ದಿನಾಂಕ: 07–08–2011 ಮತ್ತು ದಿನಾಂಕ: 11–09–2011 ರಲ್ಲಿ ಸಭೆಗಳಲ್ಲಿ ತೀರ್ಮಾನಿಸಿದಂತೆ, ಸಂಘ ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಯನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಈ ಉದ್ದೇಶಕ್ಕಾಗಿ ದಿನಾಂಕ: 02–09–2011ರ ಎಂ.ಓ.ಯು. ನಲ್ಲಿ ನಮೂದಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಬೆಟ್ಟನಹಳ್ಳಿ ಗ್ರಾಮದಲ್ಲಿ ಬರುವ ಸರ್ವೆ ನಂ. 42, 43, 44, 45, 46, 47, 48 49, 50, 51, 52, 53, 54 ಮತ್ತು 55 ರಲ್ಲಿ ಸುಮಾರು 18 ಎಕರೆ ಯಲ್ಲಿ ಬಡಾವಣೆ ನಿರ್ಮಿಸಿಕೊಡಲು ಅಮೋಸ್ ಪ್ರಾಪರ್ಟೀಸ್ ರವರ ಜೊತೆ ದಿನಾಂಕ: 02–09–2011 ರಲ್ಲಿ ಸಂಘದವರು ನೋಂದಣಿ ರಹಿತವಾದ ಎಂ.ಓ.ಯು. ಮಾಡಿಕೊಂಡಿದ್ದಾರೆ. ಸದರಿ ಎಂ.ಓ.ಯು. ನ ಕೆಲವು ಮುಖ್ಯಾಂಶಗಳನ್ನು ಮತ್ತು ಹಣ ಬಿಡುಗಡೆಯ ಬಗ್ಗೆ ಹಾಗೂ ಡೆವಲಪರ್ಸ್ ರವರಿಗೆ ಪ್ರತಿ ನಿವೇಶನ ಚದರ ಅಡಿಗೆ ರೂ. 725–00 ನಂತೆ ಸಂಘದಿಂದ ಪಾವತಿಸುವ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ 2013–14ನೇ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 75 ರಿಂದ 78 ರ ವರೆವಿಗೆ ವಿವರವಾಗಿ ವಿವರಿಸಿರುತ್ತಾರೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ವರದಿ ಸಾಲಿನ ಈ ವರದಿಯಲ್ಲಿ ವಿವರಿಸಿರುವುದಿಲ್ಲ. ಪರಸ್ಪರ ಒಪ್ಪಂದ [M.O.U] ಮಾಡಿಕೊಂಡ ದಿನಾಂಕ M.O.Uನಲ್ಲಿ 11th Day of Sunday 2011 ಎಂದಿದೆ. ಆದರೆ 2 ರೂಗಳ ದಸ್ತಾವೇಜು ಹಾಳೆಯಲ್ಲಿ ಫ್ರಾಂಕಿಂಗ್ ಮಾಡಿದ ದಿನಾಂಕ 2–09–2011 ಎಂದಿರುತ್ತದೆ. ಆದುದರಿಂದ ಫ್ರಾಂಕಿಂಗ್ ಮಾಡಿದ ದಿನಾಂಕ 2–09–2011ನ್ನು ಸಂಘವು M.O.U ಮಾಡಿಕೊಂಡ ದಿನಾಂಕ ಎಂದು ಬರೆದಿದೆ. M.O.U ಮಾಡಿಕೊಳ್ಳುವ ವೇಳೆಯಲ್ಲಿ ಡೆವಲಪರ್ಸ್ ರವರಿಂದ ಭದ್ರತೆ, ಬ್ಯಾಂಕ್ ಗ್ಯಾರೆಂಟಿ ಪಡೆದಿಲ್ಲ.

ದಿನಾಂಕ : 02–09–2011ರ ನೋಂದಣಿ ರಹಿತ ಎಂ.ಓ.ಯು. ನಡಿ ಅಮೋಸ್ ಪ್ರಾಪರ್ಟೀಸ್ ರವರಿಗೆ ದಿನಾಂಕ 31–3–2020 ರ ವರೆವಿಗೆ ಹಿಂದಿನ ಆಡಿಟ್ ವರದಿಗಳಲ್ಲಿ ವಿವರಿಸಿರುವ ರೂ. 47,62,65,565–00 [ದಿನಾಂಕ 31–3–2020 ಆಸ್ತಿಯ ಜವಾಬ್ದಾರಿ ತಃಖ್ತೆಯ, ಆಸ್ತಿಯ ಕ್ರಮ ಸಂಖ್ಯೆ 5(4) (ಸಿ) ಮತ್ತು (ಡಿ) ನಲ್ಲಿ ತೋರಿಸಿರುವ ರೂ. 46,90,00,000–00 + ರೂ. 72,65,565–00] ಗಳನ್ನು ಅಮೋಸ್ ಪ್ರಾಪರ್ಟೀಸ್ ನವರಿಗೆ ನೀಡಿದ್ದು, 2020–21ನೇ ಸಾಲಿನಲ್ಲಿ ದಿನಾಂಕ 9–10–2020 ರಲ್ಲಿ ರೂ. 10,00,000–00 (ಹತ್ತು ಲಕ್ಷ ರೂಪಾಯಿಗಳು) [ಅಪೆಕ್ಸ್ ಬ್ಯಾಂಕ್ ಚೆಕ್ ನಂ. 001042 ರ ಮುಖಾಂತರ ರೂ. 9,80,000–00 ಮತ್ತು ಟಿ.ಡಿ.ಎಸ್ ಹೊಂದಾಣಿಕೆ ಬಾಬ್ತು ರೂ. 20,000–00]

ಮತ್ತು ದಿನಾಂಕ 01–01–2021 ರಲ್ಲಿ ರೂ. 10,00,000–00 (ಹತ್ತು ಲಕ್ಷ ರೂಪಾಯಿಗಳು) [ಅಪೆಕ್ಸ್ ಬ್ಯಾಂಕ್ ಚೆಕ್ ನಂ. 002216 ರ ಮುಖಾಂತರ ರೂ. 9,80,000–00 ಮತ್ತು ಟಿ.ಡಿ.ಎಸ್ ಹೊಂದಾಣಿಕೆ ಬಾಬ್ತು ರೂ. 20,000–00] ಒಟ್ಟು ರೂ. 20,00,000–00 (ಇಪ್ಪತ್ತು ಲಕ್ಷ ರೂಪಾಯಿಗಳು) ಗಳನ್ನು 2020–21ನೇ ಸಾಲಿನಲ್ಲಿ ನೀಡಿರುವುದನ್ನು ಸೇರಿ ದಿನಾಂಕ 31–3–2021 ಕ್ಕೆ ಒಟ್ಟು 47,82,65,565–00 [ರೂ. 471000000–00 + ರೂ. 7265565–00] ಗಳನ್ನು ಸಂದೇಶ್ ಲೇಕ್ ಸೈಡ್–3ನೇ ಹಂತದ ಬಾಬ್ತು ಅಮೋಸ್ ಪ್ರಾಪರ್ಟೀಸ್ ನವರಿಗೆ ಸಂಘದಿಂದ ನೀಡಿದೆ. 2020–21ನೇ ಸಾಲಿನಲ್ಲಿ ರೂ. 40000–00 ಗಳ ಟಿ.ಡಿ.ಎಸ್ ಅನ್ನು ಅಮೋಸ್ ಪ್ರಾಪರ್ಟೀಸ್ ನವರಿಂದ ಹಿಡಿದು ಸಂಘದಿಂದ ಆದಾಯ ತೆರಿಗೆ ಇಲಾಖೆಗೆ ರೂ. 40000–00 ಗಳನ್ನು ಪಾವತಿಸಿರುತ್ತಾರೆ.

ದಿನಾಂಕ 31–03–2021ರ ವರೆವಿಗೆ ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಗೆ ರೂ. 47,82,65,565–00 (ನಲವತ್ತೇಳು ಕೋಟಿ ಎಂಭತ್ತೆರಡು ಲಕ್ಷದ ಅರವತ್ತೈದು ಸಾವಿರದ ಐದುನೂರ ಅರವತ್ತೈದು ರೂಪಾಯಿಗಳು) ಗಳನ್ನು ಸಂಘದಿಂದ ಅಮೋಸ್ ಪ್ರಾಪರ್ಟೀಸ್ ನವರು ಪಡೆದ ಬಗ್ಗೆ ಅಮೋಸ್ ಪ್ರಾಪರ್ಟೀಸ್‌ನ ಪಾಲುದಾರರಾದ [Partner] ಶ್ರೀ ಬಿ. ರವಿಕುಮಾರ್ ರೆಡ್ಡಿ ರವರು ದಿನಾಂಕ 30–6–2021 ರಂದು ದೃಡೀಕರಣ ಪತ್ರ (CONFIRMATION-SLS-3) ವನ್ನು Financial year 2011–2020ಕ್ಕೆ ಸಂಘಕ್ಕೆ ನೀಡಿದ್ದು; ತಾಳೆ ಇರುತ್ತದೆ. ಈ ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು **ಅನುಬಂಧ –22** ಎಂದು ವರದಿಗೆ ಲಗತ್ತಿಸಿದೆ. ಸೂಕ್ತ ಭದ್ರತೆ, ಬ್ಯಾಂಕ್ ಗ್ಯಾರಂಟಿಯನ್ನು ಅಮೋಸ್ ಪ್ರಾಪರ್ಟಿಸ್ ರವರಿಂದ ಪಡೆದಿಲ್ಲ. ಎಂ.ಓ.ಯು. ಮಾಡಿಕೊಳ್ಳುವ ಮೊದಲು ಕಾನೂನು ಸಲಹೆ ಪಡೆದ ಬಗ್ಗೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ದಾಖಲಾತಿ ಇರುವುದಿಲ್ಲ. ಬಡಾವಣೆಯ ಕೆಲಸ ಕಾರ್ಯಗಳ ಬಗ್ಗೆ ಪಾರದರ್ಶಕ ಕಾಯಿದೆಯ ರೀತ್ಯಾ ಟೆಂಡರ್ ಕರೆದು ಕೊಟೇಷನ್ ಕರೆದ ಬಗ್ಗೆ ದಾಖಲಾತಿಯಿಲ್ಲ. M.O.Uನಲ್ಲಿ ತಿಳಿಸಿರುವ ಅವಧಿಯು ಮುಗಿದಿದ್ದು M.O.U ಅನ್ನು ರಿನೀವಲ್ ಮಾಡಿಸಿಲ್ಲ. ರಿನೀವಲ್ ಮಾಡಿಸಲು ಕ್ರಮ ವಿಡುವುದು. ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಗೆ ನೀಡಿರುವ ಮೊಬಲಗಿಗೆ ತಕ್ಕಂತೆ ಬಡಾವಣೆ ಕೆಲಸಗಳು ನಿಗಧಿತ ಅವಧಿಯಲ್ಲಿ ಆಗಿಲ್ಲ.

ಮೇಲ್ಕಂಡ ಕಾರಣಗಳಿಂದ ಸಂದೇಶ್ ಲೇಕ್ ಸೈಡ್–3ನೇ ಹಂತದ ಬಡಾವಣೆಯ ಬಗ್ಗೆ ನೀಡಿರುವ ಮೊಬಲಗಿನ ಬಗ್ಗೆ ಸಂಘಕ್ಕೆ ಅರ್ಥಿಕ ಹಾನಿಯಾದರೆ, ಏನಾದರೂ ಕಾನೂನು ತೊಡಕು ಉಂಟಾಗಿ, ಲೋಪದೋಷ ಉಂಟಾದರೆ ಸಂಘಕ್ಕೆ ನಷ್ಟ ಉಂಟಾದರೆ ಎಂ.ಓ.ಯು ಮಾಡಿದ ಅವಧಿಯಲ್ಲಿದ್ದ ಮತ್ತು ಮೊಬಲಗು ಪಾವತಿಸಿದ ಸಂಘದ ಸಂಬಂಧಿಸಿದ ಆಡಳಿತ ಮಂಡಳಿ ಸದಸ್ಯರು ಹಾಗೂ ಪದಾಧಿಕಾರಿಗಳು ಜವಾಬ್ದಾರರು.

ಡೆವಲಪರ್ಸ್ ಅಮೋಸ್ ಪ್ರಾಪರ್ಟೀಸ್ ರವರು ಸಂದೇಶ್ ಲೇಕ್ ಸೈಡ್–1, 2 ಮತ್ತು 3ನೇ ಹಾಗೂ 4ನೇ ಹಂತದ ಬಡಾವಣೆಗಳ ಬಾಬ್ತು ಸಂಘಕ್ಕೆ ಭೂಪರಿವರ್ತನೆಯಾದ ಜಮೀನನ್ನು ದಿನಾಂಕ 31–03–2021 ರೊಳಗೆ 67 ಎಕರೆ 25.12 ಗುಂಟೆಯನ್ನು ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ಹಾಗೂ 2 ಎಕರೆ 32.12 ಗುಂಟೆ ಜಮೀನನ್ನು ಜಿ.ಪಿ.ಎ. ಮತ್ತು ಸೇಲ್ ಅಗ್ರಿಮೆಂಟ್ ಮುಖಾಂತರ, ಮತ್ತು 11 ಎಕರೆ 36 ಗುಂಟೆ ಜಮೀನನ್ನು ಅಗ್ರಿಕಲ್ಚರ್ ಸೇಲ್ ಡೀಡ್ ಮುಖಾಂತರ ಹಾಗೂ 1 ಎಕರೆ 17 ಗುಂಟೆ ಜಮೀನನ್ನು ಸೇಲ್ ಅಗ್ರಿಮೆಂಟ್ ಮುಖಾಂತರ ಸಂಘಕ್ಕೆ ಅಮೋಸ್ ಪ್ರಾಪರ್ಟೀಸ್ ನವರು ನೀಡಿರುತ್ತಾರೆ, ಎಂದು ಅಧ್ಯಕ್ಷರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ಇದರ ಬಗ್ಗೆ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸ್ಟೇಟ್‌ಮೆಂಟ್‌ನ್ನು ನೀಡಿದ್ದು, ಅನುಬಂಧ–17 ಎಂದು ವರದಿಯೊಂದಿಗೆ ಲಗತ್ತಿಸಿದೆ.

ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ 34 (7) 5 ರಿಂದ 8 ರಲ್ಲಿ ವಿವರಿಸಿರುವಂತೆ ದಿನಾಂಕ 31–03–2021ಕ್ಕೆ ರೂ. 144,92,65,565–00 [ನೂರ ನಲವತ್ತ ನಾಲ್ಕು ಕೋಟಿ ತೊಂಭತ್ತೆರಡು ಲಕ್ಷದ ಅರವತ್ತೈದು ಸಾವಿರದ ಐದುನೂರ ಅರವತ್ತೈದು ರೂಪಾಯಿಗಳು] ಗಳನ್ನು ಸಂಘದಿಂದ ಸಂದೇಶ್ ಲೇಕ್ ಸೈಡ್–1, 2 ಮತ್ತು 3 ಮತ್ತು 4ನೇ ಹಂತದ ಬಡಾವಣೆಗಳ ಡೆವಲಪರ್ಸ್ ರವರಾದ ಅಮೋಸ್ ಪ್ರಾಪರ್ಟಿಸ್ ನವರಿಗೆ ಸಂಘದಿಂದ ನೀಡಲಾಗಿದೆ, ನೀಡಿರುವ ಮೊಬಲಗಿಗೆ ತಕ್ಕಂತೆ ಬಡಾವಣೆಗಳ ಕೆಲಸಕಾರ್ಯಗಳು ನಿಗಧಿತ ಸಮಯದಲ್ಲಿ ಆಗಿರುವುದಿಲ್ಲ, ಡೆವಲಪರ್ಸ್ ರವರಿಗೆ ನೀಡಿರುವ ಮೊಬಲಗಿಗೆ ತಕ್ಕಂತೆ ಭದ್ರತೆ ತೆಗೆದುಕೊಂಡಿಲ್ಲ, ಬ್ಯಾಂಕ್ ಗ್ಯಾರೆಂಟಿ ಪಡೆದಿಲ್ಲ, ಆದುದರಿಂದ ಬಡಾವಣೆಗಳ ಬಗ್ಗೆ

ನೀಡಿರುವ ಮೊಬಲಗಿನ ಬಗ್ಗೆ ಏನಾದರು ಲೋಪದೋಷ ಬಂದು ಸಂಘಕ್ಕೆ ನಷ್ಟ ಉಂಟಾದರೇ, ಆರ್ಥಿಕ ಹಾನಿ ಆದರೇ M.O.U ಗಳನ್ನು ಮಾಡಿಕೊಂಡ ಅವಧಿಯಲ್ಲಿದ್ದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಮತ್ತು ಮೊಬಲಗನ್ನು ಪಾವತಿಸಲು ಕಾರಣರಾದ ಆಯಾಯ ಸಾಲಿನ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಜವಾಬ್ದಾರರು.

**ಸಂದೇಶ್ ಲೇಕ್ ಸೈಡ್ 4ನೇ ಹಂತ ಅಮೋಸ್ ಪ್ರಾಪರ್ಟಸ್ ರವರಿಗೆ ಮುಂಗಡ:–**

**ರೂ. 8,85,00,000–00**

ಸಂಘವು ತನ್ನ ಸಾಮಾನ್ಯ ಸದಸ್ಯರ ಮತ್ತು ಸಹ ಸದಸ್ಯರ ನಿವೇಶನ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಸಂಘದ ಆಡಳಿತ ಮಂಡಳಿಯವರು ಸಂದೇಶ್ ಲೇಕ್ ಸೈಡ್ –4ನೇ ಹಂತದ ಬಡಾವಣೆಯ ನಿರ್ಮಾಣದ ಬಗ್ಗೆ ಮೊದಲು ಅಮೋಸ್ ಪ್ರಾಪರ್ಟಿಸ್‌ನ ಮ್ಯಾನೇಜಿಂಗ್ ಡೈರೆಕ್ಟರ್‌ರವರಾದ ಶ್ರೀ ಬಿ. ರವಿಕುಮಾರ್ ರೆಡ್ಡಿ ರವರೊಂದಿಗೆ M.O.U (MEMORANDUM of UNDER STANDING) ಮಾಡಿಕೊಳ್ಳುವ ಬಗ್ಗೆ ಚರ್ಚಿಸಲಾಗಿತ್ತು ಎಂದು ಸಂಘದ ಅಧ್ಯಕ್ಷರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿದರು. ನಂತರ ಆಡಳಿತ ಮಂಡಳಿ ಸಭೆಯ ದಿನಾಂಕ 31–05–2018 ರ ಠರಾವಿನ ಸಂಖ್ಯೆ 9 ರಲ್ಲಿ ಸಂದೇಶ್ ಲೇಕ್ ಸೈಡ್–4ನೇ ಹಂತದ ಬಡಾವಣೆಯನ್ನು ಮಾಡಲು ಅಮೋಸ್ ಪ್ರಾಪರ್ಟೀಸ್ ರವರು ನೀಡಿದ M.O.U ಕರಾರು ಪತ್ರದ ಸ್ವಚ್ಛ 2 ಪ್ರತಿಗಳನ್ನು ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿದ ನಂತರ, 1ನೇ ಪಾರ್ಟಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರು ಮತ್ತು 2ನೇ ಪಾರ್ಟಿಯಾಗಿ ಅಮೋಸ್ ಪ್ರಾಪರ್ಟೀಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಶ್ರೀ ಬಿ. ರವಿಕುಮಾರ್ ರೆಡ್ಡಿ ಯವರು M.O.U ನಲ್ಲಿ ಸಹಿ ಮಾಡಿರುತ್ತಾರೆ.

ಸಾಕ್ಷಿಗಳಾಗಿ ಸಂಘದ 10 (ಹತ್ತು) ನಿರ್ದೇಶಕರುಗಳು ದಿನಾಂಕ 6–6–2018 ರ M.O.U ನಲ್ಲಿ ಸಹಿ ಮಾಡಿರುತ್ತಾರೆ. ನೋಂದಣಿ ರಹಿತ M.O.U ನ್ನು ರೂ. 200–00 ಗಳ (ಇನ್ನೂರು ರೂಪಾಯಿಗಳು ಮಾತ್ರ) ಇ–ಸ್ಟಾಂಪ್ ಪೇಪರ್‌ನಲ್ಲಿ ಮಾಡಿಕೊಂಡಿರುತ್ತಾರೆ. ಆಡಳಿತ ಮಂಡಳಿ ಒಪ್ಪಿಗೆ ಮೇರೆಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆ, ಬೆಂಗಳೂರುನಿಂದ ದಿನಾಂಕ 6–6–2018 ರಂದು ರೂ. 49,00,000–00 (ನಲವತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು R.T.G.S ಮುಖಾಂತರ ಎರಡನೇ ಪಾರ್ಟಿಯಾದ ಅಮೋಸ್ ಪ್ರಾಪರ್ಟೀಸ್ ನವರಿಗೆ ಪ್ರಾಜೆಕ್ಟ್‌ನ ಅಡ್‌ವಾನ್ಸ್ ಆಗಿ ಸಂಘದಿಂದ ನೀಡಿರುತ್ತಾರೆ.

ಸಂಘವು ಸಂದೇಶ್ ಲೇಕ್ ಸೈಡ್–4ನೇ ಹಂತದ ಬಡಾವಣೆಯನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಈ ಉದ್ದೇಶಕ್ಕಾಗಿ ದಿನಾಂಕ 6–6–2018 ರ M.O.U ನಲ್ಲಿ ನಮೂದಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು, ಬೆಟ್ಟನಹಳ್ಳಿ ಗ್ರಾಮದಲ್ಲಿ ಬರುವ ಸರ್ವೇ ನಂಬರ್ 66 ಮತ್ತು 67 ರಲ್ಲಿ ಬರುವ ಸುಮಾರು 5 ಎಕರೆಯಲ್ಲಿ ಬಡಾವಣೆ ನಿರ್ಮಿಸಿಕೊಡಲು ಎರಡನೇ ಪಾರ್ಟಿಯಾದ ಮೆ॥ ಅಮೋಸ್ ಪ್ರಾಪರ್ಟೀಸ್‌ನಂ 207, 4ನೇ ಮುಖ್ಯ ರಸ್ತೆ, ಗಂಗಾನಗರ (ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್) ಬೆಂಗಳೂರು–560032. ಇದರ ಮ್ಯಾನೇಜಿಂಗ್ ಡೈರೆಕ್ಟರ್ ರವರಾದ ಮತ್ತು Authorised Signatory ರವರಾದ ಶ್ರೀ ಬಿ. ರವಿಕುಮಾರ್ ರೆಡ್ಡಿ ರವರೊಂದಿಗೆ ದಿನಾಂಕ 06–06–2018 ರಂದು ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., [ಸಂಘ] ನಂ. 7, ಸಂದೇಶ್ ಭವನ, 3ನೇ ಮುಖ್ಯ ರಸ್ತೆ, 1ನೇ ಹಂತ, ಅಂಚೆ ಕಾಲೋನಿ, ಸಂಜಯನಗರ, ಬೆಂಗಳೂರು–560094 ರವರು ನೋಂದಣಿ ರಹಿತವಾದ ಪರಸ್ಪರ ಒಪ್ಪಂದ [MEMORANDUM of UNDER STANDING] ಕರಾರನ್ನು ಮಾಡಿಕೊಂಡಿರುತ್ತಾರೆ. ಪರಸ್ಪರ ಒಪ್ಪಂದದ ಕರಾರಿಗೆ ಸಂಘದ ಪರವಾಗಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರು ಸಹಿ ಮಾಡಿರುತ್ತಾರೆ. ಅಮೋಸ್ ಪ್ರಾಪರ್ಟೀಸ್‌ನ ಪರವಾಗಿ, ಮ್ಯಾನೇಜಿಂಗ್ ಡೈರೆಕ್ಟರ್‌ರಾದ ಶ್ರೀ ಬಿ. ರವಿ ಕುಮಾರ್ ರೆಡ್ಡಿಯವರು M.O.U ನಲ್ಲಿ ಸಹಿ ಮಾಡಿದ್ದಾರೆ.

ದಿನಾಂಕ 06-06-2018 ರ ಎಂ.ಒ.ಯು ನಲ್ಲಿ ತಿಳಿಸಿರುವ ವಿಷಯಗಳನ್ನು, ಷರತ್ತುಗಳನ್ನು ಸಂಕ್ಷಿಪ್ತವಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ. ಎಲ್ಲಾ ಕೆಲಸಕಾರ್ಯಗಳನ್ನು ಒಪ್ಪಂದದ ದಿನಾಂಕದಿಂದ 24 ತಿಂಗಳೊಳಗಾಗಿ ಮುಕ್ತಾಯಗೊಳಿಸಿಕೊಡಬೇಕು. ಆದರೆ ಬಡಾವಣೆಯ ಕೆಲಸಕಾರ್ಯಗಳನ್ನು ಒಪ್ಪಂದದ ದಿನಾಂಕದಿಂದ 24 ತಿಂಗಳೊಳಗಾಗಿ ಮುಕ್ತಾಯಗೊಳಿಸಿಲ್ಲ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರುಗಳು ಗಮನ ಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅತ್ಯಾಗತ್ಯ. M.O.U ದಿನಾಂಕ 6-6-2018 ಅನ್ನು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಲಗತ್ತಿಸಿರುತ್ತಾರೆ.

M.O.U ದಿನಾಂಕ 6-6-2018 ರಲ್ಲಿ ತಿಳಿಸಿರುವ ಬಡಾವಣೆಯ ಎಲ್ಲಾ ಕೆಲಸಕಾರ್ಯಗಳನ್ನು ನಿರ್ವಹಿಸಲು ದಿನಾಂಕ 6-6-2018 ರ M.O.U ನ ಕ್ರಮ ಸಂಖ್ಯೆ 13 (f) ನಲ್ಲಿ ತಿಳಿಸಿರುವಂತೆ, ಸಂಘವು ನಿವೇಶನ ಏರಿಯಾದ ಪ್ರತಿ ಚದರ ಅಡಿಗೆ ರೂ. 990-00 ಗಳನ್ನು ಎರಡನೇ ಪಾರ್ಟಿಯಾದ ಅಮೋಸ್ ಪ್ರಾಪರ್ಟೀಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ರವರಿಗೆ ನೀಡಲು ಒಪ್ಪಿದ್ದು ಮತ್ತು ಅಮೋಸ್ ಪ್ರಾಪರ್ಟೀಸ್‌ನ M.D. ಯವರು ಸಹಾ ರೂ. 990-00 ಪಡೆಯಲು ಒಪ್ಪಿ, M.O.U ದಿನಾಂಕ 6-6-2018 ರ 13 (h) ಪ್ರಕಾರ ಈ ಕೆಳಕಂಡಂತೆ ಸಂಘದಿಂದ ಹಂತ ಹಂತವಾಗಿ ಮೊಬಲಗನ್ನು ಬಿಡುಗಡೆ ಮಾಡಲು ಒಪ್ಪಲಾಗಿದೆ.

i. At the time of land procurement in agricultural stage or as a 1st instalment Rs. 300/- Per Sq.ft. will be paid
ii. For Land change and conversion stage from BIAPPA at the rate of Rs. 270/- Sft for the actual site area will be paid.
iii. Plan approval and on or before completion of Civil Work such as formation of roads, box type drainage, Culverts etc. at the rate of Rs. 270/- Per Sq.ft. of actual site area.
iv. On or before getting the approval from KPTCL and during the progress of Electrical works Rs. 60/- Per Sq.ft. of actual sital area.

v. On or before the completion of borewell, sump tank, overhead tank, pump house, raising lines from borewell lines, distribution liens etc. at the rate of RS. 40/- Per Sq.feet of actual site area.
vi. On or before completion asphalting / chip carpeting of roads, Rs. 30/- Per Sq.ft. of actual sital area.
vii. On completion of entire works as mentioned in Clause 14- e stated supra Rs. 20/- balance amount per Sq.ft. of actual sital area.

(i) That the SECOND PARTY hereby agreed and undertakes to complete the entire formation of layout work in all respects with the time stipulated and to the best satisfaction of the FIRST PARTY.

ಸಂದೇಶ್ ಲೇಕ್ ಸೈಡ್-4ನೇ ಹಂತದ ಬಾಬ್ತು ದಿನಾಂಕ 31-3-2021ಕ್ಕೆ ಸಂಘದಿಂದ ಅಮೋಸ್ ಪ್ರಾಪರ್ಟೀಸ್ ರವರಿಗೆ ರೂ. 8,85,00,000-00 (ಎಂಟು ಕೋಟಿ ಎಂಬತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ನೀಡಿದ್ದು, ಇದಕ್ಕೆ ಅಮೋಸ್ ಪ್ರಾಪರ್ಟೀಸ್‌ನ ಪಾಲುದಾರರಾದ [Partner] ಶ್ರೀ ಬಿ. ರವಿಕುಮಾರ್ ರೆಡ್ಡಿ ರವರು ದಿನಾಂಕ 30-6-2021 ರಂದು ದೃಢೀಕರಣ ಪತ್ರವನ್ನು Financial year 2018-2020ಕ್ಕೆ ನೀಡಿದ್ದು ತಾಳೆ ಇರುತ್ತದೆ. ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ಮಾಹಿತಿಗಾಗಿ ಈ ಲೆಕ್ಕಪರಿಶೋಧನಾ ವರದಿಗೆ **ಅನುಬಂಧ-23** ಎಂದು ಲಗತ್ತಿಸಿದೆ. ದಿನಾಂಕ 31-3-2021 ರ ವರೆವಿಗೆ ಸಂದೇಶ್ ಲೇಕ್ ಸೈಡ್-4ನೇ ಹಂತದ ಬಗ್ಗೆ ಭೂಪರಿವರ್ತಿತ ಜಮೀನು ಸಂಘಕ್ಕೆ ನೋಂದಣಿಯಾಗಿಲ್ಲ. ಡೆವಲಪರ್ಸ್ ರವರು ಪಡೆದಿರುವ ಮೊಬಲಗಿಗೆ ತಕ್ಕಂತೆ ಬಡಾವಣೆ ಕೆಲಸವನ್ನು ಮಾಡಿರುವುದಿಲ್ಲ.

ಸಂಘದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು (ಪದಾಧಿಕಾರಿಗಳು) ಮತ್ತು ಆಡಳಿತ ಮಂಡಳಿ ಸದಸ್ಯರು ದಿನಾಂಕ 06-06-2018 ರ M.O.U ನಲ್ಲಿರುವಂತೆ ಸಂದೇಶ್ ಲೇಕ್ ಸೈಡ್-4ನೇ ಹಂತದ ಬಡಾವಣೆಯ ಕೆಲಸಗಳನ್ನು

ಜಾಗ್ರತೆಯಾಗಿ ಮಾಡಿಸಿ, ಸಂಘದ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ನಿಗಧಿತ ಸಮಯದಲ್ಲಿ ಹಂಚಿ, ನೋಂದಣಿ ಮಾಡಿಕೊಡಲು ಕ್ರಮವಿಡುವುದು ಅತ್ಯಾಗತ್ಯ.

ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆ ಕೆಲಸಕಾರ್ಯಗಳನ್ನು ಮಾಡಲು, ಸಂಘವು ಅಮೋಸ್ ಪ್ರಾಪರ್ಟೀಸ್ ರವರೊಂದಿಗೆ ನೋಂದಣಿ ರಹಿತ ಎಂ.ಓ.ಯು ಗಳನ್ನು ಮಾಡಿಕೊಂಡಿದ್ದು, ಎಂ.ಓ.ಯು. ಗಳ ಅವಧಿಯು ಮುಗಿದಿದ್ದು, ರಿನೀವಲ್ ಮಾಡಿಸಿಕೊಳ್ಳಲು ಕ್ರಮವಿಡುವುದು ಅಮೋಸ್ ಪ್ರಾಪರ್ಟಿಸ್ ನವರಿಂದ M.O.U ಮಾಡಿಕೊಳ್ಳುವ ಅವಧಿಯಲ್ಲಿ ಸೂಕ್ತ ಭದ್ರತೆ ಮತ್ತು ಬ್ಯಾಂಕ್ ಗ್ಯಾರೆಂಟಿ ಪಡೆದಿಲ್ಲ, ಹಾಗೂ ಅಮೋಸ್ ಪ್ರಾಪರ್ಟೀಸ್ ಎಂಬ ಸಂಸ್ಥೆ ನೋಂದಣಿಯಾಗಿರುವುದಕ್ಕೆ ನೋಂದಣಿ ಸರ್ಟಿಫಿಕೇಟ್‌ನ್ನು ಲೆಕ್ಕಪರಿಶೋಧನಾ ವೇಳೆಯಲ್ಲಿ ನೀಡಿಲ್ಲ. ಡೆವಲಪರ್ಸ್ ರವರಿಂದ ಪಡೆದು ಸಂಘದಲ್ಲಿಡುವುದು. ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಗಳ ಕೆಲಸಕಾರ್ಯಗಳು ನಿಗಧಿತ ಅವಧಿಯಲ್ಲಿ; ಮೊಬಲಗನ್ನು ಪಾವತಿಸಿರುವುದಕ್ಕೆ ತಕ್ಕಂತೆ ಆಗಿರುವುದಿಲ್ಲ. ದಿನಾಂಕ 11–09–2020 ರಂದು ಸಂಘದ ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡಾವಣೆಯ ಡೆವಲಪರ್ಸ್ ರವರಾದ ಅಮೋಸ್ ಪ್ರಾಪರ್ಟೀಸ್‌ನ ಪಾರ್ಟನರ್ / ಮ್ಯಾನೇಜಿಂಗ್ ಡೈರೆಕ್ಟರ್ / ಪ್ರೋಪ್ರೈಟರ್ ರವರಾದ ಶ್ರೀ ಬಿ. ರವಿಕುಮಾರ್ ರೆಡ್ಡಿಯವರಿಗೆ ಬಡಾವಣೆಗಳ ಪ್ರಗತಿ ಬಗ್ಗೆ, ಇನ್ನಿತರ ವಿಷಯಗಳ ಬಗ್ಗೆ ಶ್ರೀ ಮಲ್ಲಪ್ಪ. ಕೆ ಸನ್ನದು ಲೆಕ್ಕಪರಿಶೋಧಕರು ಪತ್ರ ಬರೆದು ಮಾಹಿತಿಯನ್ನು ದಿನಾಂಕ 20–9–2020 ರೊಳಗೆ ನೀಡಲು ತಿಳಿಸಿ ಪತ್ರದ ಪ್ರತಿಯನ್ನು ಸಂಘದ ಅಧ್ಯಕ್ಷರಿಗೆ / ಕಾರ್ಯದರ್ಶಿಯವರಿಗೆ ನೀಡಲಾಗಿತ್ತು. ಅಮೋಸ್ ಪ್ರಾಪರ್ಟೀಸ್ ನವರು ದಿನಾಂಕ 11–9–2020 ರ ಪತ್ರಕ್ಕೆ ಮಾಹಿತಿಯನ್ನು ದಿನಾಂಕ 20–9–2020 ರೊಳಗೆ ನೀಡಿರುವುದಿಲ್ಲ, ಆದುದರಿಂದ ವಿವರವಾಗಿ ಪ್ರಗತಿಯ ಬಗ್ಗೆ ಬರೆಯಲು ಸಾಧ್ಯವಾಗಿಲ್ಲ. ಸಂಘದ ಪದಾಧಿಕಾರಿಗಳು ಆಡಳಿತ ಮಂಡಳಿ ಸದಸ್ಯರು ಹಾಗೂ ಕಾರ್ಯದರ್ಶಿಯವರು ದಿನಾಂಕ 11–9–2020 ರ ಪತ್ರದ ಬಗ್ಗೆ ಗಮನ ಹರಿಸಿ, ಕ್ರಮವಿಡುವುದು, ಎಂದು, ದಿನಾಂಕ 11–9–2020 ರ ಪತ್ರದ ಪ್ರತಿಯನ್ನು 2019–20 ರ ಲೆಕ್ಕಪರಿಶೋಧನಾ ವರದಿಯೊಂದಿಗೆ ಲಗತ್ತಿಸಿದೆ. 2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಮೇಲಿನಂತೆ ತಿಳಿಸಿರುತ್ತಾರೆ. ಆದರೇ ಅಮೋಸ್ ಪ್ರಾಪರ್ಟೀಸ್ ನವರು ಬಡಾವಣೆಗಳ ಪ್ರಗತಿಗಳ ಬಗ್ಗೆ ವರದಿಯನ್ನು ಸಂಘಕ್ಕೆ ನೀಡಿರುವುದಿಲ್ಲ. ಹಾಗೂ ದಿನಾಂಕ 11–9–2020 ರ ಪತ್ರಕ್ಕೆ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ಅಮೋಸ್ ಪ್ರಾಪರ್ಟಿಸ್ ನವರಿಂದ ಬಡಾವಣೆಗಳ ಪ್ರಗತಿಯ ವರದಿಯನ್ನು ಮತ್ತು ಇನ್ನಿತರ ವಿಷಯಗಳ ಬಗ್ಗೆ ಮಾಹಿತಿಯನ್ನು ಪಡೆಯಲು ಕ್ರಮವಿಡುವುದು.

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ರೂ. 31,00,000–00:–** 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 84 ರಲ್ಲಿ ವಿವರಿಸಿರುವಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪಾವತಿಸಿರುವ ರೂ. 31,00,000–00 ಗಳು ಸಂದೇಶ್ ನಗರ–1ನೇ ಹಂತದ ಲೆಕ್ಕದಲ್ಲಿದೆ. ಪ್ರತ್ಯೇಕವಾಗಿ ಇರುವುದಿಲ್ಲ. ಮಾಹಿತಿಗಾಗಿ ವಿವರಣೆಯನ್ನು ನೀಡಲಾಗಿದೆ.

**ಸಂದೇಶ್ ನಗರ–3ನೇ ಹಂತದ ಬಡಾವಣೆ, ಗರುಢಾದ್ರಿ ಡೆವಲಪರ್ಸ್ ರವರಿಗೆ: ರೂ. 36,95,20,550–00**
**[ರೂ. 367425000–00 (+) ರೂ. 2095550–00]**

ಸಂಘವು ತನ್ನ ಸಾಮಾನ್ಯ ಸದಸ್ಯರ / ಸಹ ಸದಸ್ಯರ ನಿವೇಶನ ಬೇಡಿಕೆಯನ್ನು ಪೂರೈಸುವ ಸಲುವಾಗಿ ಸಂಘದ ಆಡಳಿತ ಮಂಡಳಿ ಸಭೆಯ ದಿನಾಂಕ 16–11–2013ರ ಠರಾವಿನ ಸಂಖ್ಯೆ 17ರ ರೀತ್ಯಾ ಮತ್ತು ದಿನಾಂಕ 1–12–2013ರ ಠರಾವಿನ ಸಂಖ್ಯೆ 1ರ ಆಡಳಿತ ಮಂಡಳಿ ತೀರ್ಮಾನದಂತೆ, ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೆತ್ತನಗೆರೆ ಗ್ರಾಮದ ವಿವಿಧ ಸರ್ವೇ ನಂಬರ್‌ಗಳ ಸುಮಾರು 71 ಎಕರೆ 11 ಗುಂಟೆ ಪ್ರದೇಶದಲ್ಲಿ ಸಂದೇಶ್ ನಗರ–3ನೇ ಹಂತದ ಬಡಾವಣೆಯನ್ನು ನಿರ್ಮಿಸಲು ತೀರ್ಮಾನಿಸಿ, ದಿನಾಂಕ 02–12–2013 ರಂದು ನೋಂದಣಿ ರಹಿತ ಪರಸ್ಪರ ಒಪ್ಪಂದದ ಕರಾರನ್ನು ಗರುಢಾದ್ರಿ ಡೆವಲಪರ್ಸ್ ನೋಂದಾಯಿತ ಸಂಖ್ಯೆ BLR–F31–2011–12) ನ ಪ್ರತಿನಿಧಿ ಅದರಕಾರ್ಯನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ಬಿನ್ ಲೇಟ್ ಸಿ. ಗಂಗಯ್ಯ ವಯಸ್ಸು 47

ವರ್ಷ, ನೋಂದಾಯಿತ ಕಛೇರಿ ವಿಳಾಸ ವೈನತೇಯಧಾಮ, 5ನೇ ಅಡ್ಡ ರಸ್ತೆ, ಭರತ್ ಗಜಾರಿಯ ಲೇಔಟ್ ರಸ್ತೆ, ಸುಭಾಷ್ ನಗರ, ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರೊಂದಿಗೆ ನೋಂದಣಿ ರಹಿತ ಪರಸ್ಪರ ಒಪ್ಪಂದದ ಕರಾರು ಪತ್ರ (MEMORANDUM OF UNDERSTANDING) [MOU] ವನ್ನು ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., [ಸಂಘ] ನಂ. 7, ಸಂದೇಶ್ ಭವನ, 3ನೇ ಮುಖ್ಯ ರಸ್ತೆ, 1ನೇ ಹಂತ, ಅಂಚೆ ಕಾಲೋನಿ, ಸಂಜಯನಗರ, ಬೆಂಗಳೂರು–560094 ಈ ಸಂಘದವರು ಮಾಡಿಕೊಂಡಿರುತ್ತಾರೆ. ಸದರಿ ನೋಂದಣಿ ರಹಿತ ಪರಸ್ಪರ ಒಪ್ಪಂದದ ಕರಾರು ಪತ್ರಕ್ಕೆ, ಸಂಘದ ಪರವಾಗಿ ಒಂದನೇ ಪಾರ್ಟಿ ಎಂದು ಸಂಘದ ಪ್ರತಿನಿಧಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ರವರು ಮತ್ತು ಎರಡನೇ ಪಾರ್ಟಿ ಎಂದು ಗರುಢಾದ್ರಿ ಡೆವಲಪರ್ಸ್ ರವರ ಪರವಾಗಿ ಅದರ ಕಾರ್ಯನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಸಹಿ ಮಾಡಿರುತ್ತಾರೆ.

ದಿನಾಂಕ 18–11–2015ರ <u>DEED of PARTNERSHIP</u> ದಾಖಲಾತಿಯಲ್ಲಿ ಶ್ರೀ ರಂಗಧಾಮಯ್ಯ. ಎಂ.ಜಿ ಯವರು PARTNER-1 ಎಂದು ಇರುತ್ತದೆ. ಎಂ.ಒ.ಯು ದಿನಾಂಕ 2–12–2013 ರಲ್ಲಿ ಕಾರ್ಯನಿರ್ವಾಹಕ ಪಾಲುದಾರರು ಎಂದಿರುತ್ತದೆ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಗಮನ ಹರಿಸಿ, ಎಂ.ಒ.ಯು ನಲ್ಲಿ ಸೂಕ್ತ ತಿದ್ದುಪಡಿ ಮಾಡಿಕೊಳ್ಳುವುದು ಅತ್ಯಾಗತ್ಯ.

ದಿನಾಂಕ 2–12–2013 ರಂದು ಮಾಡಿಕೊಂಡಿರುವ ನೋಂದಣಿ ರಹಿತ ಪರಸ್ಪರ ಒಪ್ಪಂದದ ಕರಾರು (MOU) ನ ಮುಖ್ಯಾಂಶಗಳನ್ನು ಮತ್ತು ಹಣ ಬಿಡುಗಡೆಯ ಬಗ್ಗೆ ಹಾಗೂ ಡೆವಲಪರ್ಸ್‌ಗೆ ಪ್ರತಿ ನಿವೇಶನ ಚದರ ಅಡಿಗೆ ರೂ. 715–00 ನಂತೆ ಸಂಘದಿಂದ ಪಾವತಿಸಿರುವ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ 2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 82 ರಿಂದ 90ರ ವರೆವಿಗೆ ವಿವರವಾಗಿ ವಿವರಿಸಿರುತ್ತಾರೆ. ಆದುದರಿಂದ ಪುನಃ ಸದರಿ ವಿವರಣೆಯನ್ನು ವರದಿ ಸಾಲಿನ ಈ ವರದಿಯಲ್ಲಿ ವಿವರಿಸಿರುವುದಿಲ್ಲ.

ದಿನಾಂಕ 2–12–2013 ರಂದು ಮಾಡಿಕೊಂಡಿರುವ ನೋಂದಣಿ ರಹಿತ ಪರಸ್ಪರ ಒಪ್ಪಂದದ ಕರಾರಿನ ಕ್ರಮ ಸಂಖ್ಯೆ 13(t) ಪ್ರಕಾರ ಡೆವಲಪರ್ಸ್‌ಗೆ ನಿವೇಶನದ ಚದರ ಅಡಿಗೆ ರೂ. 715–00 ಗಳನ್ನು ನಿಗಧಿ ಪಡಿಸಿದ್ದಾರೆ M.O.U ನ ಕ್ರಮಸಂಖ್ಯೆ 13(p) ಪ್ರಕಾರ ಬಡಾವಣೆಯ ಎಲ್ಲಾ ಕೆಲಸಗಳನ್ನು MOU ದಿನಾಂಕ 2–12–2013 ರಿಂದ 18 ತಿಂಗಳುಗಳ ಕಾಲಾವಕಾಶದ ಒಳಗೆ ಪೂರ್ಣಗೊಳಿಸಿ ಸೊಸೈಟಿಗೆ ವರ್ಗಾಯಿಸುವುದು ಎಂದು ಇದ್ದು, ಇದರಂತೆ ಬಡಾವಣೆ ಕೆಲಸಗಳು ಆಗಿರುವುದಿಲ್ಲ.

ದಿನಾಂಕ 02–12–2013 ರಲ್ಲಿ ಸಂದೇಶ್ ನಗರ–3ನೇ ಹಂತದ ಬಡಾವಣೆಯನ್ನು ಮಾಡಲು, ಸಂಘವು ಗರುಢಾದ್ರಿ ಡೆವಲಪರ್ಸ್‌ನ ಪ್ರತಿನಿಧಿ ಮತ್ತು ಕಾರ್ಯ ನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು (M.O.U) ಮಾಡಿಕೊಂಡಿರುತ್ತಾರೆ. ದಿನಾಂಕ 2–12–2013ರ M.O.U ನಲ್ಲಿ ತಿಳಿಸಿರುವ ಕರಾರಿನ ಅವಧಿಯು ಮುಗಿದ ಕಾರಣ ದಿನಾಂಕ 28–9–2019 ರ ಆಡಳಿತ ಮಂಡಳಿ ಸಭೆಯ ಸರ್ವಾನುಮತದ ತೀರ್ಮಾನದಂತೆ ಗರುಢಾದ್ರಿ ಡೆವಲಪರ್ಸ್‌ನ ಹೆಸರಿನಲ್ಲಿ ಸಂದೇಶ್ ನಗರ–3ನೇ ಹಂತದ ಬಡಾವಣೆಗೆ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ದಿನಾಂಕ 7–11–2019 ರಲ್ಲಿ ಸಂಘದ ಪ್ರತಿನಿಧಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರು (ಒಂದನೇ ಪಾರ್ಟಿ); ಗರುಢಾದ್ರಿ ಡೆವಲಪರ್ಸ್‌ನ ಕಾರ್ಯನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರೊಂದಿಗೆ (ಎರಡನೇ ಪಾರ್ಟಿ) ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ದಿನಾಂಕ 7–11–2019ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ, ಎರಡನೇ ಪಾರ್ಟಿಯಾದ ಗರುಡಾದ್ರಿ ಡೆವಲಪರ್ಸ್‌ನ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ದಿನಾಂಕ 2–12–2013ರ ಒಪ್ಪಂದದ ಕರಾರು ಪತ್ರದಲ್ಲಿ (M.O.U) ರುವ ಸಂದೇಶ್ ನಗರ–3ನೇ ಹಂತ ಬಡಾವಣೆಯ ಎಲ್ಲಾ ಕೆಲಸಗಳನ್ನು ದಿನಾಂಕ 7–11–

2019 ರಿಂದ 12 ತಿಂಗಳೊಳಗಾಗಿ ಬಡಾವಣೆಯ ಎಲ್ಲಾ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಬೇಕೆಂದು ಒಂದನೇ ಪಾರ್ಟಿಯಾದ ಸೊಸೈಟಿಯವರು ಎರಡನೇ ಪಾರ್ಟಿಯಾದ ಗರುಢಾದ್ರಿ ಡೆವಲಪರ್ಸ್‌ನ ಕಾರ್ಯನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ರವರಿಗೆ ತಿಳಿಸಿದ ಪ್ರಯುಕ್ತ ಇದಕ್ಕೆ ಎರಡನೇ ಪಾರ್ಟಿಯವರಾದ ಗರುಢಾದ್ರಿ ಡೆವಲಪರ್ಸ್‌ನ ಕಾರ್ಯ ನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಒಪ್ಪಿರುತ್ತಾರೆ. ಆದರೆ ದಿನಾಂಕ 7–11–2019ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ ಮಾಡಿಕೊಂಡಿರುವ ಅವಧಿಯು ಮುಗಿದಿರುತ್ತದೆ. ಆದರೆ ಸಂದೇಶ್ ನಗರ–3ನೇ ಹಂತದ ಬಡಾವಣೆಯ ಕೆಲಸಕಾರ್ಯಗಳು ಪೂರ್ತಿಯಾಗಿ ಮುಗಿದಿಲ್ಲ. ದಿನಾಂಕ 7–11–2019 ರ ನವೀಕೃತ ಪರಸ್ಪರ ಒಪ್ಪಂದದ ಕರಾರು ಪತ್ರದಲ್ಲಿ ತಿಳಿಸಿರುವ 12 ತಿಂಗಳ ಅವಧಿಯು ಮುಗಿದಿದ್ದರೂ, ನವೀಕರಿಸಿಲ್ಲ. ಇದರ ಬಗ್ಗೆ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು, ಕಾರ್ಯದರ್ಶಿಯವರು ಗಮನ ಹರಿಸಿ, ತಕ್ಷಣವೇ ನವೀಕೃತ M.O.U ವನ್ನು ಸೂಕ್ತ ರೀತಿಯಲ್ಲಿ ನಿಯಮಾನುಸಾರ ಮಾಡಿಕೊಳ್ಳುವುದು ಅತ್ಯಾಗತ್ಯ ಹಾಗೂ ಸಂದೇಶ್ ನಗರ–3ನೇ ಹಂತದ ಬಡಾವಣೆಯ ಎಲ್ಲಾ ಕೆಲಸ ಕಾರ್ಯಗಳನ್ನು ಮುಕ್ತಾಯಗೊಳಿಸಿ, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿ ನೋಂದಣಿ ಮಾಡಿಕೊಡಲು ಕ್ರಮವಿಡುವುದು.

ದಿನಾಂಕ 31–3–2021ಕ್ಕೆ ರೂ. 36,95,20,550–00 ರೂಗಳು ಗರುಡಾದ್ರಿ ಡೆವಲಪರ್ಸ್ ರವರ ಲೆಕ್ಕದಲ್ಲಿರುತ್ತದೆ. ದಿನಾಂಕ 16–06–2021 ರಂದು ಗರುಡಾದ್ರಿ ಡೆವಲಪರ್ಸ್‌ನ ಪಾರ್ಟನರ್–1 ಆದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ದೃಢೀಕರಣ ಪತ್ರವನ್ನು ದಿನಾಂಕ 31–3–2021ಕ್ಕೆ ಸಂಘಕ್ಕೆ ನೀಡಿದ್ದು ದೃಢೀಕರಣ ಪತ್ರದಲ್ಲಿ ರೂ. 36,95,20,550–00 ಇದ್ದು ತಾಳೆ ಇರುತ್ತದೆ. ಸದರಿ ದೃಢೀಕರಣ ಪತ್ರವನ್ನು **ಅನುಬಂಧ– 24** ಎಂದು ವರದಿಯೊಂದಿಗೆ ಲಗತ್ತಿಸಿದೆ. 2019–20ನೇ ಸಾಲಿನಲ್ಲಿ ಗರುಡಾದ್ರಿ ಡೆವಲಪರ್ಸ್ ರವರಿಂದ ರೂ. 4,22,500–00 ಗಳ ಟಿ.ಡಿ.ಎಸ್ ಹಿಡಿದು ಆಧಾಯ ತೆರಿಗೆ ಇಲಾಖೆಗೆ ಪಾವತಿಸಿರುತ್ತಾರೆ.ಗರುಢಾದ್ರಿ ಡೆವಲಪರ್ಸ್ ರವರು, ಸಂಘದವರಿಗೆ ಭಧ್ರತೆಗಾಗಿ ದಿನಾಂಕ 2–12–2013 ರಂದು ರೂ. 50,00,000–00 (ಐವತ್ತು ಲಕ್ಷ) ಗಳನ್ನು ಫೆಡರಲ್ ಬ್ಯಾಂಕ್, ನೆಲಮಂಗಲ ಶಾಖೆಯ ಚೆಕ್ ನಂ. 042132 (ದಿನಾಂಕ 2–12–2013) ಮುಖಾಂತರ ನೀಡಿರುತ್ತಾರೆ. ಸಂಘದಿಂದ ನೀಡಿರುವ ಮೊಬಲಗಿಗೆ ತಕ್ಕಂತೆ ಭದ್ರತೆ ಮತ್ತು ಬ್ಯಾಂಕ್ ಗ್ಯಾರೆಂಟಿ ಪಡೆದಿಲ್ಲ. ಅನುಬಂಧ–16 ರಲ್ಲಿ ವಿವರಿಸಿರುವಂತೆ ದಿನಾಂಕ 31–3–2020ಕ್ಕೆ 13 ಎಕರೆ 0.05.6 ಗುಂಟೆ ಭೂಪರಿವರ್ತನೆಯಾದ ಜಮೀನನ್ನು ಸಂದೇಶ್ ನಗರ–3ನೇ ಹಂತಕ್ಕೆ ಸಂಬಂಧಪಟ್ಟಂತೆ ಸಂಘದ ಹೆಸರಿಗೆ ಗರುಢಾದ್ರಿ ಡೆವಲಪರ್ಸ್ ರವರನ್ನು ಪ್ರತಿನಿಧಿಸುವ ಅದರ ಕಾರ್ಯನಿರ್ವಾಹಕ ಪಾಲುದಾರರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರು ಸಂಘಕ್ಕೆ ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ದಿನಾಂಕ 2–12–2013ರ ನೋಂದಣಿ ರಹಿತ ಎಂ.ಒ.ಯು ಪ್ರಕಾರ ಭೂಪರಿವರ್ತಿತ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಟ್ಟ ಮೇಲೆ ನಿವೇಶನದ ಚದರ ಅಡಿಗೆ ರೂ. 400–00 ನಂತೆ ಡೆವಲಪರ್ಸ್ ರವರಿಗೆ ನೀಡಬೇಕು.

ಸಂದೇಶ್ ನಗರ–3ನೇ ಹಂತದ ಬಡವಣೆಗೆ ಸಂಬಂಧಿಸಿದಂತೆ, 11 ಎಕರೆ 26 ಗುಂಟೆ ಜಮೀನನ್ನು ಡೆವಲಪರ್ಸ್ ರವರಾದ ಶ್ರೀ ರಂಗಧಾಮಯ್ಯ ರವರ ಹೆಸರಿಗೆ ಕರಾರು ಮಾಡಿಕೊಂಡಿದ್ದು, ದಿನಾಂಕ 31–03–2021ಕ್ಕೆ ಭೂಪರಿವರ್ತನೆ ಕಾರ್ಯ ಪ್ರಗತಿಯಲ್ಲಿದೆ, ಎಂದು ಅನುಬಂಧ–16 ರ ಸ್ಟೇಟ್‌ಮೆಂಟ್‌ನ್ನು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನೀಡಿರುತ್ತಾರೆ. ಇದರ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಗಮನ ಹರಿಸಿ, ಭೂಪರಿವರ್ತನೆ ಮಾಡಿಸಲು ನಿಯಮಾನುಸಾರ ಕ್ರಮ ವಿಡುವುದು ಅತ್ಯಾಗತ್ಯ. ಇದರ ಬಗ್ಗೆ **ಅನುಬಂಧ– 16** ನ್ನು ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

ಸಂಘಕ್ಕೆ ನೋಂದಣಿಯಾಗಿರುವ ಭೂಪರಿವರ್ತನೆಯ ಜಮೀನಿನ ORGINAL DOCUMENTS ದಾಖಲಾತಿಗಳು ಸಂಘದಲ್ಲಿರುತ್ತದೆ.

ದಿನಾಂಕ 31–3–2021ಕ್ಕೆ ಸಂಘದಿಂದ ಗರುಢಾದ್ರಿ ಡೆವಲಪರ್ಸ್ ರವರಿಗೆ ರೂ. 36,95,20,550–00 ಗಳನ್ನು ನೀಡಿದೆ. ನೀಡಿದ ಮೊಬಲಗಿಗೆ ತಕ್ಕಂತೆ ಬಡಾವಣೆಯ ಕೆಲಸಗಳು ಆಗಿಲ್ಲ. ಕೆಲಸಗಳನ್ನು ಸಂಘದ ಆಡಳಿತ ಮಂಡಳಿ ಸದಸ್ಯರು ಮಾಡಿಸಲು ಕ್ರಮವಿಡುವುದು, ತಪ್ಪಿದರೇ ಬರುವ ಲೋಪದೋಷಗಳಿಗೆ ಆಯಾಯ ಕಾಲದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಜವಾಬ್ದಾರರು.

ದಿನಾಂಕ 2–12–2013ರ ನೋಂದಣಿ ರಹಿತ M.O.U ನಲ್ಲಿ ತಿಳಿಸಿರುವಂತೆ, ಸಂದೇಶ್ ನಗರ–3ನೇ ಹಂತದ ಬಡಾವಣೆಯನ್ನು ಮಾಡಿಸಲು ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದದಸ್ಯರು ಕ್ರಮವಿಡುವುದು ಅತ್ಯಾಗತ್ಯ.

ಸಂದೇಶ್ ನಗರ– 1, 2 ಮತ್ತು 3ನೇ ಹಂತದ ಡೆವಲಪರ್ಸ್‌ರಾದ ಶ್ರೀ ಎಂ.ಜಿ. ರಂಗಧಾಮಯ್ಯ ನವರಿಂದ ಮತ್ತು ಸಂದೇಶ್ ಲೇಕ್ ಸೈಡ್– 1, 2, 3 ಮತ್ತು 4ನೇ ಹಂತದ ಬಡಾವಣೆಯ ಡೆವಲಪರ್ಸ್‌ರಾದ ಶ್ರೀ ಬಿ. ರವಿ ಕುಮಾರ್ ರೆಡ್ಡಿ ಯವರಿಂದ ಸೂಕ್ತ ಭದ್ರತೆ ಮತ್ತು ಬ್ಯಾಂಕ್ ಗ್ಯಾರೆಂಟಿಯನ್ನು M.O.U ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸಂಘದ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಪಡೆದಿಲ್ಲ. ಪಾರದರ್ಶಕ ಕಾಯಿದೆಯನ್ನು ಅನುಸರಿಸಿಲ್ಲ.

ಸಂದೇಶ್ ನಗರ–1, 2 ಮತ್ತು 3ನೇ ಹಂತದ ಬಡಾವಣೆಗಳ ಮತ್ತು ಸಂದೇಶ್ ಲೇಕ್ ಸೈಡ್–1, 2, 3 ಮತ್ತು 4ನೇ ಹಂತದ ಬಡವಣೆಗಳ M.O.U ಗಳ / ಕರಾರುಗಳ ರೀತ್ಯಾ ಬಡಾವಣೆ ಕೆಲಸಕಾರ್ಯಗಳು ಆಗಿರುವುದಿಲ್ಲ. ಡೆವಲಪರ್ಸ್ ರವರುಗಳಿಗೆ ನೀಡಿರುವ ಮೊಬಲಗಿಗೆ ತಕ್ಕಂತೆ ಬಡಾವಣೆಗಳ ಕೆಲಸಕಾರ್ಯಗಳು ಆಗಿರುವುದಿಲ್ಲ ಮತ್ತು M.O.U ಗಳ ಕರಾರುಗಳ ಅವಧಿಯು ಮುಗಿದಿದ್ದು, M.O.U / ಕರಾರುಗಳನ್ನು ರಿನೀವಲ್ ಮಾಡಿಸಿಲ್ಲ. M.O.U ಗಳನ್ನು; ಕರಾರುಗಳನ್ನು ರಿನೀವಲ್ ಮಾಡಿಸಲು ಮತ್ತು ಡೆವಲಪರ್ಸ್ ರವರುಗಳಿಗೆ ನೀಡಿರುವ ಮೊಬಲಗಿಗೆ ತಕ್ಕಂತೆ ಬಡಾವಣೆಗಳ ಕೆಲಸಕಾರ್ಯಗಳನ್ನು ತ್ವರಿತವಾಗಿ ಮಾಡಿಸಲು ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಆಧ್ಯತೆಯ ಮೇಲೆ ಗಮನ ಹರಿಸುವುದು ಅತ್ಯಾಗತ್ಯ. ದಿನಾಂಕ 13–8–2020ರ ಆಡಳಿತ ಮಂಡಳಿ ಸಭೆಯಲ್ಲಿ ಮತ್ತು ದಿನಾಂಕ 25–4–2019ರ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ಡೆವಲಪರ್ಸ್ ರವರುಗಳಿಗೆ ದಿನಾಂಕ 31–3–2020 ಮತ್ತು ದಿನಾಂಕ 31–3–2019ರ ವರೆವಿಗೆ ನೀಡಿರುವ ಮೊಬಲಗುಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ, ಡೆವಲಪರ್ಸ್ ರವರುಗಳಿಗೆ ಬಡಾವಣೆಗಳ ಬಗ್ಗೆ ಪಾವತಿಸಿರುವ ಮೊಬಲಗನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿರುತ್ತಾರೆ. ದಿನಾಂಕ 24–07–2021 ರ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ಡೆವಲಪರ್ಸ್‌ಗಳಿಗೆ ದಿನಾಂಕ 31–03–2021 ರ ವರೆವಿಗೆ ನೀಡಿರುವ ಮೊಬಲಗಿನ ಬಗ್ಗೆ ಮತ್ತು ಬಡಾವಣೆಗಳ ಖರ್ಚುಗಳ ಬಗ್ಗೆಯೂ ಸಹಾ ವಿವರವಾಗಿ ಚರ್ಚಿಸಿ, ಡೆವಲಪರ್ಸ್‌ಗಳಿಗೆ ಬಡಾವಣೆಗಳ ಬಗ್ಗೆ ಪಾವತಿಸಿರುವ, ಖರ್ಚು ಮಾಡಿರುವ ಮೊಬಲಗನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿರುತ್ತಾರೆ.

ಗರುಡಾದ್ರಿ ಡೆವಲಪರ್ಸ್ ರವರಿಗೆ ದಿನಾಂಕ 20–06–2019 ರಂದು ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆಯ ಚೆಕ್ ನಂ. 296398 ರ ಮೂಲಕ ರೂ. 7,00,000–00 ನೀಡಿದ್ದು, ಟಿ.ಡಿ.ಎಸ್ ಹಿಡಿದಿಲ್ಲ ಮತ್ತು ದಿನಾಂಕ 16–8–2019 ರಲ್ಲಿ ಅಪೆಕ್ಸ್ ಬ್ಯಾಂಕ್ ಗಂಗಾನಗರ ಶಾಖೆಯ ಚೆಕ್ ನಂ. 296733ರ ಮೂಲಕ ರೂ. 1,00,000–00 ಲಕ್ಷ ನೀಡಿದ್ದು, ಟಿ.ಡಿ.ಎಸ್. ಹಿಡಿದಿಲ್ಲ. ತಕ್ಷಣವೇ ಟಿ.ಡಿ.ಎಸ್ ನ್ನು ಗರುಡಾದ್ರಿ ಡೆವಲಪರ್ಸ್ ರವರಿಂದ ಸಂಘಕ್ಕೆ ಪಡೆದು ಆದಾಯ ತೆರಿಗೆ ಇಲಾಖೆಗೆ ಪಾವತಿಸುವುದು ಅತ್ಯಾಗತ್ಯ.

**ಸಂದೇಶ್ ನಗರ–3ನೇ ಹಂತದ ಬಡಾವಣೆಯ ಬಗ್ಗೆ ಪತ್ರಿಕಾ ಪ್ರಕಟಣೆ ಬಾಬ್ತು: ರೂ. 484000–00**

2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪುಟ ಸಂಖ್ಯೆ 80 ರಲ್ಲಿ ವಿವರಿಸಿರುವಂತೆ ಪತ್ರಿಕೆ ಪ್ರಕಟಣೆ ಬಾಬ್ತು ರೂ. 4,84,000–00 ಗಳನ್ನು ಆಸ್ತೀಕರಿಸುವುದು ದಿನಾಂಕ 31–3–2021ಕ್ಕೆ ಆಸ್ತಿಯ ಕಡೆ ಮುಂದುವರಿಯುತ್ತದೆ.

**ಸರ್ ಸಿವಿಲ್ ಜಡ್ಜ್ ರವರು ಜೆ.ಎಂ.ಎಫ್.ಸಿ. ಕೋರ್ಟ್ ಅನೇಕಲ್ ರವರ ಕೋರ್ಟಿಗೆ :**

| ಕ್ರ. | ಬಡಾವಣೆ | ಒಟ್ಟು ಕ್ಷೇತ್ರ | ಬಂಡವಾಳೀಕರಿಸಿದ | ಪ್ರತಿ ಚದರ | ಸಂಘವು |
|---|---|---|---|---|---|

| ಸ. | | ಚ.ಘೂ.ಚದರ ಮೀಟರ್ | ಮೊತ್ತ | ಅಡಿಗೆ ನಿವೇಶನ ಬೆಲೆ ಯನ್ನು ನಿಗದಿಪಡಿಸಿದ ಅಡಳಿತ ಮಂಡಳಿ ಸಭೆ ದಿನಾಂಕ | ನಿಗಧಿ ಪಡಿಸಿದ ನಿವೇಶನ ದ ಬೆಲೆ ಚದರಡಿಗೆ |
|---|---|---|---|---|---|
| 1 | ಸಂದೇಶ್ ನಗರ – 1ನೇ ಹಂತದ ಬಡಾವಣೆ | 102160.03 ಚದರ ಮೀಟರ್ ಒಟ್ಟಾರೆ 46 ಎಕರೆ 14 ಗುಂಟೆ | ದಿ. 31–3–2020ರ ಆಸ್ತಿ–ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(1) (ಎ) ಯಿಂದ (ಕೆ) ವರೆವಿಗೆ ವಿವರಿಸಿರುವಂತೆ, ಸಂದೇಶ್ ನಗರ–1ನೇ ಹಂತದ ಬಾಬ್ತು ರೂ. 75,71,98,297–00 ಗಳು ಮತ್ತು ಆಸ್ತಿಯ | ದಿ: 3–03–2007 ದಿನಾಂಕ 12–7–2014 ರಂದು ನಡೆದ ನಿವೇಶನ ಹಂಚಿಕೆ ಸಭೆಯಲ್ಲಿ ಸಂದೇಶ್ ನಗರ–1ನೇ ಹಂತದ ಮಧ್ಯಂತರ ನಿವೇಶನದ ಚದರ ಅಡಿಗೆ ರೂ. 575–00 ಗಳನ್ನು ಮತ್ತು | 425/=<br>575/= |
| | | | ಕ್ರಮ ಸಂಖ್ಯೆ 5 (2) ಮತ್ತು (ಎ) ಯಿಂದ (ಸಿ) ವರೆವಿಗೆ ವಿವರಿಸಿರುವಂತೆ ಸಂದೇಶ್ ನಗರ–2ನೇ ಹಂತದ ಬಾಬ್ತು ರೂ. 43,79,60,037,00 ಗಳನ್ನು ಬಂಡವಾಳೀಕರಿಸಿದೆ. | ಮೂಲೆ ನಿವೇಶನಕ್ಕೆ ರೂ. 825–00 ಗಳನ್ನು ನಿಗಧಿಪಡಿಸಿ, ನಿವೇಶವನ್ನು ಹಂಚಿಕೆ ಮಾಡಿದೆ. ದಿನಾಂಕ 19–10–2015 ರಿಂದ ಹಂಚುವ ಆಡ್‌ಸೈಟ್ ಗಳಿಗೆ ವಾರ್ಷಿಕ ಮಹಾ ಸಭೆಯ ದಿನಾಂಕ 20–9–2015 ರ ಪ್ರಕಾರ ಚದರ ಅಡಿಗೆ ರೂ. 700–00 ಗಳನ್ನು ನಿಗದಿ ಪಡಿಸಿರುತ್ತಾರೆ. | 825/=<br>700/= |
| 2 | ಸಂದೇಶ್ ನಗರ – 2ನೇ ಹಂತದ ಬಡಾವಣೆ | 89941.46 ಚದರ ಮೀಟರ್ ಒಟ್ಟು 22 ಎಕರೆ 0.9 ಗುಂಟೆ | ಸಂದೇಶ್ ನಗರ–2ನೇ ಹಂತದ ಬಡಾವಣೆ ಬಾಬ್ತು ದಿನಾಂಕ 31–3–2020ರ ಆಸ್ತಿಯ ಜವಾಬ್ದಾರಿ ತಃಖ್ತೆಯ ಆಸ್ತಿಯ ಕ್ರಮ ಸಂಖ್ಯೆ 5(2) (ಎ) ಯಿಂದ (ಸಿ) ವರೆವಿಗೆ ವಿವರಿಸಿರುವ ರೂ. 43,79,60,0037–00 ಗಳನ್ನು ಬಂಡವಾಳೀಕರಿಸಿದೆ. | 24–02–2008<br>15–1–2012 | 480/=<br>530/= |
| 3 | ಸಂದೇಶ್‌ಭಾಗ್ | | | 17–04–2008 | 500/= |

| | | | | | |
|---|---|---|---|---|---|
| 4 | ಸಂದೇಶ್ ಲೇಕ್ ಸೈಡ್ – 1 | ಸಂಬಂಧಿಸಿದ ಪ್ರಾಧಿಕಾರ ದಿಂದ ಪ್ಲಾನ್ ಮಂಜೂರಾತಿಯು ದಿನಾಂಕ: 31–3–2015 ರೊಳಗೆ ಆಗಿರುವುದಿಲ್ಲ ಆದುದರಿಂದ ನಿವೇಶನದ ಒಟ್ಟು ಕ್ಷೇತ್ರವನ್ನು ನಮೂದಿಸಿಲ್ಲ | ನಿವೇಶನ ಮಾಡಲು ಜಮೀನನ್ನು ಗುತ್ತಿಗೆದಾರರ ಮುಖಾಂತರ ಪಡೆಯುತ್ತಿದ್ದು ಕಾಮಗಾರಿಯನ್ನು ಇನ್ನು ಪ್ರಾರಂಭಿಸಿಲ್ಲ ಅದುದರಿಂದ ಬಂಡಾವಳ ಕರಿಸಿದ ಮೊತ್ತವನ್ನು ಕರಾರುವಕ್ಕಾಗಿ ನಮೂದಿಸಲು ಸಾಧ್ಯವಾಗಿರುವುದಿಲ್ಲ | 26–05–2010 | 630/= |
| 5 | ಸಂದೇಶ್ ಲೇಕ್ ಸೈಡ್ – 2 | | | 10–01–2011 | 690/= |
| 6 | ಸಂದೇಶ್ ಲೇಕ್ ಸೈಡ್– 3 | | | 7–08–2011 | 725/= |
| 7 | ಸಂದೇಶ್ ಲೇಕ್ ಸೈಡ್– 4 | | | 31–5–2018 | 990/= |
| 8 | ಸಂದೇಶ್ ನಗರ–3 | – " – | – " – | 16–11–2013<br>09–1–2014 | 725/=<br>900/= |

2011–12 ನೇ ಸಾಲಿನಲ್ಲಿ ದಿನಾಂಕ: 21.07.2011ರಲ್ಲಿ ಪಿ.ಓ. / ಡಿ.ಡಿ. ನಂ. 233346ರ ಮುಖಾಂತರ ರೂ. 38844–00 ಮತ್ತು ದಿನಾಂಕ: 21.07.2011ರಲ್ಲಿ ಪಿ.ಓ. / ಡಿ.ಡಿ. ನಂ. 233347ರ ಮುಖಾಂತರ ರೂ. 247125–00 ಗಳನ್ನು ಅಂದರೆ ಜುಮ್ಲಾ ರೂ. 2,85,969–00 ಗಳನ್ನು ವರ್ತೂರು ಹೋಬಳಿಯ ಚಿಕ್ಕನಹಳ್ಳಿ, ಕಾಮನಹಳ್ಳಿಯ ಸರ್ವೆ ನಂ. 10/5ರ 3 ಎಕರೆ 25 ಗುಂಟೆ ಜಮೀನಿನ ಬಾಬ್ತು (ಸಂದೇಶ್ ಬಾಗ್ ಬಡಾವಣೆಗೆ ಸಂಬಂಧಪಟ್ಟ) ಸರ್ ಸಿವಿಲ್ ಜೆಡ್ಜ್ ರವರು ಜೆ.ಎಂ.ಎಫ್.ಸಿ. ಕೋರ್ಟ್ ಅನೇಕಲ್ ರವರ ಕಛೇರಿಗೆ ಡಿಪಾಜಿಟ್ ಬಾಬ್ತು ನೀಡಲಾಗಿದೆ ಎಂದು ಲೆಕ್ಕ ಪರಿಶೋಧನಾ ವೇಳೆಯಲ್ಲಿ ಸಂಘದ ಕಾರ್ಯದರ್ಶಿ ಯವರು ತಿಳಿಸಿ, ಸದರಿ ರೂ. 2,85,969–00 ಗಳು ಜಮೀನಿನ ಕೇಸ್ ಮುಗಿದ ಮೇಲೆ ವಾಪಸ್ಸು ಬರುತ್ತದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ.

ಅದುದರಿಂದ ದಿನಾಂಕ: 31–03–2013ಕ್ಕೆ ಬ್ಯಾಲನ್ಷೀಟಿನ ಆಸ್ತಿಯ ಕ್ರಮ ಸಂಖ್ಯೆ 8ರಲ್ಲಿ ತೋರಿಸಿರುವ ಮೊಬಲಗು, ರೂ. 2,85,969–00 ಗಳು ಸಾಲು ಪ್ರಾರಂಭದಿಂದ ದಿನಾಂಕ 31–3–2021ಕ್ಕೂ ಬ್ಯಾಲನ್ಷೀಟಿನ ಆಸ್ತಿಯ ಕ್ರಮ ಸಂಖ್ಯೆ 7 ರಲ್ಲಿ ಮುಂದುವರೆದಿದೆ, ಇದರ ಬಗ್ಗೆ ಸೂಕ್ತ ಕ್ರಮವಿಡುವುದು.

13 **ಅಭಿವೃದ್ಧಿ ಕಾಮಗಾರಿಯ ಎಲ್ಲಾ ಕ್ರಮಗಳು ಸಮಪರ್ಕವಾಗಿ ಮುಗಿದಿದ್ದಲ್ಲಿ ಅಯಾ ಬಡಾವಣೆಗೆ ಸಂಬಂಧಿಸಿದಂತೆ ಪ್ರತಿ ಚ.ಘೋ. ಚ.ಮೀ ನಿವೇಶನ ಅಭಿವೃದ್ಧಿ ದರವನ್ನು ನಿರ್ಧರಿಸಲಾಗಿದೆಯೇ?**

ದಿನಾಂಕ 31–3–2021 ಕ್ಕೆ ಸಂಘದ ಎಲ್ಲಾ ಬಡಾವಣೆಗಳ ಅಭಿವೃದ್ಧಿ ಕಾಮಗಾರಿಯ ಎಲ್ಲಾ ಕ್ರಮಗಳು ಸಂಪೂರ್ಣವಾಗಿ ಸಮರ್ಪಕವಾಗಿ ಮುಗಿದಿರುವುದಿಲ್ಲ.

**ಅಭಿವೃದ್ಧಿ ರಕಮಿನ ಲೆಕ್ಕಾಚಾರ**

| ಕ್ರ ಸಂ | ಬಡಾವಣೆ | ಒಟ್ಟು ಕ್ಷೇತ್ರ | ಅಭಿವೃದ್ಧಿಯ ಒಟ್ಟು ರಕಂ | ಪ್ರತಿ.ಭ.ಗೋ.ಚ.ಮೀ.ಗೆ ಅಭಿವೃದ್ಧಿ ರಕಂ | ಸಂಘವು ನಿಗದಿಪಡಿಸಿದ ದರ |
|---|---|---|---|---|---|
| 1 | ದಿನಾಂಕ 31–3–2021 ಕ್ಕೆ ಎಲ್ಲಾ ಬಡಾವಣೆಗಳ ಅಭಿವೃದ್ಧಿ ಕಾಮಗಾರಿಯ ಎಲ್ಲಾ ಕ್ರಮಗಳು ಸಮರ್ಪಕವಾಗಿ ಮುಗಿದಿಲ್ಲವಾದುದರಿಂದ ಎಲ್ಲಾ ಬಡಾವಣೆಗಳ ಅಭಿವೃದ್ಧಿ ರಕಮಿನ ಲೆಕ್ಕಚಾರವನ್ನು ಮಾಡಿರುವುದಿಲ್ಲ. | | | | |

**14. ನಿವೇಶನ ತಯಾರಿಕೆಯ ಎಲ್ಲಾ ಕ್ರಮಗಳು ಸಮರ್ಪಕವಾಗಿ ಮುಗಿದಿದ್ದಲ್ಲಿ ಆಯಾ ಬಡಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನಿವೇಶನ ಬೆಲೆಯನ್ನು ಲೆಕ್ಕ ಹಾಕಿ ನಿರ್ದರಿಸಲಾಗಿದೆಯೇ?**

ದಿನಾಂಕ 31–3–2021 ಕ್ಕೆ ಎಲ್ಲಾ ಬಡವಣೆಗಳ ನಿವೇಶನ ತಯಾರಿಕೆಯ ಎಲ್ಲಾ ಕ್ರಮಗಳು ಸಮರ್ಪಕವಾಗಿ ಮುಗಿದಿರುವುದಿಲ್ಲ ಆಯಾ ಬಡಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನಿವೇಶನ ಬೆಲೆಯನ್ನು ಲೆಕ್ಕ ಹಾಕಿ ಈ ಕೆಳಕಂಡಂತೆ ನಿರ್ದರಿಸಲಾಗಿದೆ.

**ನಿವೇಶನ ಬೆಲೆಯ ಲೆಕ್ಕಾಚಾರ**

**15. ನಿವೇಶನ ಹಂಚಿಕೆಗೆ ಜೇಷ್ಠತೆಯನ್ನು ನಿವೇಶನ ಠೇವಣಿ ಪ್ರಥಮ ಕಂತು ಜಮಾ ಆಧಾರದ ಮೇಲೆ ತಯಾರಿಸಲಗಿದೆಯೇ ಬೇರೆ ವಿಧಾನ ಅನುಸರಿಸಿದ್ದಲ್ಲಿ ವಿವರಿಸುವುದು.**

ಸಂದೇಶ್ ನಗರ– 1 ಮತ್ತು 2ನೇ ಹಂತದ ಬಡಾವಣೆಯ 1174 ನಿವೇಶನಗಳ ನೈಜ ಸದಸ್ಯರ ಹಾಗೂ ನಿವೇಶನ ಠೇವಣಿದಾರರ ಪಟ್ಟಿ (ಜೇಷ್ಠತಾ ಪಟ್ಟಿ) ಯನ್ನು ದಿನಾಂಕ 19–03–2014 ರಂದು ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ರವರು ಆದೇಶದ ಸಂಖ್ಯೆ ಹೆಚ್ಎಸ್ಜಿ–2/158/ಹೆಚ್ಹೆಚ್ಎಸ್/2013–14 ರ ಮೂಲಕ ಅನುಮೋದಿಸಿ ಆದೇಶಿಸಿರುತ್ತಾರೆ. ಇದರಂತೆ ಸಂದೇಶ್ ನಗರ– 1ನೇ ಹಂತದ ನಿವೇಶನವನ್ನು ಹಂಚಲಾಗಿದೆ ಕೆಲವು ODD ಸೈಟ್‌ಗಳನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ಹಂಚಿದ್ದು, ಈ ನಿವೇಶನಗಳಿಗೆ ಜೇಷ್ಠತಾ ಪಟ್ಟಿಯನ್ನು ಅನುಮೋದಿಸಿಕೊಂಡಿಲ್ಲ. ಇದರ ಬಗ್ಗೆ ವಿಚಾರಿಸಲಾಗಿ ಜೇಷ್ಠತಾ ಪಟ್ಟಿಯಲ್ಲಿರುವ ಸದಸ್ಯರು / ಸಹ ಸದಸ್ಯರು ODD ಸೈಟ್‌ಗಳನ್ನು ನಿರಾಕರಿಸಿದ ನಂತರ, ODD ಸೈಟು ಬೇಕು ಎಂದ ಸೀನಿಯಾರಿಟಿ ಪಟ್ಟಿಯಲ್ಲಿ ಇಲ್ಲದೇ ಇರುವ ಸದಸ್ಯರು / ಸಹ ಸದಸ್ಯರು ಕೇಳಿದಾಗ, ಅಂತಹ ಸದಸ್ಯರಿಗೆ / ಸಹ ಸದಸ್ಯರಿಗೆ ODD ಸೈಟ್‌ಗಳನ್ನು ನೀಡಲಾಗಿದೆ ಎಂದು ಅಧ್ಯಕ್ಷರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ. ಆಡಳಿತ ಮಂಡಳಿ ಸಭೆಯ ದಿನಾಂಕ 26–6–2015 ರಲ್ಲಿ ಮತ್ತು ದಿನಾಂಕ 30–1–2018 ರಲ್ಲಿ ODD ಸೈಟ್‌ಗಳ ಬಗ್ಗೆ ಠರಾವು ಮಾಡಲಾಗಿದೆ ಎಂದು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಉಳಿಕೆ ಬಡಾವಣೆಗಳ ಕೆಲಸವು ಪ್ರಗತಿಯಲ್ಲಿದ್ದು, ನಿವೇಶನ ಹಂಚಿಕೆಯನ್ನು ಮಾಡಿಲ್ಲ ಹಾಗೂ ಮಾಡುತ್ತಿಲ್ಲ ನಿವೇಶನ ಹಂಚಿಕೆ ಮಾಡುವ ಮೊದಲು ಜೇಷ್ಠತೆಯನ್ನು ತಯಾರಿಸಿ, ಸಂಬಂಧಿಸಿದ ಸಹಕಾರ ಇಲಾಖಾಧಿಕಾರಿಗಳಿಂದ ಅನುಮೋದನೆಯನ್ನು ಪಡೆಯಲಾಗುವುದೆಂದು ಸಂಘದ ಅಧ್ಯಕ್ಷರು ಮತ್ತು ಸಂಘದ ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ.

**16 ನಿವೇಶನ ಹಂಚಿಕೆ ಕ್ರಮಗಳು ಸಮರ್ಪಕವಾಗಿ ನಡೆದಿವೆಯೇ? ಜೇಷ್ಠತೆಗೆ ಅನುಗುಣವಾಗಿ ಹಂಚಿಕೆ ಕಾರ್ಯ ಮಾಡಲಾಗಿದೆಯೆ?**

ಸಂದೇಶ್ ನಗರ– 1ನೇ ಹಂತದ ನಿವೇಶನ ಹಂಚಿಕೆಯನ್ನು ಸಮರ್ಪಕವಾಗಿ / ಜೇಷ್ಠತೆಗೆ ಅನುಗುಣವಾಗಿ ಸಮಾಲೋಚನಾ ಸಭೆಯಲ್ಲಿ ದಿನಾಂಕ 12–7–2014 ಮತ್ತು 13–7–2014 ರಂದು, ಚರ್ಚಿಸಿ, ಹಂಚಲಾಗಿದೆ. ಕೆಲವು ODD ಸೈಟ್ಸ್‌ಗಳನ್ನು / ಸೈಟ್‌ಗಳನ್ನು ನೀಡುವ ಬಗ್ಗೆ, ನೀಡಿರುವ ಬಗ್ಗೆ ಆಡಳಿತ ಮಂಡಳಿ ಸಭೆಯ ದಿನಾಂಕ 26–6–2015 ಮತ್ತು ದಿನಾಂಕ 30–1–2018 ರಲ್ಲಿ ಅನುಮೋದನೆ ಪಡೆದಿರುತ್ತಾರೆ.

**17 ನಿವೇಶನಗಳ ಸ್ವಾಧೀನ ಪತ್ರ ನೀಡುವ ಕಾರ್ಯ ಪೂರೈಸಿದಲ್ಲಿ ನಿವೇಶನ : ಅಭಿವೃದ್ಧಿ ಠೇವುಗಳನ್ನು ನಿವೇಶನ/ ಅಭಿವೃದ್ಧಿ ವೆಚ್ಚದ ರಕಮ್‌ನೊಂದಿಗೆ ಹೊಂದಾಣಿಕೆಯಾಗುವ ಲೆಕ್ಕಗಳನ್ನು ಬರೆಯಲಾಗಿದೆಯೇ? ಬರೆದಿದ್ದರೆ ವಿವರ**

ಸಂಘದಿಂದ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನ ಹಂಚಿಕೆಯನ್ನು ಸಂದೇಶ್ ನಗರ–1ನೇ ಹಂತದ ಬಡಾವಣೆಗೆ ಸಂಬಂಧಿಸಿದಂತೆ ಮಾಡಿದೆ, ದಿನಾಂಕ 31–03–2021 ಕ್ಕೆ ಒಟ್ಟು 348 ವಿವಿಧ ಅಳತೆಯ ನಿವೇಶನಗಳನ್ನು ಸಂಘದಿಂದ

ನೋಂದಣಿ ಮಾಡಿಕೊಟ್ಟಿರುತ್ತಾರೆ. (ಸದಸ್ಯರಿಗೆ 27 ವಿವಿಧ ಅಳತೆಯ ನಿವೇಶನಗಳನ್ನು ಮತ್ತು ಸಹ ಸದಸ್ಯರಿಗೆ 321 ವಿವಿಧ ಅಳತೆಯ ನಿವೇಶನಗಳನ್ನು) ಇದರ ಬಗ್ಗೆ ವಿವರವಾಗಿ ರಿಜಿಸ್ಟರ್ ಬರೆದಿರುತ್ತಾರೆ.

ಸಂದೇಶ್ ನಗರ–1ನೇ ಹಂತದ ನಿವೇಶನಗಳಿಗೆ ಸ್ವಾಧೀನ ಪತ್ರ ನೀಡಲಾಗುತ್ತಿದೆ ಇನ್ನು ಪೂರ್ತಿಯಾಗಿ ನೀಡಿಲ್ಲ ಉಳಿಕೆ ಬಡಾವಣೆಗಳ ಕಾರ್ಯ ಪ್ರಗತಿಯಲ್ಲಿದೆ ಆದುದರಿಂದ ದಿನಾಂಕ: 31–03–2021 ಕ್ಕೆ ಉಳಿಕೆ ಬಡಾವಣೆಗಳ ನಿವೇಶನ ಹಂಚಿಕೆ ಮಾಡಿರುವುದಿಲ್ಲ ಹಾಗೂ ನೋಂದಣಿ ಮಾಡಿಕೊಟ್ಟಿರುವುದಿಲ್ಲ. ಅದುದರಿಂದ ನಿವೇಶನಗಳ ಸ್ವಾಧೀನ ಪತ್ರ ನೀಡುವ ಕಾರ್ಯ ಪೂರೈಸಿಲ್ಲ. ಅದುದರಿಂದ ಹೊಂದಾಣಿಕೆ ಯಾಗುವ ಲೆಕ್ಕಗಳನ್ನು ಬರೆದಿಲ್ಲ.

| ನಿವೇಶನ ಸಂಖ್ಯೆ | ಕ್ಷೇತ್ರ | ಹೊಂದಾಣಿಕೆ ರಕಂ | |
|---|---|---|---|
| | | ನಿವೇಶನ ಠೇವಣಿ | ಅಭಿವೃದ್ಧಿ ರಕ್ಕಮು |
| ಹೊಂದಾಣಿಕೆ ಮಾಡಿರುವುದಿಲ್ಲ. | | | |

**18)** <u>**ಸ್ವಾಧೀನ ಪತ್ರ ನೀಡುವ ಕಾರ್ಯ ಪೂರಿಸಿದ್ದರೂ ಅಂತಿಮ ಹೊಂದಾಣಿಕೆ ಮಾಡಿಕೊಳ್ಳದೇ ಇರುವ ನಿವೇಶನಗಳ ವಿವರಗಳು :**</u>

| ನಿವೇಶನ ಸಂಖ್ಯೆ | ಕ್ಷೇತ್ರ | ಹೊಂದಾಣಿಕೆ ರಕಂ | |
|---|---|---|---|
| | | ನಿವೇಶನ ಠೇವಣಿ | ಅಭಿವೃದ್ಧಿ ರಕ್ಕಮು |
| – | – | – | – |

ಸಂದೇಶ್ ನಗರ–1ನೇ ಹಂತದ ನಿವೇಶನಗಳ ಸ್ವಾಧೀನ ಪತ್ರವನ್ನು ದಿನಾಂಕ 31–03–2021ರ ವರೆವಿಗೆ 24 ಸದಸ್ಯರು ಮತ್ತು ಸಹ ಸದಸ್ಯರಿಗೆ ನೀಡಿದೆ, ಸ್ವಾಧೀನ ಪತ್ರ ನೀಡುವ ಕಾರ್ಯ ದಿನಾಂಕ: 31–03–2021ಕ್ಕೆ ಪೂರ್ತಿಯಾಗಿ ಆಗಿಲ್ಲದೇ ಇರುವುದರಿಂದ ಮತ್ತು ಸಂದೇಶ್ ನಗರ–1ನೇ ಹಂತದ ಬಡಾವಣೆಯ 348 ವಿವಿಧ ಅಳತೆಯ ನಿವೇಶನಗಳನ್ನು ಸಂಘದಿಂದ ನೋಂದಣಿ ಮಾಡಿಕೊಡಲಾಗಿದೆ, ಉಳಿಕೆ ನಿವೇಶನಗಳನ್ನು ಸದಸ್ಯರಿಗೆ / ಸಹ ಸದಸ್ಯರಿಗೆ ಪೂರ್ತಿಯಾಗಿ ಹಂಚಿ ನೋಂದಣಿ ಮಾಡಿಕೊಡದೇ ಇರುವುದರಿಂದ ಅಂತಿಮ ಹೊಂದಾಣಿಕೆ ಲೆಕ್ಕವನ್ನು ಸಂದೇಶ್ ನಗರ–1ನೇ ಹಂತಕ್ಕೆ ಮಾಡಿಕೊಂಡಿರುವುದಿಲ್ಲ.

**35)** <u>**ಗೃಹ ನಿರ್ಮಾಣ ಕಾರ್ಯ ಸಂಘದ ವತಿಯಿಂದ :**</u>

1) <u>ಗೃಹ ನಿರ್ಮಾಣ ಕಾರ್ಯವನ್ನು ಸಂಘದಿಂದ ನಿರ್ವಹಿಸುತ್ತಿದ್ದಲ್ಲಿ ಗೃಹ ನಿರ್ಮಾಣಗಳ ನಕ್ಷೆಯನ್ನು ತಯಾರಿಸಿ ಸಂಬಂದಿಸಿದ ಪ್ರಾಧಿಕಾರದಿಂದ ಅನುಮೋಧನೆ ಪಡೆಯಲಾಗಿದೆಯೇ?</u>

ಗೃಹ ನಿರ್ಮಾಣ ಕಾರ್ಯವನ್ನು ಸಂಘದಿಂದ ನಿರ್ವಹಿಸುತ್ತಿಲ್ಲ.

2) <u>ಅಂದಾಜು ವೆಚ್ಚ ತಯಾರಿಸಿ ಸಂಬಂದಿಸಿದ ಸದಸ್ಯರ ಒಪ್ಪಿಗೆ ಪಡೆಯಲಾಗಿದೆಯೇ?</u>

ಅನ್ವಯಿಸುವುದಿಲ್ಲ.

3) <u>ನಿರ್ಮಾಣಕ್ಕೆ ಬೇಕಾಗುವ ಕಟ್ಟಡ ಸಾಮಾಗ್ರಿಗಳ ತಾಂತ್ರಿಕ ಅಭಿಪ್ರಾಯ ಪಡೆಯಲಾಗಿದೆಯೇ?</u>

ಅನ್ವಯಿಸುವುದಿಲ್ಲ

4) <u>ಕಟ್ಟಡ ಸಾಮಾಗ್ರಿಗಳ ದಾಸ್ತಾನು ಬಳಕೆಯ ಲೆಕ್ಕ ಸೂಕ್ತವಾಗಿ ಇಡಲಾಗಿದೆಯೇ ?</u>

ಅನ್ವಯಿಸುವುದಿಲ್ಲ.

5) <u>ಸಾಮಾಗ್ರಿ ಖರೀದಿಸಿರುವ ವಿಧಿ ವಿಧಾನಗಳ ಸಮರ್ಪಕವಾಗಿದೆಯೇ ?</u>

ಅನ್ವಯಿಸುವುದಿಲ್ಲ

6) <u>ಕಟ್ಟಡ ನಿರ್ಮಾಣ ಕಾರ್ಯದ ಗುಣಮಟ್ಟ ನಿರ್ವಹಣೆ ಹಾಗೂ ಮೇಲ್ವಿಚಾರಣೆಗೆ ತಜ್ಞ ಇಂಜಿನಿಯರ್ ರವರ ಸೇವೆ ಪಡೆಯಲಾಗಿದೆಯೇ ?</u>

ಅನ್ವಯಿಸುವುದಿಲ್ಲ

7) <u>ಕಟ್ಟಡ ನಿರ್ಮಾಣದ ಅಳತೆ ಪುಸ್ತಕ ಹಂತವಾರು ರನ್ನಿಂಗ್ ಬಿಲ್ ಇಡಲಾಗಿದೆಯೇ ?</u>

ಅನ್ವಯಿಸುವುದಿಲ್ಲ.

8) <u>ಕಟ್ಟಡ ನಿರ್ಮಾಣಕ್ಕೆ ಅಂದಾಜಿಗಿಂತ ಹೆಚ್ಚುವರಿ ವೆಚ್ಚ ಭಾರಿಸಲಾಗಿದೆಯೇ, ಈ ಹೆಚ್ಚುವರಿ ವೆಚ್ಚಕ್ಕೆ ಸಂಬಂದಿಸಿದ ಸದಸ್ಯರ ಒಪ್ಪಿಗೆ ಪಡೆಯಲಾಗಿದೆಯೇ ?</u>

ಅನ್ವಯಿಸುವುದಿಲ್ಲ

9) <u>ಕಟ್ಟಡ ನಿರ್ಮಣ ಕಾರ್ಯ ಮುಕ್ತಾಯವಾದ ನಂತರ ಸಂಬಂದಿಸಿದ ಪ್ರಾಧಿಕಾರದಿಂದ ಮುಕ್ತಾಯ ಪತ್ರ ಪಡೆದು ಸದಸ್ಯರಿಗೆ ಹಸ್ತಾಂತರಿಸುವ ಕಾರ್ಯ ಸಮರ್ಪಕವಾಗಿದೆಯೇ ?</u>

ಅನ್ವಯಿಸುವುದಿಲ್ಲ

10) <u>ಹಸ್ತಾಂತರ ನಂತರ ಸದಸ್ಯರ ಕಟ್ಟಡ ಠೇವಣೆ ಮೊತ್ತದೊಂದಿಗೆ ಕಟ್ಟಡ ಬೆಲೆಯ ಅಂತಿಮ ಹೊಂದಾಣಿಕೆ ಲೆಕ್ಕ ಬರೆಯಲಾಗಿದೆಯೇ ? ಇದಕ್ಕೆ ಸದಸ್ಯರ ಒಪ್ಪಿಗೆ ಪಡೆಯಲಾಗಿದೆಯೇ ? ಬರೆದಿದ್ದರೆ ವಿವರಗಳು.</u>

ಅನ್ವಯಿಸುವುದಿಲ್ಲ

| | | | |
|---|---|---|---|
| **36.** | | **<u>ಗೃಹ ನಿರ್ಮಾಣ ಕಾರ್ಯ ಗುತ್ತಿಗೆದಾರದಿಂದ :</u>** | ಸಂಘವು ಗೃಹ ನಿರ್ಮಾಣ ಕಾರ್ಯ ಮಾಡುತ್ತಿಲ್ಲ |
| | 1 | ಕಟ್ಟಡ ನಿರ್ಮಾಣ ಕಾರ್ಯವನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆಯೇ? | –ಇಲ್ಲಾ– |
| | 2 | ನಿಯಮಗಳಂತೆ ಟೆಂಡರ್ ಕರೆದು ಸ್ಪರ್ಧಾತ್ಮಕ ದರಗಳನ್ನು ಆಧರಿಸಿ (ಕೊಟೇಷನ್) ಕ್ರಮ ಇಡಲಾಗಿದೆಯೆ? | ಅನ್ವಯಿಸುವುದಿಲ್ಲ |
| | 3 | ಗುತ್ತಿಗೆದಾರರೊಂದಿಗೆ ಸೂಕ್ತ ಒಪ್ಪಂದ ಮಾಡಿಕೊಳ್ಳಲಾಗಿದೆಯೇ?" ಸದರ ಒಪ್ಪಂದವು ನೋಂದಾಯಿಸಲ್ಪಟ್ಟಿದೆಯೇ? | ಅನ್ವಯಿಸುವುದಿಲ್ಲ |
| | 4 | ಒಪ್ಪಂದ / ಷರತ್ತುಗಳಂತೆ ಕಾರ್ಯ ಪೂರೈಸಲಾಗಿದೆಯೆ? | ಅನ್ವಯಿಸುವುದಿಲ್ಲ |

| | | | |
|---|---|---|---|
| | 5 | ತಜ್ಞ ಇಂಜಿನಿಯರರ ಸೇವೆ ಪಡೆದು ಕಟ್ಟಡ ನಿರ್ಮಾಣದ ಗುಣಮಟ್ಟವನ್ನುಪರಿಶೀಲಿಸಿಕೊಂಡು ದೃಢೀಕರಿಸಿಕೊಳ್ಳಲಾಗಿದೆಯೇ? | ಅನ್ವಯಿಸುವುದಿಲ್ಲ |

| | | | |
|---|---|---|---|
| | 6 | ಒಪ್ಪಂದಕ್ಕಿಂತ ಹೆಚ್ಚಿನ ವೆಚ್ಚವನ್ನು ಪಾವತಿಸ ಲಾಗಿದೆಯೇ? | ಅನ್ವಯಿಸುವುದಿಲ್ಲ |
| | 7 | ನಿಗದಿತ ಸಮಯದಲ್ಲಿ ಕಾರ್ಯ ಪೂರೈಸಿ ಮುಕ್ತಾಯ ಪತ್ರ ಪಡೆಯಲಾಗಿದೆಯೇ? | ಅನ್ವಯಿಸುವುದಿಲ್ಲ |
| | 8 | ಗುತ್ತಿಗೆದಾರರಿಗೆ ಕೊಟ್ಟ ಮುಂಗಡ ರಕಂನ್ನು ಕಟ್ಟಡಕ್ಕೆ ತಗುಲಿದ ವೆಚ್ಚದೊಂದಿಗೆ (ಅಳತೆ ಪುಸ್ತಕ, ರನ್ನಿಂಗ್, ಬಿಲ್ ಅಧರಿಸಿ) ಹೊಂದಾಣಿಕೆ ಮಾಡಿಕೊಳ್ಳ ಲಾಗಿದೆಯೇ? | ಅನ್ವಯಿಸುವುದಿಲ್ಲ |

| | | | |
|---|---|---|---|
| **37** | | **<u>ಬಹುಮಹಡಿ ಕಟ್ಟಡ (ಅಪಾರ್ಟ್‌ಮೆಂಟ್ಸ್) :</u>** | ಸಂಘವು ಬಹುಮಹಡಿ ಕಟ್ಟಡ ವನ್ನು ನಿರ್ಮಾಣ ಮಾಡುತ್ತಿಲ್ಲ |
| | 1 | ಸಂಘವು ಸದಸ್ಯರಿಗೆ ಬಹುಮಹಡಿಗಳ ಕಟ್ಟಡ (ಅಪಾರ್ಟ್‌ಮೆಂಟ್ಸ್) ನಿರ್ಮಾಣ ಕಾರ್ಯ ಕೈಗೊಂದಿದೆಯೇ? | ಅನ್ವಯಿಸುವುದಿಲ್ಲ |
| | 2 | ಕಾರ್ಯವು ಮೇಲ್ಕಾಣಿಸಿದ ಕಂಡಿಕೆ 26ರಲ್ಲಿ ನಿರ್ವಹಿಸಲಗಿದೆಯೇ? ಕಂಡಿಕೆ 27 ರಲ್ಲಿಯಂತೆ ನಿರ್ವಹಿಸಲಾಗಿದೆಯೇ? (ಕಂಡಿಕೆ 26 ಅಥವಾ 27 ರಲ್ಲಿ ಸೂಚಿಸಿರುವಂತೆ ಎಲ್ಲಾ ಉಪ ಕಂಡಿಕೆಗಳ ವಿವರ ನೀಡುವುದು) | ಅನ್ವಯಿಸುವುದಿಲ್ಲ |
| | 3 | ಅಪಾರ್ಟ್ ಮೆಂಟ್ ಮನೆಗಳನ್ನು ಸದಸ್ಯರಿಗೆ ಯಾವ ರೀತಿ ಹಸ್ತಾಂತರಿಸಲಾಗಿದೆ? ಹಸ್ತಾಂತರವು ನೋಂದಾಯಿಸಲ್ಪಟ್ಟಿದೆಯೇ? (ಲೀಜ್, ಮಾರಾಟ, ಅಥವಾ ಬಾಡಿಗೆ) | ಅನ್ವಯಿಸುವುದಿಲ್ಲ |
| | 4 | ಈ ಹಸ್ತಾಂತರಗಳ ಬಗ್ಗೆ ಸೂಕ್ತವಾದ ಒಪ್ಪಂದ ಮಾಡಿಕೊಳ್ಳಲಾಗಿದೆಯೇ? ಸದರಿ ಒಪ್ಪಂದ ಪತ್ರಗಳು ನೋಂದಾಯಿಸಲ್ಪಟ್ಟಿವೆಯೇ? | ಅನ್ವಯಿಸುವುದಿಲ್ಲ |
| | 5 | ಅಪಾರ್ಟ್‌ಮೆಂಟ್ ಗಳ ನಿರ್ವಹಣೆ, ರಕ್ಷಣೆ, ವಿಮೆ, ಭದ್ರತೆ, ಹಾಗೂ ಇತರೆ ಸಾಮೂಹಿಕ ಸೇವೆಗಳಿಗಾಗಿ ಸದಸ್ಯರಿಂದ ವಂತಿಗೆ/ ಶುಲ್ಕ ವಸೂಲಿ ಮಾಡಿಕೊಳ್ಳ ಲಾಗುತ್ತಿದೆಯೇ? ಸದರಿ ಒಪ್ಪಂದ ಪತ್ರಗಳು ನೋಂದಾಯಿಸಲ್ಪಟ್ಟಿವೇಯೇ? | ಅನ್ವಯಿಸುವುದಿಲ್ಲ |

**38 1) <u>ಸಂಘವು ಕೊಳ್ಳಲು ಬಯಸಿರುವ ಜಮೀನಿನ ಹಾಗೂ ಒಪ್ಪಂದಗಳ ಕುರಿತುಸಂಕ್ಷಿಪ್ತ ವಿವರ</u>**

ಸಂಘವು ಕೊಳ್ಳಲು ಬಯಸಿರುವ ಜಮೀನು ಹಾಗೂ ಜಮೀನು ಒಪ್ಪಂದಗಳು ಯಾವು ಇರುವುದಿಲ್ಲವೆಂದು ಲೆಕ್ಕ ಪರಿಶೋಧನಾ ವೇಳೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರುತಿಳಿಸಿರುತ್ತಾರೆ.

## (39) ಸಂಘದ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ/ವಿಶ್ಲೇಷಣೆ

**ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಕ್ಕು ಹೋಲಿಕೆ ಹಾಗೂ ಗಳಿಸಿದ ಲಾಭ/ನಷ್ಟದ ಬಗ್ಗೆವಿಮರ್ಷೆ**

| ಕ್ರ. ಸಂ | ವಿವರ | | | | ಪ್ರತಿಶತ ಪ್ರಮಾಣ | | | |
|---|---|---|---|---|---|---|---|---|
| | | ಪ್ರಸಕ್ತ ಸಾಲಿನ ಮೊತ್ತ | ಹಿಂದಿನ ಸಾಲಿನ ಮೊತ್ತ | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | ಹೆಚ್ಚು | ಕಡಿಮೆ |
| 1 | ಒಟ್ಟು ಮಾರಾಟ | ಅನ್ವಯಿಸುವುದಿಲ್ಲ | | – | – | – | – | – |
| | ವ್ಯಾಪಾರಿ ಲಾಭ | ಅನ್ವಯಿಸುವುದಿಲ್ಲ | | ಒಟ್ಟು ಮಾರಾಟ | – | – | – | – |
| | ವ್ಯಾಪಾರಿ ನಷ್ಟ | ಅನ್ವಯಿಸುವುದಿಲ್ಲ | | | – | – | – | – |
| 2 | ಒಟ್ಟು ಗುಂತಾವಣಿಗಳು | 9388344 | 14388344 | – | – | – | – | 5000000 |
| | ಗುಂತಾವಣಿಗಳ ಮೇಲೆ ಸ್ವಿಕರಿಸಿದ ಬಡ್ಡಿ | 775276 | 1531130 | ಒಟ್ಟು ಗುಂತಾವಣಿಗಳು | 8.26 | 10.64 | – | 2.38 |
| 3 | ಒಟ್ಟ ನೀಡಿದ ಸಾಲ | ಸಂಘದಿಂದ ಸಾಲ ನೀಡಿಲ್ಲ | | – | – | – | – | – |
| | ಸಾಲಗಳ ಮೇಲೆ ಸ್ವಿಕರಿಸಿದ ಬಡ್ಡಿ | ಅನ್ವಯಿಸುವುದಿಲ್ಲ | | ಒಟ್ಟು ನೀಡಿದ ಸಾಲ | – | – | – | – |
| 4 | ದುಡಿಯುವ ಬಂಡವಾಳ | **3176885967** | **3179411708** | – | – | – | – | 2525741 |
| | ಇತರೆ ಆದಾಯ | 147023 | 227740 | ದುಡಿಯುವ ಬಂಡವಾಳ | 0.004 | 0.007 | – | – |
| 5 | ಒಟ್ಟು ಪಡೆದ ಸಾಲ | ಅನ್ವಯಿಸುವುದಿಲ್ಲ | | | – | – | – | – |
| | ಸಾಲುಗಳಮೇಲೆ ಪಾವತಿಸಿದ ಬಡ್ಡಿ | ಅನ್ವಯಿಸುವುದಿಲ್ಲ | | ಒಟ್ಟು ಪಡೆದ ಸಾಲ | – | – | – | – |
| 6 | ಒಟ್ಟು ಠೇವಣಿ | | | – | – | – | – | – |

| | | | | | | | | |
|---|---|---|---|---|---|---|---|---|
| | ತೇವುಗಳ ಪಾವತಿಸಿದ ಬಡ್ಡಿ | ಅನ್ವಯಿಸುವುದಿಲ್ಲ | | ಒಟ್ಟು ತೇವಣಿ | – | – | – | – |
| | ದುಡಿಯುವ ಬಂಡವಾಳ | **3176885967** | **3179411708** | – | – | – | – | 2620741 |
| 7 | ಸಿಬ್ಬಂದಿ ವೆಚ್ಚ | 647892 | 603000 | ದುಡಿಯುವ ಬಂಡವಾಳ | 0.020 | 0.018 | 0.002 | – |
| 8 | ಆಡಳಿತ ವೆಚ್ಚ | 970319 | 2027588 | | 0.030 | 0.063 | – | 0.033 |
| 9 | ಇತರೆ ವೆಚ್ಚ | 75765 | 98820 | | 0.002 | 0.003 | – | 0.001 |
| 10 | ಸವಕಳಿಗಳು | 132159 | 182760 | | 0.004 | 0.005 | – | 0.001 |
| 11 | ಅವಕಾಶಗಳು | 741742 | 691578 | | 0.023 | 0.021 | 0.002 | – |
| 12 | ನಿವ್ವಳ ಲಾಭ | ಇಲ್ಲಾ | ಇಲ್ಲಾ | | – | – | – | – |
| | ನಿವ್ವಳ ನಷ್ಟ | 1651474 | 1243671 | | 0.051 | 0.039 | 0.012 | – |

| | | |
|---|---|---|
| | **ಈ ಮೇಲಿನ ತುಲನಾತ್ಮಕ ಅಂಕಿ ಸಂಖ್ಯೆಗಳ ಬಗ್ಗೆ ವಿಮರ್ಷೆ :** | |
| | **ಲಾಭ–ನಷ್ಟದ ತ:ಖ್ತೆ**<br>ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ:– | ಸಂಘವು ವರದಿ ಸಾಲಾಂತ್ಯಕ್ಕೆ ನಿವ್ವಳ ಲಾಭವನ್ನು ಗಳಿಸಿರುವುದಿಲ್ಲ. |
| **1** | ಸಂಘವು ಪ್ರಸಕ್ತ 2020–2021 ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣಿಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲ ಅವಕಾಸಗಳನ್ನು ಮಾಡಿರುವುದರ ಬಗ್ಗೆ ವಿಮರ್ಷೆ. | 2020–21ನೇ ಸಾಲಿನಲ್ಲಿ ಸಂಘವು ಲಾಭ ಗಳಿಸಿಲ್ಲ. ಎಲ್ಲಾ ಅವಕಾಶಗಳನ್ನು ಮಾಡಲಾಗಿದೆ. |
| **2** | ವಷಾಂತ್ಯಕ್ಕೆ ಬರತಕ್ಕ ಇರುವ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ನಿಯಮ 22(ಎ)ರನ್ವಯ ನಿಬಂದಕರ ಮಂಜೂರಿ ಪಡೆಯಲಾಗಿದೆಯೇ ? | ಅಂತಹ ಪ್ರಕರಣಗಳಿಲ್ಲ. |
| **3** | ಸಂಘವು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದೆಗೆ ಹೆಚ್ಚು/ಕಡಿಮೆ ಇರುವುದರ ಬಗ್ಗೆ ವಿಮರ್ಷೆ | ಸಂಘವು 2019–20 ಮತ್ತು 2020–21ನೇ ಸಾಲಿನಲ್ಲಿ ನಷ್ಟದಲ್ಲಿದೆ |

| | | |
|---|---|---|
| 4 | ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ: | ಅನ್ವಯಿಸುವುದಿಲ್ಲ. |
| 5 | ನಷ್ಟವಾಗಿದ್ದಲ್ಲಿ ಕಾರಣಗಳು :<br><br>ವರದಿ ಸಾಲಿನ ನಷ್ಟಕ್ಕೆ ಪ್ರಮುಖ ಕಾರಣವೇನೆಂದರೇ, ಸಂಘವು ನೌಕರರ ಗೃಹ ನಿರ್ಮಾಣ ಸಂಘವಾಗಿದ್ದು, ಮಾಡಬೇಕಾದ ಆಡಳಿತಾತ್ಮಕ ಖರ್ಚುಗಳನ್ನು; ಮಾಡಲೇಬೇಕಾಗಿರುತ್ತದೆ. ಲಾಭ ಪೂರ್ವದಲ್ಲಿ ಕಲ್ಪಿಸಬೇಕಾದ ಅವಕಾಶಗಳು; ಸವಕಳಿ; ಇತ್ಯಾದಿ, ಖರ್ಚುಗಳನ್ನು ಮಾಡಲೇಬೇಕಾಗಿರುತ್ತದೆ. 2020–21ನೇ ಸಾಲಿನ–ಲಾಭ ನಷ್ಟದ ತಃಖ್ತೆಯಲ್ಲಿ ತೋರಿಸಿರುವಂತೆ ಆಡಳಿತಾತ್ಮಕ ಖರ್ಚು ಹಾಗೂ 2020–21ನೇ ಸಾಲಿಗೆ ಮಾಡಿರುವ ಪ್ರಾವಿಜ಼ನ್‌ಗಳು; ಅವಕಾಶಗಳು ಸಂಘವು ಗಳಿಸಿರುವ ಲಾಭಕ್ಕಿಂತ ಹೆಚ್ಚಿಗೆ ಇರುತ್ತದೆ, ಖರ್ಚಾಗಿರುತ್ತದೆ. ಆದುದರಿಂದ ಸಂಘವು 2020–21ನೇ ಸಾಲಿನಲ್ಲಿ ರೂ. 16,51,474–00 ನಷ್ಟವನ್ನು ಅನುಭವಿಸಿರುತ್ತದೆ. 2016–17ನೇ ಸಾಲಿನಿಂದ 2020–21ನೇ ಸಾಲಿನ ವರೆವಿಗೂ ಸಂಘವು ರೂ. 48,45,106–82 ಗಳ ನಿವ್ವಳ ನಷ್ಟವನ್ನು ಅನುಭವಿಸಿರುತ್ತದೆ. ಆಡಳಿತ ಮಂಡಳಿ ಸದಸ್ಯರು ಮತ್ತು ಕಾರ್ಯದರ್ಶಿಯವರು ಸಂಘದ ಉದ್ದೇಶಗಳ ರೀತ್ಯಾ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಿ, ನಷ್ಟವನ್ನು ಹೋಗಲಾಡಿಸಲು ಸೂಕ್ತ ಕ್ರಮವಿಡುವುದು. | |

**(40) ಇತರೆ ಶರಾ ಹಾಗೂ ಬಾಬ್ತುಗಳು :**

ವರದಿ ಸಾಲಿನ ಲೆಕ್ಕಪರಿಶೋಧನಾ ವರಧಿಯ ಆಯಾಯ ಕಂಡಿಕೆಯಡಿಯಲ್ಲಿ; ಆಯಾಯ ಲೆಕ್ಕಗಳಿಗೆ ಸಂಬಂಧಿಸಿದಂತೆ ವಿವರಿಸಲಾಗಿದೆ.

**(41) <u>ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು:</u>**

1) ಉದ್ದೇಶಿತ ಬಡಾವಣೆಗಳನ್ನು ನಿಗಧಿತ ಕಾಲಮಿತಿಯೊಳಗೆ ಪೂರೈಸಿ, ಅರ್ಹ ಸದಸ್ಯರಿಗೆ / ಸಹ ಸದಸ್ಯರಿಗೆ ನಿವೇಶನ ನೀಡಿ, ನೋಂದಣಿ ಮಾಡಿಕೊಡಲು; ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು; ಕಾರ್ಯದರ್ಶಿಯವರು ಅಗತ್ಯ ಕ್ರಮವಿಡುವುದು.

2) ಪ್ರತ್ಯೇಕವಾಗಿ ಠೇವಣಿಸಲು ಬಾಕಿ ಇರುವ ಇತರೆ ನಿಧಿಗಳನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಅಥವಾ ಕ.ರಾ. ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಪೂರ್ತಿಯಾಗಿ ಪ್ರತ್ಯೇಕವಾಗಿ ಠೇವಣಿಸುವುದು ಅತ್ಯಾಗತ್ಯ.

3) ಸಂಘದಿಂದ ನೀಡುತ್ತಿರುವ ಬ್ಯಾಂಕಿನ ಚೆಕ್ಕುಗಳಲ್ಲಿ ಸಂಘದ ಕಾರ್ಯದರ್ಶಿಯವರು ಸಹಿ ಹಾಕುತ್ತಿಲ್ಲ. ಸಂಘದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಅಥವಾ ನಿರ್ದೇಶಕರಲ್ಲಿ ಒಬ್ಬರಾದ ಶ್ರೀ ನಾಗೀಂದ್ರ ರವರು ಚೆಕ್‌ಗಳಲ್ಲಿ ಸಹಿ ಹಾಕಿ ಬ್ಯಾಂಕಿನಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ವೇತನ ಕಾರ್ಯದರ್ಶಿಯು ಸಂಘದಿಂದ ನೀಡುವ ಚೆಕ್ಕುಗಳಲ್ಲಿ ಸಹಿ ಹಾಕುವ ವ್ಯವಸ್ಥೆ ಮಾಡಿಕೊಳ್ಳುವುದು.

4) ಕೆಲವೊಂದು ಸಮಯದಲ್ಲಿ ಷೇರು ಲೆಡ್ಜರ್‌ನಲ್ಲಿ ಮಾಹಿತಿಗಳನ್ನು ಭರ್ತಿ ಮಾಡದೇ ಖಾಲಿ ಬಿಟ್ಟಿರುವುದನ್ನು ಭರ್ತಿ ಮಾಡಲು ಕ್ರಮವಿಡುವುದು. ಷೇರು ಸರ್ಟಿಫೀಕೇಟ್‌ನ್ನು ಮತ್ತು ಗುರುತಿನ ಚೀಟಿಯನ್ನು ನೀಡದೇ ಇರುವವರಿಗೆ ಷೇರು ಸರ್ಟಿಫೀಕೇಟ್ ಮತ್ತು ಗುರುತಿನ ಚೀಟಿ ನೀಡಲು ಕ್ರಮವಿಡುವುದು.

5) ಕೆಲವು ಸಂದರ್ಭಗಳಲ್ಲಿ ನಿವೇಶನ ಠೇವಣಿಯನ್ನು ನಗದಾಗಿ ಪಡೆದಿರುತ್ತಾರೆ, ಮತ್ತು ಕೆಲವು ಸಂದರ್ಭಗಳಲ್ಲಿ

ಕೆಲವರಿಗೆ ಸಂಘದಿಂದ ಇಪ್ಪತ್ತು ಸಾವಿರ ರೂ ಮೇಲ್ಪಟ್ಟು, ನಗದಾಗಿ ಪಾವತಿಸಿರುತ್ತಾರೆ. ಈ ರೀತಿ ಮಾಡದೇ ಇಪ್ಪತ್ತು ಸಾವಿರ ರೂ ಮೇಲ್ಪಟ್ಟು ಸಂಘದಿಂದ ಪಾವತಿಸುವಾಗ ಚೆಕ್ ಮುಖಾಂತರ ಅಥವಾ ಆರ್.ಟಿ.ಜಿ.ಎಸ್ ಮುಖಾಂತರ ಪಾವತಿಸಲು ಕ್ರಮವಿಡುವುದು.

6) ದಿನಾಂಕ 31–3–2021ರ ಬ್ಯಾಲನ್‌ಷೀಟಿನ ಆಸ್ತಿಯ ಕ್ರಮ ಸಂಖ್ಯೆ 5 (1) ರಲ್ಲಿ ಅಮೋಸ್ ಪ್ರಾಪರ್ಟೀಸ್ ರವರಿಗೆ ಮುಂಗಡ ಎಂದು ಇರುತ್ತದೆ. ಅಮೋಸ್ ಪ್ರಾಪರ್ಟೀಸ್ ನವರೊಂದಿಗಿನ ಎಂ.ಓ.ಯು ಅನ್ನು ರದ್ದು ಮಾಡಿಕೊಂಡಿರುವುದರಿಂದ ಬ್ಯಾಲನ್‌ಷೀಟಿನಲ್ಲಿ ಸೂಕ್ತ ತಿದ್ದುಪಡಿ ಮಾಡಿಕೊಳ್ಳುವುದು.

7) ಬ್ಯಾಂಕುಗಳ ಉಳಿತಾಯ ಖಾತೆಗಳಲ್ಲಿ ಹೆಚ್ಚಿನ ಪ್ರಮಾಣದ ಶಿಲ್ಕು ಇಟ್ಟುಕೊಳ್ಳುವ ಬದಲು, ಅವಶ್ಯಕವಾದ ಮೊಬಲಗನ್ನು ಮಾತ್ರ ಉಳಿತಾಯ ಖಾತೆಗಳಲ್ಲಿ ಇಟ್ಟುಕೊಂಡು ಉಳಿದ ಮೊಬಲಗನ್ನು ಖಾಯಂ ಠೇವಣಿಯಲ್ಲಿಡುವುದು ಉತ್ತಮ.

8) ಹಿಂದಿನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದು. ಹಾಗೂ ಸಲಹೆಯನ್ನು ಪಾಲಿಸುವುದು.

9) ಸದಸ್ಯರ ಮತ್ತು ಸಹ ಸದಸ್ಯರ ಸದಸ್ಯತ್ವವನ್ನು ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಮಾಡಿದ ನಂತರ, ಸಂಬಂಧಪಟ್ಟ ಸದಸ್ಯತ್ವ / ಸಹ ಸದಸ್ಯತ್ವ ಅರ್ಜಿಗಳಲ್ಲಿ ಅನುಮೋದನೆ ಯಾದ ಆಡಳಿತ ಮಂಡಳಿ ಸಭೆಯ ದಿನಾಂಕ ಮತ್ತು ಠರಾವಿನ ಸಂಖ್ಯೆ ಬರೆದು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಕೆಲವು ಸಂದರ್ಭಗಳಲ್ಲಿ ಸಹಿ ಮಾಡಿಲ್ಲ, ಬರೆದು ಸಹಿ ಮಾಡುವುದು ಅತ್ಯಾಗತ್ಯ.

**(42) ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು:**

| ಕ್ರ. ಸ. | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ 2020–21ನೇ ಸಾಲು | ನ್ಯೂನತೆಯ ಸಂಕ್ಷಿಪ್ತ ವಿವರ |
|---|---|---|---|
| 1 | 7 (2) | 4 | ಸಂಘದಲ್ಲಿ ಆಂತರಿಕ ಲೆಕ್ಕಪರಿಶೋಧನೆ ಇರುವುದಿಲ್ಲ. ಸೂಕ್ತ ಕ್ರಮ ಅಗತ್ಯ. |
| 2 | 11 (3) | 5 ರಿಂದ 7 | ಹಿಂದಿನ ಸಾಲಿನ ನ್ಯೂನತೆಗಳನ್ನು ಸರಿಪಡಿಸಲು ಕ್ರಮವಿಡುವುದು. |
| 3 | 13 (4) | 9 | ಷೇರು ಲೆಡ್ಜರ್ ನಲ್ಲಿರುವ ಎಲ್ಲಾ ಕಾಲಂ ಗಳನ್ನು ಭರ್ತಿ ಮಾಡುವುದು. |
| 4 | 15 (1)<br>15 (2) | 11<br>12 ಮತ್ತು 13 | ಇತರೇ ನಿಧಿಯನ್ನು ನಿಯಮಾನುಸಾರ ಸಂಘದ ವ್ಯವಹಾರದಿಂದ ಪೂರ್ತಿಯಾಗಿ ಬೇರ್ಪಡಿಸಿ ಪ್ರತ್ಯೇಕವಾಗಿ ಠೇವಣಿಸಲು ಕ್ರಮವಿಡುವುದು. |
| 5 | 19 | 18 ಮತ್ತು 20 | ಇತರೇ ಜವಾಬ್ದಾರಿಗಳಡಿಯಲ್ಲಿ ತಿಳಿಸಿರುವ ಅಂಶಗಳ ಬಗ್ಗೆ ಕ್ರಮವಿಡುವುದು. ಮತ್ತು ಅಮಾನತ್ತು ಬಾಬ್ತು ರೂ. 525000–00 ಗಳ ಬಗ್ಗೆ ಕ್ರಮವಿಡುವುದು. |
| 6 | 21 | 21 ಮತ್ತು 22 | ನಗದು ಶಿಲ್ಕಿಗೆ ವಿಮೆ ಮಾಡಿಸಿರುವುದಿಲ್ಲ. ವಿಮೆ ಮಾಡಿಸಲು ಕ್ರಮವಿಡುವುದು. |

| | | | |
|---|---|---|---|
| 7 | 26 ಎ (2)(4) ಮತ್ತು 26 ಬಿ (4) | 27 ಮತ್ತು 28 | ಸ್ಥಿರಾಸ್ತಿರಿಜಿಸ್ಟರ್ ಬರೆದಿಟ್ಟಿಲ್ಲ, ಬರೆದಿಡುವುದು.<br>ಸ್ಥಿರಾಸ್ತಿ ಮತ್ತು ಇತರೇ ಚರಾಸ್ಥಿಗಳ ಬಗ್ಗೆ ವಿಮೆ ಮಾಡಿಸಿಲ್ಲ; ವಿಮೆ ಮಾಡಿಸಲು ಕ್ರಮವಿಡುವುದು. |
| 8 | 34 (12) | 46 ರಿಂದ 96 | ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಬಡಾವಣೆ ವೆಚ್ಚಗಳ ಲೆಕ್ಕಗಳ ಖಾತೆ ಅಡಿ ಮತ್ತು ಬಡಾವಣೆಗಳ ಅಡಿಯಲ್ಲಿ ತಿಳಿಸಿರುವ ಅಂಶಗಳು, ಸಲಹೆಗಳು ಮತ್ತು ನ್ಯೂನತೆಗಳು ವರದಿ ಸಾಲಿಗೂ ಮುಂದುವರಿಯುತ್ತದೆ. ಇದರ ಬಗ್ಗೆ ಮತ್ತು ವರದಿ ಸಾಲಿನಲ್ಲಿ ಬಡಾವಣೆ ವೆಚ್ಚಗಳ ಲೆಕ್ಕದಡಿ ಮತ್ತು ಬಡಾವಣೆಗಳ ಅಡಿಯಲ್ಲಿ ತಿಳಿಸಿರುವ ಅಂಶಗಳು, ಸಲಹೆಗಳು ಮತ್ತು ನ್ಯೂನತೆಗಳ ಬಗ್ಗೆ ಕ್ರಮವಿಡುವುದು. |
| 9 | 32 (2) (3) ಮತ್ತು (5) | 35 ಮತ್ತು 36 | 'ಸಿಬ್ಬಂದಿ' ಎಂಬ ಶಿರೋನಾಮೆಯಡಿಯಲ್ಲಿ ತಿಳಿಸಿರುವ ನ್ಯೂನತೆಗಳ ಬಗ್ಗೆ ಗಮನ ಹರಿಸಿ ಕ್ರಮವಿಡುವುದು. |
| 10 | 2019–20ನೇ ಸಾಲಿನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ರವರಿಗೆ ಪ್ರೋಫೆನಲ್ ಫೀ, ಜಿ.ಎಸ್.ಟಿ ಫೈಲಿಂಗ್ ಮತ್ತು ಟಿ.ಡಿ.ಎಸ್ ಫೈಲಿಂಗ್, ಇತರೆಗೆಂದು ರೂ. 118930–00 ಗಳನ್ನು ಗಣೇಶ್ ಅಂಡ್ ಕಂಪೆನಿ ರವರಿಗೆ ನೀಡಿದೆ ಟಿ.ಡಿ.ಎಸ್ ಹಿಡಿದಿಲ್ಲ ಮತ್ತು ಶ್ರೀ ಅಶೋಕ್ ಹಂದೆ ವಕೀಲರಿಗೆ ಕೇಸ್ ಬಗ್ಗೆ ರೂ. 192950–00 (ರೂ. 152000–00 + ರೂ. 40950–00 ಗಳನ್ನು ನೀಡಿದೆ ಇವರಿಂದ ರೂ. 14000–00 ಟಿ.ಡಿ.ಎಸ್ ಹಿಡಿದು ಆದಾಯ ತೆರಿಗೆ ಇಲಾಖೆಗೆ ಪಾವತಿಸಿದೆ. ಉಳಿಕೆ ಟಿ.ಡಿ.ಎಸ್ ಹಿಡಿದಿಲ್ಲ ಹಿಡಿಯುವುದು. ಹಾಗೂ ಶ್ರೀ ಸುಮನ್ ಲಾಯರ್ಸ್ ರವರಿಗೆ ಸಹಕಾರ ಸಂಘಗಳ ಕಾಯಿದೆ 65ನೇ ಪರಿವೀಕ್ಷಣೆ ಕೇಸ್ ಬಗ್ಗೆ ರೂ. 223000–00 ಗಳನ್ನು ನೀಡಿದೆ ಆದರೆ ಟಿ.ಡಿ.ಎಸ್ ಹಿಡಿದಿಲ್ಲ ಮತ್ತು ಶ್ರೀ ಎಂ.ಎಸ್ ರುದ್ರಯ್ಯ ಲಾಯರ್‌ಗೆ ಕೇಸ್ ಬಗ್ಗೆ ಮತ್ತು ಪತ್ರದ ಬಗ್ಗೆ ರೂ. 45000–00 (ರೂ. 20000–00+ ರೂ. 25000–00) ಗಳನ್ನು ಸಂಘದಿಂದ ನೀಡಿದೆ. ಟಿ.ಡಿ.ಎಸ್ ಹಿಡಿದಿಲ್ಲ. 2020–21ನೇ ಸಾಲಿನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ರವರಿಗೆ ಪ್ರೋಫೆಷನಲ್ ಫೀ, ಟಿ.ಡಿ.ಎಸ್ ರಿಟರ್ನ್ ಫೈಲಿಂಗ್, ಪಾನ್ ಫೈಲಿಂಗ್, ಟಿ.ಡಿ.ಎಸ್ ಅಪೀಲು ಮತ್ತು ಜಿ.ಎಸ್.ಟಿ ಫೈಲಿಂಗ್ ಮತ್ತು ಇತರೆ ಬಾಬ್ತು ರೂ. 78400–00 ಗಳನ್ನು ಗಣೇಶ್ & ಕಂಪನಿ ಯವರಿಗೆ ನೀಡಿದ್ದು, ಟಿ.ಡಿ.ಎಸ್ ಹಿಡಿದಿಲ್ಲ, ಟಿ.ಡಿ.ಎಸ್ ಅನ್ನು ಸದರಿಯವರುಗಳಿಂದ ಪಡೆದು ತಕ್ಷಣವೇ ಆದಾಯ ತೆರಿಗೆ ಇಲಾಖೆಗೆ ಪಾವತಿಸುವುದು. | | |
| 11 | ಸಂಘದ ಬಡಾವಣೆಗಳನ್ನು ಕೆ. ರೇರಾದಲ್ಲಿ ನೋಂದಣಿ ಮಾಡದೇ ಇರುವ ಬಗ್ಗೆ ಲೆಕ್ಕಪರಿಶೋಧನಾ ವೇಳೆಯಲ್ಲಿ ವಿಚಾರಿಸಲಾಗಿ, ಸಂಘವು WP ಸಂಖ್ಯೆ: 47317/2017 ರ ಮುಖಾಂತರ ಗೌರವ ಉಚ್ಛ ನ್ಯಾಯಾಲಯದಲ್ಲಿ ಕೆ. ರೇರಾ ಕಾಯಿದೆ ಸಂಘಕ್ಕೆ ಅನ್ವಯವಾಗುವುದಿಲ್ಲವೆಂದು, ರಿಟ್ ಪಿಟೀಷನ್ ಹಾಕಿದೆ. ಇದು ಇನ್ನು ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ತೀರ್ಮಾನವಾಗಿರುವುದಿಲ್ಲ. ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟೀಷನ್ ಸಂಖ್ಯೆ: 47317/2017 ತೀರ್ಮಾನವಾಗುವ ವರೆವಿಗೂ ಗೌರವಾನ್ವಿತ ಕರ್ನಾಟಕ ರಿಯಲ್ ಎಸ್ಟೇಟ್ ಪ್ರಾಧಿಕಾರವನ್ನು ಸಂಘವು Our Society Prayes this Hon'ble Authority to waive off the applicability of the RERA act and its rules till the deisposal of the said writ which is pending before the Hon'ble High Court of Karnataka. ಎಂದು ಕರ್ನಾಟಕ ರೇರಾ ಪ್ರಾಧಿಕಾರವನ್ನು ಸಂಘವು ಪ್ರಾರ್ಥಿಸಿಕೊಳ್ಳಲಾಗಿದೆ ಎಂದು | | |

| | |
|---|---|
| | ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿಸಿರುತ್ತಾರೆ.<br><br>ಮೇಲೆ ತಿಳಿಸಿರುವ ಕ್ರಮ ಸಂಖ್ಯೆ 41 ರಲ್ಲಿ ತಿಳಿಸಿರುವ ಸಲಹೆ ಹಾಗೂ ಸೂಚನೆಗಳ ಬಗ್ಗೆ ಮತ್ತು ಕ್ರಮ ಸಂಖ್ಯೆ 42 ರಲ್ಲಿ ತಿಳಿಸಿರುವ ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳ ಬಗ್ಗೆ ಮತ್ತು ವರದಿಯಲ್ಲಿ ತಿಳಿಸಿರುವ ನ್ಯೂನತೆಗಳ ಬಗ್ಗೆ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಮತ್ತು ಕಾರ್ಯದರ್ಶಿಯವರು ಸೂಕ್ತ ಕ್ರಮ ವಿಡುವುದು. |

**(43)**

**ಲೆಕ್ಕ ಪರಿಶೋಧಕರ ದೃಢಿಕರಣ ಪತ್ರ**
**(ಕರ್ನಾಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 63(16) ರಂತೆ)**

| | |
|---|---|
| 1) | ನನ್ನ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನನಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕ ಪತ್ರಗಳು, ಆರ್ಥಿಕ ತಖ್ತೆಗಳು, ಅನುಸೂಚಿಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಅಧಿನಿಯಮದಲ್ಲಿ ಅಗತ್ಯಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತವೆ. |
| 2) | ದಿನಾಂಕ 31.03.2021 ರಂತ್ಯಕ್ಕೆ ಇದ್ದ ಅಢಾವೆ ಪತ್ರಿಕೆ ಹಾಗೂ ಸನ್ 2020–21 ನೇ ಸಾಲಿನ ಲಾಭ; ಹಾನಿ ಪತ್ರಿಕೆಯು ಸಂಘದ ನಿಜವಾದ ಹಾಗೂ ನ್ಯಾಯಸಮ್ಮತ್ತವಾದ ಆರ್ಥಿಕ ಸ್ಥಿತಿ ಮತ್ತು ಲಾಭ; ಹಾನಿ ಪ್ರತಿಭಿಂಬಿಸುತ್ತದೆ ಅಂತ ಅಭಿಪ್ರಾಯ ಪಡುತ್ತೇನೆ. |
| 3) | ನನ್ನ ಜ್ಞಾನ ಹಾಗೂ ನಂಬಿಗೆಯ ಪ್ರಕಾರ ಲೆಕ್ಕ ಪರಿಶೋದನೆಗೆ ಅವಶ್ಯವಾದ ಮಾಹಿತಿ ಹಾಗೂ ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇನೆ. |
| 4) | ಸಂಘದ ಲೆಕ್ಕ ಪರಿಶೋದನಾ ಕಾಲಕ್ಕೆ ಕಂಡುಬಂದಂತೆ ಸಂಘದಲ್ಲಿ ಸರಿಯಾದ ಲೆಕ್ಕ ಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ. |
| 5) | ವರದಿಗೆ ಲಗತ್ತಿಸಿದ ಅಢಾವೆ ಪತ್ರಿಕೆ ಹಾಗೂ ಇತರೆ ಆರ್ಥಿಕ ತ:ಖ್ತೆಗಳು ಸಂಘದಲ್ಲಿ ನಿರ್ವಹಿಸಿದ ಲೆಕ್ಕ ಪತ್ರ ಪುಸ್ತಕಗಳಿಗೆ ತಾಳೆ ಇರುತ್ತವೆ. |

| **(44) ಕಡ್ಡಾಯ ಲಗತ್ತುಗಳು :** | |
|---|---|
| 1. ಜಮಾ ಖರ್ಚು ತ:ಖ್ತೆ | ಲಗತ್ತಿಸಿದೆ. |
| 2. ವ್ಯಾಪಾರ ತ:ಖ್ತೆ | ಸಂಘಕ್ಕೆ ಅನ್ವಯಿಸುವುದಿಲ್ಲ. |
| 3. ಲಾಭ–ಹಾನಿ ತ:ಖ್ತೆ | ಲಗತ್ತಿಸಿದೆ. |
| 4. ಆಸ್ತಿ–ಜವಾಬ್ದಾರಿ ತ:ಖ್ತೆ | ಲಗತ್ತಿಸಿದೆ. |
| 5. ಕುಳುವಾರು ಪಟ್ಟಿಗಳು, ದೃಢೀಕರಣಗಳು, ಬ್ಯಾಂಕ್ ಸಮನ್ವಯ ತ:ಖ್ತೆ | 2020–21ನೇ ಸಾಲಿನ ಆಡಿಟ್ ವರದಿಯಲ್ಲಿ ತಿಳಿಸಿರುವಂತೆ, ಕುಳುವಾರು ಪಟ್ಟಿಗಳ ಸಂಕ್ಷಿಪ್ತ ಪಟ್ಟಿಗಳನ್ನು, ಕುಳುವಾರು ಪಟ್ಟಿಗಳನ್ನು ದೃಢೀಕರಣಗಳನ್ನು ಬ್ಯಾಂಕ್ ಸಮನ್ವಯ ತಃಖ್ತೆಯನ್ನು ಮತ್ತು ಇನ್ನಿತರ ಝೆರಾಕ್ಸ್ ಪ್ರತಿಯ ದಾಖಲಾತಿಗಳನ್ನು ಲಗತ್ತಿಸಿದೆ. |
| 6. ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತ:ಖ್ತೆಯ ಛಾಯಾ ಪ್ರತಿಯನ್ನು ಲೆಕ್ಕ ಪರಿಶೋಧಕರು ದೃಢಿಕರಿಸಿ ಕಡ್ಡಾಯವಾಗಿ ವರದಿಗೆ ಲಗತ್ತಿಸತಕ್ಕದ್ದು. | ಲಗತ್ತಿಸಿದೆ. |

ಸಹಿ/–

ದಿನಾಂಕ: 29–07–2021
ಸ್ಥಳ: ಬೆಂಗಳೂರು

**(ಸಿ.ಎ. ವರದರಾಜು)**
ವರದರಾಜು & ಅಸೋಸಿಯೇಟ್ಸ್
ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು–560003
ಎಂಪಾನಲ್‌ಮೆಂಟ್ ನಂ. ಸಿ. 04/03/2013.

**ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು**
**ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು**
**ಇದರ ಸನ್ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರ್ಗೀಕರಣ ತ:ಖ್ತೆ**
**(ಮಾನ್ಯ ನಿರ್ದೇಶಕರು ಸಹಕಾರಿ ಸಂಘಗಳ ಲೆಕ್ಕ ಪರಿಶೋಧನೆ ಕನಾಟಕ ರಾಜ್ಯ ಬೆಂಗಳೂರು ಇವರ ಲೆಕ್ಕಪರಿಶೋಧನಾ** ಮಾರ್ಗಸೂಚಿ
(Audit Instruction) ಸಂಖ್ಯೆ ಸಿಎಡಿ/ಎಫ್ಆರ್–1/ಎ.1.6/81–82 ದಿನಾಂಕ: 16–09–1982–6(4)ರನ್ವಯ)

| | | |
|---|---|---|
| 1 | ಸಂಘವು ನಿಬಂಧಕರು ಸಹಕಾರ ಸಂಘಗಳು ಬೆಂಗಳೂರು ಇವರು ನಿಗಧಿ ಪಡಿಸಿದ ನಮೂನೆಯಲ್ಲಿ ಲೆಕ್ಕ ಪತ್ರಗಳನ್ನು ಬರೆದಿಟ್ಟಿದೆಯೇ? (ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟು) | ಹೌದು |
| 2 | ಸಂಘವು ಲೆಕ್ಕ ಪತ್ರಗಳನ್ನು ತಪ್ಪುಗಳಿಲ್ಲದೇ ಪೂರ್ತಿ ಬರೆದಿಟ್ಟಿದೆಯೇ? ಮತ್ತು ಸಾಂಪತ್ತಿಕ ತಃಖ್ತೆಗಳನ್ನು ಸರಿಯಾಗಿ ಹಾಜರಪಡಿಸಲಾಗಿದೆಯೇ? | ಹೌದು |
| 3 | ಸಂಘದ ಲೆಕ್ಕ ಪತ್ರಗಳು ಬಹಳಷ್ಟು ದೋಷಗಳಿಂದ ಮುಕ್ತವಾಗಿದೆಯೇ? [ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟು] | ಹೌದು |
| 4 | ಸಂಘದ ಸದಸ್ಯರು ಸರಿಯಾಗಿ ಸಾಲ ಮರುಪಾವತಿ ಮಾಡುತ್ತಿದ್ದಾರೆಯೇ? | ಸಂಘದಿಂದ ಸಾಲ ನೀಡಿಲ್ಲ |
| 5 | ಆಡಳಿತಾತ್ಮಕ ವೆಚ್ಚಗಳು ಯೋಗ್ಯವಾಗಿದೆಯೇ? | ಹೌದು |
| 6 | ಪ್ರಸಕ್ತ ವರ್ಷದಲ್ಲಿ ಸಂಘವು ಲಾಭ ಹೊಂದಿದೆಯೇ? | ಇಲ್ಲ |
| 7 | ಸಂಘದ ಸದಸ್ಯತ್ವ ಹಾಗೂ ವ್ಯವಹಾರಗಳು ಉಪನಿಯಮಾವಳಿ ಪ್ರಕಾರ ನಡೆದಿದೆಯೇ? (ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟು) | ಹೌದು |
| 8 | ಸಂಘದ ಆಡಳಿತ ಮಂಡಳಿಯವರು ಕಾಯ್ದೆ ಉಪನಿಯಮ ಹಾಗೂ ಉಪನಿಯಮಾವಳಿಗಳನ್ನು ಅನುಸರಿಸುತ್ತಿರುವರೋ? (ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಿರುವುದಕ್ಕೆ ಒಳಪಟ್ಟು) | ಹೌದು |
| 9 | ಸಂಘದ ಆಸ್ತಿಗಳು ಜವಾಬ್ದಾರಿಗಳಿಗಿಂತ ಹೆಚ್ಚಿಗೆ ಆಗಿದೆಯೇ? | ಹೌದು |
| 10 | ಸಂಘದ ಕಾರ್ಯವು ಸ್ಥಗಿತಾವಸ್ಥೆಯಿಂದ ಹೊರತು ಇರುವುದೋ? | ಹೌದು |

ಈ ಮೇಲಿನ ಪ್ರಶ್ನಾವಳಿಗಳ ಉತ್ತರ ಅವಲೋಕಿಸಿಲಾಗಿ, ಪ್ರಶ್ನಾವಳಿ 10 ರಲ್ಲಿ 8 ಕ್ಕೆ **'ಹೌದು'** ಎಂಬ ಉತ್ತರ ಬಂದಿದ್ದು, ಸಂಘವು ಪ್ರಸಕ್ತ ವರ್ಷದಲ್ಲಿ ನಿವ್ವಳ ಹಾನಿಯನ್ನು ಅನುಭವಿಸಿರುವುದರಿಂದ, ಸಂಘದ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರ್ಗೀಕರಣವನ್ನು **'ಸಿ'** ವರ್ಗದಲ್ಲಿ ವರ್ಗೀಕರಿಸಲಾಗಿದೆ.

ಸಹಿ/–
**(ಸಿಎ. ವರದರಾಜು)**
ವರದರಾಜು & ಅಸೋಸಿಯೇಟ್ಸ್
ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು–560003
ಎಂಪಾನಲ್‌ಮೆಂಟ್ ನಂ. ಸಿ. 04/03/2013.

ದಿನಾಂಕ: 29–07–2021
ಸ್ಥಳ: ಬೆಂಗಳೂರು

## ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿ ಲಿಮಿಟೆಡ್,

ಸಂಜಯನಗರ, ಬೆಂಗಳೂರು - 560 094

**ಇದರ 2020-21ನೇ ಸಾಲಿನ ಜಮಾ-ಖರ್ಚಿನ ತಃಖ್ತೆ.**

| ಕ್ರ. ಸಂ | ಜಮಾದ ವಿವರ | ಮೊಬಲಗು | ಮೊಬಲಗು | ಕ್ರ. ಸಂ | ಖರ್ಚಿನ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| | | | | 1 | ಷೇರು ವಾಪಸ್ಸು | | |
| 1 | ಎ)ಸಾಮಾನ್ಯ ಸದಸ್ಯರಿಂದ ಷೇರು | 7000-00 | | (ಎ) | ಸಾಮಾನ್ಯ ಸದಸ್ಯರಿಗೆ | 5000-00 | |
| | | | | | ಸಹ ಸದಸ್ಯರಿಗೆ | 18000-00 | 23000-00 |
| | ಬಿ) ಸಹ ಸದಸ್ಯರಿಂದ ಷೇರು | 61000-00 | 68000-00 | | | | |
| | | | | (ಬಿ) | ಸಹ ಸದಸ್ಯರಿಗೆ | | |
| 2 | ಸಾಮಾನ್ಯ ಸದಸ್ಯರಿಂದ ನಿವೇಶನ | | | | ಚೆಕ್ ಡಿಸ್ಆನರ್ ಬಾಬ್ತು :- | | |
| | ಡಿಪಾಜ಼ಿಟ್ (ಠೇವಣಿ) | | | | ಸಹ ಸದಸ್ಯರ ಷೇರು ವಾಪಸ್ಸು | 8000-00 | |
| | | | | | ಸಹ ಸದಸ್ಯರ ಬಿಲ್ಡಿಂಗ್ ಫಂಡ್ | 4000-00 | 12000-00 |
| | ಸಂದೇಶ್ ನಗರ-1ನೇ ಹಂತ | 700000-00 | | (ಸಿ) | ಷೇರು ಫೀ ವಾಪಸ್ಸು | 800-00 | |
| | ಸಂದೇಶ್ ನಗರ-3ನೇ ಹಂತ | 1530000-00 | | | ಅರ್ಜಿ ಶುಲ್ಕ ವಾಪಸ್ಸು | 800-00 | |
| | ಸಂದೇಶ್ ಲೇಕ್ ಸೈಡ್-1ನೇ | 756000-00 | | | ಪ್ರವೇಶ ಧನ ವಾಪಸ್ಸು | 400-00 | 2000-00 |
| | ಹಂತ | 1462500-00 | 4448500-00 | 2 | ನಿವೇಶನ ಡಿಪಾಜ಼ಿಟ್ (ಠೇವಣಿ) | | |
| | ಸಂದೇಶ್ ಲೇಕ್ ಸೈಡ್-3ನೇ ಹಂತ | | | | ವಾಪಸ್ಸು; ಚೆಕ್ ಮುಖಾಂತರ | | |
| 3 | | | | | ಮತ್ತು ಡಿಸ್ಆನರ್ ಆಫ್ | | |
| | ಸಹ ಸದಸ್ಯರಿಂದ ನಿವೇಶನ | | | | ಚೆಕ್ ಬಾಬ್ತು ವಾಪಸ್ಸು | | |
| | ಡಿಪಾಜ಼ಿಟ್ (ಠೇವಣಿ) | | | (ಎ) | ಸಾಮಾನ್ಯ ಸದಸ್ಯರಿಗೆ | | |
| | | 1920600-00 | | | ಸಂದೇಶ್ ನಗರ-1 ನೇ ಹಂತ | 550000-00 | |
| | ಸಂದೇಶ್ ನಗರ-1 ನೇ ಹಂತ | 3750000-00 | | | ಸಂದೇಶ್ ನಗರ-3 ನೇ ಹಂತ | 1720000-00 | |
| | ಸಂದೇಸ್ ನಗರ-3 ನೇ ಹಂತ | | | | ಸಂದೇಶ್ ಲೇಕ್ ಸೈಡ್-1ನೇ ಹಂತ | 600000-00 | |
| | | | | | ಸಂದೇಶ್ ಲೇಕ್ ಸೈಡ್-3ನೇ ಹಂತ | 672000-00 | 3542000-00 |

| ಕ್ರ. ಸಂ | ಜಮಾದ ವಿವರ | ಮೊಬಲಗು | ಮೊಬಲಗು | ಕ್ರ. ಸಂ | ಖರ್ಚಿನ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| | ಸಂದೇಶ್ ಲೇಕ್ ಸೈಡ್–1ನೇ ಹಂತ | 1843000–00 | | (ಬಿ) | **<u>ಸಹ ಸದಸ್ಯರಿಗೆ ನಿವೇಶನ ಡಿಪಾಜಿಟ್ (ಠೇವಣಿ) ವಾಪಸ್ಸು ಚೆಕ್ ಮುಖಾಂತರ ಮತ್ತು ಡಿಸ್ ಆನರ್ ಆಫ್ ಚೆಕ್ಸ್ ಬಾಬ್ತು ವಾಪಸ್ಸು</u>** | | |
| | ಸಂದೇಶ್ ಲೇಕ್ ಸೈಡ್–2ನೇ ಹಂತ | 740000–00 | | | | | |
| | ಸಂದೇಶ್ ಲೇಕ್ ಸೈಡ್–3ನೇ ಹಂತ | 12262000–00 | | | | | |
| | ಸಂದೇಶ್ ಲೇಕ್ ಸೈಡ್–4ನೇ ಹಂತ | 1984000–00 | 22499600–00 | | | | |
| 4 | **<u>ಬಿಲ್ಡಿಂಗ್ ಫಂಡ್</u>** | | | | ಸಂದೇಶ್ ನಗರ–2ನೇ ಹಂತ | 720000–00 | |
| | ಸದಸ್ಯರಿಂದ | 3000–00 | | | ಸಂದೇಶ್ ನಗರ–3ನೇ ಹಂತ | 9099000–00 | |
| | ಸಹ ಸದಸ್ಯರ ಬಿಲ್ಡಿಂಗ್ ಫಂಡ್ | 29000–00 | 32000–00 | | ಸಂದೇಶ್ ಭಾಗ್ ಬಡಾವಣೆ | 4055000–00 | |
| | | | | | ಸಂದೇಶ್ ಲೇಕ್ ಸೈಡ್–1ನೇ ಹಂತ | 2952000–00 | |
| | | | | | ಸಂದೇಶ್ ಲೇಕ್ ಸೈಡ್–2ನೇ ಹಂತ | 1035000–00 | |
| 5 | **<u>ಆದಾಯ ತೆರಿಗೆ ಇಲಾಖೆಗೆ ಪಾವತಿಸಲು ಟಿಡಿಎಸ್ ಹಿಡಿದಿರುವುದು :– ಹೊಂದಾಣಿಕೆ ಲೆಕ್ಕ</u>** | | | | ಸಂದೇಶ್ ಲೇಕ್ ಸೈಡ್–3ನೇ ಹಂತ | 8268000–00 | 26129000–00 |
| | | | | 3 | **<u>ಆದಾಯ ತೆರಿಗೆ ಇಲಾಖೆಗೆ ಟಿ.ಡಿ.ಎಸ್. ಪಾವತಿಸಿದ್ದು</u>** | | |
| | ಎ) ಅಮೋಸ್ ಪ್ರಾಪರ್ಟೀಸ್ ರವರಿಂದ | 40000–00 | | | ಎ) ಅಮೋಸ್ ಪ್ರಾಪರ್ಟೀಸ್ ರವರ ಬಾಬ್ತು | 40000–00 | |

| ಕ್ರ ಸಂ | ಜಮಾದ ವಿವರ | ಮೊಬಲಗು | ಮೊಬಲಗು | ಕ್ರ ಸಂ | ಖರ್ಚಿನ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| | **<u>ಬಿ) ಸಂದೇಶ್ ನಗರ-1 ಮತ್ತು 2ನೇ ಹಂತದ ಬಡಾವಣೆ ಬಾಬ್ತು:</u>** | | | | ಬಿ) ರಜತೇಂದ್ರ ಎಲೆಕ್ಟ್ರಿಕಲ್ಸ್ & ಇಂಜಿನೀಯರ್ಸ್ ರವರ ಬಾಬ್ತು | 600-00 | |
| | 1) ಆರ್.ಜಿ.ಸಿ ಕನ್ಸ್ಟ್ರಕ್ಷನ್ & ಇಂಜಿನೀಯರ್ ರವರಿಂದ | 260-00 | | | ಸಿ) ಆರ್.ಜಿ.ಸಿ ಕನ್ಸ್ಟ್ರಕ್ಷನ್ & ಇಂಜಿನೀಯರ್ ರವರ ಬಾಬ್ತು | 130-00 | |
| | 2) ಶ್ರೀ ಕೃಷ್ಣಾ ರೆಡ್ಡಿ ರವರ ಬಾಬ್ತು | 1000-00 | | | ಡಿ) ಶ್ರೀ ಕೃಷ್ಣಾ ರೆಡ್ಡಿ ರವರ ಬಾಬ್ತು | 500-00 | |
| | 3) ಶ್ರೀ ಲಕ್ಷ್ಮಣ ರವರ ಬಾಬ್ತು | 14000-00 | | | ಇ) ಶ್ರೀ ಲಕ್ಷ್ಮಣ ರವರ ಬಾಬ್ತು | 7000-00 | |
| | 4) ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್ ರವರಿಂದ | | | | ಎಫ್) ಶ್ರೀ ಎಂ.ಜಿ. ರಂಗಧಾಮಯ್ಯ ಡೆವಲಪರ್ಸ್ ರವರ ಬಾಬ್ತು | | |
| | ಸಂದೇಶ್ ನಗರ-1ನೇ ಹಂತದ ಬಾಬ್ತು | 5280-00 | | | ಸಂದೇಶ್ ನಗರ-1ನೇ ಹಂತದ ಬಾಬ್ತು | 5280-00 | |
| | ಸಂದೇಶ್ ನಗರ-2ನೇ ಹಂತದ ಬಾಬ್ತು | 27400-00 | | | ಜಿ) ಸಂದೇಶ್ ನಗರ-2ನೇ ಹಂತದ ಬಾಬ್ತು | 26900-00 | |
| | ಸಿ) ಶ್ರೀ ಅಶೋಕ್ ಹಂದೆ ವಕೀಲರು ರವರಿಂದ | 9800-00 | | | ಶ್ರೀ ಎಂ.ಎಸ್. ರುದ್ರಯ್ಯ ವಕೀಲರ ಬಾಬ್ತು | 11000-00 | |
